₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಭಾನುವಾರ 01.12.2024 ಸಂಪುಟ: 67 ಸಂಚಿಕೆ: 206 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬಂಡೀಪುರದಲ್ಲಿ ರಾತ್ರಿ ಸಂಚಾರಕ್ಕೆ ಅವಕಾಶ ಕೊಡಿಸುವೆ: ವಯನಾಡು ಜನತೆಗೆ ಪ್ರಿಯಾಂಕಾ ಭರವಸೆ

ಬಾಣಂತಿಯರ ಸಾವು: ಅಧಿಕಾರಿ ಅಮಾನತು

ಬಳ್ಳಾರಿ ಜಿಲ್ಲಾಸ್ಪತ್ರೆಯ ಪ್ರಕರಣ: ಸಿಎಂ ಸಿದ್ದು ತುರ್ತು ಸಭೆ

ಸಾವಿಗೆ ಕಾರಣವಾದ ಸಂಸ್ಥೆ ಬ್ಲಾಕ್‌ಲಿಸ್ಟ್‌ಗೆ, ಲ್ಯಾಕ್ಟೇಟ್ ದ್ರಾವಣಕ್ಕೆ ನಿಷೇಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ಬಾಣಂತಿಯರ ಸಾವಿಗೆ ಕಾರಣವಾದ ರಿಂಗರ್ ಲ್ಯಾಕ್ಟೇಟ್ ದ್ರಾವಣ ಪೂರೈಸಿದ ಕಂಪನಿಯನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸುವುದರೊಂದಿಗೆ ಕರ್ತವ್ಯಲೋಪದ ಆರೋಪದಲ್ಲಿ ಡ್ರಗ್ ಕಂಟ್ರೋಲರ್‌ನನ್ನು ಅಮಾನತುಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಬಾಣಂತಿಯರ ಸರಣಿ ಸಾವಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ವಿಧಾನಸೌಧದಲ್ಲಿ ಶನಿವಾರ ನಡೆದ ತುರ್ತು ಸಭೆಯಲ್ಲಿ ಈ ಖಡಕ್ ಸೂಚನೆ ನೀಡಿದ್ದಾರೆ.

ಇದರೊಂದಿಗೆ ಇತ್ತೀಚೆಗೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವ 'ಡ್ರಗ್ ಮಾಫಿಯಾ'ವನ್ನು ಮಟ್ಟಹಾಕಲು ಕ್ರಮವಹಿಸುವ ಬಗ್ಗೆ ಗಂಭೀರ ಚಿಂತನೆ ನಡೆಸಲು ಸರಕಾರ ತೀರ್ಮಾನಿಸಿದೆ.

ಸಭೆಯಲ್ಲಿ ಮೆಡಿಸಿನ್ ಮಾಫಿಯಾ ನಿಯಂತ್ರಣಕ್ಕೆ ಅತ್ಯಂತ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅನಿವಾರ್ಯತೆಯಿದೆ ಎಂದು ಅಧಿಕಾರಿಗಳು ಹೇಳಿದರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ವಿಷಯದಲ್ಲಿ ರಾಜ್ಯದೊಂದಿಗೆ ಕೇಂದ್ರ ಸರಕಾರದ ಪಾಲಿದೆ. ಆದ್ದರಿಂದ ಡ್ರಗ್ ಮಾಫಿಯಾ ಮಟ್ಟಹಾಕಲು ಕೇಂದ್ರ ಸರಕಾರಕ್ಕೆ ಪತ್ರ ಬರೆಯಲಾಗುವುದು. ಇದರೊಂದಿಗೆ ನೆರೆ ರಾಜ್ಯ ತಮಿಳುನಾಡಿನಲ್ಲಿರುವ ಡ್ರಗ್ ನಿಯಂತ್ರಣವನ್ನು ಪರಿಶೀಲಿಸಿ, ನಿಯಮಾವಳಿ ರಚಿಸುವ ಬಗ್ಗೆ ಚರ್ಚಿಸಲಾಯಿತು.

→ 4

ಸಭೆಯಲ್ಲಿನ ಪ್ರಮುಖಾಂಶ

- ನವೆಂಬರ್ 11ರಿಂದ ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ನಾಲ್ವರು ಬಾಣಂತಿಯರ ಸಾವಿನ ಪ್ರಕರಣ ವರದಿಯಾಗಿದೆ
- ಹಿಮೋಡಯಾಲಿಸಿಸ್, ಬಹು ಅಂಗಾಂಗ ವೈಫಲ್ಯ, ಮೂತ್ರಪಿಂಡದ ಗಾಯದಂತಹ ತೊಂದರೆಯಿಂದ 7 ಪ್ರಕರಣ ದಾಖಲಾಗಿವೆ
- ಈ ಏಳು ಬಾಣಂತಿಯರ ಪೈಕಿ ನಾಲ್ವರು ಸಾವಿಗೀಡಾಗಿದ್ದಾರೆ. ಉಳಿದ ಮೂವರಲ್ಲಿ ಇಬ್ಬರು ಚೇತರಿಸಿಕೊಳ್ಳುತ್ತಿದ್ದಾರೆ
- ಬಾಣಂತಿಯರ ಸಾವಿನ ಕುರಿತು ತಜ್ಞರ ಸಮಿತಿ ರಚಿಸಿ ಘಟನಾವಳಿಗಳ ಬಗ್ಗೆ ಪ್ರಾಥಮಿಕ ವರದಿ ಪಡೆಯಲಾಗಿದೆ
- ರಿಂಗರ್ ಲ್ಯಾಕ್ಟೇಟ್ ದ್ರಾವಣದ ಎಲ್ಲ ಬ್ಯಾಚ್‌ಗಳ ಬಳಕೆ ಹಿಂಪಡೆಯಲಾಗಿದೆ
- ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ಬಳಸಲಾದ ದ್ರಾವಣ ಪರೀಕ್ಷಿಸಲು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ

ಬೆಳಗಾವಿಯಲ್ಲಿ ಇಂದು ಯತ್ನಾಳ್ ಬಣ ಸಮಾವೇಶ । ಮೈಸೂರಿನಲ್ಲಿ ಉಭಯ ಬಣ ಚಕಮಕಿ । ವರಿಷ್ಠರಿಗೆ ವಿಜಯೇಂದ್ರ ದೂರು

ಬಿಜೆಪಿ ದಂಗಲ್ ಬಿವೈವಿ ದಿಲ್ಲಿಗೆ

ಬೆಂಗಳೂರು: ಒಡೆದ ಮನೆಯಾಗಿರುವ ರಾಜ್ಯ ಬಿಜೆಪಿಯಲ್ಲಿ ಹಲವು ತಿಂಗಳಿನಿಂದ ನಡೆಯುತ್ತಿರುವ ಬಣದಾಟ ಇದೀಗ ರಾಷ್ಟ್ರ ರಾಜಧಾನಿ ದೆಹಲಿಗೆ ಸ್ಥಳಾಂತರವಾಗಿದ್ದು, ದೂರು-ಪ್ರತಿದೂರು ನೀಡಲು ಎರಡೂ ಬಣದವರು ಸಜ್ಜಾಗಿದ್ದಾರೆ.

3 ಕ್ಷೇತ್ರಗಳ ಉಪ ಚುನಾವಣೆಯ ಸೋಲಿನ ಬಗ್ಗೆ ವರದಿ ನೀಡಲು ದೆಹಲಿಗೆ ತೆರಳಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಶನಿವಾರ ಭೇಟಿಯಾಗಿದ್ದಾರೆ. ಈ ವೇಳೆ ಉಪಚುನಾವಣೆಯಲ್ಲಿನ ಸೋಲು, ಸರಕಾರದ ವಿರುದ್ಧ ಹೋರಾಟ ಸೇರಿದಂತೆ ವಿವಿಧ ವಿಷಯಗಳನ್ನು ವರಿಷ್ಠರ ಗಮನಕ್ಕೆ ತಂದಿದ್ದಾರೆ. ಇದರೊಂದಿಗೆ ವಿಜಯೇಂದ್ರ ವಿರುದ್ಧ ನಿತ್ಯ ಕಿಡಿಕಾರುತ್ತಿರುವ ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ತಂಡದ ವಿರುದ್ಧ ದೂರು ನೀಡಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿವೆ.

→ 4

ಪಕ್ಷದೊಳಗಿರುವ ಕೆಲ ಆಂತರಿಕ ದುಷ್ಟಶಕ್ತಿಗಳು ಪಕ್ಷವನ್ನು ಹಾಳು ಮಾಡುವ ಕೆಲಸ ಮಾಡುತ್ತಿವೆ. ಯತ್ನಾಳ್ ಮತ್ತು ಅವರ ಗುಂಪಿನಿಂದ ಪಕ್ಷದ ಕಾರ್ಯಕರ್ತರಿಗೆ ಬೇಸರವಾಗಿದೆ. ಯತ್ನಾಳ್‌ಗೆ ಬಿಎಸ್‌ವೈ, ವಿಜಯೇಂದ್ರ ವಿರುದ್ಧ ಅಸಮಾಧಾನ ಇದ್ದರೆ, ನಾಲ್ಕು ಗೋಡೆ ಮಧ್ಯೆ ಚರ್ಚಿಸಲಿ. ಮಾಧ್ಯಮದಲ್ಲಿ ಬರಬೇಕೆಂಬ ಹುಚ್ಚಿನಿಂದ ಪಕ್ಷದ ವರಿಷ್ಠರ ವಿರುದ್ಧ ಮಾತನಾಡಬಾರದು. ಪಕ್ಷದ ನಾಯಕರನ್ನು ಬಯ್ಯುವುದರಿಂದ ಇಮೇಜ್ ಬರಲ್ಲ.

– ಬಿ.ಸಿ.ಪಾಟೀಲ್ ಮಾಜಿ ಸಚಿವ

ಪ್ರತಿದೂರು ನೀಡಲು ಯತ್ನಾಳ್ ತಂಡ ಸಿದ್ಧ

ಬೆಳಗಾವಿಯಲ್ಲಿ ಭಾನುವಾರ ನಡೆಯಲಿರುವ ಯತ್ನಾಳ್ ಬಣದ ವಕ್ಫ್ ಜನಾಂದೋಲನ ಯಾತ್ರೆಯ ಅಂತಿಮ ದಿನವಾಗಿದೆ. ಸೋಮವಾರ ರಾತ್ರಿ ದೆಹಲಿಗೆ ತೆರಳಲಿರುವ

ಯತ್ನಾಳ್ ಹಾಗೂ ತಂಡದವರು ವಕ್ಫ್ ಜಂಟಿ ಸದನ ಸಮಿತಿ ಮುಂದೆ ಕರ್ನಾಟಕದಲ್ಲಿರುವ ವಕ್ಫ್ ಅವಾಂತರದ ಬಗ್ಗೆ ಮಧ್ಯಂತರ ವರದಿ ನೀಡಲಿದ್ದಾರೆ. ಇದಾದ ಬಳಿಕ ಬಿಜೆಪಿ ವರಿಷ್ಠರನ್ನು ಭೇಟಿಯಾಗಿ ವಿಜಯೇಂದ್ರ ಹಾಗೂ ತಂಡದ ವಿರುದ್ಧ ಪ್ರತಿದೂರು ನೀಡುವ ಸಾಧ್ಯತೆಯಿದೆ. ಈ ಭೇಟಿಯ ವೇಳೆ ಪ್ರಮುಖವಾಗಿ ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಮುಡಾ, ವಾಲ್ಮೀಕಿ ಹಗರಣ, ವಕ್ಫ್ ನೋಟಿಸ್ ವಿಷಯದ ವಿರುದ್ಧ ಪಕ್ಷವಾಗಿ ಹೋರಾಟ ನಡೆಸಿಲ್ಲ. ಅನುಭವವಿಲ್ಲದ ಪಕ್ಷದ ಪದಾಧಿಕಾರಿಗಳ ತಂಡದಿಂದ ಈ ಸಮಸ್ಯೆಯಾಗುತ್ತಿದ್ದು, ಇದರಿಂದಾಗಿ ಅನೇಕ ಕಾರ್ಯಕರ್ತರು ತಟಸ್ಥರಾಗಿದ್ದಾರೆ. ವಿಜಯೇಂದ್ರ ಅವರು ಕಾಂಗ್ರೆಸ್‌ನ ಹಲವು ನಾಯಕರೊಂದಿಗೆ ಹೊಂದಾಣಿಕೆ ರಾಜಕೀಯ ಮಾಡುತ್ತಿದ್ದಾರೆ ಎನ್ನುವ ಆರೋಪ ಮಾಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ತಮ್ಮ ತಂಡ ಯಾರ ವಿರುದ್ಧವೂ ಹೋರಾಟ ಮಾಡುತ್ತಿಲ್ಲ, ಕೇವಲ ವಕ್ಫ್ ವಿರುದ್ಧ ಮಾತ್ರ ಹೋರಾಟ ಮಾಡುತ್ತಿದೆ. ಕಲ್ಯಾಣ ಕರ್ನಾಟಕದಲ್ಲಿ ಹೋರಾಟ ಮುಗಿದಿದ್ದು, ಕಿತ್ತೂರು ಕರ್ನಾಟಕದಲ್ಲಿ ಹೋರಾಟ ಮಾಡುತ್ತಿದ್ದೇವೆ. ವಕ್ಫ್ ಕಾಯಿದೆಗೆ 44 ತಿದ್ದುಪಡಿಗಳನ್ನು ತಂದು ಅದನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ತಮ್ಮ ಸಮಿತಿಯು ಕೇಂದ್ರ ಸರಕಾರಕ್ಕೆ ಕೆಲ ಸಲಹೆಗಳನ್ನು ಸಲ್ಲಿಸಲಿದೆ.

– ಬಸನಗೌಡ ಪಾಟೀಲ್ ಯತ್ನಾಳ್ ಶಾಸಕ

ಪುಟ ತೆರೆದಂತೆ...

ಜಪಾನ್ ಬಗ್ಗೆ ಆತ ಹೇಳಿದ ಮಾತನ್ನು ಕೇಳಿದ ನಂತರ ಅನಿಸಿದ್ದು!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್

ಭೃಕಭೌಮನು 'ಬೀರ್'ಬಲ್ಲನಾಗಿ ನಡೆಸಿದ ರಾಜಿ ಪಂಚಾಯಿತಿಕೆ
ತಿಳಿರು ತೋರಣ
ಶ್ರೀವತ್ಸ ಜೋಶಿ

ಸಂ.ಪುಟ 6

ಮಾತಂದ್ರೆ ಮಾತು

ಈ ಮೂರು ಬೈಎಲೆಕ್ಷನ್ ಫಲಿತಾಂಶದ ಮೇಲೆ ಎಲ್ಲವೂ ನಿರ್ಧಾರವಾಗಲ್ಲ. ಈಗ 138 ಸ್ಥಾನದಲ್ಲಿದ್ದೀರಿ. ಮುಂದಿನ ಚುನಾವಣೆಯಲ್ಲಿ ಕೇವಲ 38 ಸ್ಥಾನ ಗೆದ್ದು ತೋರಿಸಿ. ಈಗ ಗೆದ್ದಿರುವ ಆಸಾಮಿ ನಮಗೂ, ಬಿಜೆಪಿಗೂ ಟೋಪಿ ಹಾಕಿ ಹೋದ್ರು. ನಮ್ಮನ್ನು ರಣಹೇಡಿ ಅಂದವ್ರೆ. ದೇವೇಗೌಡರ ಕುಟುಂಬ ರಣಧೀರರ ರೀತಿ ಹೋರಾಟ ಮಾಡುತ್ತದೆ.

-ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವ

ದಾರಿದೀಪೋಕ್ತಿ

ಯಾವ ಮರವೇ ಆಗಲಿ, ಸ್ವರ್ಗದ ಎತ್ತರಕ್ಕೆ ಬೆಳೆದು ನಿಲ್ಲಬೇಕು ಅಂದ್ರೆ ಅದರ ಬೇರುಗಳು ನರಕದಷ್ಟು ಆಳಕ್ಕೆ ಇಳಿದಿರಬೇಕು. ನರಕದಲ್ಲಿ ಇದ್ದ ಮಾತ್ರಕ್ಕೆ ಸ್ವರ್ಗವನ್ನು ತಲುಪಲು ಸಾಧ್ಯವಿಲ್ಲ ಎಂದು ಯೋಚಿಸಬಾರದು.

ವಕ್ರತುಂಡೋಕ್ತಿ

ಕೆಲವರು ಶೋಕಗೀತೆ ಹಾಡಿದರೆ ಅಳು ಬರುತ್ತದೆ, ಉಳಿದ ಹಾಡುಗಳನ್ನು ಹಾಡಿದರೂ...

7 ಲಕ್ಷ ಕೋಟಿ ರುಪಾಯಿ ಮೌಲ್ಯದ ಸ್ವರ್ಣನಿಧಿ ಪತ್ತೆ

ಬೀಜಿಂಗ್: ಚೀನಾದಲ್ಲಿ ವಿಶ್ವದ ಅತಿ ದೊಡ್ಡ ಚಿನ್ನದ ಅದಿರು ನಿಕ್ಷೇಪ ಪತ್ತೆಯಾಗಿದ್ದು, ಇದರಲ್ಲಿ ಸಾವಿರ ಮೆಟ್ರಿಕ್ ಟನ್ ಗುಣಮಟ್ಟದ ಸ್ವರ್ಣವಿದೆ ಎಂದು ಭೂಗರ್ಭ ಶಾಸ್ತ್ರಜ್ಞರು ಅಂದಾಜಿಸಿದ್ದಾರೆ. ಇದರ ಮೌಲ್ಯ ಬರೋಬ್ಬರಿ 7 ಲಕ್ಷ ಕೋಟಿ ರು ಆಗಿದೆ. ಪಿಂಗ್ ಜಿಯಾಂಗ್ ಪ್ರಾಂತ್ಯದಲ್ಲಿ ಭೂಮಿಯ ಮೇಲ್ಮೈಯಿಂದ 2 ಕಿ.ಮೀ ಆಳದಲ್ಲಿ 40 ಚಿನ್ನದ ಶಿಲೆಗಳು ಪತ್ತೆಯಾಗಿದ್ದು, 3 ಕಿ.ಮೀ ಆಳಕ್ಕೆ ಅಗೆದರೆ 1000 ಮೆಟ್ರಿಕ್ ಟನ್‌ವರೆಗೆ ಚಿನ್ನದ ಅದಿರು ದೊರೆಯಬಹುದು ಎಂದು ಹೇಳಿದ್ದಾರೆ.

ಇವಿಎಂ ಗದ್ದಲ: ಚರ್ಚೆಗೆ ಚು. ಆಯೋಗ ಆಹ್ವಾನ

ಮುಂಬೈ: ಕಾಂಗ್ರೆಸ್ ಪಕ್ಷದ ಮಹಾರಾಷ್ಟ್ರ ಎಂಎಲ್‌ಸಿ ಅಶೋಕ್ ಎ.ಜಗತಾಪ್ ಅವರು 'ಚುನಾವಣಾ ಆಯೋಗ ಮೋದಿ ಮನೆ ಕಾವಲು ನಾಯಿ' ಎಂದು ನಿಂದಿಸಿದ್ದು, ಜಗತಾಪ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಕಾಂಗ್ರೆಸ್ ಆರೋಪಗಳನ್ನು ತಳ್ಳಿಹಾಕಿರುವ ಚುನಾವಣಾ ಆಯೋಗ, ಪಕ್ಷದ ನಾಯಕರ ನಿಯೋಗ ಡಿ.3ಕ್ಕೆ ಆಯೋಗದ ಪ್ರಧಾನ ಕಚೇರಿಗೆ ಬರಲಿ. ಇವಿಎಂ ಕಾರ್ಯನಿರ್ವಹಣೆ ವಿಧಾನ ತಿಳಿಸಿಕೊಡಲಾಗುವುದು ಎಂದು ತಿಳಿಸಿದೆ.

ಫನ್‌ತರಂಗ
– ರಘುಪತಿ ಶೃಂಗೇರಿ –

ಸಚಿವಾಲಯ ಸಿಬ್ಬಂದಿಗಾಗಿ ವಿಶೇಷ ಎಲೆಕ್ಟ್ರಿಕ್ ವಾಹನ ಮೇಳ
ಸುದ್ದಿ



3 ಕೋಟಿ ಮೌಲ್ಯದ ಮೊಬೈಲ್ ಕಳವು

ಚಿಕ್ಕಬಳ್ಳಾಪುರ: ನೋಯ್ಡಾದಿಂದ ಬೆಂಗಳೂರಿಗೆ ಕಂಟೇನರ್‌ನಲ್ಲಿ ಸಾಗಿಸುತ್ತಿದ್ದ ಎಂ.ಐ ಕಂಪನಿಯ ಸುಮಾರು ₹3 ಕೋಟಿ ಮೌಲ್ಯದ ಮೊಬೈಲ್‌ಗಳು ಕಳ್ಳತನವಾಗಿವೆ. ಚಿಕ್ಕಬಳ್ಳಾಪುರ ತಾಲೂಕಿನ ರೆಡ್ಡಿಗೊಲ್ಲಾರಹಳ್ಳಿ ಗ್ರಾಮದ ಕ್ರಾಸ್ ಬಳಿ ಎನ್‌ಎಲ್ 01 ಎಎಫ್ 2743 ಸಂಖ್ಯೆಯ ಕಂಟೇನರ್ ನಿಲ್ಲಿಸಿ ಚಾಲಕ ರಾಹುಲ್ ನಾಪತ್ತೆ ಆಗಿದ್ದಾನೆ. ಕಂಟೈನರ್ ನಿಗದಿತ ಸಮಯಕ್ಕೆ ಬೆಂಗಳೂರು ತಲುಪದ ಹಿನ್ನೆಲೆಯಲ್ಲಿ ಕಂಪನಿಯವರು ಪರಿಶೀಲಿಸಿದಾಗ ಕಂಟೇನರ್ ನಿಲುಗಡೆ ಆಗಿರುವುದು ಜಿಪಿಎಸ್ ಮೂಲಕ ಗಮನಕ್ಕೆ ಬಂದಿದೆ. ತಕ್ಷಣ ಕಂಪನಿ ಸಿಬ್ಬಂದಿ ಪೆರೇಸಂದ್ರ ಠಾಣೆಗೆ ಮಾಹಿತಿ ನೀಡಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಡಿ.5ರಂದು ಮಹಾ ಸರಕಾರ ರಚನೆ

ಮುಂಬೈ: ಮಹಾರಾಷ್ಟ್ರದಲ್ಲಿ ಮಹಾಯುತಿ ಮೈತ್ರಿಕೂಟದ ಹೊಸ ಸರಕಾರ ಡಿ.5ರಂದು ರಚನೆಯಾಗಲಿದೆ. ಗುರುವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿದ್ದ ಉಸ್ತುವಾರಿ ಮುಖ್ಯಮಂತ್ರಿ ಏಕನಾಥ ಶಿಂದೆ, ದೇವೇಂದ್ರ ಫಡಣವೀಸ್ ಮತ್ತು ಎನ್‌ಸಿಪಿ ನಾಯಕ ಅಜಿತ್ ಪವಾರ್ ಅವರು ಸರಕಾರ ರಚನೆ ಮತ್ತು ಅಧಿಕಾರ ಹಂಚಿಕೆಯ ಕುರಿತು ಚರ್ಚಿಸಿದ್ದರು. ಶುಕ್ರವಾರ ನಡೆಯಬೇಕಿದ್ದ ಮಿತ್ರಪಕ್ಷಗಳ ಶಾಸಕರ ಸಭೆ ರದ್ದಾಗಿದ್ದು, ಭಾನುವಾರ ನಡೆಯುವ ಸಂಭವವಿದೆ. ದೇವೇಂದ್ರ ಫಡಣವೀಸ್ ಅವರು ಮುಂದಿನ ಸಿಎಂ ಸರದಿಯ ಮುಂಚೂಣಿಯಲ್ಲಿದ್ದಾರೆ ಎನ್ನಲಾಗಿದೆ.

ಅಧಿವೇಶನಕ್ಕೆ 6 ಸಾವಿರ ಪೊಲೀಸರು

ಬೆಳಗಾವಿ: ಡಿಸೆಂಬರ್ 9 ರಿಂದ 19 ರವರೆಗೆ ಬೆಳಗಾವಿ ಸುವರ್ಣಸೌಧದಲ್ಲಿ ನಡೆಯುವ ವಿಧಾನಮಂಡಲ ಚಳಿಗಾಲದ ಅಧಿವೇಶನದ ಬಂದೋಬಸ್ತ್‌ಗಾಗಿ ಸುಮಾರು 6 ಸಾವಿರ ಪೊಲೀಸರನ್ನು ನಿಯೋಜನೆ ಮಾಡಲಾಗುತ್ತಿದೆ. ಬೆಳಗಾವಿ ಸೇರಿದಂತೆ ಎಂಟು ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಅಧಿವೇಶನ ಭದ್ರತೆಗೆ ನಿಯೋಜನೆ ಮಾಡಲಾಗುತ್ತಿದೆ. ಅನೇಕ ಸಮಸ್ಯೆ ಹೊತ್ತು ಪ್ರತಿಭಟನೆಗಳು ನಡೆಯುವ ಸಾಧ್ಯತೆ ಇದ್ದು, ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟುನಿಟ್ಟಿನ ಬಂದೋಬಸ್ತ್ ಏರ್ಪಾಡು ಮಾಡಲಾಗುತ್ತಿದೆ. ನಗರದ ಪ್ರದೇಶದ ವಿವಿಧ ಭಾಗಗಳಲ್ಲಿ ಭದ್ರತೆಗೆಂದು ಸಿಸಿಟಿವಿ ಅಳವಡಿಕೆ ಕಾರ್ಯ ನಡೆಸಲಾಗುತ್ತಿದೆ.

ನಕ್ಸಲರ ಶರಣಾಗತಿಗೆ ಪ್ಯಾಕೇಜ್: ಪರಂ

ಮಂಗಳೂರು: ವಿಕ್ರಂಗೌಡ ಸತ್ತ ನಂತರ ಆತನ ಸಹಚರರಿಗೆ ಶರಣಾಗುವಂತೆ ಹೇಳಿದ್ದೇವೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು. ಇದು ಕಠಿಣವಾದ ಹಾದಿ, ಇದರಲ್ಲಿ ನೀವು ಹೋಗುವುದು ಬೇಡ, ನಾವು ನಿಮಗೆ ಪ್ಯಾಕೇಜ್ ಕೊಡುತ್ತೇವೆ ಎಂದು ಹೇಳಿದ್ದೇವೆ. ನಿಮ್ಮ ಸಾಮಾನ್ಯ ಜೀವನಕ್ಕೆ ಸಹಕಾರ ಮಾಡುತ್ತೇವೆ ಎಂದು ಕರೆ ಕೊಟ್ಟಿದ್ದೇವೆ. ಕೂಂಬಿಂಗ್ ಮಾಡುತ್ತಿರುವ ಅಧಿಕಾರಿಗಳು ಕೂಡ ಹೇಳಿಕೆ ಕೊಡುತ್ತಿದ್ದಾರೆ. ಶರಣಾದರೆ ಒಳ್ಳೆಯದು ಎಂದರು. ಡ್ರಗ್ಸ್ ವಿರುದ್ಧ ಯುದ್ಧವನ್ನೇ ಸಾರಿದ್ದೇವೆ. ಕಳೆದ ಒಂದು ವರ್ಷದಲ್ಲಿ 250 ಕೋಟಿ.ರು. ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡು ನಾಶ ಮಾಡಲಾಗಿದೆ ಎಂದರು.

ಮುನಿ ವಿರುದ್ಧ ಮತ್ತೊಂದು ಕೇಸು

ಬೆಂಗಳೂರು: ಜಾತಿ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಷರತ್ತುಬದ್ಧ ಜಾಮೀನಿನ ಮೇಲೆ ಹೊರಗಿರುವ ಆರ್.ಆರ್ ನಗರ ಶಾಸಕ ಮುನಿರತ್ನ ವಿರುದ್ಧ ಮತ್ತೊಂದು ಎಫ್‌ಐಆರ್ ದಾಖಲಾಗಿದೆ. ಮಾಜಿ ಕಾರ್ಪೊರೇಟರ್ ಮಂಜುಳಾ ಪತಿ ನಾರಾಯಣಸ್ವಾಮಿ ಸುಪಾರಿ, ಕೊಲೆ ಯತ್ನ ಆರೋಪ ಮಾಡಿ ನಂದಿನಿಲೇಔಟ್ ಪೊಲೀಸ್ ಠಾಣೆಯಲ್ಲಿ ಮುನಿರತ್ನ ಹಾಗೂ ಕೆಲವರ ವಿರುದ್ಧ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ. ಇನ್ನು ಜಾತಿ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಎಸ್‌ಎಲ್ ವರದಿ ಬಂದಿದ್ದು, ಜಾತಿ ನಿಂದನೆ ಮಾಡಿರುವ ಆಡಿಯೋ ಶಾಸಕ ಮುನಿರತ್ನ ಅವರದ್ದೇ ಎಂಬುವುದು ಎಫ್‌ಎಸ್‌ಎಲ್ ವರದಿಯಲ್ಲಿ ದೃಢಪಟ್ಟಿದೆ.

ಜೈಲಿಗೋಗಲು ಸಿದ್ಧ: ಚಂದ್ರಶೇಖರ ಶ್ರೀ

ಬೆಂಗಳೂರು: ವಿಶ್ವ ಒಕ್ಕಲಿಗರ ಮಠದ ಚಂದ್ರಶೇಖರನಾಥ ಸ್ವಾಮೀಜಿ ಅವರು ಮುಸ್ಲಿಮರ ಮತದಾನದ ಹಕ್ಕಿನ ಬಗ್ಗೆ ಮಾತನಾಡಿರುವ ಹೇಳಿಕೆ ವಿವಾದವಾಗಿದ್ದು, ಈ ನಡುವೆ 'ಜೈಲಿಗೆ ಹಾಕುವುದಾದರೆ ಹಾಕಲಿ' ಎಂದು ಚಂದ್ರಶೇಖರ ಸ್ವಾಮೀಜಿಗಳು ಸವಾಲು ಹಾಕಿದ್ದಾರೆ. ಶ್ರೀಗಳ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ರೈತರು ಭೂಮಿ ಕಳೆದುಕೊಂಡ ನೋವಿನಿಂದ ಮಾತಿನ ಭರಾಟೆಯಲ್ಲಿ ಮುಸ್ಲಿಂರ ಮತದಾನದ ಬಗ್ಗೆ ಮಾತನಾಡಿದ್ದೆ. ಅದು ಉದ್ದೇಶಪೂರ್ವಕವಲ್ಲ. ನನ್ನ ಮಾತುಗಳು ವಿವಾದಕ್ಕೆ ಕಾರಣವಾದ ಬೆನ್ನಲ್ಲೆ ಮರುದಿನ ಸ್ಪಷ್ಟನೆ ನೀಡಿದ್ದೆ. ಆದರೂ ಜೈಲಿಗೆ ಹಾಕುವುದಾದರೆ ಹಾಕಲಿ ಎಂದಿದ್ದಾರೆ.

ಮತ್ತೊಬ್ಬ ಅರ್ಚಕನ ಬಂಧನ । ಇಸ್ಕಾನ್ ಸಂತರ ಅಕೌಂಟ್ ಬಂದ್

ಬಾಂಗ್ಲಾದಲ್ಲಿ 3 ಹಿಂದೂ ದೇಗುಲ ಧ್ವಂಸ

ಢಾಕಾ: ಬಾಂಗ್ಲಾದೇಶದ ಚಟ್ಟೋಗ್ರಾಮದಲ್ಲಿ ಶುಕ್ರವಾರ ಮೂರು ಹಿಂದೂ ದೇವಾಲಯಗಳನ್ನು ಧ್ವಂಸಗೊಳಿಸಲಾಗಿದೆ.

ಬಂದರು ನಗರದ ಹರೀಶ್ ಚಂದ್ರ ಮುನ್ಸೆಫ್ ಲೇನ್‌ನಲ್ಲಿ ಮಧ್ಯಾಹ್ನ 2:30ರ ಸುಮಾರಿಗೆ ದಾಳಿ ನಡೆದಿದ್ದು, ಶಾಂತನೇಶ್ವರಿ ಮಾತ್ರಿ ದೇವಸ್ಥಾನ, ಸಮೀಪದ ಶೋನಿ ದೇವಸ್ಥಾನ ಮತ್ತು ಶಾಂತನೇಶ್ವರಿ ಕಾಲಿಬರಿ ದೇವಸ್ಥಾನವನ್ನು ಗುರಿಯಾಗಿರಿಸಿ ದಾಳಿ ಮಾಡಲಾಗಿದೆ. ಘೋಷಣೆ ಕೂಗುತ್ತಾ ಬಂದ ನೂರಾರು ಜನರ ಗುಂಪು ದೇವಾಲಯಗಳ ಮೇಲೆ ಇಟ್ಟಿಗೆ ಹಾಗೂ ಕಲ್ಲುಗಳನ್ನು ಎಸೆದರು. ಇದರಿಂದ ಮೂರು ದೇವಾಲಯಗಳ ದ್ವಾರಗಳು ಹಾನಿಗೊಳಗಾಗಿವೆ. ದೇಶದ್ರೋಹದ ಆರೋಪದ ಮೇಲೆ ಸಮ್ಮಿಲಿತ್ ಸನಾತನಿ ಜಾಗರಣ ಜತೆ ಹಿಂದೂ ಸಂಘಟನೆಯ ಮುಖಂಡ ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ ಅವರನ್ನು ಬಂಧಿಸಲಾಗಿದೆ. ಅವರ ಬಂಧನ ಖಂಡಿಸಿ, ರಾಜಧಾನಿ ಢಾಕಾ ಮತ್ತು ಚಟ್ಟೋಗ್ರಾಮ ಸೇರಿದಂತೆ ದೇಶದ ಹಲವು ಸ್ಥಳಗಳಲ್ಲಿ ಹಿಂದೂ ಸಮುದಾಯದ ಸದಸ್ಯರು ಪ್ರತಿಭಟನೆ ನಡೆಸುತ್ತಿದ್ದಾರೆ.

ಮಧ್ಯಪ್ರವೇಶಿಸಿ: ಆರ್‌ಎಸ್‌ಎಸ್

ದೆಹಲಿ: ಹಿಂದೂಗಳ ಮೇಲಿನ ದೌರ್ಜನ್ಯವನ್ನು ನಿಲ್ಲಿಸಬೇಕು ಮತ್ತು ಇಸ್ಕಾನ್ ಸನ್ಯಾಸಿ ಚಿನ್ಮಯಿ ಕೃಷ್ಣದಾಸ್ ಅವರನ್ನು ಕೂಡಲೇ ಜೈಲಿನಿಂದ ಬಿಡುಗಡೆ ಮಾಡುವಂತೆ ಬಾಂಗ್ಲಾದೇಶದ ಹಂಗಾಮಿ ಸರಕಾರಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಒತ್ತಾಯಿಸಿದೆ. ಬಾಂಗ್ಲಾದೇಶದಲ್ಲಿ ಹಿಂದೂಗಳು ಮತ್ತು ಇತರ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯವನ್ನು ತಡೆಯಲು ಕೇಂದ್ರ ಸರಕಾರವು ತನ್ನ ಪ್ರಯತ್ನ ಮುಂದುವರಿಸಬೇಕು. ಜತೆಗೆ, ಸಾಧ್ಯವಾದಷ್ಟು ಬೇಗ ಬಾಂಗ್ಲಾದಲ್ಲಿ ನಡೆಯುತ್ತಿರುವ ಹಿಂಸಾಚಾರದ ಬಗ್ಗೆ ಜಾಗತಿಕ ಅಭಿಪ್ರಾಯವನ್ನು ಮೂಡಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಆರ್‌ಎಸ್‌ಎಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಮನವಿ ಮಾಡಿದ್ದಾರೆ.

ಬೆಂಗಳೂರು ಹಬ್ಬದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿಧಾನಸೌಧದ ಮುಂಭಾಗದ ಗ್ರಾಂಡ್ ಸ್ಟೆಪ್ಸ್‌ನಲ್ಲಿ ಆಯೋಜಿಸಲಾದ 'ನಮ್ಮ ಜಾತ್ರೆ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನಪದ ಕಲಾ ತಂಡಗಳ ಮೆರವಣಿಗೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ಈ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಶಿವರಾಜ್ ತಂಗಡಗಿ ಸೇರಿ ಅನೇಕರಿದ್ದರು.

ಶಿಕ್ಷಣ ಸಂಸ್ಥೆಗಳಿಗೆ ರಜೆ । ವಿಮಾನ ಹಾರಾಟ ಸ್ಥಗಿತ । 7 ಜಿಲ್ಲೆಗಳಲ್ಲಿ ರೆಡ್ ಅಲರ್ಟ್

ಫೆಂಗಲ್ ಚಂಡಮಾರುತಕ್ಕೆ ಚೆನ್ನೈ ತತ್ತರ

ಚೆನ್ನೈ: ಫೆಂಗಲ್ ಚಂಡಮಾರುತದಿಂದ ಸುರಿದ ಮಳೆಯಿಂದಾಗಿ ಚೆನ್ನೈ ನಗರ ತತ್ತರಿಸಿದೆ.

ನಗರದ 134ಕ್ಕೂ ಹೆಚ್ಚು ಸ್ಥಳಗಳಲ್ಲಿ ನೀರು ನಿಂತಿದೆ. ಭಾರೀ ಮಳೆ ಮುಂದುವರಿದ ಕಾರಣ 7 ಪ್ರಮುಖ ಸುರಂಗಮಾರ್ಗಗಳನ್ನು ಮುಚ್ಚಲಾಗಿದೆ. ಚಂಡಮಾರುತದಿಂದ ಉಂಟಾದ ಬಲವಾದ ಅಡ್ಡಗಾಳಿಯಿಂದಾಗಿ ಚೆನ್ನೈ ವಿಮಾನ ನಿಲ್ದಾಣವು ಶನಿವಾರ ಮಧ್ಯಾಹ್ನ 12 ರಿಂದ ಸಂಜೆ 7 ರವರೆಗೆ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿತ್ತು. ಚೆನ್ನೈ, ತಿರುವಳ್ಳೂರು, ಚೆಂಗಲ್ಪಟ್ಟು, ಕಾಂಚೀಪುರಂ, ವಿಲ್ಲುಪುರಂ, ಕಲ್ಲಕುರಿಚಿ, ಕಡಲೂರು ಜಿಲ್ಲೆಗಳು ಮತ್ತು ಪುದುಚೇರಿ ಸೇರಿದಂತೆ 7 ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಜಾರಿಯಲ್ಲಿದೆ. ರಾಣಿಪೇಟ್, ತಿರುವಣ್ಣಾಮಲೈ, ವೆಲ್ಲೂರು, ಪೆರಂಬಲೂರು, ಅರಿಯಲೂರು, ತಂಜಾವೂರು, ತಿರುವರೂರು, ಮೈಲಾಡುತುರೈ, ನಾಗಪಟ್ಟಿಣಂ ಮತ್ತು ಕಾರೈಕಲ್ಲಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ತಮಿಳುನಾಡು ಸಿಎಂ ಸ್ಟಾಲಿನ್ ಅವರು ಪರಿಸ್ಥಿತಿಯನ್ನು ಪರಿಶೀಲಿಸಿದ್ದಾರೆ. ಸರಕಾರ ಶನಿವಾರ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಿತ್ತು. ತಮ್ಮ ಉದ್ಯೋಗಿಗಳನ್ನು ಮನೆಯಿಂದಲೇ ಕೆಲಸ ಮಾಡುವಂತೆ ಐಟಿ ಸಂಸ್ಥೆಗಳಿಗೆ ಮನವಿ ಮಾಡಿದೆ.

ಚೆನ್ನೈನ ರೈಲ್ವೆ ನಿಲ್ದಾಣವೊಂದು ಜಲಾವೃತಗೊಂಡಿರುವುದು.

ರಾಜ್ಯದ 5 ಜಿಲ್ಲೆಗಳಲ್ಲಿ 4 ದಿನ ಭಾರಿ ಮಳೆ

ಬೆಂಗಳೂರು: ಬಂಗಾಳ ಕೊಲ್ಲಿಯ ನೈರುತ್ಯದಲ್ಲಿ ವಾಯುಭಾರ ಕುಸಿತ ಉಂಟಾಗಿರುವುದರಿಂದ ಬೆಂಗಳೂರು ಸೇರಿ ರಾಜ್ಯದ ಐದು ಜಿಲ್ಲೆಗಳಲ್ಲಿ ಶನಿವಾರದಿಂದ 4 ದಿನ ಭಾರಿ ಮಳೆಯಾಗುವ ಸಾಧ್ಯತೆಯಿದೆ. ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಡಿ.2ರಂದು ಮೂರು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಸೇರಿ 10 ಜಿಲ್ಲೆಗಳಿಗೆ ಭಾರಿ ಮಳೆಯ ಮುನ್ಸೂಚನೆ ನೀಡಲಾಗಿದೆ. ಡಿ.3ರಂದು 12 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ.

ಕೇರಳ ಮಾದರಿಯಲ್ಲಿ ರಾಜ್ಯದಲ್ಲಿಯೂ ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕು

ಅನಿವಾಸಿ ಕನ್ನಡಿಗರಿಗೆ ಸರಕಾರದ ಅನುದಾನ ಅಗತ್ಯ: ಆರತಿ ಕೃಷ್ಣ

ವಿಶ್ವವಾಣಿ ವಿಶೇಷ

ಬೆಂಗಳೂರು: ಜೀವನ ಅರಸಿ ದೂರದ ದೇಶಗಳಿಗೆ ತೆರಳುವ ಲಕ್ಷಾಂತರ ಕನ್ನಡಿಗರಿದ್ದಾರೆ. ಈ ರೀತಿ ವಿದೇಶದಲ್ಲಿರುವ ಅನಿವಾಸಿ ಕನ್ನಡಿಗರು ಸಮಸ್ಯೆಗೆ ಸಿಲುಕಿಸಿದರೆ ಆರ್ಥಿಕ ಸಹಾಯ ಮಾಡಲು ಅನುದಾನವಿಲ್ಲ. ಆದ್ದರಿಂದ ರಾಜ್ಯ ಸರಕಾರ ಮುಂದಿನ ಬಜೆಟ್‌ನಲ್ಲಿ ಅನಿವಾಸಿ ಕನ್ನಡಿಗರಿಗೆ ಪ್ರತ್ಯೇಕ ಅನುದಾನ ಮೀಸಲಿಡಬೇಕು ಎಂದು ಕರ್ನಾಟಕದ ಎನ್‌ಆರ್‌ಐ ಫೋರಂನ ಉಪಾಧ್ಯಕ್ಷೆ ಡಾ.ಆರತಿ ಕೃಷ್ಣ ಅಭಿಪ್ರಾಯಪಟ್ಟಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ಪ್ರಣಾಳಿಕೆಯಲ್ಲಿ ಅನಿವಾಸಿ ಭಾರತೀಯರ ಸಮಸ್ಯೆಗೆ ಹಲವು ರೀತಿಯ ಪರಿಹಾರ ನೀಡುವ ಭರವಸೆ ನೀಡಲಾಗಿತ್ತು. ಇದರೊಂದಿಗೆ ಪ್ರತ್ಯೇಕ ಸಚಿವಾಲಯ ಆರಂಭಿಸುವುದಾಗಿ ಘೋಷಿಸಲಾಗಿತ್ತು. ಆದ್ದರಿಂದ ಪ್ರಣಾಳಿಕೆಯ ಘೋಷಣೆಯನ್ನು ಸೇರಿದಂತೆ ಅನಿವಾಸಿ ಕನ್ನಡಿಗರಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಕ್ರಮವಹಿಸಲು ಮನವಿ ಮಾಡಿದ್ದಾರೆ.

ವಿವಿಧ ದೇಶದಲ್ಲಿ ವಾಸವಿರುವ ಕನ್ನಡಿಗರಿಗೆ ಅಲ್ಲಿ ಕೆಲಸ ಮಾಡುವ ಸಮಯದಲ್ಲಿ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಕೆಲವರಿಗೆ ಆರ್ಥಿಕ ಸಹಾಯದ ಅಗತ್ಯವೂ ಇರುತ್ತದೆ. ಆದ್ದರಿಂದ ಮುಂದಿನ ಬಜೆಟ್‌ನಲ್ಲಿ ಅನುದಾನ ಮೀಸಲಿಡುವಂತೆ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಮಾಡುವುದಾಗಿ ಹೇಳಿದ್ದಾರೆ.

→ 4

ಎನ್‌ಆರ್‌ಐ ಫೋರಂನ ಭವಿಷ್ಯದ ಚಿಂತನೆ

- ಅವಿವಾಸಿ ಕನ್ನಡಿಗರಿಗೆ ನೆರವಾಗುವಂತಹ ನಿಟ್ಟಿನಲ್ಲಿ ಕೇರಳ ಮಾದರಿಯಲ್ಲಿ ಪ್ರತ್ಯೇಕ ಸಚಿವಾಲಯ
- ವಿದೇಶದಿಂದ ರಾಜ್ಯಕ್ಕೆ ವಾಪಸಾಗುವ ಅನಿವಾಸಿ ಭಾರತೀಯರಿಗೆ ಉದ್ಯೋಗ ಸೃಷ್ಟಿ
- ವಿದೇಶಗಳಲ್ಲಿ ಕೆಲಸದ ಆಮಿಷವೊಡ್ಡಿ ವಂಚನೆ ಮಾಡುವ ಏಜೆಂಟ್‌ರ ಬಗ್ಗೆ ಜನಜಾಗೃತಿ
- ಅನಿವಾಸಿ ಭಾರತೀಯರ ಎಲ್ಲರ ಮಕ್ಕಳಿಗೂ ಒಂದೇ ಶುಲ್ಕ ವಿಧಿಸುವುದು ಸರಿಯಲ್ಲ

ಸಮಾಚಾರ ಸಣ್ಣದಲ್ಲ

ತಂಬಾಕು ಸಿಗರೇಟು ಸೇವನೆ ದುಷ್ಪರಿಣಾಮ ಜಾಗೃತಿ

ಯಲ್ಲಾಪುರ: ತಾಲೂಕಿನಲ್ಲಿ ಅನಧಿಕೃತವಾಗಿ ತಂಬಾಕು ಮತ್ತು ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳ ಮೇಲೆ ತಾಲೂಕ ತಂಬಾಕು ನಿಗ್ರಹ ದಳದ ಸದಸ್ಯರು ದಾಳಿ ನಡೆಸಿ ಒಟ್ಟು 16 ಪ್ರಕರಣಗಳಿಗೆ ರು. 8400. ದಂಡ ವಿಧಿಸಲಾಯಿತು. ತಹಸೀಲ್ದಾರ್ ಕಚೇರಿ ಮಾಹಿತಿ ಮೇರೆಗೆ ಒಂದು ತಂಬಾಕು ಮಾರಾಟ ಮಳಿಗೆ ತೆರವುಗೊಳಿಸಿದರು. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನಕ್ಕೆ ಅವಕಾಶ ನೀಡಿರುವುದು, ತಂಬಾಕು ಉತ್ಪನ್ನಗಳ ಪರೋಕ್ಷ ಜಾಹೀರಾತು ಮಾಡಿರುವುದು, ಬೀಡಿ ಸಿಗರೇಟ್ ಮಾರಾಟ ಮಾಡುತ್ತಿರುವದು ಕಾನೂನಿಗೆ ವಿರುದ್ಧವಾಗಿದೆ. ಹೀಗಾಗಿ ಅಂಗಡಿ ಮಾಲೀಕರುಗಳಿಗೆ ದಂಡ ವಿಧಿಸಿ ಎಚ್ಚರಿಕೆ ನೀಡಿದರು. ಈಸಂದರ್ಭದಲ್ಲಿ ಯಲ್ಲಾಪುರ ತಾಲೂಕಾಸ್ಪತ್ರೆಯ ಆರೋಗ್ಯಅಧಿಕಾರಿ ಡಾ. ನರೇಂದ್ರ ಪವಾರ, ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಸುನಿಲ್ ಗಾವಡೆ, ಪೊಲೀಸ್ ಉಪ ನಿರೀಕ್ಷಕರಾದ ನಸ್ರೀನ ತಾಜ್, ತಹಸೀಲ್ದಾರ್ ಕಚೇರಿ ಸಿಬ್ಬಂದಿ, ಹಾಗೂ ನಂದೊಳ್ಳಿ ಪ್ರಾಥಮಿಕ ಆರೋಗ್ಯಕೇಂದ್ರ ಆಡಳಿತ ವೈದ್ಯಾಧಿಕಾರಿ ಡಾ. ತೇಜೇಶ್ ಹಾಗೂ ಸಿಬ್ಬಂದಿ ರವರು ತಂಬಾಕಿನಲ್ಲಿರುವ ರಸಾಯನಿಕಗಳು, ಸಿಗರೇಟು ಸೇವನೆಯ ದುಷ್ಪರಿಣಾಮಗಳು ಮತ್ತು ತಂಬಾಕು ಸೇವನೆ ಬಿಡುವುದರಿಂದ ಉಂಟಾಗುವ ಲಾಭಗಳು ಕುರಿತು ಮಾಹಿತಿಯನ್ನು ನೀಡಿದರು. ತಂಬಾಕು ಸೇವನೆ ಮಾಡುವುದರಿಂದ ಶ್ವಾಸಕೋಶ ಕ್ಯಾನ್ಸರ್, ಕೂದಲು ಉದರುವದು, ಕಿವುಡುತನ, ಹೃದಯ ಸಂಬಂಧಿ ಕಾಯಲೆಗಳು ಗರ್ಭಕೋರಳಿನ ಕ್ಯಾನ್ಸರ್ ಮತ್ತು ಗರ್ಭಪಾತ ಆಗುವದು ಆದ್ದರಿಂದ ತಾವುಗಳ ಇಂದೇ ಮಾನಸಿಕವಾಗಿ ನಿರ್ಧರಿಸಿ ಗಟ್ಟಿ ಮನಸ್ಸಿನಿಂದ ಗುಟಕಾ ತಂಬಾಕು - ಸಿಗರೇಟ್ ಮುಟ್ಟುವುದಿಲ್ಲವೆಂದು ನಿರ್ಧರಿಸಲು ತಿಳಿಸಿ ಜಾಗೃತಿ ಮೂಡಿಸಿದರು.

ಬ್ರಾಹ್ಮಣ ಮಹಾಸಭಾ ಪ್ರಧಾನ ಸಂಚಾಲಕರಾಗಿ ನಾಡಜೋಶಿ ನೇಮಕ

ಹಾವೇರಿ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ 50ನೇ ವರ್ಷದ ಸುವರ್ಣ

ಸಂಭ್ರಮ ಹಾಗೂ ರಾಜ್ಯ ಮಟ್ಟದ 11ನೇ ಬ್ರಾಹ್ಮಣ ಸಮ್ಮೇಳನ 2025ರ ಜನೇವರಿ 18 ಹಾಗೂ 19ರಂದು ನಡೆಯಲಿದ್ದು, ಇದರ ಸಮ್ಮೇಳನ ಸಮಿತಿಯ ಪ್ರಧಾನ ಸಂಚಾಲಕರನ್ನಾಗಿ ಹುಬ್ಬಳ್ಳಿಯ ವಿಜಯೇಂದ್ರ ನಾಡಜೋಶಿ ಅವರನ್ನು ನೇಮಕ ಮಾಡಿ ಮಹಾಸಭಾಧ್ಯಕ್ಷ ಅಶೋಕ ಹಾರನಹಳ್ಳಿ ಆದೇಶವನ್ನು ಹೊರಡಿಸಿದ್ದಾರೆ. ಇವರು ಹಾವೇರಿ ಜಿಲ್ಲೆಯ ಉಸ್ತುವಾರಿಗಳು ಆಗಿದ್ದಾರೆಂದು ಪ್ರಕಟಣೆಯಲ್ಲಿ ತಿಳಿಸಿದೆ.

ಡಿ.8ಕ್ಕೆ ಸಂಹಿತಾ ಮ್ಯೂಸಿಕ್ ಫೋರಮ್‌ನ ಸಂಗೀತ ಸಮ್ಮೇಳನ

ಶಿರಸಿ: ಸಂಹಿತಾ ಮ್ಯೂಸಿಕ್ ಫೋರಮ್‌ನ 15ನೇ ವಾರ್ಷಿಕ ವಿಶೇಷ ಸಂಗೀತ ಸಮ್ಮೇಳನ ಹಾಗೂ ನಾದ ಸಂಹಿತಾ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಗರದ ಟಿಆರ್‌ಸಿ ಸಭಾಭವನದಲ್ಲಿ ಡಿ.8ರಂದು ನಡೆಯಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬೆಳಗ್ಗೆ 9.30ಕ್ಕೆ ವಿದ್ಯಾರ್ಥಿಗಳಿಂದ ಪ್ರತಿಭಾ ಪ್ರದರ್ಶನ, 10.30ಕ್ಕೆ ಗಾಯಕಿ ಕಾವ್ಯಶ್ರೀ ಅನಂತ ಹೆಗಡೆ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಂಜೆ 4ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದ್ದು ಸಂಹಿತಾ ಮ್ಯೂಸಿಕ್ ಫೋರಮ್ ಅಧ್ಯಕ್ಷ ಸುಬ್ರಾಯ ಹೆಗಡೆ ಕುಪ್ಪನಮನೆ ಅಧ್ಯಕ್ಷತೆ ವಹಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಮಂಗಲಾ ವೆಂ.ನಾಯ್ಕ, ನಗರಸಭೆ ಅಧ್ಯಕ್ಷೆ ಶರ್ಮಿಳಾ ಮಾದನಗೇರಿ, ಉಪಾಧ್ಯಕ್ಷ ರಮಾಕಾಂತ ಭಟ್ಟ, ಧಾರವಾಡ ಹಾಲು ಒಕ್ಕೂಟದ ಉಪಾಧ್ಯಕ್ಷ ಸುರೇಶ್ಚಂದ್ರ ಹೆಗಡೆ ಕೆಶಿನ್ಮನೆ, ಮಲೆನಾಡು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಕಾರ್ಯದರ್ಶಿ ಎಲ್.ಎಂ.ಹೆಗಡೆ ಗೋಳಿಕೊಪ್ಪ, ಜಿಪಂ ಮಾಜಿ ಸದಸ್ಯ ಜಿ.ಎನ್.ಹೆಗಡೆ ಮುರೇಗಾರ, ಸಾಮಾಜಿಕ ಹೋರಾಟಗಾರ ಅನಂತಮೂರ್ತಿ ಹೆಗಡೆ ಪಾಲ್ಗೊಳ್ಳುವರು. ಸಂಜೆ 5ಕ್ಕೆ ಅನಂತ ಹೆಗಡೆ ವಾಜಗಾರ ಅವರಿಂದ ತಬಲಾ ವಾದನ, ಸಂಜೆ 6.30ಕ್ಕೆ ಆಮಂತ್ರಿತ ಕಲಾವಿದರಿಂದ ಕಾರ್ಯಕ್ರಮ ನಡೆಯಲಿದೆ. ಖ್ಯಾತ ಕಲಾವಿದ ನಿಖಿಲ್ ಜೋಶಿ ಹುಬ್ಬಳ್ಳಿ ಅವರಿಂದ ಸಿತಾರ್ ವಾದನ, ತಬಲಾದಲ್ಲಿ ಅನಂತ ಹೆಗಡೆ, ಹಾರ್ಮೋನಿಯಂನಲ್ಲಿ ಡಾ.ಸಮೀರ ಬಾದ್ರಿ ಸಿದ್ದಾಪುರ, ಪ್ರಜ್ವಲ ಹೆಗಡೆ ತಟ್ಟೀಸರ ಹಾಗೂ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳು ಸಾಥ್ ನೀಡುವರು.

ಬಿಜೆಪಿ ಸೇರಿದ ಘೋಟ್ನೇಕರ

ಪಕ್ಷದ ಶಕ್ತಿ ಇಮ್ಮಡಿಯಾಗಲಿದೆ: ಸಂಸದ ಕಾಗೇರಿ ಅಭಿಪ್ರಾಯ

ಶಿರಸಿ: ಎರಡು ಬಾರಿಯ ಪರಿಷತ್ ಸದಸ್ಯ, ಕೆಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಹಾಗೂ ಮರಾಠಾ ನಾಯಕರಾದ ಹಳಿಯಾಳದ ಎಸ್.ಎಲ್. ಘೋಟ್ನೇಕರ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಸಮ್ಮುಖದಲ್ಲಿ ಶಿರಸಿಯಲ್ಲಿ ಅಧಿಕೃತವಾಗಿ ಭಾರತೀಯ ಜನತಾ ಪಕ್ಷವನ್ನು ಸೇರ್ಪಡೆಯಾದರು.

ನಗರದ ದೀನದಯಾಳ ಭವನದಲ್ಲಿ ಶನಿವಾರ ಆಯೋಜಿಸಲಾಗಿದ್ದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಘೋಟ್ನೇಕರ ತಮ್ಮ ಅಪಾರ ಅಭಿಮಾನಿಗಳ ಜೊತೆಯಲ್ಲಿ ಜೆಡಿಎಸ್ ತೊರೆದು ಬಿಜೆಪಿ ಸೇರಿದರು. ಸಂಸದ ಕಾಗೇರಿ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್. ಹೆಗಡೆ ಕರ್ಕಿ, ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಮತ್ತಿತ್ತರರು ಸೇರಿ ಬಿಜೆಪಿ ಶಾಲು ಹಾಕಿ ಪಕ್ಷಕ್ಕೆ ಬರಮಾಡಿಕೊಂಡರು.

ಬಳಿಕ ಮಾತನಾಡಿದ ಸಂಸದ ಕಾಗೇರಿ, ಎಸ್.ಎಲ್. ಘೋಟ್ನೇಕರ ಬಿಜೆಪಿ ಸೇರ್ಪಡೆಗೊಂಡಿರುವುದು ಹಳಿಯಾಳ ಕ್ಷೇತ್ರ, ನಮ್ಮ ಜಿಲ್ಲೆ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಬಹಳ ದೊಡ್ಡ ಶಕ್ತಿ ಬಂದಿದೆ. ಹಿರಿಯರು ಹಾಗೂ ಯುವಕರ ಪಡೆಯು ಬಿಜೆಪಿ ಸೇರ್ಪಡೆಗೊಂಡಿರುವುದು ಬಹಳ ದೊಡ್ಡ ಶಕ್ತಿ ಬಂದಿದೆ. ಸಾಮಾನ್ಯ ಜನರ ಧ್ವನಿಯಾಗಿ ಪಕ್ಷ ಸಂಘಟನೆ ಮಾಡಬೇಕಿದೆ. ಜನಸಂಘವಾಗಿ ಬೆಳೆದ ಪಕ್ಷ. ದೇಶ ಮೊದಲು ಎಂಬ ಪಕ್ಷ ನಮ್ಮದು. ದೀನ ದಯಾಳ ನೀಡಿದ ತತ್ವಕ್ಕೆ ಬದ್ಧರಾಗಿ ನಮ್ಮ ನಾಯಕರು ಕೆಲಸ ಮಾಡುತ್ತಿದ್ದಾರೆ. ಅನೇಕ ಹಿರಿಯರ ಶ್ರಮದಿಂದ ಬಿಜೆಪಿ ಇಷ್ಟೊಂದು ದೊಡ್ಡ ಶಕ್ತಿಯಾಗಿ ಬೆಳೆಯಲು ಕಾರಣವಾಗಿದ್ದು, ರೈತರ ಆಶೀರ್ವಾದ ಹಾಗೂ ಕಾರ್ಯಕರ್ತರ ಶ್ರಮದಿಂದ ಪಕ್ಷ ಹೆಮ್ಮರವಾಗಿ ಬೆಳೆದಿದೆ ಎಂದರು.

ಅಧಿಕಾರಿಗಳ ವರ್ಗಾವಣೆಯಲ್ಲಿ ಸುಲಿಗೆ ಮಾಡಲಾಗುತ್ತಿದೆ. ಭ್ರಷ್ಟಾಚಾರದಲ್ಲಿ ಕಾಂಗ್ರೆಸ್ ಮುಳುಗಿದೆ ಎಂದು ವಾಗ್ದಾಳಿ ನಡೆಸಿದರು.

ಉತ್ತರ ಕನ್ನಡ ಜಿಲ್ಲೆ ಬಿಜೆಪಿ ಪ್ರಮುಖರ ಸಮ್ಮುಖದಲ್ಲಿ ಮಾಜಿ ಎಂಎಲ್‌ಸಿ ಎಸ್.ಎಲ್. ಘೋಟ್ನೇಕರ ಅವರು ಪಕ್ಷಕ್ಕೆ ಸೇರ್ಪಡೆಗೊಂಡರು.

> **ಎಸ್.ಎಲ್. ಘೋಟ್ನೇಕರ ಹಾಗೂ ಸುನೀಲ ಹೆಗಡೆ ಜೋಡೆತ್ತಿನಂತೆ ಕೆಲಸ ಮಾಡಿ, ಹಳಿಯಾಳ ಕ್ಷೇತ್ರದಲ್ಲಿ ಮುಂದಿನ ದಿನಗಳಲ್ಲಿ ಕಮಲ ಅರಳಿಸುತ್ತಾರೆ ಎಂಬ ವಿಶ್ವಾಸವಿದೆ.**
> -ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ

ವಿಧಾನಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಮಾತನಾಡಿದರು. ಅಲ್ಲದೇ ಹಿಂದುಳಿದ ಬುಡಕಟ್ಟು ಜನಾಂಗದ ಮಹಿಳೆಯಾದ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿಯನ್ನಾಗಿ ಮಾಡಿದ್ದಾರೆ. ಇದು ಬಿಜೆಪಿಯಲ್ಲಿ ಮಾತ್ರ ಸಾಧ್ಯ ಎಂದರು.

ಪಕ್ಷ ಸೇರ್ಪಡೆಗೊಂಡ ಎಸ್.ಎಲ್. ಘೋಟ್ನೇಕರ ಮಾತನಾಡಿ, ಆರ್‌ಎಸ್‌ಎಸ್ ಹಿನ್ನೆಲೆಯುಳ್ಳ ವ್ಯಕ್ತಿಯಾಗಿದ್ದೆ. ಈಗ ಅಧಿಕೃತವಾಗಿ ಬಿಜೆಪಿ ಸೇರ್ಪಡೆಗೊಂದಿದ್ದೇನೆ. ನಾನು ಬಿಜೆಪಿಗೆ ಆಗಮಿಸಲು ಸುನೀಲ ಹೆಗಡೆ ಸ್ವಾಗತಿಸಿದ್ದಾರೆ. ಸುನೀಲ ಹೆಗಡೆ ಮತ್ತು ನಾನು ಜೊತೆಗೂಡಿ ಹಳಿಯಾಳ, ಜೋಯಿಡಾ, ದಾಂಡೇಲಿ ಭಾಗಗಳಲ್ಲಿ ಪಕ್ಷ ಸಂಘಟನೆ ಮಾಡುತ್ತೇವೆ.

ಜಗತ್ತಿಗೆ ನರೇಂದ್ರ ಮೋದಿ ಬೇಕಾಗಿದೆ. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಆಡಳಿತದಲ್ಲಿರುವು ದರಿಂದ ನಾವೆಲ್ಲ ಸುರಕ್ಷಿತವಾಗಿದ್ದೇವೆ. ಸೈನ್ಯಕ್ಕೆ ಬಲ ನೀಡಿದ ಮಹಾನ್ ನಾಯಕ ನರೇಂದ್ರ ಮೋದಿ. ರೈತರ ಪರವಾಗಿ ಹಲವಾರು ಕೆಲಸ ಮಾಡಿದ್ದೇನೆ. ಬೇಧ ಭಾವ ಇಲ್ಲದೇ ಎಲ್ಲರಿಗೂ ಸಹಾಯ ಮಾಡಿದ್ದೇನೆ ಎಂದರು.

ಇದೇ ವೇಳೆ ವಿವಿಧ ಸ್ತರದ ಜನಪ್ರತಿನಿಧಿಗಳು, ಯುವ ಮುಖಂಡರು ಸೇರಿ ನೂರಾರು ಜನರು ಬಿಜೆಪಿಯನ್ನು ಸೇರ್ಪಡೆಯಾದರು. ಮಾಜಿ ಶಾಸಕ ವಿವೇಕಾನಂದ ವೈದ್ಯ, ಪ್ರಮುಖರಾದ ಹರಿಪ್ರಕಾಶ ಕೋಣೆಮನೆ, ಎಲ್.ಟಿ.ಪಾಟೀಲ್, ಶರ್ಮಿಳಾ ಮಾದನಗೇರಿ, ಆರ್.ಡಿ.ಹೆಗಡೆ ಇತರರು ಇದ್ದರು.

ಎಲ್ಲರೂ ಸಾಮರಸ್ಯದಿಂದ ಬದುಕಬೇಕು: ಶಾಸಕ ಮಾನೆ

ಹಾನಗಲ್: ಧರ್ಮ, ಜಾತಿ ಬೇಧ ಮರೆತು, ಮೇಲು, ಕೀಳು ಭಾವ ತೊರೆದು ಎಲ್ಲರೂ ಸಹ ಪ್ರೀತಿ, ಸಾಮರಸ್ಯದಿಂದ ಒಂದಾಗಿ ಬಾಳುವ ಸಂಕಲ್ಪ ತೊಡಬೇಕಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಕರೆ ನೀಡಿದರು.

ಶನಿವಾರ ತಾಲೂಕಿನ ನಾಲ್ಕರ ಕ್ರಾಸ್ ಬಳಿ ಹಾನಗಲ್‌ನ ರೋಶನಿ ವ್ಯಸನ ಮುಕ್ತಿ ಹಾಗೂ ಪುನರ್ವಸತಿ ಕೇಂದ್ರದ ನೂತನ ಕಟ್ಟಡ ಉದ್ಘಾಟನೆ ಹಾಗೂ ರೋಶನಿ ಸಮಾಜ ಸೇವಾ ಸಂಸ್ಥೆಯ ರಜತ ಮಹೋತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಮಾನವೀಯ ಮೌಲ್ಯಗಳೊಂದಿಗೆ ಸಂವಿಧಾನದ ಮೂಲ ಆಶಯಗಳನ್ನು ಎತ್ತಿ ಹಿಡಿಯುವಲ್ಲಿ ರೋಶನಿ ಸಂಸ್ಥೆ ಶ್ರಮ ವಹಿಸಿದೆ. ಸರ್ಕಾರ ಮತ್ತು ಚುನಾಯಿತ ಜನಪ್ರತಿನಿಧಿಗಳು ಮಾಡುವ ಕೆಲಸ ಕಾರ್ಯಗಳನ್ನು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ನಿಸ್ವಾರ್ಥ ಮನೋಭಾವನೆಯಿಂದ ಮಾಡುತ್ತಿದೆ. 7500 ಕ್ಕೂ ಹೆಚ್ಚು ಜನರನ್ನು ವ್ಯಸನ ಮುಕ್ತಗೊಳಿಸಿ ಉತ್ತಮ ಬದುಕು ನಡೆಸಲು ಪ್ರೇರಣೆ ನೀಡಿದೆ. ಮಹಿಳಾ ಸಬಲೀಕರಣ, ವಿಕಲಚೇತನರ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಿದೆ ಎಂದು ಹೇಳಿದ ಅವರು ಮಾನವ ಜನ್ಮದ ಸಾರ್ಥಕತೆಗೆ ಪ್ರತಿಯೊಬ್ಬರೂ ಸಾಮಾಜಿಕ ಜವಾಬ್ದಾರಿ ಹೊತ್ತುಕೊಳ್ಳಬೇಕಿದೆ. ಸಾಮಾಜಿಕ ಜವಾಬ್ದಾರಿಯನ್ನು ತನ್ನ ಜವಾಬ್ದಾರಿ ಎಂದು ಅರಿತರೆ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯವಾಗಲಿದೆ ಎಂದರು.

ರೋಶನಿ ಸಮಾಜ ಸೇವಾ ಸಂಸ್ಥೆಯ ನಿರ್ದೇಶಕಿ ಸಿಸ್ಟರ್ ಅನಿತಾ ಡಿಸೋಜಾ ಮಾತನಾಡಿ, ನವ ಸಮಾಜ ನಿರ್ಮಾಣದ

ಸದಾಶಯದೊಂದಿಗೆ ಸಂಸ್ಥೆ ಕಳೆದ 25 ವರ್ಷಗಳಿಂದ ಕಾರ್ಯ ನಿರತವಾಗಿದೆ. ಕೌಶಲ್ಯ ತರಬೇತಿಯಂಥ ಕಾರ್ಯಕ್ರಮಗಳೊಂದಿಗೆ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದೆ. ವೈಚಾರಿಕ ಚಿಂತನೆಗಳನ್ನು ಒಪ್ಪಿಕೊಂಡು ಮುನ್ನಡೆಯುತ್ತಿದೆ ಎಂದು ಹೇಳಿದ ಅವರು ಸಂಸ್ಥೆ ಇದುವರೆಗೆ ನಡೆದು ಬಂದ ದಾರಿಯ ಬಗೆಗೆ ಸಾರ್ಥಕತೆ ಇದೆ. ಸೇವಾ ಕ್ಷಿತಿಜ ಇನ್ನಷ್ಟು ವಿಸ್ತರಿಸಿಕೊಳ್ಳಲು ಸುಸಜ್ಜಿತ ಕಟ್ಟಡ ಆಸರೆಯಾಗಲಿದೆ ಎಂದರು.

ಮಂಗಳೂರಿನ ಅರ್ಸುಲೈನ್ ಸಂಸ್ಥೆಯ ಸುಪೀರಿಯರ್ ಜನರಲ್ ಸಿಸ್ಟರ್ ಮಿಲ್ಲಿ ಫೆನಾಂಡಿಸ್, ಹುಬ್ಬಳ್ಳಿಯ ಪ್ರಾಂತೀಯ ಅಧಿಕಾರಿ ಡಾ.ಸಿಸ್ಟರ್ ಗ್ರೆಟ್ಟ ಸಂಜೀವಿನಿ ಡಿಸೋಜಾ, ಮನೋವೈದ್ಯ ಡಾ.ಎಸ್.ಸಿ.ಕುಲಕರ್ಣಿ ಧರ್ಮಗುರು ಫಾದರ್ ಜೆರಾಲ್ಡ್ ಡಿಸೋಜಾ, ರಾಮಣ್ಣ ಬುಡ್ಡನವರ, ಹೇಮಾವತಿ ಕುನ್ನೂರ, ಪ್ರಸನ್ನಕುಮಾರ ಮೈಸೂರ ಸೇರಿದಂತೆ ಇನ್ನೂ ಹಲವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮನೆ ಕಳ್ಳತನ ; ಲಕ್ಷಾಂತರ ರು. ಚಿನ್ನಾಭರಣ ದೋಚಿದ ಕಳ್ಳರು

ಶಿರಸಿ: ತಾಲೂಕಿನ ಬನವಾಸಿ ವ್ಯಾಪ್ತಿಯಲ್ಲಿ ಮನೆ ಕಳ್ಳತನ ನಡೆಸಿರುವ ಕಳ್ಳರು 10 ಸಾವಿರ ನಗದು ಸೇರಿದಂತೆ ಸುಮಾರು 1.24 ಲಕ್ಷ ರೂ. ಬೆಲೆಯ ಚಿನ್ನಾಭರಣ ದೋಚಿದ ಘಟನೆ ನಡೆದಿದೆ.

ಮಗವಳ್ಳಿಯ ಆದರ್ಶ ಕನ್ನಪ್ಪ ಕಾಳೆನವರ್ ಮನೆಯಲ್ಲಿ ಕಳ್ಳತನ ನಡೆದಿದ್ದು, ಪೊಲಿಸರು ಮನೆ ಪರಿಶೀಲನೆ ನಡೆಸಿ ಶ್ವಾನ ದಳದ ಸಹಾಯದಿಂದ ತನಿಖೆ ಆರಂಬಿಸಿದ್ದಾರೆ. ಕಳ್ಳರು ಮನೆಯ ಬೀಗ ಮುರಿದು ಗೊದ್ರೆಜ್ ಕಪಾಟನಲ್ಲಿದ್ದ 10 ಸಾವಿರ ನಗದು, ಸುಮಾರು 50. ಸಾವಿರ ರೂ. ಬೆಲೆಯ 10 ಗ್ರಾಂ ತೂಕದ ಬಂಗಾರದ ಸರ, 20 ಸಾವಿರ ರೂ. ಬೆಲೆಯ 4 ಗ್ರಾಂ ಬಂಗಾರದ ಉಂಗುರ, 25 ಸಾವಿರ ಬೆಲೆಯ 5 ಗ್ರಾಂ ತೂಕದ ಬಂಗಾರದ ಜುಮುಕಿ, 15 ಸಾವಿರ ಬೆಲೆಯ 2 ಗ್ರಾಂ ತೂಕದ ಬಂಗಾರದ ಕಿವಿ ಬಟನ್ಸ ಹಾಗು 4 ಸಾವಿರ ರೂ. ಬೆಲೆಯ 2 ಜೊತೆ ಬೆಳ್ಳಿ ಚೈನ್ ಕಳ್ಳತನವಾಗಿದ್ದು, ಸಿಪಿಐ ಶಶಿಕಾಂತ ವರ್ಮಾ ಹಾಗೂ ಪಿಎಸ್‌ಐ ಚಂದ್ರಕಲಾ ಪತ್ತಾರ್ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ತನಿಖೆ ಆರಂಭಿಸಿದ್ದಾರೆ.

ಕ್ರಿಮಿನಾಶಕ ಸೇವಿಸಿದ್ದ ಮಹಿಳೆ ಸಾವು

ಮುಂಡಗೋಡ: ಹೊಲಕ್ಕೆ ಹೊಡೆಯಲು ತಂದಿಟ್ಟಿದ್ದ ಕ್ರಿಮಿನಾಶಕ ಸೇವಿಸಿದ ನಿರ್ಮಲಾ ಗುಡಗುಡಿ ಸಾವನಪ್ಪಿದ್ದಾರೆ.

ತಾಲೂಕಿನ ಕೊಡಂಬಿಯ ನಿರ್ಮಲಾ ನ 21ರಂದು ಕ್ರಿಮಿನಾಶಕ ಸೇವಿಸಿದ್ದರು. ಚಿಕಿತ್ಸೆಗಾಗಿ ಅವರನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ನ. 29ರಂದು ಅವರು ಮೃತಪಟ್ಟಿದ್ದಾರೆ. ಹಾವೇರಿಯಲ್ಲಿರುವ ನಿರ್ಮಲಾ ಅವರ ತಂದೆ ಮೈಲಾರಪ್ಪ ಅವರು ಪೊಲೀಸ್ ಪ್ರಕರಣ ದಾಖಲಿಸಿದ್ದಾರೆ.

ವಿಪತ್ತು ನಿರ್ವಹಣೆ ಯೋಜನೆ ಸಿದ್ಧತೆಗೆ ಸ್ಪಂದಿಸಿ: ಡಿಸಿ

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಸೂಚನೆ

ಕಾರವಾರ: ಜಿಲ್ಲೆಯ ಕೈಗಾ ಅಣು ಸ್ಥಾವರ ಪ್ರದೇಶ ಸೇರಿದಂತೆ ಜಿಲ್ಲೆಯಲ್ಲಿ ಯಾವುದೇ ಪ್ರದೇಶದಲ್ಲಿ ವಿಪತ್ತುಗಳು ಸಂಭವಿಸಿದ ಸಂದರ್ಭದಲ್ಲಿ, ಜಿಲ್ಲೆಯ ಮುಂಚೂಣಿ ಇಲಾಖೆಯ ಅಧಿಕಾರಿಗಳು ತ್ವರಿತವಾಗಿ ಸ್ಪಂದಿಸಿ, ಪರಿಸ್ಥಿತಿಯ ಹತೋಟಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಎಲ್ಲಾ ಸಕಲ ಸಿದ್ದತೆಗಳೊಂದಿಗೆ ಜಾಗೃತವಾಗಿರಬೇಕು ಎಂದು ಜಿಲ್ಲಾಧಿಕಾರಿ ಕೆ. ಲಕ್ಷ್ಮಿಪ್ರಿಯಾ ಹೇಳಿದರು.

ಅವರು ಶನಿವಾರ, ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ, ಕೈಗಾ ಅಣು ಸ್ಥಾವರ ಪ್ರದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು ಮತ್ತು ವಿವಿಧ ಇಲಾಖೆಗಳ ಕರ್ತವ್ಯಗಳ ಕುರಿತ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಮಳೆಗಾಲದ ಸಂದರ್ಭದಲ್ಲಿ ಗುಡ್ಡಕುಸಿತ ಸಂಭವಿಸುವ 439 ಸ್ಥಳಗಳನ್ನು ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾದ ವತಿಯಿಂದ ಗುರುತಿಸಲಾಗಿದೆ. ಕೈಗಾ ಅಣು ವಿದ್ಯುತ್ ಸ್ಥಾವರದಲ್ಲಿ ಯಾವುದೇ ಕಾರಣಗಳಿಂದ ತುರ್ತು ಪರಿಸ್ಥಿತಿ ಘೋಷಿಸಿದಲ್ಲಿ, ಈ ವ್ಯಾಪ್ತಿಯಲ್ಲಿನ ಶಾಲೆಗಳು, ಆಸ್ಪತ್ರೆಗಳು, ಜನವಸತಿ ಪ್ರದೇಶಗಳಲ್ಲಿನ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ತಕ್ಷಣದಲ್ಲೇ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕಿದ್ದು, ಇದಕ್ಕಾಗಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಎಲ್ಲಾ ಸಿದ್ದತೆಗಳನ್ನು ಮಾಡಿಕೊಂಡಿರಬೇಕು ಎಂದರು.

ಕೈಗಾ ಅಣು ವಿದ್ಯುತ್ ಸ್ಥಾವರದ ಹಿರಿಯ ತಾಂತ್ರಿಕ ಇಂಜಿನಿಯರ್ ಅಮೋಲ್ ಶುಕ್ಲಾ ಮಾತನಾಡಿ, ಪ್ರಸ್ತುತ ದೇಶದಲ್ಲಿ 7 ಪ್ರದೇಶದಲ್ಲಿ ಮಾತ್ರ ಅಣು ವಿದ್ಯುತ್ ಉತ್ಪಾದನಾ ಸ್ಥಾವರಗಳಿದ್ದು, ಕೈಗಾದಲ್ಲಿ 220 ಮೆ.ವ್ಯಾಟ್ ನ 4 ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಇತರೆ ವಿದ್ಯುತ್ ಉತ್ಪಾದನಾ ಕ್ರಮಗಳಿಗೆ ಹೋಲಿಸಿದ್ದಲ್ಲಿ ಅಣು ವಿದ್ಯುತ್ ಮೂಲಕ ಕಡಿಮೆ ವೆಚ್ಚದಲ್ಲಿ ಮತ್ತು ಪರಿಸರಕ್ಕೆ ಪೂರಕವಾದ ರೀತಿಯಲ್ಲಿ ಉತ್ತಮ ಗುಣಮಟ್ಟದ ವಿದ್ಯುತ್ ಪಡೆಯಲು ಸಾಧ್ಯವಿದೆ. ಅಣು ವಿದ್ಯುತ್ ಸ್ಥಾವರದಲ್ಲಿ ಮಾತ್ರವಲ್ಲದೇ ಅನೇಕ ವೈದ್ಯಕೀಯ ಪರೀಕ್ಷೆ ಮತ್ತು ಚಿಕಿತ್ಸೆಗಳಿಗೆ ನಿರ್ದಿಷ್ಟ ಪ್ರಮಾಣದ ಅಣು ವಿಕರಣಗಳ ಬಳಕೆಯಾಗುತ್ತಿದ್ದು, ಕೈಗಾ ವಿದ್ಯುತ್ ಘಟಕದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಸಿಬ್ಬಂದಿಗಳ ದೇಹದಲ್ಲಿನ ಅಣು ವಿಕರಣಗಳ ಪ್ರಮಾಣಗಳ ಬಗ್ಗೆ ಪ್ರತಿ ದಿನ ತಪಾಸಣೆ ನಡೆಸಲಾಗುತ್ತಿದ್ದು, ಘಟಕದ ಆರಂಭದಿ0ದ ಇದುವರೆಗೂ ವಿಕಿರಣ ಪ್ರಮಾಣ ನಿಗಧಿಗಿಂತಲೂ ಅತ್ಯಂತ ಕಡಿಮೆ ಇದೆ ಎಂದರು.

ಹಿರಿಯ ತಾಂತ್ರಿಕ ಇಂಜಿನಿಯರ್ ಚಿತ್ತರಂಜನ್ ಮಾತನಾಡಿ, ಕೈಗಾದಲ್ಲಿ ವಿದ್ಯುತ್ ಉತ್ಪಾದನಾ ಘಟಕ, ಅಣು ವಿದ್ಯುತ್ ಸ್ಥಾವರದ ಪ್ರದೇಶ ಮತ್ತು ಕೈಗಾ ಅಣು ವಿದ್ಯುತ್ ಸ್ಥಾವರದ ಹೊರ

ಪ್ರದೇಶದಲ್ಲಿ ವಿಕಿರಣ ಸೋರಿಕೆಯಾಗದಂತೆ 3 ಹಂತದಲ್ಲಿ ಸಂಪೂರ್ಣ ಸುರಕ್ಷತೆಯನ್ನು ಕೈಗೊಂಡಿದ್ದು, ಈ ಬಗ್ಗೆ 24★7 ನಿರಂತರವಾಗಿ ಪರಿಶೀಲನೆ ನಡೆಸಲಾಗುತ್ತಿದೆ. ಒಂದು ವೇಳೆ ಸೋರಿಕೆಯಾಗಿರುವುದು ಕಂಡು ಬಂದಲ್ಲಿ ಅದನ್ನು ನಿಯಂತ್ರಿಸುವ ಕುರಿತಂತೆ ಸಹ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸಲಾಗಿದೆ. ಕೈಗಾ ಸೇರಿದಂತೆ ಇದುವರೆಗೆ ಭಾರತದ ಯಾವುದೇ ಅಣು ವಿದ್ಯುತ್ ಸ್ಥಾವರದಲ್ಲಿ ವಿಕಿರಣ ಸೋರಿಕೆ ಪ್ರಕರಣ ಸಂಭವಿಸಿಲ್ಲ ಎಂದರು.

ಕೈಗಾ ಅಣು ವಿದ್ಯುತ್ ಸ್ಥಾವರದ ಒಳಗಿನ ಪ್ರದೇಶದಲ್ಲಿ ವಿಕಿರಣ ಸೋರಿಕೆಯಾದಲ್ಲಿ ಅದನ್ನು ಅಲ್ಲಿಯೇ ನಿಯಂತ್ರಿಸಲು ಸಂಸ್ಥೆಯಿ0ದಲೇ ಕ್ರಮ ಕೈಗೊಳ್ಳಲಾಗುವುದು ಆದರೆ ಹೊರ ಪ್ರದೇಶದಲ್ಲಿ ಹರಡಿದಲ್ಲಿ ಮಾತ್ರ ಅದರ ನಿಯಂತ್ರಣಕ್ಕೆ ಜಿಲ್ಲಾಡಳಿತ ವಿವಿಧ ಇಲಾಖೆಗಳ ಸಹಕಾರ ಅಗತ್ಯವಾಗಿದೆ. ಮುಂಜಾಗ್ರತಾ ಕ್ರಮವಾಗಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮೂಲಕ ಅಗತ್ಯ ಸಿದ್ದತೆಗಳನ್ನು ಕೈಗೊಂಡಿದ್ದಲ್ಲಿ, ನ್ಯೂಕ್ಲಿಯರ್ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ತ್ವರಿತವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿದೆ ಎಂದರು. ನ್ಯೂಕ್ಲಿಯರ್ ತುರ್ತು ಪರಿಸ್ಥಿತಿಯ ಸಂದರ್ಭಕ್ಕೆ ಕಾರಣಗಳು ಮತ್ತು ಆ ಸಂದರ್ಭದಲ್ಲಿ ವಿವಿಧ ಇಲಾಖೆಗಳು ಕೈಗೊಳ್ಳಬೇಕಾದ ತುರ್ತು ನಿರ್ವಹಣಾ ಕ್ರಮಗಳ ಕುರಿತಂತೆ ಕಾರ್ಯಾಗಾರದಲ್ಲಿ ವಿವರವಾಗಿ ತಿಳಿಸಲಾಯಿತು. ಅಪರ ಜಿಲ್ಲಾಧಿಕಾರಿ ಸಾಜಿದ್ ಅಹಮದ್ ಮುಲ್ಲಾ, ಕೈಗಾ ಅಣು ವಿದ್ಯುತ್ ಸ್ಥಾವರದ ಹಿರಿಯ ತಾಂತ್ರಿಕ ಇಂಜಿನಿಯರ್ ರಾಜೇಶ್ ಪೈ, ಜಯರಾಮ್ ಹಾಗೂ ವಿವಿಧ ಇಲಾಖೆಗಳ ಅನುಷ್ಠಾನಾಧಿಕಾರಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಕಾವಿಕಲೆಯಿಂದ ಕಂಗೊಳಿಸುತ್ತಿರುವ ಎಂಇಎಸ್

ಶಿರಸಿ: ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿ ಪಡೆದ ಕಾವಿಕಲೆಯು ಇತ್ತೀಚಿಗೆ ನಾಶವಾಗುತ್ತಿದೆ.

ಇಂದಿನ ಪೀಳಿಗೆ ಇದನ್ನು ಉಳಿಸಿ ಬೆಳೆಸಬೇಕಾಗಿರುವುದು ಅತೀ ಅವಶ್ಯಕವಾಗಿದೆ. ಕಾವಿ ಕಲೆ ಅದ್ಭುತ ಕಲೆಯಾಗಿದ್ದು ಚಿನ್ಹೆಯ ಮೂಲಕ ಎಲ್ಲರ ಭಾವನೆಯನ್ನು ವ್ಯಕ್ತಪಡಿಸುವ ಸುಂದರ ಸಂವಹನ ಪದ್ಧತಿಯಾಗಿದೆ ಎಂದು ಎಂ.ಎಂ. ಕಾಲೇಜಿನ ಪ್ರಾಚಾರ್ಯ ಪ್ರೊ. ಜಿ.ಟಿ. ಭಟ್ ಹೇಳಿದರು.

ಇವರು ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ಎಂಇಎಸ್ ಎಂ.ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಿದ್ದ ನಾಲ್ಕು ದಿನಗಳ ರಾಜ್ಯ ಮಟ್ಟದ ಕಾವಿಕಲೆ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಕೈಗಾ ಅಣು ವಿದ್ಯುತ್ ಸ್ಥಾವರದ ಮಾಜಿ ಸಂಪರ್ಕಾಧಿಕಾರಿ ಸುಭಾಷ್ ಕಾನಡೆ ಮಾತನಾಡಿ, ಸೂರತ್‌ನಿಂದ ಕನ್ಯಾಕುಮಾರಿಯ ಕೊಂಕಣಪಟ್ಟಿಯ ಮಧ್ಯದಲ್ಲಿ ಬರುವ ಜೇಡಿಮಣ್ಣು ಮತ್ತು ಕೆಂಪುಮಣ್ಣು ಮಿಶ್ರಣದಿಂದ ತಯಾರಿಸಿದ ಬಣ್ಣದಿಂದ

ಚಿತ್ರಿಸಿದ ಕೆಂಪು ಬಣ್ಣದ ಕಲೆಯೇ ಕಾವಿಕಲೆ. ಒಬ್ಬ ವ್ಯಕ್ತಿ ಚಿತ್ರ ಬರೆಯುವಾಗ ತನ್ನ ನೆರಳನ್ನೇ ಕಂಡು ಅದಕ್ಕೆ ಕೈ, ಕಾಲು, ತಲೆ ಆಕಾರ ಕೊಟ್ಟು ಬಿಳಿ ಗೋಡೆಯ ಮೇಲೆ ಕೆಂಪು ಬಣ್ಣದಿಂದ ಮೆರಗುಗೊಳಿಸುವುದೇ ಕಾವಿಕಲೆ ಎಂದು ಹೇಳಿದರು.

ಹಿರಿಯ ಕಲಾವಿದ ನೀರನಹಳ್ಳಿ ಗಣಪತಿ ಮಾತನಾಡಿ, ಈ ಮಹಾವಿದ್ಯಾಲಯದ ಆವರಣದಲ್ಲಿ ಕಾವಿ ಕಲೆಯ ಅನಾವರಣ ಏಕವರ್ಣದಲ್ಲಿ ಅದ್ಬುತವಾಗಿ ಮೂಡಿಬಂದಿದೆ. ಈ ಕಲೆಯು ಹೆಚ್ಚು ಕಾಲ ಉಳಿಯಬೇಕಾಗಿದೆ ಎಂದು ತಿಳಿಸಿದರು.

ಚಿತ್ರ ಕಲಾವಿಧ ಕಿಶೋರ್, ಹಿರಿಯ ಕಲಾವಿದ ಜೆ.ಎಮ್. ಹೆಗಡೆ ತಾರಗೋಡ್ ಮಾತನಾಡಿದರು.

ಕಾಲೇಜು ಉಪ ಸಮಿತಿ ಅಧ್ಯಕ್ಷ ಎಸ್.ಕೆ. ಭಾಗವತ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಲೇಜಿನ ವಾತಾವರಣ ಅತ್ಯಂತ ಸೌಂದರ್ಯ ಬರಿತವಾಗಿದ್ದು ಪ್ರಾಚಾರ್ಯರು ಬಂದಂತ ಎಲ್ಲಾ ಕಲಾವಿದರಿಗೆ ಗೌರವ ಸಲ್ಲಿಸಿರುವುದು ನಮ್ಮ ಸಂಸ್ಥೆಗೆ ಹೆಮ್ಮೆ ತಂದಿದೆ.

ಮುಂದೆಯೂ ಇಂತಹ ಅಕಾಡೆಮಿಗಳು ನಮ್ಮ ಕಾಲೇಜಿಲ್ಲಿ ಕಾರ್ಯಾಗಾರ ನಡೆಸಲು ಎಲ್ಲಾ ಅವಕಾಶವನ್ನು ಒದಗಿಸುತ್ತದೆ ಎಂದರು.

ಲಲಿತಕಲಾ ಅಕಾಡಮಿ ಸದಸ್ಯೆ ಆಶಾರಾಣಿ,ಲಲಿತಕಲಾ ಅಕಾಡಮಿ ಸದಸ್ಯೆ ಶಾಂತಾ ಪ್ರವೀಣ್ ಕೊಲ್ಲೆ, ಬಾಬುರಾವ್ ನಡುಗುಣಿ, ಉಪಸ್ಥಿತರಿದ್ದರು. ಮನೋಜ್ ನಿರೂಪಿಸಿದರು.

ಆರಾಧ್ಯ ನಾಯ್ಕ ಜಿಲ್ಲಾ ಮಟ್ಟಕ್ಕೆ ಆಯ್ಕೆ

ಶಿರಸಿ: ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಹಿರಿಯರ ವಿಭಾಗದ ಕಥೆ ಹೇಳುವ ಸ್ಪರ್ಧೆಯಲ್ಲಿ ಆರಾಧ್ಯ ಅರುಣ ನಾಯ್ಕ ಪ್ರಥಮ ಸ್ಥಾನ ಗಳಿಸಿ ಜಿಲ್ಲಾ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾಳೆ.

ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಭದ್ರಾಪುರದಲ್ಲಿ ಐದನೆಯ ತರಗತಿಯಲ್ಲಿ ಓದುತ್ತಿರುವ ಇವಳು ಇದೇ ಶಾಲೆಯ ಮುಖ್ಯ ಶಿಕ್ಷಕರಾದ ಅರುಣ ನಾಯ್ಕ ಇವರ ಮಗಳು. ಪ್ರತಿಭಾವಂತ ವಿದ್ಯಾರ್ಥಿನಿಯಾದ ಇವಳು ಕಳೆದ ವರ್ಷ ಕೂಡ ಕಿರಿಯರ ವಿಭಾಗದಲ್ಲಿ ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಳು. ವಿದ್ಯಾರ್ಥಿನಿಯ ಈ ಸಾಧನೆಗೆ ಶಾಲೆಯ ಎಸ್.ಡಿ.ಎಮ್.ಸಿ ಸದಸ್ಯರು, ಶಿಕ್ಷಕರು ಹರ್ಷ ವ್ಯಕ್ತಪಡಿಸಿ ಶುಭ ಹಾರೈಸಿದ್ದಾರೆ.

CHANGE OF NAME
I, **SUMA R.HIREMATH** R/O 4th Main, 4th Cross, Rajatagiri, Dharwad, declare that **"SUMA N.S", "SUMANGLA RAVI HIREMATH", "SUMA R. HIREMATH"** are all belongs to one and the same person i.e. me only and here afterwards I will continue my name as **"Suma R.Hiremath"** vide affidavit sworn before notary on 28/11/2024

CHANGE OF NAME
I, **ANEESAHMED MAKTUMSHAH BARUDWALE** (Old Name) have changed my name as **ANEES AHMED BARUDWALE** (New Name) R/o 63/A, Idga Road, Janata Colony, Gulganjikoppa, Dharwad, as per vide affidavit Dt: 23/11/2024 duly sworn before notary Kanojanavar I.G, at Dharwad

ಜಾನಪದ ವಿವಿಯ ಆಕ್ರಮ ನೇಮಕ: ತಪ್ಪಿತಸ್ಥರ ವಜಾಕ್ಕೆ ಆಗ್ರಹ

ಜನಪದ ಸಾಹಿತ್ಯ, ಜನಪದ ಕಲೆ, ಜನಪದ ವಿಜ್ಞಾನಕ್ಕೆ ಒಂದೇ ಪ್ರಶ್ನೆ ಪತ್ರಿಕೆ ಹೊರಡಿಸಿ ಅಕ್ರಮ ಆರೋಪ

ಹಾವೇರಿ: ಜಾನಪದ ವಿವಿಯ ಬೋಧಕ, ಬೋಧಕೇತರ ನೇಮಕಾತಿಗಾಗಿ 2018ರಲ್ಲಿ ರಾಜ್ಯ ಸರಕಾರದ ಆದೇಶದಂತೆ ಆಗಿನ ಪ್ರೋ. ಉಪಕುಲಪತಿ ಡಿ.ಬಿ.ನಾಯಕ ಅವರು ಅಧಿಸೂಚನೆ ಹೊರಡಿಸಿದರು. 2019 ರಲ್ಲಿ ರಾಜ್ಯ ಸರಕಾರ ಒಂದು ರೂಲ್ ಮಾಡುತ್ತದೆ. ಅದರಲ್ಲಿ ಕೆಇಎ ಮೂಲಕ ಬೋಧಕರ ನೇಮಕಾತಿ ಆಗಬೇಕು ಎಂದು ಹೇಳಿ ಆದೇಶ ಮಾಡಿದ ಸಮಯದಲ್ಲಿ ಆಗಿನ ಕುಲಪತಿ ಡಿ.ಬಿ ನಾಯಕ ಅವರು ತಟಸ್ಥ ಮಾಡುತ್ತಾರೆ ಎಂಬುದು ಎಲ್ಲರಿಗೂ ತಿಳಿದಿದ್ದೇ. ಇದೀಗ ಇತ್ತೀಚೆಗಿನ ಬೆಳವಣಿಗೆ ಬಗ್ಗೆ ಸಾರ್ವಜನಿಕರು ದುರಿದ್ದಾರೆ.

ಈ ಉಪ ಕುಲಪತಿ ಅವರು ನಿವೃತ್ತಿ ಹೊಂದುತ್ತಾರೆ. 2018 ಅಧಿಸೂಚನೆ ಹೊರಡಿಸಿದ್ದನ್ನು 2022-2023ರಲ್ಲಿ ಉಪಕುಲಪತಿ ಆಗಿ ನೇಮಕಗೊಂಡು ಟಿ.ಎಂ. ಬಾಸ್ಕರ ಅವರು ಸರಕಾರಕ್ಕೆ ನೇಮಕ ವಿಚಾರಲ್ಲಿ ತಪ್ಪು ಮಾಹಿತಿಯನ್ನು ನೀಡಿ ಸರಕಾರದಿಂದ ಅನುಮೋದನೆ ಪಡೆದು ಸರಕಾರದ ಕಾಲ ಕಾಲಕ್ಕೆ ಅನ್ವಯಿಸುವ ನೀತಿ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಅನ್ನುವ ಷರತ್ತುಗಳಿದ್ದರೂ, ಆಗಿನ ಸರಕಾರದ ಅಧೀನ ಕಾರ್ಯದರ್ಶಿ ರಮೇಶ ಕೋನರೆಡ್ಡಿ ಹಾಗೂ ನಂತರ ಬಂದ ಉಮಾ ಶಂಕರ ಅವರಿಗೆ ನೇಮಕಾತಿ ಬಗ್ಗೆ ಗೊಂದಲ ಉಂಟು ಮಾಡಿ ಅಡ್ಡಗೋಡೆ ಮೇಲೆ ದೀಪ ಇಟ್ಟು ಸರಕಾರದ ಯುಜಿಸಿ ನಿಯಮಗಳನ್ನು ಗಾಳಿಗೆ ತೂರಿ ಅರ್ಹತೆ ಇಲ್ಲದವರನ್ನು ಹುದ್ದೆ ಭರ್ತಿ ಮಾಡಿಕೊಂಡಿದ್ದಾರೆ. ಜನಪದ ಸಾಹಿತ್ಯ, ಜನಪದ ಕಲೆ, ಜನಪದ ವಿಜ್ಞಾನಕ್ಕೆ ಒಂದೇ ಪ್ರಶ್ನೆ ಪತ್ರಿಕೆ ಹೊರಡಿಸಿ ಆಕ್ರಮ ವೆಸಗಿ ತಮಗೆ ಬೇಕಾದವರನ್ನು ನೇಮಕ ಮಾಡಿಕೊಂಡಿದ್ದಾರೆ. ಉಪ ಕುಲಕುಲಪತಿಗಳಾದ ಟಿ. ಎಂ.ಬಾಸ್ಕರ ಅವರು ಇಡಿ ನೇಮಕಾತಿ ವ್ಯವಸ್ಥೆಯನ್ನೆ ಹಾಳು ಮಾಡಿದ್ದಾರೆ. ಮೂರು ವಿಷಗಳಿಗೆ ಪಠ್ಯಕ್ರಮ ಒಂದೇ ಇದ್ದರೂ ಪ್ರಶ್ನೆ ಪತ್ರಿಕೆ ಬೇರೆ ಬೇರೆಯಾಗಿ ತಗೆಯಲಾಗಿದೆ. ವಿಜಯಲಕ್ಷ್ಮಿ ಗೆ.ಟಿ ಎಂಬುವವರು ನೇಮಕಾತಿ ಆಗಬೇಕಾದ ವಿಭಾಗಕ್ಕೆ ಪಡೆದ ಅಂಕ 86.5 ಜನಪದ ಸಾಹಿತ್ಯಕ್ಕೆ ಅದೇ ಪಠ್ಯಕ್ರಮ ಆಗಿದ್ದು ಪ್ರಶ್ನೆ ಪತ್ರಿಕೆ ಬೇರೆ ಜನಪದ ಸಾಹಿತ್ಯಕ್ಕೆ 23 ಅಂಕಗಳು, ಜನಪದ ವಿಜ್ಞಾನ ಕ್ಕೆ 28 ಮಾತ್ರ ಓಎಂಆರ್ ತಿದ್ದಿ 86.5 ಅಂಕವನ್ನು ಪಡೆದುಕೊಂಡಿದ್ದಾರೆ ಎಂದು ಫಲಿತಾಂಶ ತೋರಿಸುತ್ತಾರೆ. ಜನಪದ ವಿಜ್ಞಾನ ವಿಭಾಗಕ್ಕೆ ಕೂಡಾ ಅರ್ಹರಲ್ಲದವರನ್ನು

ಅಗಿರುವ ಗಿರಿಗೌಡ್ರರನ್ನು ನೇಮಕ ಮಾಡಿದ್ದಾರೆ.

ಭ್ರಷ್ಟಾಚಾರ ರಹಿತ ಆಡಳಿತ ನೀಡುವುದಾಗಿ ಹೇಳಿರುವ ಸಿ.ಎಂ ಸಿದ್ದರಾಮಯ್ಯನವರು ಜಾನಪದ ವಿವಿ ಯಲ್ಲಿ ಆದ ಹಗರಣ ಬಗ್ಗೆ ಸಿಒಡಿಗೆ ಒಪ್ಪಿಸಬೇಕು. ಡಿಸೆಂಬರ್ 2 ರಂದು ನಡೆಯುವ 9ನೇ ಘಟಿಕೋತ್ಸವವನ್ನು ನಡೆಸುವ ಅರ್ಹತೆ ಇವರಿಗಿಲ್ಲ, ಹಾಗಾಗಿ ಸರಕಾರ ಘಟಿಕೋತ್ಸವದ ದಿನಾಂಕವನ್ನು ಮುಂದಕ್ಕೆ ಹಾಕಿ ಈ ಮೂವರನ್ನು ವಜಾ ಮಾಡಿ ಅರ್ಹತೆ ಇರುವ ಯೋಗ್ಯರಿಗೆ ಜವಾಬ್ದಾರಿ ಕೊಟ್ಟು ಘಟಿಕೋತ್ಸವ ನಡೆಸಬೇಕಾಗಿದೆ. ನೇಮಕಾತಿಯಲ್ಲಿ ಆಕ್ರಮ ಮಾಡಿರುವ ಉಪಕುಲಪತಿಗಳಾದ ಪ್ರೊ. ಟಿ ಎಂ.ಭಾಸ್ಕರ, ಕುಲಸಚಿವರಾದ ಪ್ರೊ. ಸಿ.ಟಿ.ಗುರುಪ್ರಸಾದ್ - ಹಾಗೂ ಎಸ್.ಎಸ್ ಎಲ್ ಸಿ ವರೆಗೆ ಶಿಕ್ಷಣ ಪಡೆದು ಪದವಿ ಓದದಿದ್ದರೂ ನಕಲಿ ಪದವಿ ಅಂಕಪಟ್ಟಿ ಸಲ್ಲಿಸಿ ಸರಕಾರಕ್ಕೆ ಮೋಸ ಮಾಡಿ ಜಾನಪದ ವಿವಿಯ ಸಹಾಯಕ ಕುಲ ಸಚಿವರಾಗಿ ಕೆಲಸ ಮಾಡುತ್ತಿರುವ ಶಹಜಾನ್ ಸಾಬ್ ಮುದಕವಿ ಇವರನ್ನು ತಕ್ಷಣವೇ ಹುದ್ದೆಯಿಂದ ವಜಾ ಮಾಡಬೇಕು. ಸರಕಾರ ಈ ಮೂವರನ್ನು ತನಿಖೆ ನಡೆಸಿ ಜೈಲಿಗೆ ಹಾಕಬೇಕು. ತಪ್ಪಿತಸ್ಥ ಮೇಲೆ ಕಾನೂನು ಕ್ರಮ ಆಗಲೇಬೇಕು. ಜಾನಪದ ವಿಶ್ವವಿದ್ಯಾಲಯ ದೇಶದಲ್ಲಿ ಮಾದರಿ ಆಡಳಿತ ಜಾರಿಗೆ ತಂದು ಮುಂದಿನ ಭವಿಷ್ಯ ಪೀಳಿಗೆಗೆ ಜನಪದ ಸಾಹಿತ್ಯ, ಜನಪದ ವಿಜ್ಞಾನ, ಜನಪದ ಕಲೆ ಸೇರಿದಂತೆ ನಾಡಿನ ದೇಶ ಸಂಸ್ಕೃತಿಯನ್ನು ಇನ್ನಷ್ಟು ಗಟ್ಟಿಗೊಳಿಸುವ ಕೆಲಸ ಆಗಬೇಕಾಗಿದೆ ಎಂಬುದು ಜನಾಭಿಪ್ರಾಯವಾಗಿದೆ.

ಕೂಲಂಕಶ ತನಿಖೆ ನಡೆಯಲಿ

ಜಾನಪದ ವಿಶ್ವವಿದ್ಯಾಲಯದಲ್ಲಿ ಅನೇಕ ಪದವಿ ಸರ್ಟಿಪಿಕೇಟ್‌ಗಳನ್ನು ಹಣಕ್ಕೆ ಮಾರಾಟ ಮಾಡಲಾಗುತ್ತಿದೆ. ಇದಲ್ಲದೇ ಇಲ್ಲಿಯ ಸಹಾಯಕ ಕುಲಸಚಿವ ಷಹಜಾನಸಾಬ್ ಮುದಕವಿ ನಕಲಿ ಪದವಿ ಅಂಕಪಟ್ಟಿ ನೀಡಿ ಕೆಲಸ ಮಾಡುತ್ತಿದ್ದಾರೆ. ಇವರ ಅರ್ಹತೆ ಎಸ್.ಎಸ್.ಎಲ್.ಸಿ ಫಾಸ್ ಇವರನ್ನು ಸಹಾಯಕ ಕುಲಸಚಿವ ರನ್ನಾಗಿ ಮಾಡಿದ್ದಾರೆ. ಈತನಿಂದ ನಕಲಿ ಪದವಿ ಅಂಕಪಟ್ಟಿಗಳನ್ನು ಪಡೆದು ಹುದ್ದೆಯನ್ನು ಕೊಡಲಾಗಿದೆ. ಜಾನಪದ ವಿಶ್ವ ವಿದ್ಯಾಲಯದ ಇದುವರೆಗೂ ನಡೆದ ಭ್ರಷ್ಟಾಚಾರ, ಆಕ್ರಮ ನೇಮಕ ಬಗ್ಗೆ ಸರಕಾರಕ್ಕೆ ಹಾಗೂ ರಾಜ್ಯಪಾಲರಿಗೆ, ಉನ್ನತಶಿಕ್ಷಣ ಸಚಿವರಿಗೆ ಮತ್ತು ಕಾನೂನು ಸಂಸದೀಯ ಸಚಿವರಿಗೆ 178 ಪುಟಗಳ ವರದಿ ಸಲ್ಲಿಸಿದರೂ ಇಲ್ಲಿವರೆಗೂ ಆಕ್ರಮ ಹಾಗೂ ಅವ್ಯವಹಾರ ಮಾಡಿರುವ ಬಗ್ಗೆ ತನಿಖೆ ಮಾಡದೇ ಕೈ ಬಿಡಲಾಗಿದೆ. ಇದು ತನಿಖೆ ಆಗಲಿ ಎಂದು ಕರ್ನಾಟಕ ರಾಜ್ಯ ಜಾನಪದ ಸ್ನಾತಕೋತ್ತರ ಹಾಗೂ ಸಂಶೋಧಕರ ಒಕ್ಕೂಟ ಧಾರವಾಡ ರಾಜ್ಯಾಧ್ಯಕ್ಷರಾದ ಶಿವಸೋಮಪ್ಪ ನಿಟ್ಟೂರ ಆಗ್ರಹಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಲಿಂಗಾಯತ ಮಹಾಸಭಾಕ್ಕೆ ದ್ಯಾಮಣ್ಣ ನೇಮಕ

ಧಾರವಾಡ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಉಪಾಧ್ಯಕ್ಷರಾಗಿ ನಿಗದಿ

ಗ್ರಾಮದ ದ್ಯಾಮಣ್ಣಾ ರೇವಣ್ಣವರ್ ಅವರನ್ನು ನೇಮಕ ಮಾಡಲಾಗಿದೆ. ಮಹಾಸಭಾದ ತಾಲೂಕು ಅಧ್ಯಕ್ಷ ನಿಂಗನಗೌಡ ಪಾಟೀಲ್ ಅವರು ಈ ನೇಮಕ ಮಾಡಿರುವುದಾಗಿ ತಿಳಿಸಲಾಗಿದೆ.

ಕೆಎಲ್‌ಇಯಲ್ಲಿ ನಮ್ಮ ಹಿರಿಯರು ನಮ್ಮ ಗೌರವ

ಹುಬ್ಬಳ್ಳಿ: ಭಾರತ ಸರಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಪ್ರಾಯೋಜಕತ್ವ ಹಾಗೂ ನವದೆಹಲಿಯ ಕಮ್ಯೂನಿಟಿ ರೇಡಿಯೋ ಅಸೋಸಿಯೇಶನ್ ಸಹಯೋಗದೊಂದಿಗೆ ಪ್ರಸಾರಗೊಳ್ಳುತ್ತಿದೆ. ನಮ್ಮ ಹಿರಿಯರು ನಮ್ಮ ಗೌರವ ಹಾಗೂ ಕೇಂದ್ರ ಸರಕಾರದ್ ಅಟಲ್ ವಯೋ ಅಭ್ಯುದಯ ಯೋಜನೆಯ ಕುರಿತಾಗಿ ಅರಿವು ಮೂಡಿಸುವ ವಿಶೇಷ ಸರಣಿ ಕಾರ್ಯಕ್ರಮ ಕೆಎಲ್‌ಇ ಧ್ವನಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಗುರುವಾರ, ಡಿ. 05, 2024 ರಂದು ಬೆಳಿಗ್ಗೆ 8.35 ಗಂಟೆಗೆ ಹಾಗೂ ಶುಕ್ರವಾರ ಮಧ್ಯಾಹ್ನ 3.15ಕ್ಕೆ ಈ ಕಾರ್ಯಕ್ರಮ ಪ್ರಸಾರವಾಗಲಿದೆ. ಈಗ ವಿಶ್ವದ ಯಾವುದೇ ಮೂಲೆಯಲ್ಲಾದರೂ ಕೆಎಲ್‌ಇ ಧ್ವನಿ ಬಾನುಲಿಯನ್ನು ಆ್ಯಪ್ ಮೂಲಕ ಆಲಿಸಬಹುದು. ಕೆಎಲ್‌ಇ ಧ್ವನಿ ಆ್ಯಪ್ ಡೌನ್ ಲೋಡ್ ಮಾಡಿಕೊಂಡು ಕಾರ್ಯಕ್ರಮಗಳನ್ನು ಕೇಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸ್ವ ಧರ್ಮಕ್ಕೆ ಹಿಂದಿರುಗಿದ ನಾಲ್ಕು ಕುಟುಂಬ

ಗದಗ: ಆರ್ಥಿಕ ಸಮಸ್ಯೆಯ ಹಿನ್ನೆಲೆ ಎರೆಡು ವರ್ಷಗಳ ಹಿಂದೆ ಬಲವಂತವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದ ನಾಲ್ಕು ಭೋವಿ ಕುಟುಂಬಗಳು ಮತ್ತೆ ತಮ್ಮ ಮೂಲ ಹಿಂದೂ ಧರ್ಮಕ್ಕೆ ವಾಪಾಸಾಗಿದ್ದಾರೆ. ಕುಟುಂಬ ಸದಸ್ಯರ ಆಶಯದಂತೆ ಹಿಂದೂ ಜಾಗರಣ ವೇದಿಕೆಯು ಜಿಲ್ಲೆಯ ಲಕ್ಷ್ಮೇಶ್ವರ ಸಮಿಪದ ಬಸಾಪೂರ ಗ್ರಾಮದಲ್ಲಿ ಗವಿಮಠದ ಪೂಜ್ಯರಾದ ಡಾ. ಕುಮಾರ ಮಹಾರಾಜರ ನೇತೃತ್ವದಲ್ಲಿ ಧಾರ್ಮಿಕ ವಿಧಿವಿಧಾನಗಳನ್ನು ನಡೆಸಿ ಕುಟುಂಬಸ್ಥರನ್ನ ಮೂಲ ಧರ್ಮಕ್ಕೆ ಬರಮಾಡಿಕೊಳ್ಳಲಾಯಿತು.

ಈ ವೇಳೆ ಮಾತನಾಡಿದ ಘರ್ ವಾಪ್ಸಿಯಾದ ಕುಟುಂಬಸ್ಥರು, ಕ್ರಿಶ್ಚಿಯನ್ ಧರ್ಮ ಸ್ವೀಕರಿಸಲು ನನಗೆ ಸಂತೋಷವಿರಲಿಲ್ಲ. ಮತಾಂತರವು ನನಗೆ ಅಥವಾ ನನ್ನ ಕುಟುಂಬ ಸದಸ್ಯರಿಗೆ ಸಹಾಯ ಮಾಡಲಿಲ್ಲ. ಇದೀಗ ಮತ್ತೇ ನಮ್ಮ ಧರ್ಮಕ್ಕೆ ಮರಳಲು ಬಯಸುತ್ತಿದ್ದೇವೆ ಎಂದು ಹೇಳಿದ್ದಾರೆ.

ನಾನು ಮತ್ತು ಸಂಘಟನೆ ಸಂಯೋಜಕಿ ಮುಕ್ತಾಬಾಯಿ ಉತ್ತಲೇಕರ ಅವರು ಬಸಾಪೂರ ಗ್ರಾಮದವರನ್ನು ಸಂಪರ್ಕಿಸಿ ಮತಾಂತರ ಗೊಂಡವರ ಬಗ್ಗೆ ಮಾಹಿತಿ ತೆಗೆದುಕೊಂಡು ತಪಸ್ವಿ ಡಾ.ಕುಮಾರ್ ಮಹಾರಾಜರ ಮೂಲಕ ಮತಾಂತರಗೊಂಡವರನ್ನು ಮನವೊಲಿಸಿ, ಹಿಂದೂ ಧರ್ಮದ ವೈಶಿಷ್ಟ್ಯಗಳನ್ನು ತಿಳಿಸುವ ಮೂಲಕ ಮತಾಂತರಗೊಂಡ ಕುಟುಂಬಸ್ಥರನ್ನ ಮತ್ತೇ ಮೂಲ ಧರ್ಮಕ್ಕೆ ಮರಳುವಂತೆ ಮಾಡಿದ್ದೇವೆ ಎಂದು ಹಿಂದೂ ಧರ್ಮ ಜಾಗರಣ ವೇದಿಕೆಯ ಜಿಲ್ಲಾ ಸಂಯೋಜಕ ಮಹೇಶ ಗುಜ್ಜರಿ ಹೇಳಿದರು.

ವಿದ್ಯಾರ್ಥಿಗಳಿಂದ ಎಚ್‌ಐವಿ ಕುರಿತು ಅರಿವು

ಗದಗ: ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೇನ್ಷನ್ ಸೊಸೈಟಿ ಬೆಂಗಳೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ, ಗದಗ ಜಿಲ್ಲೆಯ ಪಿಪಿಜಿ ಕಲಾ ಮಹಾವಿದ್ಯಾಲಯ ಎನ್.ಎಸ್.ಎಸ್. ಹಾಗೂ ರೆಡ್ ರಿಬ್ಬನ್ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ಡಾ. ಪಂಡಿತ ಪುಟ್ಟರಾಜ ಗವಾಯಿಗಳ ಕಲಾ ಮಾಹಾವಿದ್ಯಾಲಯದಲ್ಲಿ ಶನಿವಾರ ಎಚ್.ಐ.ವಿಏಡ್ಸ್ ತಡೆಗಟ್ಟಲು ತೀವ್ರತರವಾದ ಐ.ಇ.ಸಿ ಪ್ರಚಾರಾಂದೋಲನ-2024 ರ ಅಂಗವಾಗಿ ರೆಡ್ ರಿಬ್ಬನ್ ಕಾಲೇಜು ವಿದ್ಯಾರ್ಥಿಗಳಿಂದ ಫ್ಲಾಶ್ ಮೋಬ್ ಮೂಲಕ ಎಚ್.ಐ.ವಿ.ಏಡ್ಸ್ ಅರಿವು ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿಗಳಾದ ಡಾ. ಅರುಂಧತಿ ಕುಲಕರ್ಣಿ ಅವರು ಮಾತನಾಡಿ ಎಚ್.ಐ.ವಿ. ಏಡ್ಸ್ ತಡೆಗಟ್ಟುವಲ್ಲಿ ಯುವಕರ ಪಾತ್ರ ಮುಖ್ಯವಾಗಿದ್ದು, ಎಲ್ಲ ಯುವಕರು ಕಾಲೇಜ ವಿದ್ಯಾರ್ಥಿಗಳು ತ್ವರಿತಗತಿಯಲ್ಲಿ ಎಚ್.ಐ.ವಿ. ಬಗ್ಗೆ ಪ್ರಚಾರ ಮಾಡಿ, ಫ್ಲಾಶ್ ಮೋಬ್, ಬೀದಿ ನಾಟಕ ಹಾಗೂ ಸಂಗೀತ ಕಲಾ ಪ್ರದರ್ಶನಗಳ ಮೂಲಕ ಎಚ್.ಐ.ವಿ. ಏಡ್ಸ್ ಅರಿವನ್ನು ಸಮುದಾಯದಲ್ಲಿ ಮೂಡಿಸಬೇಕಾಗಿದೆ ಎಂದು ತಿಳಿಸಿದರು. ಐ.ಇ.ಸಿ. ಪ್ರಚಾರಾಂದೋಲನದ ಘೋಷವಾಕ್ಯದಂತೆ ಸುಸ್ಥಿರ ಡಿಜಿಟಲ್ ಅಭಿವೃದ್ಧಿಗಾಗಿ ಯುಜನತೆಯ ಮುಂದಾಳತ್ವ ಘೋಷಣೆಯಂತೆ ಯುವಕರು ಸಂಯಮದಿಅದ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸದೃಢ ಆರೋಗ್ಯವನ್ನು ಹೊಂದಿ ಸಮೃದ್ಧ ಭಾರತವನ್ನು ನಿರ್ಮಾಣ ಮಾಡಲು ಕೈಗೂಡಿಸಬೇಕೆಂದು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಪ್ರಾಚಾರ್ಯರಾದ ಡಾ. ಆರ್.ಎಸ್. ದಾನರೆಡ್ಡಿ ಮಾತನಾಡಿದರು. ಫ್ಲಾಶ್ ಮೋಬ್ ಜನಜಾಗೃತಿ ಕಾರ್ಯಕ್ರಮದಲ್ಲಿ ಡಾ. ನಿಂಗೋಜಿ, ನಾಟಕ ರಚಿಸಿ ನಿರ್ದೇಶಿಸಿದರು. ಕಾಲೇಜಿನ ವಿದ್ಯಾರ್ಥಿ ಪ್ರತಿನಿಧಿ ರೇವಣಸಿದ್ದಯ್ಯ, ಹಾಗೂ ಎನ್,ಎಸ್. ಎಸ್ ಸ್ವಯಂ ಸೇವಕರು, ಕಾಲೇಜು ಸಿಬ್ಬಂದಿ, ಆರೋಗ್ಯ ಇಲಾಖೆಯ ಸಿಬ್ಬಂದಿ ರವಿ ಪತ್ತಾರ ಹಾಜರಿದ್ದರು.

ಪ್ರೊ.ಮಂಜುಳಾ ಹೊಂಬಾಳಿ ಸ್ವಾಗತಿಸಿದರು. ಬಸವರಾಜ ಲಾಳಗಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಜಿಲ್ಲೆಯ ಶೈಕ್ಷಣಿಕ ಗುಣಮಟ್ಟ ಸುಧಾರಿಸಿ

ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆ ಕುರಿತು ಕಾರ್ಯಾಗಾರ | ಸಚಿವ ಎಚ್‌.ಕೆ.ಪಾಟೀಲ ಸಲಹೆ

ಗದಗ: ಶೈಕ್ಷಣಿಕ ಸುಧಾರಣೆಯ ಕಾರ್ಯಕ್ರಮದ ಮೂಲಕ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಒಂದಕಿ ಸ್ಥಾನವನ್ನಾಗಿಸಲು ಎಲ್ಲರೂ ಪ್ರಾಮಾಣಿಕವಾಗಿ ಶ್ರಮವಹಿಸಬೇಕೆಂದು ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್. ಕೆ.ಪಾಟೀಲ ಅವರು ಹೇಳಿದರು.

ನಗರದ ತೋಂಟದಾರ್ಯ ಕಲ್ಯಾಣ ಮಂಟಪದಲ್ಲಿ ಶನಿವಾರ ಜರುಗಿದ ಗದಗ ಜಿಲ್ಲಾ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆ ಕುರಿತು ಕಾರ್ಯಾಗಾರ ಹಾಗೂ ಶೈಕ್ಷಣಿಕ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಫಲಿತಾಂಶ ಕಡಿಮೆ ಬಂದಾಗ ಮುಜುಗರಕ್ಕೆ ಈಡಾಗುವ ಸಂದರ್ಭ ಬರುತ್ತದೆ, ನಮ್ಮ ಶಿಕ್ಷಣದ ಕುರಿತು ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಶಿಕ್ಷಕರು ಪ್ರಾಮಾಣಿಕವಾಗಿ ಹಾಗೂ ಗಂಭೀರವಾಗಿ ಕೆಲಸ ಮಾಡುತ್ತಿದ್ದಾರೆ, ಶಿಕ್ಷಕರ ಕಾರ್ಯಕ್ರಮದ ಪಟ್ಟಿ ಗಮನಿಸಿದರೆ ಎಲ್ಲಾ ಶಿಕ್ಷಕರು ಸಮಯ ಮೀರಿ ಕೆಲಸ ಮಾಡುತ್ತಿದ್ದಾರೆ, ಶಾಲೆಗಳನ್ನು ಅಧಿಕಾರಿಗಳಿಗೆ ದತ್ತು ನೀಡಲಾಗಿದೆ, ಅಧಿಕಾರಿಗಳು ಮಾರ್ಗದರ್ಶನ ನೀಡಿ ಶಿಕ್ಷಣದ ಗುಣಮಟ್ಟವನ್ನು ಸುಧಾರಣೆ ಮಾಡಬೇಕು, ತಾಲೂಕವಾರು ವಿಷಯವಾರು ಸಭೆ

ಸಂಘಟನೆ ಮಾಡಿ ಕಾರ್ಯಗಾರವನ್ನು ಏರ್ಪಡಿಸಲಾಗಿದೆ ಎಂದರು.

ಶಿಕ್ಷಕರು ಮಾದರಿ ಪರೀಕ್ಷೆಯನ್ನು ತಯಾರು ಮಾಡಿ ಮಕ್ಕಳ ಪ್ರಗತಿಗೆ ಗಮನ ನೀಡಿದ್ದಾರೆ. ಅಕ್ಟೋಬರ್ ರಜಾ ಅವಧಿಯಲ್ಲಿ ವಿಶೇಷ ತರಗತಿಗಳನ್ನು ನಡೆಸಲಾಗಿದೆ. ಶಿಕ್ಷಕರು ಪೋಷಕರ ಒಳಗೊಂಡು ಆಪ್ತ ಸಮಾಲೋಚನೆ ಮಾಡಿ ವೈಯಕ್ತಿಕ ಕಾಳಜಿ ವ್ಯಕ್ತಪಡಿಸಿ ಪ್ರತಿ ಸೋಮವಾರ ಪಾಲಕರ ಸಭೆ, ಮೂರನೇ ಸೋಮವಾರ ತಾಯಂದಿರ ಜೊತೆ ಸಭೆ ಮಾಡಿ ಅವರ ಪ್ರತ್ಯಕ ಸಭೆ ಮಾಡಿರುವುದು ಮೆಚ್ಚುವಂತದ್ದು ಹಾಗೂ ರಾಜ್ಯ ಮಾದ್ಯಮಿಕ ಶಾಲಾ ನೌಕರರ ಸಂಘ ಸಂಪೂರ್ಣ ಸಹಕಾರ ನೀಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು ತಿಳಿಸಿದರು

ವಿಧಾನ ಪರಿಷತ್ ಶಾಸಕರಾದ ಎಸ್ ವಿ ಸಂಕನೂರು ಅವರು ಮಾತನಾಡಿ ಫಲಿತಾಂಶ ಬಂದಾಗ ಕಡಿಮೆಯಾದ ಸಂದರ್ಭದಲ್ಲಿ ಟೀಕೆ ಟಿಪ್ಪಣಿಗಳನ್ನು ಶಿಕ್ಷಕರ ಮೇಲೆ ಹೊರಿಸುತ್ತಾರೆ, ಫಲಿತಾಂಶ ಕಡಿಮೆ ಆಗಲು ಕೇವಲ ಶಿಕ್ಷಕರು ಮಾತ್ರ ಕಾರಣವಲ್ಲ, ಮಗುವಿಗೆ ಪ್ರಾಥಮಿಕ ಹಂತದಲ್ಲಿಯೇ ಗುಣಮಟ್ಟದ ಮೌಲ್ಯಯುತ ಶಿಕ್ಷಣ ನೀಡಿದಾಗ ಅಂತಹ ಮಗುವು ಮುಂದಿನ ವ್ಯಾಸಂಗದಲ್ಲಿಯೂ ಉತ್ತಮ ಫಲಿತಾಂಶ ಕಾಣಬಹುದು.

ಪರೀಕ್ಷಾ ಫಲಿತಾಂಶ ಸುಧಾರಿಸಲು ಶಿಕ್ಷಕರು ಪೂರ್ವ ತಯಾರಿ ಮಾಡಿಕೊಂಡು ಪರಿಣಾಮಕಾರಿ ಭೋದನೆ ಮಾಡಬೇಕು. ಪಿಯುಸಿ ಫಲಿತಾಂಶ ಸುಧಾರಣೆಗೂ ಈ ರೀತಿಯ ಕಾರ್ಯಗಾರ ಆಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಶಿವಾನಂದ ಎಸ್ ಪಟ್ಟಣಶೆಟ್ಟರ ಕಾರ್ಯಾಗಾರದ ಕುರಿತು ಮಾತನಾಡಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್. ಬುರಡಿ, ಕನಕದಾಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ರವಿ ದಂಡಿನ, ವಿದ್ಯಾದಾನ ಶಿಕ್ಷಣ ಸಮಿತಿ ಅಧ್ಯಕ್ಷರಾದ ಧೀರೇಂದ್ರ, ಹುಯಿಲಗೋಳ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಆರ್.ಭಟ್, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಜಿ.ಎಲ್. ಬಾರಾಟಕ್ಕೆ, ಡಾ ಶರಣು ಗೋಗೇರಿ, ವಿವಿಧ ಕ್ಷೇತ್ರ ಶಿಕ್ಷಣಾಧಿಕಾರಿಗಳು, ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ಜಿಲ್ಲಾ ಹಾಗೂ ತಾಲೂಕು ಘಟಕದ ಪದಾಧಿಕಾರಿಗಳು, ಶಿಕ್ಷಕರು ಹಾಜರಿದ್ದರು.

ಅನುಕೂಲಕರ ವಾತಾವರಣ ನಿರ್ಮಿಸಿ

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಕಲಿಯುವ ಅವಶ್ಯಕತೆ ಇರುವ ಮಕ್ಕಳು ಖಂಡಿತವಾಗಿ ಶಾಲೆಗೆ ತಪ್ಪದೇ ಬರುತ್ತಾರೆ. ಶಿಕ್ಷಕರು ಆಸಕ್ತಿಯಿಂದ ಪಾಠ ಮಾಡಲು ಅನುಕೂಲಕರ ವಾತಾವರಣ ನಿರ್ಮಿಸಬೇಕು. ಶೈಕ್ಷಣಿಕ ಕ್ಷೇತ್ರದಲ್ಲಿ ಮೂಲ ಸಮಸ್ಯೆಗಳನ್ನು ಕಂಡು ಹಿಡಿದು ಅದಕ್ಕೆ ಪರಿಹಾರ ಕಂಡುಕೊಳ್ಳಬೇಕು, ಶಿಕ್ಷಕರು ಮಾನಸಿಕವಾಗಿ ನೆಮ್ಮದಿಯಿಂದ ಇದ್ದಾಗ ಮಾತ್ರ ಉತ್ತಮ ಪಾಠ ಬೋದನೆ ಆಗುತ್ತದೆ, ಕನಿಷ್ಟ ಒಂದು ತರಗತಿಗೆ ಒಬ್ಬ ಶಿಕ್ಷಕರನ್ನು ನೇಮಕ ಮಾಡುವುದರ ಜತೆಗೆ ಆ ಶಾಲೆಗೆ ಮೂಲ ಸೌಲಭ್ಯಗಳನ್ನು ಕಲ್ಪಿಸುವ ಕೆಲಸ ಇನ್ನಷ್ಟು ಆಗಲಿ. ಮಕ್ಕಳು ಹಿರಿಯರಿಗೆ ಗೌರವ ನೀಡುವಂತಹ ಸಂಸ್ಕಾರಯುತ ಶಿಕ್ಷಣವನ್ನು ಪಡೆಯುವಂತಾಗಬೇಕು ಎಂದರು.

ಅಣ್ಣಿಗೇರಿಯಲ್ಲಿ ದಾರ್ಶನಿಕ ಸಂತ ಕನಕದಾಸ ಜಯಂತಿ; ಕಾರ್ಯಕ್ರಮದಲ್ಲಿ ಭಾಗಿಯಾದ ಶಾಸಕ

ಅಣ್ಣಿಗೇರಿ: ಕರ್ನಾಟಕ ಪ್ರದೇಶ ಕುರುಬರ ಸಂಘ ಕರಿಸಿದ್ದೇಶ್ವರ ಡೊಳ್ಳಿನ ಸಂಘ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಿತರಕ್ಷಣಾ ಸಮೀತಿ, ಭಕ್ತ ಕನಕದಾಸರ ಜಯಂತಿ ಪ್ರಯುಕ್ತವಾಗಿ ಹಮ್ಮಿಕೊಂಡ ಕನಕದಾಸರ ಭಾವಚಿತ್ರ ಭವ್ಯ ಮೆರವಣಿಗೆಯಲ್ಲಿ ತಾಲೂಕು ಶಾಸಕ ಎನ್.ಎಚ್.ಕೋನರಡ್ಡಿ ಡೊಳ್ಳು ಬಾರಿಸುವದರ ಮೂಲಕ ಚಾಲನೆ ನೀಡಿದರು.

ಶ್ರೀ ರುದ್ರಮುನೀಶ್ವರ ದಾಸೋಹಮಠದ ಡಾ. ಶಿವುಕುಮಾರ ಮಹಾಸ್ವಾಮೀಜಿ ವಹಿಸಿದ್ದರು.

ಮೆರವಣಿಗೆ ಪಟ್ಟಣದ ಸ್ವಾಮಿ ವಿವೇಕಾನಂದ ವೃತ್ತದಿಂದ ಪ್ರಾರಂಭ ಗೊಂಡು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕರಿಸಿದ್ದೇಶ್ವರ ದೇವಸ್ಥಾನವರಿಗೂ ಸಾಗಿತು.

ಕಾರ್ಯಕ್ರಮದಲ್ಲಿ ವಿನೋದ ಅಸೂಟಿ, ತಾಲೂಕು ತಹಸೀಲ್ದಾರ್ ಮಂಜುನಾಥ್ ದಾಸಪ್ಪನವರ, ಮುಖ್ಯಾಧಿಕಾರಿ ವೈ ಜಿ ಗದ್ದಿಗೌಡ್ರು, ಪುರಸಭೆ ಸದಸ್ಯರು ಹಾಲುಮತದ ಸಮಾಜದ ಗಣ್ಯರು ಮತ್ತು ಕುರುಬ ಸಮಾಜದ ನಿಂಗಪ್ಪ ಬಡೆಪ್ಪನವರ, ಕರಿಸಿದ್ದಪ್ಪ ಮಾಯಣ್ಣವರ, ಸುರೇಶ ಬೆಳ್ಳಾರಿ, ಮಹಾಂತೇಶ್ ಕೋಗ್ಗಿ, ಈರಪ್ಪ ಭಾಗವಾಡ, ಹನುಮಂತಪ್ಪ ಮಾಯಣ್ಣನವರ, ಪರುಶುರಾಮ ಇಸ್ರನವರ, ಸಿದ್ದಪ್ಪ ಅಮ್ಮಾಗಿ ಸೇರಿದಂತೆ ಸಾರ್ವಜನಿಕರು ಸೇರಿದ್ದರು.

ಸ್ಪರ್ಧೆಗಳನ್ನು ಸ್ಪರ್ಧಾತ್ಮಕವಾಗಿ ತೆಗೆದುಕೊಳ್ಳಿ

ಹುಬ್ಬಳ್ಳಿ: ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ, ಬೆಂಗಳೂರು, ಶಾಲಾ ಶಿಕ್ಷಣ ಇಲಾಖೆ ಧಾರವಾಡ ಹಾಗೂ ಕೆ.ಎಲ್.ಇ ಪ್ರೇರಣಾ ಪದವಿ ಪೂರ್ವ ಕಾಲೇಜು ಕೊಟಗೊಂಡ ಹುಣಸಿ, ಹುಬ್ಬಳ್ಳಿ ಇವರ ಸಂಯುಕ್ತಾಶ್ರಯದಲ್ಲಿ, ಕೊಟಗೊಂಡಹುಣಸಿ ಕೆ.ಎಲ್.ಇ ಪ್ರೇರಣಾ ಪದವಿ ಪೂರ್ವಕಾಲೇಜಿನಲ್ಲಿ ಬೆಳಗಾವಿ ವಿಭಾಗ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ ಧಾರವಾಡ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಕೆ ಪಿ ಸುರೇಶ ಮಾತನಾಡಿ, ಇಂತಹ ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಅಡಕವಾಗಿರುವ ಪ್ರತಿಭೆಯನ್ನು ಹೊರ ಜಗತ್ತಿಗೆ ಪರಿಚಯಿಸುತ್ತವೆ. ಸ್ಪರ್ಧೆಗಳನ್ನು ಸ್ಪರ್ಧಾತ್ಮಕವಾಗಿ ತೆಗೆದುಕೊಳ್ಳಬೇಕೆ ಹೊರತು ವೈಯಕ್ತಿಕವಾಗಿ ಅಲ್ಲ. ಸ್ಪರ್ಧಾಳುವಿನ ಪ್ರತಿಭೆಗೆ ಪ್ರಾಶಸ್ತ್ರಕೊಡುವಂತಾಗಲಿ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಬೆಂಗಳೂರಿನ ಶಾಲಾ ಶಿಕ್ಷಣ ಇಲಾಖೆಯ ಶೈಕ್ಷಣಿಕ ವಿಭಾಗದ ಸಹಾಯಕ ನಿರ್ದೇಶಕರಾದ ಮೊಹ್ಮದ ಜಿಯಾವುಲ್ಲಾಖಾನ್ ಅವರು ಮಾತನಾಡಿ, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ತುಂಬಾ ಮುಖ್ಯ ಚೆನ್ನಾಗಿ ತಯಾರಿ ಮಾಡಿಕೊಂಡಿರುತ್ತೇವೆ. ಆದರೆ ಅದನ್ನು ಧೈರ್ಯದಿಂದ ಪ್ರದರ್ಶಿಸಬೇಕು ಅಂದಾಗ ಪ್ರತಿಭೆ ಅನಾವರಣಗೊಳ್ಳುತ್ತವೆ ಎಂದು ಹಿತವಚನ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನವಹಿಸಿದ್ದ, ಇತ್ತೀಚೆಗೆ ಸಹಕಾರ ರತ್ನ ಪ್ರಶಸ್ತಿ ಪಡೆದ ಬೆಳಗಾವಿ ಕೆ.ಎಲ್.ಇ ಸಂಸ್ಥೆಯ ನಿರ್ದೇಶಕರಾದ ಶಂಕರಣ್ಣ ಮುನವಳ್ಳಿ ಅವರು ಮಾತನಾಡಿ, ಸಾಂಸ್ಕೃತಿಕ ಸ್ಪರ್ಧೆಗಳು ವಿದ್ಯಾರ್ಥಿಗಳಲ್ಲಿ ಆಸಕ್ತಿಯ ಜೊತೆಗೆ ಅವರಲ್ಲಿ ಸುಪ್ತವಾಗಿ ಅಡಗಿದ ಪ್ರತಿಭೆಯನ್ನು ಹೊರ ಹಾಕುತ್ತದೆ. ಅಂತಹ ವಿದ್ಯಾರ್ಥಿಗಳಿಗೆ ವೇದಿಕೆ ವದಗಿಸಿಕೊಟ್ಟಾಗ ಮಾತ್ರ ಅವರಲ್ಲಿನ ಪ್ರತಿಭೆ ಅನಾವರಣಗೊಳ್ಳಲು ಸಾಧ್ಯ ಎಂದು ಹೇಳಿದರು.

ಧಾರವಾಡ ಜಿಲ್ಲೆಯ ಬೇರೆ ಬೇರೆ ಕಾಲೇಜಿನಿಂದ 30 ಜನ ಉಪನ್ಯಾಸಕರು ನಿರ್ಣಾಯಕರಾಗಿ ಆಗಮಿಸಿ ದಕ್ಷ ಹಾಗೂ ಪ್ರಾಮಾಣಿಕವಾದ ಫಲಿತಾಂಶ ನೀಡಿದರು. ಬೆಳಗಾವಿ ವಿಭಾಗದ 8 ಜಿಲ್ಲೆಗಳಿಂದ ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಬಾಗಲಕೋಟ, ಚಿಕ್ಕೋಡಿ, ಉತ್ತರಕನ್ನಡ, ವಿಜಯಪುರ ಸುಮಾರು 500 ಸ್ಪರ್ಧಾಳುಗಳು ಭಾಗವಹಿಸಿದ್ದರು.

ದೇವರ ಹುಬ್ಬಳ್ಳಿ ಸರಕಾರಿ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರಾದ ತೇಜಸ್ವಿನಿ ನಾರಾಯಣಕರ, ಮೊರಬ ಸರಕಾರಿ ಪದವಿ ಪೂರ್ವ ಕಾಲೇಜ ಪ್ರಾಚಾರ್ಯರಾದ ಸೈಯದ್ ಫಯಾಜ್ ಅಹ್ಮದ್, ಸರಕಾರಿ ಪದವಿ ಪೂರ್ವ ಕಾಲೇಜು ಧಾರವಾಡ ಪ್ರಾಚಾರ್ಯ ಲಿಂಗರಾಜ ಬೆಲ್ಲದ, ಧಾರವಾಡ ಜಿಲ್ಲಾ ಪ್ರಾಚಾರ್ಯರ ಸಂಘದ ಅಧ್ಯಕ್ಷರಾದ ಹನಮಂತಪ್ಪ ಡಿ, ಧಾರವಾಡ ಜಿಲ್ಲಾ ಪ್ರಾಚಾರ್ಯರ ಸಂಘದ ಪ್ರಧಾನ ಕಾರ್ಯದರ್ಶಿಗಳುಸಂದೀಪ ಬೂದಿಹಾಳ , ಧಾರವಾಡ ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಜಿ.ಬಿ.ತಹಶಿಲ್ದಾರ, ಕಾರ್ಯಾಧ್ಯಕ್ಷರಾದ ರಂಗನಾಥ ರಂಗಣ್ಣವರ, ಹಿರಿಯ ಉಪನ್ಯಾಸಕರಾದ ಚಂದ್ರಶೇಖರ ಕುಂಬಾರ, ಪ್ರಕಾಶ ಎನ್. ಸುಣಗಾರ, ಹಿರಿಯ ಉಪನ್ಯಾಸಕರು, ವರಹ ವೆಂಕಟಗಿರಿ ಶಾಲಾ ಶಿಕ್ಷಣ ಇಲಾಖೆ ಧಾರವಾಡ, ಹಾಗೂ ಕಾಲೇಜಿನ ಎಲ್ಲ ಸಿಬ್ಬಂಧಿ ವರ್ಗದವರು ಉಪಸ್ಥಿತರಿದ್ದರು. ಕಾರ್ಯಕ್ರಮ ತುಂಬಾ ಯಶಸ್ವಿಯಾಗಿ ನೆರವೇರಿತು.

ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಉಪನ್ಯಾಸಕರಾದ ಮಂಜುನಾಥ ಕಿತ್ತೂರ ನಿರೂಪಣೆ ಮಾಡಿದರು.

ಸಮೃದ್ಧ ಕನ್ನಡ ನಾಡು ನಮ್ಮದು

ಲಕ್ಷ್ಮೇಶ್ವರ: ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಕನ್ನಡನಾಡು ಕಲೆ, ಭಾಷೆ, ಸಂಸ್ಕೃತಿಗೆ ಭಾರತ ದೇಶಕ್ಕೆ ತನ್ನದೇ ಅದ ಕೊಡುಗೆ ನೀಡಿದೆ. ಎಂಟು ಜ್ಞಾನಪೀಠ ಪ್ರಶಸ್ತಿ ನೀಡಿದ ಭಾಷೆ ನಮ್ಮದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಶಿಗ್ಲಿ ಹೋಬಳಿ ಘಟಕದ ಅಧ್ಯಕ್ಷ ರಾಜು ರಜಪೂತ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ಕಮಲಾ ಮತ್ತು ವೆಂಕಪ್ಪ ಎಂ ಅಗಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜರುಗಿದ 69 ನೇ ಕರ್ನಾಟಕ ರಾಜ್ಯೋತ್ಸವ ಹಾಗೂ ಅಗಡಿ ಕನ್ನಡ ಸಂಘದ 10 ರ ಸಂಭ್ರಮದ ಅಂಗವಾಗಿ ಜರುಗಿದ ಅಗಡಿ ಕನ್ನಡ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕನ್ನಡ ನಮ್ಮ ತಾಯಿ ಭಾಷೆ ನಮ್ಮ ಕಣ ಕಣ ದಲ್ಲಿ ಕನ್ನಡ ನೆಲೆಸಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ. ಪರಶುರಾಮ ಬಾರಕಿ ವಹಿಸಿದ್ದರು. ಅಗಡಿ ಸನ್ ರೈಸ್ ಆಸ್ಪತ್ರೆಯ ವೈದ್ಯರಾದ ರಾಜಶೇಖರ್, ಎನ್ ಹಯವದನ, ಆರ್ ಎಂ ಪಾಟೀಲ, ಸುಭಾಷ್ ಮೇಟಿ, ಪ್ರೊ ವಿಕ್ರಮ ಶಿರೋಳ್, ಗಿರೀಶ ಯತ್ತಿನಹಳ್ಳಿ ಕನ್ನಡ ಹಬ್ಬದ ಸಂಯೋಜಕ ಪ್ರೊ ಸೋಮಶೇಖರ ಕೆರಿಮನಿ ವೇದಿಕೆ ಮೇಲೆ ಉಪಸ್ಥಿತರಿದ್ದರು. ಪ್ರತಿಮಾ ಮಹಾಪುರುಷ ಸರ್ವರನ್ನು ಸ್ವಾಗತಿಸಿದರು, ಮೇಘಾ ಪಾಶೆಟ್ಟಿ, ತಸ್ಲೀಮಾ ಕಾರಡಗಿ ಪ್ರೊ ರಾಜೇಶ್ವರಿ ಗಾ ಮನಗಟ್ಟಿ, ಪ್ರೊ. ಷಣ್ಮುಖ. ಜಿ ಕಾರ್ಯಕ್ರಮ ನಿರೂಪಿಸಿದರು, ಪ್ರೊ ರಾಜೇಂದ್ರ ಶೆಟ್ಟರ್ ವಂದಿಸಿದರು.

ಕ್ರೀಡೆಗಳು ಮಕ್ಕಳ ದೈಹಿಕ ಬೆಳವಣಿಗೆಗೆ ಸಹಕಾರಿ

ಧಾರವಾಡ: ಧಾರವಾಡ ನಗರದ ಆರ್.ಎನ್.ಶೆಟ್ಟಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ರಾಜೀವಗಾಂಧಿ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕ ಕ್ರೀಡಾಕೂಟ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಡಾ.ಸತೀಶ ಇರಕಲ್ ಅವರು, ಸಂಘಟಿತ ಕ್ರೀಡೆಗಳು, ವೈಯಕ್ತಿಕ ಅಥವಾ ತಂಡದ ಆಟಗಳು ಮತ್ತು ಉಚಿತ ಆಟಗಳ ರೂಪದಲ್ಲಿ ದೈಹಿಕ ಚಟುವಟಿಕೆಗಳು ಬೆಳೆಯುತ್ತಿರುವ ಮೆದುಳು ಚೆನ್ನಾಗಿ ಪ್ರಬುದ್ಧವಾಗಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ 2020 ಶಿಕ್ಷಣಶಾಸ್ತ್ರದ ಕಡ್ಡಾಯ ಭಾಗವಾಗಿ ಕ್ರೀಡೆಗಳು, ಆಟಗಳು ಮತ್ತು ಇತರ ದೈಹಿಕ ಚಟುವಟಿಕೆಗಳನ್ನು ಸೇರಿಸುವ ಮೂಲಕ ಶಾಲಾ ಪಠ್ಯಕ್ರಮವನ್ನು ಸಮಗ್ರಗೊಳಿಸಲು ಪುನರ ನಿರ್ಮಿಸಬೇಕು ಎಂದು ಶಿಫಾರಸು ಮಾಡುತ್ತದೆ. ಸಮಗ್ರ ಶಿಕ್ಷಣವು ಕ್ರೀಡೆಯ ಪ್ರಯೋಜನಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ಏಕೆಂದರೆ ಕ್ರೀಡೆಗಳು ಮಕ್ಕಳ ದೈಹಿಕ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಆದರೆ ಮಕ್ಕಳ ಭಾವನಾತ್ಮಕ, ಸಾಮಾಜಿಕ ಮತ್ತು ಅರಿವಿನ ಬೆಳವಣಿಗೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ ಎಂದರು.

ಎಲ್ಲಾ ಕೆಲಸ ಮತ್ತು ಯಾವುದೇ ಆಟವು ಜ್ಯಾಕ್ ಅನ್ನು ಮಂದ ಹುಡುಗನನ್ನಾಗಿ ಮಾಡುತ್ತದೆ ಎಂಬ ಗಾದೆಯನ್ನು ನಾವೆಲ್ಲರೂ ಕೇಳಿದ್ದೇವೆ. ಹಳೆಯ ಗಾದೆಗಳು ಮತ್ತು ಗಾದೆಗಳಲ್ಲಿ ಒಳಗೊಂಡಿರುವ ಬುದ್ಧಿವಂತಿಕೆಯು ಸಾರ್ವತ್ರಿಕ ಸತ್ಯಗಳನ್ನು ಮತ್ತು ಸಮಯ ಪರೀಕ್ಷಿತ ಜ್ಞಾನವನ್ನು ಒಳಗೊಂಡಿರುತ್ತದೆ. ಇದು ಇಂದಿನ ವಿಜ್ಞಾನ ಮತ್ತು ಸಂಶೋಧನೆಯು ಸರಿ ಎಂದು ಸಾಬೀತುಪಡಿಸುತ್ತಿದೆ.

ದೈಹಿಕ ಚಟುವಟಿಕೆಯು ಮಕ್ಕಳಲ್ಲಿ ಮೆದುಳಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ ಎಂದು ಅನೇಕ ವೈಜ್ಞಾನಿಕ ಅಧ್ಯಯನಗಳು ತೋರಿಸಿವೆ.

ಮಾಜಿಮಹಾಪೌರರಾದ ಈರೇಶ ಅಂಚಟಗೇರಿ ಅವರು, ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಕ್ರೀಡೆಗಳ ಪ್ರಾಮುಖ್ಯತೆ ಮುಖ್ಯವಾದುದೆಂದರೆ ಮಕ್ಕಳನ್ನು ಸಕ್ರಿಯವಾಗಿ ಮತ್ತು ಆರೋಗ್ಯಕರವಾಗಿ ಇಡುವುದು. ಇದು ದೈಹಿಕ ಚಟುವಟಿಕೆಯ ಒಂದು ರೂಪವಾಗಿದ್ದು ಅದು ಮಕ್ಕಳನ್ನು ಶಕ್ತಿಯುತವಾಗಿರಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿಮಹಾಪೌರರು ಈರೇಶ ಅಂಚಟಗೇರಿ, ಡಾ.ಸತೀಶ ಇರಕಲ, ಜಿ.ಜಿ.ಹಿರೇಮಠ, ಜಗದೀಶ ಮಳಗಿ, ಎಸ ರಾಧಾಕೃಷ್ಣನ್, ವೀಣಾ ತುಪ್ಪದ, ಸುಧಾ ಕಾಳೆ, ಸುರೇಖಾ ಚಾಂದಗುಡೆ, ಶ್ರೀಧರ ಜಾಧವ, ಹಾಗೂ ವಿದ್ಯಾರ್ಥಿಗಳು ಶಿಕ್ಷಕರು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಬ್ಯಾಡ್ಮಿಂಟನ್; ಚೆನ್ನೈ ವಿವಿ ಚಾಂಪಿಯನ್

ಎಸ್‌ಡಿಎಂಸಿ ಐಟಿಯಲ್ಲಿ ನಡೆದ ಕ್ರೀಡಾಕೂಟ | ರನ್ನರ್ ಅಪ್‌ಆದ ಬೆಂಗಳೂರಿನ ಜೈನ್ ವಿವಿ

ಧಾರವಾಡ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ 3 ದಿನಗಳ ಕಾಲ ನಡೆದ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮಹಿಳಾ ಬ್ಯಾಡ್ಮಿಂಟನ್ ಪಂದ್ಯಾವಳಿಯು ಮುಕ್ತಾಯಗೊಂಡಿತು.

ಈ ಕ್ರೀಡಾ ಉತ್ಸವದಲ್ಲಿ ದಕ್ಷಿಣ ಭಾರತದ 6 ರಾಜ್ಯಗಳಿಂದ ಒಟ್ಟು 400 ಕ್ಕೂ ಹೆಚ್ಚು ಶಟ್ಲರ್‌ಗಳು ಮತ್ತು 200 ಅಧಿಕಾರಿಗಳು ಮತ್ತು ತರಬೇತುದಾರರು ಭಾಗವಹಿಸಿದ್ದರು. ಈ ಸಮಾರಂಭವು ಕ್ರೀಡಾಪಟುಗಳು, ಪ್ರೇಕ್ಷಕರು ಮತ್ತು ಬೆಂಬಲಿಗರನ್ನು ಒಟ್ಟಿಗೆ ತಂದಿತು. ಮುಖ್ಯ ಅತಿಥಿಯಾಗಿ ಬೆಳಗಾವಿಯ ವಿಟಿಯು ಕುಲಸಚಿವ ಡಾ.ಬಿ.ಇ.ರಂಗಸ್ವಾಮಿ ಭಾಗವಹಿಸಿದ್ದರು.

ಎಸ್ ಡಿಎಂಇ ಸೊಸೈಟಿಯ ಕಾರ್ಯದರ್ಶಿ ಜೀವಂಧರ್ ಕುಮಾರ್ ಎಲ್ಲಾ ವಿಜೇತರಿಗೆ ಟ್ರೋಫಿಗಳನ್ನು ವಿತರಿಸಿ ಮಾತನಾಡಿ, ಈ ಪಂದ್ಯಾವಳಿಯ ಆತಿಥ್ಯ ವಹಿಸುವಲ್ಲಿ ಎಸ್ ಡಿಎಂಸಿಇಟಿ ಧಾರವಾಡದ ಪ್ರಯತ್ನಗಳಿಗೆ ಧನ್ಯವಾದ ಅರ್ಪಿಸಿದರು ಮತ್ತು ಇಂತಹ ಕಾರ್ಯಕ್ರಮಗಳು ಆತಿಥೇಯ ಸಂಸ್ಥೆ ಮತ್ತು ವಿಶ್ವವಿದ್ಯಾಲಯದ ಚಿತ್ರಣವನ್ನು ಹೆಚ್ಚಿಸುತ್ತವೆ ಎಂದು ತಿಳಿಸಿದರು.

ಎಸ್‌ಡಿಎಂಸಿಇಟಿ ಪ್ರಾಂಶುಪಾಲರಾದ ಡಾ.ರಮೇಶ್ ಎಲ್.ಚಕ್ರಸಾಲಿ ಅವರು

ಮಾತನಾಡಿ, ಸ್ಪರ್ಧೆಯ ಯಶಸ್ಸಿಗೆ ಪ್ರತಿಯೊಬ್ಬ ಸ್ಪರ್ಧಿಯನ್ನು ಅಭಿನಂದಿಸಿದರು. ಕ್ರೀಡಾಕೂಟದಲ್ಲಿ ಭಾಗವಹಿಸಿದ 75 ವಿಶ್ವವಿದ್ಯಾಲಯಗಳಲ್ಲಿ ಚೆನ್ನೈನ ಎಸ್‌ಆರ್‌ಎಂ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ ಚಾಂಪಿಯನ್ ಶಿಪ್ ಅನ್ನು ಗೆದ್ದರೆ, ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯವು ಈ ಕ್ರೀಡಾಕೂಟದಲ್ಲಿ ರನ್ನರ್ ಅಪ್ ತಂಡವಾಯಿತು. ಕರ್ನೂಲ್ ನ ರಾಯಲಸೀಮಾ ವಿಶ್ವವಿದ್ಯಾಲಯ ಮತ್ತು ಬೆಂಗಳೂರಿನ ರೇವಾ ವಿಶ್ವವಿದ್ಯಾಲಯ ಕ್ರಮವಾಗಿ 3 ಮತ್ತು 4 ನೇ ಸ್ಥಾನಗಳನ್ನು ಪಡೆದುಕೊಂಡವು.

ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಪ್ರೊ.ವಿ.ಕೆ.ಪಾರ್ವತಿ ಸ್ವಾಗತಿಸಿದರು. ಇಂದಿರಾ ಉಮರ್ಜಿ ಕಾರ್ಯಕ್ರಮ ನಿರೂಪಿಸಿದರು.

ಈ ಸಂದರ್ಭದಲ್ಲಿ ಡಾ.ಜವಳಿ, ಡಾ.ಬಿ.ಮಂಜುನಾಥ್, ಡಾ.ಪಿ.ಕಡಗಡ್ಕೈ, ಎಸ್‌ಡಿಎಂಸಿಇಟಿ ಪ್ರಾಂಶುಪಾಲ ಡಾ. ರಮೇಶ್ ಎಲ್.ಚಕ್ರಸಾಲಿ, ಪಿ.ವಿ.ರಾವ್, ಸುರೇಶ್, ಡಾ.ವೈ.ಸಿ.ಲೂಯಿಸ್ ರಾಜ್ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮಹಿಳಾ ಬ್ಯಾಡ್ಮಿಂಟನ್ ಪಂದ್ಯಾವಳಿಯ ವಿಜೇತರಾದ ನಾಯಕ್ ಆಲಿಷಾ, ಎಸ್. ಕವಿಪ್ರಿಯಾ, ಶ್ರೇಯಾ ಬಾಲಾಜಿ, ಎನ್. ಶ್ರೀನಿಧಿ ಇದ್ದರು.

ಸುಸ್ಥಿರತೆ, ಹವಾಮಾನ ಬದಲಾವಣೆ ಕುರಿತ ರಾಜ್ಯಮಟ್ಟದ ಸ್ಪರ್ಧೆ ಸಂಪನ್ನ

ಧಾರವಾಡ: ಧಾರವಾಡದ ಎಸ್ ಡಿಎಂಸಿಇಟಿಯಲ್ಲಿ ನಡೆದ ಸುಸ್ಥಿರ ಕಂಪ್ಯೂಟಿಂಗ್ ಮತ್ತು ಹವಾಮಾನ ಬದಲಾವಣೆ ಕುರಿತ ರಾಜ್ಯಮಟ್ಟದ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮವು ಒಟ್ಟು 28 ತಂಡಗಳನ್ನು ಒಟ್ಟುಗೂಡಿಸಿತು, ಕರ್ನಾಟಕದಾದ್ಯಂತದ ಸಂಸ್ಥೆಗಳು, ವಿಶ್ವವಿದ್ಯಾಲಯಗಳಿಂದ 120ಕ್ಕೂ ಹೆಚ್ಚು ಸ್ಪರ್ಧಿಗಳು ಸುಸ್ಥಿರ ಭವಿಷ್ಯಕ್ಕಾಗಿ ನವೀನ ಆಲೋಚನೆಗಳು ಮತ್ತು ಪರಿಹಾರಗಳನ್ನು ಪ್ರದರ್ಶಿಸಿದರು.ಎಸ್ ಡಿಎಂಇ ಸೊಸೈಟಿಯ ಕಾರ್ಯದರ್ಶಿ ಜೀವಂಧರ್ ಕಾರ್ಯಕ್ರಮದಲ್ಲಿ ಮಾತನಾಡಿ, ಭಾಗವಹಿಸಿದ ಎಲ್ಲರ ಸೃಜನಶೀಲತೆ ಮತ್ತು ಸಮರ್ಪಣೆಯಿಂದ ನಾವು ಸ್ಫೂರ್ತಿ ಪಡೆದಿದ್ದೇವೆ ಎಂದು ತಿಳಿಸಿದರು.

ಧಾರವಾಡದ ಎಸ್ ಡಿಎಂಸಿಇಟಿ ಪ್ರಾಂಶುಪಾಲ ಡಾ. ಆರ್.ಎಲ್.ಚಕ್ರಸಾಲಿ ಮಾತನಾಡಿ, ನಾವು ಒಟ್ಟಾಗಿ ಕೆಲಸ ಮಾಡಿದರೆ ಸುಸ್ಥಿರ ಭವಿಷ್ಯವನ್ನು ಸಾಧಿಸಬಹುದು. ಮಾತ್ರವಲ್ಲ ಕೈಗೆಟುಕುವ ಮಟ್ಟದಲ್ಲೂ ಸಾಧಿಸಬಹುದು ಎಂಬುದನ್ನು ತೋರಿಸುತ್ತದೆ ಎಂದು ಹೇಳಿದರು.

ಈ ಸ್ಪರ್ಧೆಯನ್ನು ಕಾಲೇಜಿನ ಹಳೆಯ ವಿದ್ಯಾರ್ಥಿನಿ ದುಬೈನ ಅಮೆಜಾನನ ಸಾರಾ ಗನಿಹಾರ್ ಬೆಂಬಲಿಸಿದರು, ಅವರು ಸುಸ್ಥಿರತೆಯನ್ನು ಬೆಳೆಸುವ ಬದ್ಧತೆಯನ್ನು ಹಂಚಿಕೊಂಡರು.

ತೀರ್ಪುಗಾರರ ಸಮಿತಿಯ ಮೌಲ್ಯಮಾಪನದ ನಂತರ, 5 ತಂಡಗಳಿಗೆ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ಮತ್ತು ಸಮಾಧಾನಕರ ಬಹುಮಾನವನ್ನು ನೀಡಲಾಯಿತು.

ಈ ಕಾರ್ಯಕ್ರಮದಲ್ಲಿ ಧಾರವಾಡದ ಎಸ್ ಡಿಎಂಇ ಸೊಸೈಟಿಯ ಕಾರ್ಯದರ್ಶಿ ಜೀವಂಧರ್ ಕುಮಾರ್, ಎಸ್ ಡಿಎಂಸಿಇಟಿ ಪ್ರಾಂಶುಪಾಲ ಡಾ.ರಮೇಶ್ ಎಲ್. ಚಕ್ರಸಾಲಿ, ಸಿ-3 ಡೀನ್ ಡಾ.ಸತೀಶ್ ಭೈರಣ್ಣವರ್, ಡೀನ್ ಡಾ.ಕೆ.ಎನ್.ಪಾಟೀಲ್, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಮಾರಕಾಸ್ತ್ರಗಳಿಂದ ರೌಡಿಶೀಟರ್ ಕೊಲೆ

ಶಿವಮೊಗ್ಗ: ಹಳೆಯ ವೈಷಮ್ಯ ಹಿನ್ನೆಲೆಯಲ್ಲಿ ಹಾಡಹಗಲೇ ರೌಡಿಶೀಟರ್‌ನನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಕೊಲೆಗೈದಿರುವ ಘಟನೆ ನಗರದ ಹೊರವಲಯದ ಬೊಮ್ಮನಕಟ್ಟೆ ಬಡಾವಣೆಯಲ್ಲಿ ನಡೆದಿದೆ.

ಕೊಲೆಯಾದ ರೌಡಿಶೀಟರ್‌ನನ್ನು ರಾಜೇಶ್ ಶೆಟ್ಟಿ (38) ಎಂದು ಗುರುತಿಸಲಾಗಿದೆ. ರಾಜೇಶ್ ಬೊಮ್ಮನಕಟ್ಟೆಯ ಅಂಗಡಿ ಬಳಿ ಕೂಲ್ ಡ್ರಿಂಕ್ಸ್ ಕುಡಿಯುತ್ತ ಕುಳಿತಿದ್ದ. ಅಲ್ಲಿಗೆ ಬಂದ ದುಷ್ಕರ್ಮಿಗಳ ತಂಡ ಏಕಾಏಕಿ ಆತನ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿದೆ. ಪರಿಣಾಮ ಆತ ಸ್ಥಳದಲ್ಲೇ ಸಾವಿಗೀಡಾಗಿದ್ದಾನೆ. ಘಟನಾ ಸ್ಥಳಕ್ಕೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅನಿಲ್ ಕುಮಾರ್ ಭೂಮರೆಡ್ಡಿ ಹಾಗೂ ವಿನೋಬನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ರ‍್ಯಾಗಿಂಗ್: ವಿದ್ಯಾರ್ಥಿಗಳ ಮೇಲೆ ಕೇಸ್

ಸುರತ್ಕಲ್: ಸುರತ್ಕಲ್ ಬಳಿಯ ಮೆಡಿಕಲ್ ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗೆ ರ‍್ಯಾಗಿಂಗ್ ನಡೆಸಿದ ಆರೋಪದಲ್ಲಿ ಮೂರನೇ ವರ್ಷದ 9 ಮಂದಿ ಕೇರಳ ಮೂಲದ

ಅಪರಾಧ ಸುದ್ದಿ

ವಿದ್ಯಾರ್ಥಿಗಳ ವಿರುದ್ಧ ಸುರತ್ಕಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಂತ್ರಸ್ತ ವಿದ್ಯಾರ್ಥಿಯೊಬ್ಬ ದೂರು ನೀಡಿದ್ದು, ಅದೇ ಕಾಲೇಜಿನಲ್ಲಿ ಕಲಿಯುವ ಕೇರಳ ಮೂಲದ ಸಿದಾಯತ್, ಅಮಲ್ ಕೃಷ್ಣ ಸಾಜಿದ್, ಅಜೀಮ್ ಶಾ, ಆಡಮ್, ಫಯಾದ್, ಅತುಲ್ ಕೆ., ದಿಲೀಪ್, ಅಫೈಲ್, ಶಿಬಿನ್ ಆರೋಪಿಗಳು. ಇಡ್ಯಾ ಗ್ರಾಮದಲ್ಲಿ ಆರೋಪಿ ಸಿದಾಯತ್ ಮಾಡಿಕೊಂಡಿದ್ದ ಬಾಡಿಗೆ ಮನೆಯಲ್ಲಿ ಘಟನೆ ನಡೆದಿದೆ. ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಡಿಬಾರ್ ಮಾಡಲಾಗಿದೆ ಎಂದು ತಿಳಿದು ಬಂದಿದೆ. ಕಾಲೇಜಿನ ಹಿರಿಯ ವಿದ್ಯಾರ್ಥಿ ಸಿದಾಯತ್ ನ. 25ರಂದು ಸಂಜೆ 5.45ಕ್ಕೆ ಕರೆ ಮಾಡಿ, ಲೈವ್ ಲೊಕೇಶನ್ ಕಳುಹಿಸಿ ತನ್ನ ಬಾಡಿಗೆ ಮನೆಗೆ ಬರಲು ಹೇಳಿದ್ದು. ಬಳಿಕ ರ‍್ಯಾಗಿಂಗ್ ಮಾಡಲಾಗಿದೆ. ಸುರತ್ಕಲ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

...ಸಿಎಂ ಸಿದ್ದರಾಮಯ್ಯ ತುರ್ತು ಸಭೆ

← ಮೊದಲಪುಟದಿಂದ

ಕಂಪನಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ: ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಎಂ, ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ಬಾಣಂತಿಯರ ಸಾವಿನ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕರ್ತವ್ಯಲೋಪಕ್ಕಾಗಿ ಡ್ರಗ್ ಕಂಟ್ರೋಲರ್ ಉಮೇಶ್ ಅವರನ್ನು ಅಮಾನತು ಮಾಡಲಾಗಿದೆ. ಇದರೊಂದಿಗೆ ರಿಂಗರ್ ಲ್ಯಾಕ್ಟೇಟ್ ದ್ರಾವಣ ಪೂರೈಸಿರುವ ಪಶ್ಚಿಮ ಬಂಗಾಳ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಿ, ಕಂಪನಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಆದೇಶಿಸಲಾಗಿದೆ ಎಂದು ಹೇಳಿದರು.

ಸಾವಿನ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಸರಕಾರದಿಂದ ಎರಡು ಲಕ್ಷ ರು. ಪರಿಹಾರ ಘೋಷಿಸಲಾಗಿದೆ. ಡ್ರಗ್ ಪೂರೈಸಿದ ಕಂಪನಿಯಿಂದಲೂ ಪರಿಹಾರವನ್ನು ವಸೂಲು ಮಾಡಿ, ಮೃತರ ಕುಟುಂಬಕ್ಕೆ ನೀಡಲು ಸೂಚನೆ ನೀಡಲಾಗಿದೆ. ಇದರೊಂದಿಗೆ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಸಂಭವಿಸಿರುವ ಈ ರೀತಿಯ ಸಾವಿನ ಪ್ರಕರಣದ ಬಗ್ಗೆಯೂ ತನಿಖೆ ನಡೆಸಲು ಅಭಿವೃದ್ಧಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚಿಸಲು ನಿರ್ಧಾರಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಸಭೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಬಳ್ಳಾರಿ ಉಸ್ತುವಾರಿ ಸಚಿವ ಜಮೀರ್ ಅಹ್ಮದ್, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಸೇರಿದಂತೆ ಬಳ್ಳಾರಿ ಜಿಲ್ಲೆಯ ಪ್ರಮುಖ ಅಧಿಕಾರಿಗಳು ಹಾಗೂ ಆರೋಗ್ಯಾಧಿಕಾರಿಗಳಿದ್ದರು

ಘಟನೆ ಕಾರಣರಾದವರ ವಿರುದ್ಧ ಕ್ರಮ: ಬಳ್ಳಾರಿಯ ಜಿಲ್ಲಾಸ್ಪತ್ರೆಯಲ್ಲಿ ನಡೆದಿರುವ ಈ ಘಟನೆ ಮರುಕಳಿಸದಂತೆ ಎಚ್ಚರವಹಿಸಲು ಕ್ರಮವಹಿಸಬೇಕು. ಇದರೊಂದಿಗೆ ಈಗಾಗಲೇ ರಿಂಗರ್ ಲ್ಯಾಕ್ಟೇಟ್ ಪ್ರಯೋಗಾಲಯದ ವರದಿ ಬಂದ ಬಳಿಕ ಘಟನೆಗೆ ಜವಾಬ್ದಾರರಾದ ಪ್ರತಿಯೊಬ್ಬರನ್ನು ಗುರುತಿಸಿ ಕ್ರಮ ಕೈಗೊಳ್ಳಬೇಕು. ಔಷಧ ನಿಯಂತ್ರಣ ಕಾಯಿದೆಯನ್ನು ಇನ್ನಷ್ಟು ಬಿಗಿಗೊಳಿಸುವ ಕುರಿತು ಕೇಂದ್ರ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಗಿದೆ.

ತ.ನಾಡು ಮಾದರಿಗೆ ಸೂಚನೆ

ತಮಿಳುನಾಡಿನಲ್ಲಿ ಔಷಧಿಗಳ ಖರೀದಿ ಪ್ರಕ್ರಿಯೆ ಹಾಗೂ ಔಷಧ ನಿಯಂತ್ರಣಕ್ಕೆ ಕಠಿಣ ನಿಯಮಗಳಿವೆ. ಆದ್ದರಿಂದ ಮುಂದಿನ ದಿನದಲ್ಲಿ ಕರ್ನಾಟಕದಲ್ಲಿಯೂ ತಮಿಳುನಾಡು ಮಾದರಿಯಲ್ಲಿ ಔಷಧಿ ಖರೀದಿ ಪ್ರಕ್ರಿಯೆ ನಡೆಸಬೇಕು. ಇದರೊಂದಿಗೆ ಔಷಧ ನಿಯಂತ್ರಣ ಇಲಾಖೆಯನ್ನು ಪುನಾರಚನೆ ಮಾಡಬೇಕು. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಸಿಎಂ ಸೂಚನೆ ನೀಡಿದರು.

ಉತ್ತಮ ಆರೋಗ್ಯ ಹೊಂದಿದ್ದರೂ ಸಿಸೇರಿಯನ್ ವೇಳೆ ಅವರ ಮರಣ ನಮಗೆ ಅತ್ಯಂತ ನೋವುಂಟು ಮಾಡಿದೆ. ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ಒಟ್ಟು 2600 ಸರ್ಜರಿಗಳು ನಡೆದಿವೆ. ಸಾಕಷ್ಟು ಸಿಸೇರಿಯನ್‌ಗಳನ್ನು ಮಾಡಿದ್ದಾರೆ. ಯಾರೊಬ್ಬರ ಸಾವು ಸಂಭವಿಸಿರಲಿಲ್ಲ. ಮೊದಲ ಬಾರಿಗೆ ನಾಲ್ವರ ಬಾಣಂತಿಯರ ಸಾವಾಗಿರುವುದು, ನಮಗೆ ಐವಿ ದ್ರಾವಣದ ಮೇಲೆ ಅನುಮಾನ ಬರುವಂತೆ ಮಾಡಿದೆ. ಆದ್ದರಿಂದ ದ್ರಾವಣ ಗುಣಮಟ್ಟದ ಪರೀಕ್ಷೆಗೆ ಕಳಿಸಿದ್ದೇವೆ. ವರದಿ ಬಂದ ಬಳಿಕ ಕ್ರಮ ತೆಗೆದುಕೊಳ್ಳುತ್ತೇವೆ.

– **ದಿನೇಶ್ ಗುಂಡೂರಾವ್** ಆರೋಗ್ಯ ಸಚಿವ

ಅನಿವಾಸಿ ಕನ್ನಡಿಗರಿಗೆ ಅನುದಾನ ಅಗತ್ಯ: ಡಾ. ಆರತಿ ಕೃಷ್ಣ

← ಮೊದಲಪುಟದಿಂದ

ವಿದೇಶದಲ್ಲಿರುವವರೆಲ್ಲ ಶ್ರೀಮಂತರಲ್ಲ: ವಿದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನಿವಾಸಿ ಭಾರತೀಯರೆಲ್ಲ ಶ್ರೀಮಂತರು ಎನ್ನುವ ಕಲ್ಪನೆ ಭಾರತದಲ್ಲಿದೆ. ಆದರೆ ಅರಬ್ ದೇಶ ಸೇರಿದಂತೆ ಅನೇಕ ಕಡೆ ಕರ್ನಾಟಕ ಮೂಲದವರು ಕಟ್ಟಡ ನಿರ್ಮಾಣ, ಕೂಲಿ ಸೇರಿದಂತೆ ಹಲವು ಉದ್ಯೋಗ ಅರಸಿ ಹೋಗುತ್ತಾರೆ. ಅವರೆಲ್ಲರೂ ಆರ್ಥಿಕವಾಗಿ ಸದೃಢರಾಗಿರುವುದಿಲ್ಲ. ಅಂತಹವರಿಗೆ ವಿದೇಶದಲ್ಲಿ ಏನಾದರೂ ಆರೋಗ್ಯ ಅಥವಾ ಇತರೆ ಸಮಸ್ಯೆಯಾದರೆ ಭಾರಿ ಸಮಸ್ಯೆಗೆ ಸಿಲುಕುತ್ತಾರೆ. ಆದ್ದರಿಂದ ಅವರಿಗಾಗಿ ಅನುದಾನ ಮೀಸಲಿಡುವುದು ಸೂಕ್ತ. ಈ ನಿಟ್ಟಿನಲ್ಲಿ ಸರಕಾರದೊಂದಿಗೆ ಚರ್ಚಿಸಿ, ಕ್ರಮವಹಿಸುವಂತೆ ಮನವಿ ಮಾಡಲಾಗಿದೆ ಎಂದು ಹೇಳಿದ್ದಾರೆ.

ವಿದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಕೇರಳ ಸರಕಾರ ಪ್ರತ್ಯೇಕ ಇಲಾಖೆ ಆರಂಭಿಸಿ, ಅವರಿಗೆ ಸಹಾಯ ಮಾಡುತ್ತಿದೆ. ಇದೇ ರೀತಿ ನಮ್ಮಲ್ಲಿಯೂ ಪ್ರತ್ಯೇಕ ಇಲಾಖೆ ಸ್ಥಾಪಿಸಬೇಕು ಎಂದು ಸರಕಾರದ ಬಳಿ ಮನವಿ ಮಾಡಲಾಗುತ್ತಿದೆ. ಚುನಾವಣಾ ಪ್ರಣಾಳಿಕೆಯಲ್ಲಿಯೂ ನಾವು ಈ ಬಗ್ಗೆ ಪ್ರಸ್ತಾಪಿಸಿದ್ದೇವೆ. ಇದೀಗ ಸ್ಥಗಿತಗೊಂಡಿದ್ದ ಕಚೇರಿಯನ್ನು ಆರಂಭಿಸಿದ್ದೇವೆ. ಮುಂದಿನ ದಿನಗಳಲ್ಲಿ ಅನುದಾನ ಪಡೆದು, ಹಂತಹಂತವಾಗಿ ಫೋರಂ ಕಾರ್ಯಾರಂಭ ಮಾಡಬೇಕಿದೆ. ಆ ಬಳಿಕ ಪ್ರಣಾಳಿಕೆಯಲ್ಲಿ ಘೋಷಿಸಿರುವಂತೆ, ಪ್ರತ್ಯೇಕ ಇಲಾಖೆ ಸ್ಥಾಪಿಸಬೇಕು ಎಂದಿದ್ದಾರೆ.

ಎನ್‌ಆರ್‌ಐ ಫೋರಂನ ಉಪಾಧ್ಯಕ್ಷೆ ಡಾ.ಆರತಿ ಕೃಷ್ಣ ಸಭೆ ಮಾಡುತ್ತಿರುವುದು.

ವಿದೇಶಿ ಭಾಷೆ ಕಲಿಕೆ ಸಂಬಂಧ ನಿರಂತರ ಸಭೆ: ವಿದೇಶದಲ್ಲಿ ದಿನದಿಂದ ದಿನಕ್ಕೆ ಕೌಶಲ ಸಿಬ್ಬಂದಿ ಬೇಡಿಕೆ ಹೆಚ್ಚಾಗುತ್ತಿದೆ. ಕರ್ನಾಟಕದಲ್ಲಿ ಕೌಶಲ್ಯಭರಿತ ಯುವಕರ ಸಂಖ್ಯೆಯಿದ್ದರೂ ಭಾಷೆಯ ಸಮಸ್ಯೆಯಿಂದ ವಿದೇಶದಲ್ಲಿ ಉದ್ಯೋಗ ಲಭಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಆರತಿ ಕೃಷ್ಣ ವಿವಿಧ ದೇಶಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಇಲ್ಲಿನ ಯುವಕರಿಗೆ ಭಾಷೆ ಕಲಿಸುವ ಬಗ್ಗೆ ಒತ್ತು ನೀಡಲು ಮನವಿ ಮಾಡಿದ್ದಾರೆ. ಇದೇ ವಿಷಯವಾಗಿ ಕಳೆದ ವಾರ ಇಟಲಿ ಧೂತಾವಾಸ ಕಚೇರಿ ಅಧಿಕಾರಿಗಳೊಂದಿಗೆ ಕರ್ನಾಟಕ ಕೌಶಲಾಭಿವೃದ್ಧಿ ನಿಗಮಕ್ಕೆ ಭೇಟಿ ನೀಡಿ, ಇಟಲಿಯಲ್ಲಿ ನರ್ಸ್‌ಗಳಿಗೆ ಬೇಡಿಕೆಯಿದ್ದು, ಕರ್ನಾಟಕದಲ್ಲಿರುವ ಅರ್ಹ ಅಭ್ಯರ್ಥಿಗಳಿಗೆ ನರ್ಸ್ ಕಾರ್ಯದ ಕೌಶಲ್ಯದೊಂದಿಗೆ ಇಟಲಿ ಭಾಷೆ ಕಲಿಸುವುದಕ್ಕೆ ಕ್ರಮಕ್ಕೆ ಮುಂದಾಗುವಂತೆ ಮನವಿ ಮಾಡಿದ್ದಾರೆ.

ಕೋಟ್

ಕನ್ನಡಿಗರು ವಿಶ್ವದ ಹಲವು ದೇಶಗಳಲ್ಲಿ ನೆಲೆಸಿದ್ದಾರೆ. ಆದರೆ ಕನ್ನಡಿಗರಿಗೆ ಆಗುವ ಸಮಸ್ಯೆ ಬಗ್ಗೆ ರಾಯಭಾರ ಕಚೇರಿಯೊಂದಿಗೆ ಸಂಪರ್ಕಿಸಲು ಅಧಿಕೃತ ಸಂಘಗಳಿಲ್ಲ. ಆದ್ದರಿಂದ ಮುಂದಿನ ದಿನಗಳಲ್ಲಿ ಎನ್‌ಆರ್‌ಐ ಫೋರಂನೊಂದಿಗೆ ವಿದೇಶದಲ್ಲಿರುವ ಕನ್ನಡ ಸಂಘದೊಂದಿಗೆ ಒಪ್ಪಂದ ಮಾಡಿಕೊಂಡು, ಅದರ ಮೂಲಕ ವಿದೇಶದಲ್ಲಿ ನೆಲೆಸಿರುವ ಕನ್ನಡಿಗರಿಗೆ ನೆರವಾಗುವ ಯೋಚನೆಯಿದೆ.

ಮೂಲ ಅನುಭವ ಮಂಟಪ ವಾಪಸ್ ಪಡೆಯಲು ಮನವಿ

ಸುದ್ದಿಗೋಷ್ಠಿಯಲ್ಲಿ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ, ಪಾಳಾದ ಗುರುಮೂರ್ತಿ ಶಿವಾಚಾರ್ಯರು, ಘನಲಿಂಗ ಶಿವಾಚಾರ್ಯರು, ಚಂದ್ರಶೇಖರ ಶಿವಾಚಾರ್ಯರು, ಅಭಿನವ ರುದ್ರಮುನಿ ಶಿವಾಚಾರ್ಯರು ಇದ್ದರು.

ಕಲಬುರಗಿ: ಮುಂಬರುವ ಡಿ.10ರಿಂದ ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ವತಿಯಿಂದ ರಾಜ್ಯದ 100ಕ್ಕೂ ಹೆಚ್ಚು ಮಠಾಧೀಶರ ನೇತೃತ್ವದಲ್ಲಿ ಅತಿಕ್ರಮಣ ಆಗಿರುವ ವಿಶ್ವದ ಮೊದಲ ಸಂಸತ್ತು, ಮೂಲ ಅನುಭವ ಮಂಟಪ ಮರಳಿ ಪಡೆಯಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿ ಸಂಬಂಧ ಪಟ್ಟ ಕೇಂದ್ರ ಸಚಿವರಿಗೆ ಒತ್ತಾಯ ಮಾಡಿ ಮನವಿ ಸಲ್ಲಿಸಲಾಗುವುದು ಎಂದು ಆಂದೋಲಾ ಕರುಣೇಶ್ವರ ಮಠದ ಪೀಠಾಧಿಪತಿ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಇಂದಿನ ಅಕ್ರಮ ಆಕ್ರಮಿತ ಪೀರ ಪಾಷಾ ಬಂಗ್ಲಾ ಅಂದಿನ ಬಸವಣ್ಣನವರ 12ನೇ ಶತಮಾನದ ಅನುಭವ ಮಂಟಪವಾಗಿದೆ. ಜಗತ್ತಿನ ಮೊದಲ ಸಂಸತ್ತು ಜಾತಿ, ಮತ, ಪಂತ ಮತ್ತು ಹೆಣ್ಣು ಗಂಡು ಎಂಬ ಭೇದ ಭಾವಗಳ್ಳೆಲ್ಲ ತೊಡೆದಿದ್ದ, 12ನೇ ಶತಮಾನದಲ್ಲಿ ಅಣ್ಣ ಬಸವಣ್ಣನವರು ಮತ್ತು 770 ಅಮರ ಗಣಂಗಳ ಕೂಡಿ ಪ್ರಾರಂಭ ಮಾಡಿದ ಕ್ಷೇತ್ರವೇ ಅನುಭವ ಮಂಟಪ ಈಗಿನ ಪೀರ ಪಾಷಾ ಬಂಗ್ಲಾ ಆಗಿ ಅತಿಕ್ರಮಣವಾಗಿದೆ ಎಂದು ದೂರಿದರು.

ಮೂಲ ಅನುಭವ ಮಂಟಪ ಸಮ ಸಮಾಜದ ದೇಗುಲ. ಪ್ರತಿಯೊಬ್ಬ ಭಾರತೀಯನ ಸ್ವತ್ತು. ಅದನ್ನು ಮರಳಿ ಪಡೆದು ವಿಶ್ವಗುರು ಬಸವಣ್ಣನವರ ಆದರ್ಶಗಳನ್ನೂ ಮತ್ತು ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯಲು ಮುಂದಿನ ಪೀಳಿಗೆಗಾಗಿ ಅದನ್ನು ಸಂರಕ್ಷಿಸಿ ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು. ಕೂಡಲೇ ಪ್ರಧಾನ ಮಂತ್ರಿಗಳು ಮಧ್ಯಸ್ಥಿಕೆ ವಹಿಸಿ, ಮೂಲ ಅನುಭವ ಮಂಟಪವನ್ನು ಪುನಃಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಲವ್ ಜಿಹಾದ್, ಲ್ಯಾಂಡ್ ಜಿಹಾದ್ ಆಯಿತು. ಮುಸ್ಲಿಂ ಮಹಿಳೆಯರಿಂದ ಇದೀಗ ಹಸುಗೂಸು ಚೋರಿ ಜಿಹಾದ್ ನಡೆಯುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಬರೀ ಹಿಂದು ಸಂಘಟನೆಗಳನ್ನು ತೆಗಳುವ ಕೆಲಸ ಮಾಡುತ್ತಿದ್ದರು. ಕಳೆದ ಒಂದು ವರ್ಷದಿಂದ ಜಿಲ್ಲೆಯ ಅಭಿವೃದ್ಧಿ ಸಂಬಂಧಿಸಿದಂತೆ ಕೆಡಿಪಿ ಸಭೆ ನಡೆಸಿಲ್ಲ. ಇವೆಲ್ಲದರ ಕುರಿತು ಸಚಿವರು ಯಾಕೆ ತುಟಿ ಬಿಚ್ಚುತ್ತಿಲ್ಲ ಎಂದು ಉತ್ತರಿಸಲಿ.

– **ಶ್ರೀ ಸಿದ್ದಲಿಂಗ ಮಹಾಸ್ವಾಮಿ** ಕರುಣೇಶ್ವರ ಮಠ ಆಂದೋಲಾ.

ಬಿಜೆಪಿ ದಂಗಲ್, ಬಿವೈವಿ ದಿಲ್ಲಿಗೆ

← ಮೊದಲಪುಟದಿಂದ

ಯತ್ನಾಳ್ ತಂಡದವರು ವೈಯಕ್ತಿಕ ದ್ವೇಷಕ್ಕಾಗಿ ಪಕ್ಷದ ರಾಜ್ಯಾಧ್ಯಕ್ಷರ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ. ಈ ನಡೆಯಿಂದ ರಾಜ್ಯದಲ್ಲಿ ಪಕ್ಷಕ್ಕೆ ತೀವ್ರ ಡ್ಯಾಮೇಜ್ ಆಗುತ್ತಿದೆ ಎಂದು ಹೇಳಿದ್ದಾರೆ. ಆದರೆ ವಕ್ಫ್ ವಿಷಯದಲ್ಲಿ ಯತ್ನಾಳ್ ತಂಡದ ವಿರುದ್ಧ ದೂರು ನೀಡಿದರೂ, ಇದನ್ನು ಗಂಭೀರವಾಗಿ ಪರಿಗಣಿಸುವ ಮನಸ್ಥಿತಿಯಲ್ಲಿ ಬಿಜೆಪಿ ಕೇಂದ್ರ ನಾಯಕರಿಲ್ಲ ಎಂದು ತಿಳಿದುಬಂದಿದೆ.

ಭೇಟಿಯ ಬಳಿಕ ಮೂರರಂದು ನಡೆಯಲಿರುವ ಕೋರ್ ಕಮಿಟಿ ಸಭೆಯಲ್ಲಿ ಈ ಎಲ್ಲ ವಿಷಯಗಳನ್ನು ಪ್ರಧಾನ ಕಾರ್ಯದರ್ಶಿಗಳ ಗಮನಕ್ಕೆ ತರುವಂತೆ ನಡ್ಡಾ ಅವರು ಸೂಚನೆ ನೀಡಿದ್ದಾರೆ. ಆದ್ದರಿಂದ ಜೆ.ಪಿ.ನಡ್ಡಾ ಅವರ ಭೇಟಿಯ ಬಳಿಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗುವ ಪ್ರಯತ್ನ ಮಾಡಿದ್ದಾರೆ. ಆದರೆ ಸಮಯ ನಿಗದಿಯಾಗದೇ ಇರುವುದರಿಂದ ಬೆಂಗಳೂರಿಗೆ ವಾಪಾಸಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಗ್ಯಾರಂಟಿ ಬಗ್ಗೆ ಬಿಜೆಪಿ ಸುಳ್ಳು ಹೇಳುತ್ತಿದೆ

ಕೊಪ್ಪಳ: ಕೆಪಿಸಿಸಿ ಅಧ್ಯಕ್ಷ ಬದಲಾವಣೆ ಕುರಿತು ಸಿಡಬ್ಲ್ಯೂಸಿಯಲ್ಲಿ ನಿರ್ಧರಿಸುತ್ತೆ ಸದ್ಯಕ್ಕೆ ಸಚಿವ ಸಂಪುಟ ಹಾಗೂ ಅಧ್ಯಕ್ಷರ ಬದಲಾವಣೆ ಇಲ್ಲ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ ರೇವಣ್ಣ ಹೇಳಿಕೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಗ್ಯಾರಂಟಿ ಯೋಜನೆಯಿಂದ ಸ್ವಲ್ಪಮಟ್ಟಿಗೆ ಅಭಿವೃದ್ಧಿಗೆ ಕುಂಠಿತವಾಗಿರಬಹುದು ಆದರೆ ಯಾವುದೇ ಅಭಿವೃದ್ಧಿ ಕಾರ್ಯ ನಿಲ್ಲಲ್ಲ, ಯಾವುದು ಕುಂಠಿತವಾಗುವುದಿಲ್ಲ ಅಲ್ಲದೆ ಗ್ಯಾರಂಟಿ ಹಣ ಅಭಿವೃದ್ಧಿಯಾಗಿ ಜಿಡಿಪಿ ಹೆಚ್ಚಳವಾಗಲಿದೆ ಎಂದು ಹೇಳಿದರು. ಗ್ಯಾರಂಟಿ ಯೋಜನೆಯಲ್ಲಿ ಸಣ್ಣಪುಟ್ಟ ಬದಲಾವಣೆಯ ಚರ್ಚೆ ನಡೆಯುತ್ತಿದೆ ಆದರೆ ಸದ್ಯಕ್ಕೆ ಯಾವುದೇ ಬದಲಾವಣೆ ಮಾಡುತ್ತಿಲ್ಲ. ಶಕ್ತಿ ಯೋಜನೆಗೆ, ಸಾರಿಗೆ ನಿಗಮಕ್ಕೆ ಪೂರ್ಣ ಹಣ ಬಿಡುಗಡೆ ಮಾಡಿದೆ, ಬಿಜೆಪಿ ಸುಳ್ಳು ಹೇಳುವುದರಲ್ಲಿ ನಿಸ್ಸೀಮರು ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, ಫ್ಯಾಕ್ಸ್: 080–22215602

ಸಂಖ್ಯೆ: ಯುಸಕ್ರೀಇ/ಯುನಿ/ಯುಶಕೇ/20/2024–25 ದಿನಾಂಕ: 30–11–2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ವಿವರ	ಟೆಂಡರಿಗಿಟ್ಟ ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಯುವ ಶಕ್ತಿ ಕೇಂದ್ರ ಕಾರ್ಯಕ್ರಮದಡಿ ಸರ್ಕಾರಿ ಕಾಲೇಜು ಇಲಾಖೆಯ ಜಿಲ್ಲಾ / ತಾಲ್ಲೂಕು ಕ್ರೀಡಾಂಗಣ, ಕ್ರೀಡಾ ವಸತಿ ಶಾಲೆ / ನಿಲಯ ಮತ್ತು ಪೊಲೀಸ್ ತರಬೇತಿ ಶಾಲೆಗಳಿಗೆ ಜಿಮ್ ಉಪಕರಣಗಳನ್ನು ಸರಬರಾಜು ಮಾಡುವ ಬಗ್ಗೆ.	120.00 ಲಕ್ಷಗಳು	2.00 ಲಕ್ಷಗಳು

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://kppp.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **16–12–2024 ರಂದು ಸಮಯ: 16.00 ಗಂಟೆವರೆಗೆ. 2)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **17–12–2024 ರಂದು ಸಮಯ: 16.30 ಗಂಟೆಗೆ. 3)** ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ: **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾಹಿತಿ ನೀಡಲಾಗುವುದು.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ವಾಸಾಸಂಇ/ವಾ.ಪ್ರ/3527/ಅಡ್ವಟೋರ್/2024–25

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001
ದೂ: 080–2558 6520/ 2558 9112 ಫ್ಯಾಕ್ಸ್: 080–2588 6321
ಇಮೇಲ್: ho@kspcb.gov.in ವೆಬ್‌ಸೈಟ್: www.kspcb.karnataka.gov.in
ಸಂಖ್ಯೆ: ಮಾನಿಮಂ/120/ಬಿಎಲ್‌ಡಿ/2022/2024–25/2875 ದಿನಾಂಕ: 09.10.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ – 1ನೇ ಕರೆ
(https://kppp.karnataka.gov.in ಕರ್ನಾಟಕ ಸರ್ಕಾರದ ಪ್ಲಾಟ್‌ಫಾರ್ಮ್ ಮುಖಾಂತರ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಪರವಾಗಿ **CEO-2,** ಇವರು ಅರ್ಹ ಟೆಂಡರುದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಕಾಮಗಾರಿಯ ಹೆಸರು: ರಾಯಚೂರಿನ ಪ್ರಾದೇಶಿಕ ಕಟ್ಟಡ/ ಪ್ರಯೋಗಾಲಯಕ್ಕೆ ವಿದ್ಯುತ್ ಸ್ಥಾವರಗಳ (1 ವರ್ಷ) ವಾರ್ಷಿಕ ನಿರ್ವಹಣೆ ಗುತ್ತಿಗೆಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ. ಕಾಮಗಾರಿಯ ಅಂದಾಜು ಮೊತ್ತ: **ರೂ. 6.62 ಲಕ್ಷಗಳು.** ಟೆಂಡರ್ ಮೊತ್ತ, ಇ.ಎಂ.ಡಿ ಇತ್ಯಾದಿಗಳನ್ನು ಇ–ಪಾವತಿ ಮೂಲಕ ಮಾತ್ರ ಮಾಡತಕ್ಕದ್ದು.
ಹೆಚ್ಚಿನ ಮಾಹಿತಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್:
https://kppp.karnataka.gov.in.ಗೆ ಭೇಟಿ ನೀಡುವುದು.
ಸಹಿ/–
ಡಿಐಪಿಆರ್/ಎಸ್‌ಐ/3508A/2024–25 **CEO-2**

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ; ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

HUBLI - DHARWAD MUNICIPAL CORPORATION
No.HDMC/TENDER/2024-25/1173 Date: 29.11.2024

E-Tender notification on Hubballi-Dharwad Municipal Corporation LED streetlight project. Advt No. Date: 29.11.2024

1) Hubballi-Dharwad Municipal Corporation invites the Request for Proposal (RFP) from eligible bidders through KPPP portal under Karnataka Public Procurement & Transperency Act 1999-2000 on public private partnership (PPP)mode.

Si. no	Indent No	Name of work	EMD Amount	Concession period
1	DMA/ 2024-25/SE4 020	Selection of concessionaire for implementation and maintenance of LED streetlight / lighting system and Centralized Control and Monitoring System through public private partnership (PPP) for Hubballi- Dharwad Municipal Corporation	93,57,000.00	7 years

(2) The bidders have to participate through online procurement only. The website for online bidding is **"https://kppp.karnataka.gov.in ". (3)** All the RFP and Draft concessionaire agreement (DCA) document can be seen and obtained from website **"https://kppp.karnataka.gov.in"** and Deprtment location Hubballi-Dharwad Municipal corporation. Bid documents can also be viewed by typing **DMA/2024-25/SE4020** in KPPP portal. **(4)** All the payments to be made through e portal only. **(5)** RFP document will be available for bidding on above website from date: 02-12-2024 16:00:00. **(6)** Last date for submission of RFP is: **07-01-2025 16:00:00. (7)** Technical proposal will be opened on : **08-01-2025 16:00:00. (8)** Pre bid meeting will be held on **11-12-2024 11:00:00** at meeting hall of Hubballi-Dharwad Municipal corporation Hubballi. **(9)** Other details regarding RFP can be seen in RFP document. **(10)** Any informtion on addendum/Corrigendum/calcellation of tender can be seen in the above said website. **(11)** For further details/queries please contact Executive Engineer(Electrical) during the office hours on **Mobile no. 9448783522/9742019288** information cn also be obtained from the website **https://kppp.karnataka.gov.in**

Sd/- Commissioner
Hubballi Dharwad Municiple Corporation
Hubballi
DIPR/Dwd/664/DeshpandePublicity/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ. ಮ.ಎ.ಕಾ. ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ–591116 ತಾಲೂಕು:ಸವದತ್ತಿ. ಜಿಲ್ಲಾ:ಬೆಳಗಾವಿ. ರಾಜ್ಯ:ಕರ್ನಾಟಕ
Dn. e-mail: eemlbcnth@gmail.com Ph: - 08330-224516
ಟೆಂಡರ ಪ್ರಕಟಣೆ ಸಂಖ್ಯೆ:MLBCC-2/DB/4701 SDT-YLIS/E-tender/24-25/2385 & 2386, ದಿನಾಂಕ:29–11–2024

ಅಲ್ಪಾವಧಿ ಟೆಂಡರ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ)
(ದ್ವಿ ಲಕೋಟೆ ಪದ್ಧತಿಯಲ್ಲಿ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಮ.ಎ.ಕಾ.ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ ಕಚೇರಿ ಅಡಿಯಲ್ಲಿ 4701 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬರುವ ಎರಡು ಕಾಮಗಾರಿಗಳಿಗೆ (as per KTPP act 2000) ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲೂ ಪಿ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ (ಇ–ಸಂಗ್ರಹಣಾ ಕೋಶದ ಮುಖಾಂತರ) ಶೇಕಡಾವಾರು ಟೆಂಡರನ್ನು ಆಹ್ವಾನಿಸಲಾಗಿದೆ
(Work Indent Numbers. 1987 & 1988)
ಕಾಮಗಾರಿಯ ಅಂದಾಜು ಮೊತ್ತ ರೂ. 495.00 ಲಕ್ಷಗಳು.
1.ಪ್ರಿ ಬಿಡ್ ಮೀಟಿಂಗ್ ದಿನಾಂಕ:04–12–2024 ರಂದು 11.00 ಘಂಟೆಗೆ
2. ಗುತ್ತಿಗೆದಾರರು ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ:10–12–2024 ರಂದು ಸಂಜೆ 4.00 ಘಂಟೆವರೆಗೆ.
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:11–12–2024 ರಂದು ಸಂಜೆ 4.30 ಘಂಟೆಯ ನಂತರ, 4. ಆರ್ಥಿಕ ಬಿಡ್ ತೆರೆಯುವ ದಿನಾಂಕ : 13–12–2024 ರಂದು ಬೆಳಿಗ್ಗೆ 11.00 ಘಂಟೆಯ ನಂತರ
ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ www.kppp.karnataka.gov.in ಸಂಪರ್ಕಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 08330 224516 ಕಚೇರಿ ವೇಳೆಯಲ್ಲಿ ಸಂಪರ್ಕಿಸುವದು.

ಸಹಿ/–(ಶ್ರೀ.ಪಿ.ವ್ಹಿ.ಮುಳ್ಳೂರ), ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ. ಮ.ಎ.ಕಾ.ನಿ.ವಿಭಾಗ.ನಂ.2 ನವಿಲುತೀರ್ಥ.
DIPR/BGM/RO-NO-1226/KSMCA/2024-25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಸಾಮಿತ್ವದಲ್ಲಿ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಮುಏನೀ ವಿಭಾಗ ನಂ–1, ಮಟ್ಟಿಹಾಳ, ತಾ: ಕೋಲ್ಹಾರ, ಜಿ: ವಿಜಯಪುರ. ದೂರವಾಣಿ ಸಂ: 08426–286126,
ಇ–ಮೇಲ್: kbjnleemli@gmail.com
ಸಂ:ಕೃಭಾಜನಿ(ನಿ)/ಮುಏನೀ/ವಿ–1ಮ/ಯೋ.ಶಾ/ಟೆಂಡರ್/2024–25/1016 ದಿನಾಂಕ:29.11.2024

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಅಧಿಸೂಚನೆ ಎರಡನೇ ಕರೆ
(ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಬೆಂಗಳೂರು, ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಶೇಕಡಾವಾರು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಗಿನ ಕಾಮಗಾರಿ ಇಂಡೆಂಟ್ ಸಂಖ್ಯೆ: 1145 ಟೆಂಡರ್ ಕರೆಯಲಾಗಿದ್ದು ಪರಿಶಿಷ್ಠ ಜಾತಿಯವರಿಗೆ ಮೀಸಲಿಡಲಾಗಿದೆ. ಟೆಂಡರಿಗಿಟ್ಟ ಮೊತ್ತ ರೂ. 63.71 ಲಕ್ಷಗಳು ಇರುತ್ತವೆ. ನಿಗದಿಪಡಿಸಿದ ಇ.ಎಮ್.ಡಿ ಮೊತ್ತ/ ಗುತ್ತಿಗೆದಾರರ ದರ್ಜೆ/ ಟೆಂಡರ್ ನಿಯಮ/ ಟೆಂಡರ್ ಪ್ರೊಸೆಸಿಂಗ ಶುಲ್ಕ, ಇತ್ಯಾದಿ ವಿವರಗಳನ್ನು https://kppp.karnataka. gov.in ಅಥವಾ ಕೆಳಗೆ ಸಹಿ ಮಾಡಿದವರನ್ನು ಕಛೇರಿಯ ಸಮಯದಲ್ಲಿ ದಿನಾಂಕ: 30.11.2024 ಸಮಯ ಸಾಯಂಕಾಲ 05.00 ಗಂಟೆವರೆಗೆ ಸಂಪರ್ಕಿಸಬಹುದು. ದೂರವಾಣಿ 08426–286126. ಸದರಿ ಟೆಂಡರುದಾರರು ದ್ವಿ–ಲಕೋಟೆ ಅಪಲೋಡ್ ಮಾಡುವುದು.
ಟೆಂಡರ್ ಅಧಿಸೂಚನೆಯ ಪ್ರಕಾರ ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ.
1.1 ಇ–ಟೆಂಡರ್ ದಸ್ತಾವೇಜುಗಳ ವಿವರಗಳು ಗುತ್ತಿಗೆದಾರರಿಗೆ ದೊರೆಯುವ ದಿನಾಂಕ ಹಾಗೂ ಪೂರ್ಣಗೊಳಿಸಿದ ಇ–ಟೆಂಡರ್ ದಾಖಲೆಗಳನ್ನು **ದಿನಾಂಕ: 30.11.2024 ರಿಂದ 09.12.2024** ರವರೆಗೆ ಸಮಯ **ಸಾಯಂಕಾಲ 5.00** ಘಂಟೆಯವರೆಗೆ ಸಲ್ಲಿಸುವುದು.
1.2 ಲಕೋಟೆ–1 (ತಾಂತ್ರಿಕ್ ಬಿಡ್) ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ, ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯುವುದು ದಿನಾಂಕ: **11.12.2024** ಸಮಯ ಬೆಳಿಗ್ಗೆ **11.00** ಗಂಟೆಗೆ ನಂತರ ತೆರೆಯಲಾಗುವುದು.
1.3 ಲಕೋಟೆ–2 (ಆರ್ಥಿಕ ಬಿಡ್)ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ, ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯುವುದು ದಿನಾಂಕ: **16.12.2024** ಸಮಯ ಬೆಳಿಗ್ಗೆ **11.00** ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಮುಏನೀ ವಿಭಾಗ ನಂ.1, ಮಟ್ಟಿಹಾಳ
ವಾಸಾಸಂಇ/ವಿಜಯಪುರ/465/ಕೆಎಸ್‌ಎಂಸಿಎ/2024–25

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.
ಸಂ: ಬಿಐಎಎಪಿಎ/ಟಿಪಿ/ಭೂಉನಿ/18/2024–25/2061 ದಿನಾಂಕ: 29.11.2024

ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)
ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ : ನಅಇ 157 ಬಿಎಂಆರ್ 2005 **ದಿನಾಂಕ : 27.01.2009** ಮತ್ತು ತಿದ್ದುಪಡಿ ಆದೇಶ **ದಿನಾಂಕ : 29.01.2009** ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡಂತೆ ವಸತಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಭೂ ಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1	ಶ್ರೀಮತಿ ಗೌರಮ್ಮ ಮದ್ದೂರಪ್ಪ ಕೋಂ ಲೇ॥ ಚಿಕ್ಕಪಾಪಣ್ಣ	ದೇವನಹಳ್ಳಿ	ಕಸಬಾ	ಗುಟ್ಟಹಳ್ಳಿ	25/1	2–00	ಸಾರ್ವಜನಿಕ / ಅರೆಸಾರ್ವಜನಿಕ	ವಸತಿ

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ
ವಾ.ಸಾ.ಸಂ.ಇ/ವಾಪ್ರ/3520/2024–25

ಕರ್ನಾಟಕ ಸರ್ಕಾರ – (ಕಾರಾಗೃಹ ಮತ್ತು ಸುಧಾರಣಾ ಸೇವೆಗಳು)
ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ ಮತ್ತು ಸುಧಾರಣಾ ಸೇವಾ ಕಛೇರಿ, ಶಿವಮೊಗ್ಗ.
ದೂರವಾಣಿ:08182–295502 / 9480806465. Email:- cpsmg.prisons@ka.gov.in
ಸಂಖ್ಯೆ:ಕೇಕಾಶಿ/ದರಖಾಸ್ತು/4911/2024–25 ದಿನಾಂಕ: 28.11.2024

ಪ್ರಕಟಣೆ – ಶಿವಮೊಗ್ಗ ಜೋನ್
ಈ ಕೆಳಕಂಡ ಟೆಂಡರ್ ಸಂಖ್ಯೆಗಳಲ್ಲಿ ಶಿವಮೊಗ್ಗ ಜೋನ್‌ನ ವ್ಯಾಪ್ತಿಯಲ್ಲಿ ಬರುವ ಕಾರಾಗೃಹಗಳಿಗೆ ಇ–ದರಖಾಸ್ತು ಕರೆಯಲಾಗಿರುತ್ತದೆ.

ಟೆಂಡರ್ ಸಂಖ್ಯೆಗಳು	ದರಖಾಸ್ತು ಕರೆದ ದಿನಾಂಕ	ದರಖಾಸ್ತು ಕೊನೆಯದಿನಾಂಕ	ದರಖಾಸ್ತು ವಿವರ	ದರಖಾಸ್ತು ಅಂದಾಜು ಮೊತ್ತ ರೂ.ಗಳಲ್ಲಿ	ಇ.ಎಂ.ಡಿ ಮೊತ್ತ ರೂ.ಗಳಲ್ಲಿ
PCSD/2024-25/IND0184	28.11.2024	16.12.2024	ಭಾಗ–1 ಆಹಾರ ಪದಾರ್ಥ	2,34,32,891-00	3,51,493-00
PCSD/2024-25/IND0185	28.11.2024	16.12.2024	ಭಾಗ–2 ಆಹಾರ ಪದಾರ್ಥ	3,28,65,114-00	4,92,977-00
PCSD/2024-25/IND0186	28.11.2024	16.12.2024	ಭಾಗ–3 ಹಣ್ಣು ಮತ್ತು ಸೊಪ್ಪಿನ ತರಕಾರಿ	1,05,85,583-00	2,00,000-00
PCSD/2024-25/IND0188	28.11.2024	16.12.2024	ಭಾಗ–4 ಮಾಂಸ ಮತ್ತು ಮೊಟ್ಟೆ	1,19,35,399-50	2,00,000-00
PCSD/2024-25/IND0189	28.11.2024	16.12.2024	ಭಾಗ–5 ಇತರೆ ವಸ್ತುಗಳು	76,88,000-00	1,53,760-00

ಸದರಿ ದರಖಾಸ್ತಿನಲ್ಲಿ ಭಾಗವಹಿಸಲು ದರಖಾಸ್ತಿನ ಕುರಿತ ಹೆಚ್ಚಿನ ಮಾಹಿತಿಯನ್ನು ಆನ್‌ಲೈನ್ https://kppp.karnataka.gov.in ನಲ್ಲಿ ಪಡೆಯಲು ತಿಳಿಸಿದೆ. ಹಾಗೂ ಸದರಿ ದರಖಾಸ್ತಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಕೆಳಕಂಡ ವಿಳಾಸದಲ್ಲಿ ಪಡೆಯಲು ಸೂಚಿಸಿದೆ. ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ ಮತ್ತು ಸುಧಾರಣಾ ಸೇವಾ ಕಛೇರಿ, ಸೋಗಾನೆ (ಗ್ರಾ), ನಿಧಿಗೆ ಅಂಚೆ,ಶಿವಮೊಗ್ಗ, ಪಿನ್ ಕೋಡ್: 577222 ದೂರವಾಣಿ ಸಂಖ್ಯೆ: 08182–295502 / 9480806465

ಸಹಿ/– ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/162/11/1137

ಟ್ವೀಟೂ-ಖಾರಾ

ಆರ್.ಅಶೋಕ, ಪ್ರತಿಪಕ್ಷ ನಾಯಕ

ಸಿದ್ದರಾಮಯ್ಯ ಅವರು ಹೆಸರಿಗೆ ಮಾತ್ರ ಅಹಿಂದ. ಕೇವಲ ಅಲ್ಪಸಂಖ್ಯಾತರನ್ನು ಹಿಡಿದುಕೊಂಡಿದ್ದಾರೆ. ಮುಡಾ ಪ್ರಕರಣದ ಕುರಿತು ಬೆದರಿಕೆ ತಂತ್ರ ಹೂಡಲು ಹಾಸನದಲ್ಲಿ ಸಮಾವೇಶ ಆಯೋಜಿಸಿದ್ದಾರೆ. ಒಕ್ಕಲಿಗ ಮಠದ ಸ್ವಾಮೀಜಿಗಳ ಮೇಲೆ ಎಫ್ಐಆರ್ ದಾಖಲಿಸಲಾಗಿದೆ, ಒಕ್ಕಲಿಗ ಸ್ವಾಮೀಜಿಗಳಿಗೆ ಕಿರುಕುಳ ನೀಡಲು ಸಿದ್ದರಾಮಯ್ಯ ಸರಕಾರ ವ್ಯವಸ್ಥಿತ ಸಂಚು ರೂಪಿಸುತ್ತಿದೆ.

ಜೆಎಸ್. ರಾಜಣ್ಣ

ವಿರೋಧ ಪಕ್ಷದ ನಾಯಕನ ಸ್ಥಾನದ ಘನತೆ ಗೌರವದ ಅರಿವು ಇಲ್ಲದೆ ಸಂವಿಧಾನ ಆಶಯದ ವಿರುದ್ಧ ಮಾತಾನಾಡಿದ ವ್ಯಕ್ತಿಯನ್ನು ಜಾತಿ ಆಧಾರದ ಮೇಲೆ ಸಮರ್ಥಿಸಿಕೊಳ್ಳುವುದು ಸಂವಿಧಾನಕ್ಕೆ ಮಾಡಿದ ಅಪಚಾರ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- ಸ್ಥಳ : ಚಿಕ್ಕಬಳ್ಳಾಪುರ

ಸಮಸ್ಯೆಯೇನು..?

- ಚಿಕ್ಕಬಳ್ಳಾಪುರ ಜಿಲ್ಲೆಯ ಯಂಡಹಳ್ಳಿ ಗ್ರಾಮದಲ್ಲಿ ಚರಂಡಿ ಸ್ವಚ್ಛತೆ ಇಲ್ಲದಿರುವುದು.
- **ಪರಿಹಾರ:** ಚಿಕ್ಕಬಳ್ಳಾಪುರ ಜಿಲ್ಲೆಯ ಯಂಡಹಳ್ಳಿ ಗ್ರಾಮದಲ್ಲಿ ಅಕಾಲಿಕ ಮಳೆಯಿಂದ ಚರಂಡಿಯಲ್ಲಿ ಹೂಳು ತುಂಬಿಕೊಂಡಿರುವುದನ್ನು ಸ್ವಚ್ಛತೆಗೊಳಿಸಿದ್ದು, ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಮತ ಸೆಳೆಯುವವರಿಗೆ ಅವಕಾಶ ನೀಡಲಿ

ಬೆಳಗಾವಿ: ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಹೈಕಮಾಂಡ್ ನಿರ್ಧರಿಸುತ್ತದೆ. ಪಕ್ಷಕ್ಕೆ ಪೂರ್ಣ ಪ್ರಮಾಣದ ರಾಜ್ಯಾಧ್ಯಕ್ಷರು ಬೇಕೆ ಬೇಕು. ಮತ ಸೆಳೆಯುವವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರೆ ಮಾತ್ರ 2028ರಲ್ಲೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಸಾಧ್ಯವಿದೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಕುರಿತು ಹೈಕಮಾಂಡ್ ನಿರ್ಧಾರಿಸುತ್ತದೆ. ದೆಹಲಿಗೆ ಹೋಗಿ ಬಂದ ಮೇಲೆ ಈ ಬಗ್ಗೆ ಸುಳಿವು ಸಿಗಬಹುದು. ಅಧಿವೇಶನ ನಂತರ ದೆಹಲಿ ಹೋಗಿ ಬರುತ್ತೇನೆ ಎಂದು ತಿಳಿಸಿದರು. ಕೆಪಿಸಿಸಿ ಅಧ್ಯಕ್ಷ ಹುದ್ದೆ ಸಣ್ಣ ಹುದ್ದೆಯಲ್ಲ, ಹೀಗಾಗಿ ಹೈಕಮಾಂಡ್ ಸೂಚನೆ ಬಂದ ಮೇಲೆ ಚರ್ಚೆ ಮಾಡಬೇಕಾಗುತ್ತೆ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಆಗಬೇಕಾದರೆ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ.ಶಿವಕುಮಾರ್ ಇದರ ಬಗ್ಗೆ ಚರ್ಚಿಸಬೇಕು. ನಂತರ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ಹೇಳಿದರು.

ಸ್ವಾಭಿಮಾನ ಸಮಾವೇಶಕ್ಕೆ ಅಪಸ್ವರವಿಲ್ಲ: ಪರಂ

ಮಂಗಳೂರು: ಕೆಪಿಸಿಸಿ ಅಧ್ಯಕ್ಷರ ಹುದ್ದೆ, ಸಂಪುಟ ಪುನಾರಚನೆಯನ್ನು ಹೈಕಮಾಂಡ್ ನವರೇ ನಿರ್ಧಾರ ಮಾಡುತ್ತಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾಸನದ ಸ್ವಾಭಿಮಾನ ಸಮಾವೇಶಕ್ಕೆ ನಮ್ಮಲ್ಲಿ ಅಪಸ್ವರವಿಲ್ಲ, ಬಿಜೆಪಿಯವರೇ ಅನಾಮಧೇಯ ಪತ್ರ ಬರೆದಿರಬಹುದು. ನಾನು ತುಮಕೂರಿನಲ್ಲೇ ಸಮಾವೇಶ ಮಾಡಬೇಕೆಂದುಕೊಂಡಿದ್ದೆ. ನನಗೆ ಬೇರೆ ಜವಾಬ್ದಾರಿ ನೀಡಿದ್ದಾರೆ ಎಂದರು. ಡ್ರಗ್ ವಿರುದ್ಧ ಯುದ್ಧವನ್ನೆ ಸಾರಿದ್ದೇವೆ. ಕಳೆದ ಒಂದು ವರ್ಷದಲ್ಲಿ 250 ಕೋಟಿ.ರು.ಮೌಲ್ಯದ ಡ್ರಗ್ಸ್ ವಶ ಪಡಿಸಿ ನಾಶ ಮಾಡಲಾಗಿದೆ. ಕೆಲವು ಪೆಡ್ಲರ್ಸ್ ಮೇಲೆ ಗೂಂಡಾ ಕಾಯಿದೆ ಹಾಕಲಾಗಿದೆ. ನಕ್ಸಲ್ ವಿಕ್ರಂ ಗೌಡ ಎನ್ ಕೌಂಟರ್ ಬಳಿಕ ನಕ್ಸಲರ ಶರಣಾಗತಿಗೆ ಕರೆ ನೀಡಿದ್ದೇವೆ. ಶರಣಾಗತಿಯಾದರೆ ಒಳ್ಳೆಯದು ಎಂದು ಗೃಹ ಸಚಿವರು ಹೇಳಿದರು.

{ ಎಚ್.ಸಿ. ಬಾಲಕೃಷ್ಣ } ಶಾಸಕ

ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರ ಬಳಿಕ ಡಿ.ಕೆ. ಶಿವಕುಮಾರ್ ಬರುತ್ತಾರೆ. ಅವರ ಕೋಟಾ ಮುಗಿದ ನಂತರ ಸತೀಶ್ ಜಾರಕಿಹೊಳಿ, ಎಂ.ಬಿ. ಪಾಟೀಲ ಸರದಿ. ಅವರ ಬಳಿಕ ಮತ್ತೊಬ್ಬರಿಗೆ ಅವಕಾಶ. ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಎಲ್ಲಾ ಜಾತಿಯ ನಾಯಕರಿಗೆ ಮುಖ್ಯಮಂತ್ರಿಯಾಗುವ ಅವಕಾಶ ಸಿಗುತ್ತದೆ.

ಡಿ.9 ರಿಂದ 19 ರವರೆಗೆ ಅಧಿವೇಶನ | ಜಿಲ್ಲಾಡಳಿತದಿಂದ ಸಕಲ ಸಿದ್ಧತೆ | ಪೊಲೀಸ್ ಸಿಬ್ಬಂದಿಗೆ ಟೆಂಟ್ ವ್ಯವಸ್ಥೆ

ಬೆಳಗಾವಿ ಅಧಿವೇಶನಕ್ಕೆ ಚಳಿಗಾಲ ಕಾಟ

ವಿನಾಯಕ ಮಠಪತಿ ಬೆಳಗಾವಿ

ಡಿಸೆಂಬರ್ 9 ರಿಂದ 19 ರವರೆಗೆ ಬೆಳಗಾವಿ ಸುವರ್ಣಸೌಧದಲ್ಲಿ ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆಯಲಿದ್ದು ಜಿಲ್ಲಾಡಳಿತದಿಂದ ಸಕಲ ತಯಾರಿ ನಡೆಯುತ್ತಿದೆ. ಆದರೆ ಈ ಬಾರಿಯ ಅಧಿವೇಶಕ್ಕೆ ಚಳಿ ಕಾಟ ತಾಗಲಿದ್ದು, ಈಗಲೇ ಜನಸಾಮಾನ್ಯರು ಚಳಿ ಅಬ್ಬರಕ್ಕೆ ಸಿಲುಕಿ ಪರಿತಪಿಸುತ್ತಿದ್ದಾರೆ.

ಹವಾಮಾನ ಇಲಾಖೆ ಮಾಹಿತಿ ಪ್ರಕಾರ ಬೆಳಗಾವಿಯಲ್ಲಿ ಡಿ.29 ರಂದು ''ಕನಿಷ್ಠ 12.8 ಡಿಗ್ರಿ ಸೆಲ್ಸಿಯಸ್'' ತಾಪಮಾನ ದಾಖಲಾಗಿದ್ದು ಚಳಿ ಆರ್ಭಟ ಜೋರಾಗಿದೆ. ಅಧಿವೇಶನಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಜನಪ್ರತಿನಿಧಿಗಳು ಸೇರಿದಂತೆ ಅಧಿಕಾರಿವರ್ಗ ಬೆಳಗಾವಿಗೆ ಆಗಮಿಸುವ ಹಿನ್ನೆಲೆಯಲ್ಲಿ ಚಳಿಯ ಹೊಡೆತಕ್ಕೆ ಸಿಲುಕುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಈಗಾಗಲೇ ಅಧಿವೇಶನದ ಕರ್ತವ್ಯಕ್ಕೆ ಆಗಮಿಸುವ ಸಿಬ್ಬಂದಿಗೆ ಯಾವುದೇ ತೊಂದರೆ ಆಗದಂತೆ ಜಿಲ್ಲಾಡಳಿತ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ.

ಉತ್ತರ ಕರ್ನಾಟಕ ಭಾಗದ ರೈತರು ನೀರಾವರಿ, ಕಬ್ಬಿಗೆ ಬೆಂಬಲ ಬೆಲೆ ಹೆಚ್ಚಿಸುವಂತಹ ಜ್ವಲಂತ ಸಮಸ್ಯೆ ಎದುರಿಸುತ್ತಿದ್ದು ಸಿದ್ದರಾಮಯ್ಯ ಸರಕಾರದಲ್ಲಿ ಪರಿಹಾರ ಸಿಗುವ ನಿರೀಕ್ಷೆಯಲ್ಲಿದ್ದಾರೆ. ಈ ಬಾರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ನಾನಾ ಭಾಗಗಳಿಂದ ಪ್ರತಿಭಟನಾಕಾರರು ಸುವರ್ಣಸೌಧ ಆಗಮಿಸುತ್ತಿದ್ದು, ಸರಕಾರ ಜನರ ಸಮಸ್ಯೆ ಪರಿಹರಿಸಬೇಕಾದ ಒತ್ತಡದಲ್ಲಿದೆ. ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ, ಮಹದಾಯಿ ಯೋಜನೆ ಅನುಷ್ಠಾನ ಸೇರಿದಂತೆ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸುವುದಾಗಿ ಹೇಳಿವೆ.

ಚಳಿ ರಕ್ಷಣೆಗೆ ಉಲನ್ ಹೊದಿಕೆ ಜೊತೆಗಿರಲಿ: ತೀವ್ರ ಚಳಿ ಹಿನ್ನೆಲೆಯಲ್ಲಿ ಅಧಿವೇಶನಕ್ಕೆ ಬರುವ ಸಿಬ್ಬಂದಿಗಳು ಜೊತೆಗೊಂದು ಉಲನ್ ಹೊದಿಕೆ ಇಟ್ಟುಕೊಳ್ಳುವುದು ಒಳಿತು. ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ಬಾರಿ ಚಳಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಇದರಿಂದ ರಕ್ಷಣೆ ಪಡೆಯಲು ಉಲನ್ ಹೊದಿಕೆ ಸೇರಿದಂತೆ ಕೆಲ ವಸ್ತುಗಳನ್ನು ತರಬೇಕಾಗಿದೆ. ಭದ್ರತೆಗೆ ನಿಯೋಜನೆಗೊಂಡಿರುವ ಸಿಬ್ಬಂದಿಗಳಿಗೆ ಊಟ, ವಸತಿ ಸೌಕರ್ಯಕ್ಕಾಗಿ ಟೆಂಟ್ ಸಿಟಿ ನಿರ್ಮಿಸಲಾಗುತ್ತಿದೆ. ಒಂದು ವೇಳೆ ತರದೇ ಇದ್ದ ಸಿಬ್ಬಂದಿಗೆ ಪೊಲೀಸ್ ಇಲಾಖೆ ಉಲನ್ ಹೊದಿಕೆ ನೀಡುವ ಭರವಸೆ ನೀಡಿದೆ.

ಹಗಲು, ರಾತ್ರಿ ಎನ್ನದೆ ನಿರಂತರವಾಗಿ ಭದ್ರತೆಯಲ್ಲಿ ತೊಡಗುವ ಪೊಲೀಸ್ ಸಿಬ್ಬಂದಿಗೆ ಉಳಿದುಕೊಳ್ಳಲು ಟೆಂಟ್ ವ್ಯವಸ್ಥೆ ಮಾಲಾಗುತ್ತಿದೆ. ಚಳಿ ಹಿನ್ನೆಲೆಯಲ್ಲಿ ಯಾರಿಗೂ ತೊಂದರೆ ಆಗದಂತೆ ಜಿಲ್ಲಾಡಳಿತ ಕ್ರಮ ಕೈಗೊಳ್ಳುತ್ತಿದ್ದು ಸಿಬ್ಬಂದಿಗಳ ಆರೋಗ್ಯದ ಹಿತದೃಷ್ಟಿಯಿಂದ ಆರೋಗ್ಯ ಇಲಾಖೆಯು ಅಗತ್ಯ ಸಿಬ್ಬಂದಿಗಳನ್ನು ಬಳಸಿಕೊಳ್ಳುತ್ತಿದೆ.



ಬೆಳಗಾವಿ ಚಳಿಗಾಲ ಅಧಿವೇಶನ ಹಿನ್ನಲೆಯಲ್ಲಿ ನಗರದ ಚನ್ನಮ್ಮ ವೃತ್ತದ ಪಕ್ಕದಲ್ಲಿರುವ ಗೋಡೆಯ ಮೇಲೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಚಿತ್ರ ಬಿಡಿಸುತ್ತಿರುವ ಕಾರ್ಮಿಕರು.

ಪುಂಡಾಟಿಕೆ ಮೆರೆಯಲು ಎಂಇಎಸ್ ತಯಾರಿ

ಪ್ರತಿ ಬಾರಿಯೂ ಅಧಿವೇಶನ ಸಂದರ್ಭದಲ್ಲಿ ''ಮಹಾಮೇಳಾವ್'' ಹೆಸರಿನಲ್ಲಿ ಎಂಇಎಸ್ (ಮಹಾರಾಷ್ಟ್ರ ಏಕೀಕರಣ ಸಮಿತಿ) ಮುಖಂಡರು ಗಡಿಯಲ್ಲಿ ಪುಂಡಾಟ ಮೆರೆಯುವುದು ಸರ್ವೇ ಸಾಮಾನ್ಯ. ಕಳೆದ ಎರಡು ವರ್ಷದಿಂದ ಎಂಇಎಸ್ ಮಹಾಮೇಳಾವ್‌ಗೆ ಜಿಲ್ಲಾಡಳಿತ ಅವಕಾಶ ನಿರಾಕರಣೆ ಮಾಡಿದ್ದರು, ಇವರ ಪುಂಡಾಟಿಕೆ ನಿಂತಿಲ್ಲ. ಈ ಬಾರಿಯೂ ಮಹಾ ಮೇಳಾವ್ ನಡೆಸಲು ಅವಕಾಶ ನೀಡುವಂತೆ ಎಂಇಎಸ್ ಮುಖಂಡರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಒಂದುವೇಳೆ ಮೇಳಾವ್ ಗೆ ಅವಕಾಶ ನೀಡಿದರೆ ಕರವೇ ವತಿಯಿಂದ ಎಂಇಎಸ್ ನಿಷೇಧಿಸುವಂತೆ ಉಗ್ರ ಹೋರಾಟದ ಎಚ್ಚರಿಕೆ ನೀಡಿದೆ.

ಗಡಿ ಭಾಗದಲ್ಲಿ ಅನವಶ್ಯಕವಾಗಿ ಸಾರ್ವಜನಿಕರ ಮಧ್ಯೆ ಭಾಷಾ ವೈಷಮ್ಯ ಮೂಡಿಸಿ ಶಾಂತಿ ಕದಡುವ ಎಂಇಎಸ್ ನಾಯಕರನ್ನು ಗಲಭೆಕೋರರೆಂದು ಪರಿಗಣಿಸಿ ಅವರನ್ನು ಗಡಿಪಾರು ಮಾಡುವಂತೆ ಆಗ್ರಹಿಸುತ್ತೇವೆ.
ದೀಪಕ್ ಗುಡಗನಟ್ಟಿ, ಕರವೇ ಜಿಲ್ಲಾಧ್ಯಕ್ಷ

ಅಧಿವೇಶನ ಬಂದೋಬಸ್ತ್ ಗೆ 8 ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸೇರಿದಂತೆ 6 ಸಾವಿರ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿದೆ ಭದ್ರತೆಗೆ ನಿಯೋಜನೆಗೊಂಡಿರುವ ಸಿಬ್ಬಂದಿಗಳಿಗೆ ಊಟ, ವಸತಿ ಸೌಕರ್ಯಕ್ಕಾಗಿ ಟೆಂಟ್ ಸಿಟಿ ನಿರ್ಮಿಸಲಾಗುತ್ತಿದೆ.
-ಆರ್. ಹಿತೇಂದ್ರ, ಎಡಿಜಿಪಿ

ಭದ್ರತೆಗೆ 6 ಸಾವಿರ ಪೊಲೀಸ್ ಸಿಬ್ಬಂದಿ

ಅಧಿವೇಶನ ಹಿನ್ನೆಲೆಯಲ್ಲಿ ಬೆಳಗಾವಿ ಸುವರ್ಣಸೌಧ ಪಕ್ಕದಲ್ಲಿ ನಿರ್ಮಾಣವಾಗುತ್ತಿರುವ ಟೆಂಟ್ ವೀಕ್ಷಿಸಿದ ಎಡಿಜಿಪಿ ಆರ್. ಹಿತೇಂದ್ರ.

ಕಳೆದ ಒಂದು ತಿಂಗಳಿನಿಂದ ಬೆಳಗಾವಿ ನಗರ ವ್ಯಾಪ್ತಿಯಲ್ಲಿ ಎಗ್ಗಿಲ್ಲದೆ ಅಪರಾಧ ಕೃತ್ಯಗಳು ನಡೆಯುತ್ತಿದ್ದು ಕಾನೂನು ಸುವ್ಯವಸ್ಥೆ ವೈಫಲ್ಯಕ್ಕೆ ಅಧಿಕಾರಿಗಳ ಮೇಲೆ ಜನರ ಅಸಮಾಧಾನ ಹೆಚ್ಚಿದೆ. ಇಂತಹ ಸಂದರ್ಭದಲ್ಲಿ ಅಧಿವೇಶನ ನಡೆಯುತ್ತಿದ್ದು ಭದ್ರತೆ ಹಿನ್ನೆಲೆಯಲ್ಲಿ ಸುಮಾರು 6 ಸಾವಿರ ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗುತ್ತಿದೆ. ಬೆಳಗಾವಿ ಸೇರಿದಂತೆ ಎಂಟು ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಅಧಿವೇಶನ ಭದ್ರತೆಗೆ ನಿಯೋಜನೆ ಮಾಡಲಾಗುತ್ತಿದೆ. ಅನೇಕ ಸಮಸ್ಯೆ ಹೊತ್ತು ಪ್ರತಿಭಟನೆಗಳು ನಡೆಯುವ ಸಾಧ್ಯತೆ ಇದ್ದು ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟುನಿಟ್ಟಿನ ಬಂದೋಬಸ್ತ್ ಏರ್ಪಾಡು ಮಾಡಲಾಗುತ್ತಿದೆ. ನಗರದ ಪ್ರದೇಶದ ವಿವಿಧ ಭಾಗಗಳಲ್ಲಿ ಭದ್ರತೆಗೆಂದು ಸಿಸಿಟಿವಿ ಅಳವಡಿಕೆ ಕಾರ್ಯ ನಡೆಸಲಾಗುತ್ತಿದೆ ಎಂದು ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ವಿಶ್ವವಾಣಿಗೆ ಮಾಹಿತಿ ನೀಡಿದರು.

ಆರ್‌ಎಲ್‌ಎಸ್ ಐವಿ ಗ್ಲುಕೋಸ್ ಹತ್ತಾರು ಬಾಕ್ಸ್‌ಗಳು ಪತ್ತೆ

ಬಾಣಂತಿಯರ ಸಾವು: ಔಷಧ ಉಗ್ರಾಣದ ಮೇಲೆ ದಾಳಿ

ಬೆಳಗಾವಿ: ಬಳ್ಳಾರಿಯಲ್ಲಿ ಬಾಣಂತಿಯರ ಸಾವಿಗೆ ಆರ್.ಎಲ್.ಎಸ್ ಗ್ಲುಕೋಸ್ ಕಾರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿ ಜಿಲ್ಲಾ ಔಷಧ ಉಗ್ರಾಣದಲ್ಲಿ ಆರ್.ಎಲ್.ಎಸ್ ಐವಿ ಗ್ಲುಕೋಸ್ ಪತ್ತೆಯಾಗಿದ್ದು, ಬಿಮ್ಸ್ ಆಸ್ಪತ್ರೆ ಆವರಣದಲ್ಲಿರೋ ಔಷಧೀಯ ಉಗ್ರಾಣದ ಮೇಲೆ ಶನಿವಾರ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಲೋಕಾಯುಕ್ತ ದಾಳಿ ವೇಳೆ ಆರ್.ಎಲ್.ಎಸ್ ಐವಿ ಗ್ಲುಕೋಸ್ ಹತ್ತಾರು ಬಾಕ್ಸ್ ಗಳು ಪತ್ತೆಯಾಗಿವೆ. ಬೆಳಗಾವಿ ಲೋಕಾಯುಕ್ತ ಎಸ್ಪಿ ಹನುಮಂತರಾಯ ನೇತೃತ್ವದಲ್ಲಿ 8 ಜನ ಅಧಿಕಾರಿಗಳಿಂದ ಉಗ್ರಾಣದಲ್ಲಿ ಪರಿಶೀಲನೆ ನಡೆಸಿದ್ದಾರೆ.

ಪಿ.ಬಿ.ಪಿ ಸಂಸ್ಥೆ ಸರಬರಾಜು ಮಾಡಿರುವ ಐವಿ ಗ್ಲುಕೋಸ್ ಬಾಕ್ಸ್‌ಗಳು ಪತ್ತೆಯಾದ ಹಿನ್ನೆಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶೇಖರಿಸಿ ಇಟ್ಟಿದ್ದ ಬಾಕ್ಸ್ ಕಂಡು ಶಾಕ್ ಆದ ಲೋಕಾಯುಕ್ತ ಅಧಿಕಾರಿಗಳು. ಏಪ್ರಿಲ್ ತಿಂಗಳಿಂದಲೇ ಬೆಳಗಾವಿ ಜಿಲ್ಲೆಯಾದ್ಯಂತ ಸಪ್ಲೈ ಆಗಿರುವ ಆರ್.ಎಲ್.ಎಸ್ ಐವಿ ಗ್ಲುಕೋಸ್. ಉಗ್ರಾಣದ ಅಧಿಕಾರಿಗಳಿಂದ ಎಲ್ಲೆಲ್ಲಿ ಆರ್.ಎಲ್.ಎಸ್ ಐವಿ ಗ್ಲುಕೋಸ್ ಪೂರೈಕೆ ಆಗಿರೋ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ಈ ವೇಳೆ ಜಿಲ್ಲಾಸ್ಪತ್ರೆ, ತಾಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪೂರೈಕೆ ಮಾಡಿರುವ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬಿಮ್ಸ್ ಆಸ್ಪತ್ರೆ ಆವರಣದಲ್ಲಿರೋ ಔಷಧೀಯ ಉಗ್ರಾಣದ ಮೇಲೆ ಶನಿವಾರ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದರು.

ವಕ್ಫ್ ಭೂ ಕಬಳಿಕೆ ವಿರೋಧಿಸಿ ಇಂದು ಯತ್ನಾಳ್ ಬಣ ಜನಜಾಗೃತಿ

ಬೆಳಗಾವಿ: ವಕ್ಫ್ ಭೂ ಕಬಳಿಕೆ ವಿರೋಧಿಸಿ ಬಿಜೆಪಿ ಪಕ್ಷ ರಾಜ್ಯಾದ್ಯಂತ ಹೋರಾಟ ನಡೆಸಿದ್ದು ಡಿ.1 ರಂದು ಬೆಳಗಾವಿಯಲ್ಲಿ ಬೃಹತ್ ಜನಜಾಗೃತಿ ಹೋರಾಟ ನಡೆಯಲಿದ್ದು ಈ ಹೋರಾಟದಲ್ಲಿ ರಾಜ್ಯದ ಬಿಜೆಪಿ ನಾಯಕರು ಭಾಗವಹಿಸಲಿದ್ದಾರೆ ಎಂದು ಮಾಜಿ ಸಚಿವ ಮಾಜಿ ಸಚಿವ ರಮೇಶ್ ಜಾರಕಿಹೊಳಿ ತಿಳಿಸಿದರು.

ಈ ಕುರಿತು ಬೆಳಗಾವಿಯ ಹೋಟೆಲ್ ಒಂದರಲ್ಲಿ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ಬೆಳಗಾವಿಯಲ್ಲಿ ನಡೆಯಲಿರುವ ಹೋರಾಟದಲ್ಲಿ ಮುತವರ್ಜಿ ವಹಿಸಿ ಜವಾಬ್ದಾರಿ ನಿಭಾಯಿಸುವಂತೆ ಮನವಿ ಮಾಡಿಕೊಂಡರು. ಬಸನಗೌಡ ಪಾಟೀಲ ಯತ್ನಾಳ,ಪ್ರತಾಪ ಸಿಂಹ, ಸಿಎಂ ಸಿದ್ದೇಶ್, ಅರವಿಂದ್ ಲಿಂಬಾವಳಿ, ಕುಮಾರ್ ಬಂಗಾರಪ್ಪ,ಬಿಪಿ ಹರೀಶ್ ,ಎನ್.ಆರ್. ಸಂತೋಷ ಸೇರಿದಂತೆ ರಾಜ್ಯದ ಪ್ರಮುಖ ಬಿಜೆಪಿ ನಾಯಕರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ಡಿ.1 ರಂದು ಬೆಳಗಾವಿಯ ಸರ್ದಾರ್ ಮೈದಾನದಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಿ,ಪಕ್ಕದ ಗಾಂಧಿಭವನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾವೇಶಗೊಳ್ಳಬೇಕು, ಬೆಳಗಾವಿ ಜಿಲ್ಲೆಯ ಎಲ್ಲ ತಾಲೂಕುಗಳಿಂದ ಜನ ಸೇರುವಂತೆ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕು. ಸಾವಿರಾರು ಸಂಖ್ಯೆಯಲ್ಲಿ ಸೇರುವ ಮೂಲಕ ಬೆಳಗಾವಿಯ ಹೋರಾಟ ಯಶಸ್ವಿಗೊಳಿಸಬೇಕು ಎಂದು ರಮೇಶ್ ಜಾರಕಿಹೊಳಿ ಪೂರ್ವಭಾವಿ ಸಭೆಯಲ್ಲಿ ಮನವಿ ಮಾಡಿಕೊಂಡರು.

ಬೆಳಗಾವಿಯ ಗಾಂಧಿ ಭವನದಲ್ಲಿ ಬೆಳಗ್ಗೆ 11-00 ಗಂಟೆಯಿಂದ ಸಂಜೆ ,5 ಗಂಟೆಯವರೆಗೆ ವಕ್ಫ್ ಭೂ ಕಬಳಿಕೆ ವಿರೋಧಿಸಿ ಕಾರ್ಯಕ್ರಮ ನಡೆಯಲಿದೆ ಎಂದು ರಮೇಶ್ ಜಾರಕಿಹೊಳಿ ಮಾಹಿತಿ ನೀಡಿದರು.

ಬಿಜೆಪಿಯಲ್ಲಿ ಹುಚ್ಚರ ಸಂತೆ ಪ್ರಾರಂಭವಾಗಿದೆ: ಪ್ರಿಯಾಂಕ್ ಖರ್ಗೆ

ಬಿಜೆಪಿಗರು ಡಿಎನ್‌ಎ ಟೆಸ್ಟ್ ಮಾಡಿಸಿಕೊಳ್ಳಲಿ

ಕಲಬುರಗಿ: ಸದ್ಯಕ್ಕೆ ರಾಜ್ಯದಲ್ಲಿ ಯಾವುದೇ ಸಚಿವ ಸಂಪುಟದ ಪುನಾರಚನೆ ನಡೆಯುವುದಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಅವರು ದೆಹಲಿಗೆ ಹೋಗಿದ್ದು ನಿಜ. ಆದರೆ, ಸಚಿವ ಸಂಪುಟ ಬದಲಾವಣೆ ವಿಚಾರವಾಗಿ ಅವರು ದೆಹಲಿಗೆ ಹೋಗಿಲ್ಲ. ಬದಲಾಗಿ, ನೂತನ ಸಂಸದರಾಗಿ ಆಯ್ಕೆಯಾಗಿರುವ ಪ್ರಿಯಾಂಕಾ ಗಾಂಧಿ ಹಾಗೂ ಜಾರ್ಖಂಡ್ ಮುಖ್ಯಮಂತ್ರಿಗಳನ್ನು ಅಭಿನಂದಿಸಲು ಹೋಗಿದ್ದಾರೆ. ಈ ವೇಳೆ ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡುವುದು ಸಹಜ ಎಂದು ಹೇಳಿದರು.

ದಿನ ಬೆಳಗಾದರೆ ಬಿಜೆಪಿಯ ನಾಯಕರು ಒಬ್ಬರಿಗೊಬ್ಬರು ಬೈದಾಡಿಕೊಂಡು ಸುತ್ತುತ್ತಿದ್ದಾರೆ, ಹಾಗಾಗಿ ಈ ಬಿಜೆಪಿಯಲ್ಲಿ ಹುಚ್ಚರ ಸಂತೆ ಪ್ರಾರಂಭವಾಗಿದೆ. ದಿನನಿತ್ಯವೂ ಯಡಿಯೂರಪ್ಪ, ವಿಜಯೇಂದ್ರ ವಿರುದ್ಧ ಬಸನಗೌಡ ಪಾಟೀಲ್ ಯತ್ನಾಳ್ ಮಾತಾಡಿದ್ದರೆ, ಈಗೀಗ ಯತ್ನಾಳ್ ವಿರುದ್ಧ ವಿಜಯೇಂದ್ರ, ರವಿಕುಮಾರ್, ಆರ್. ಅಶೋಕ್, ಬಿ.ಸಿ.ಪಾಟೀಲ್, ಸದಾನಂದಗೌಡ, ಮುನಿರತ್ನ, ರೇಣುಕಾಚಾರ್ಯ ಸೇರಿದಂತೆ ಹಲವರು ನಾಯಕರು ಬೈದಾಡಿಕೊಂಡು ಓಡಾಡುತ್ತಿದ್ದಾರೆ. ಬೇರೆಯವರ ಬಗ್ಗೆ ಮಾತನಾಡುವ ಬಿಜೆಪಿಗರು ತಮ್ಮ ವಂಶವಾಹಿನಿ ಬಗ್ಗೆ ಡಿಎನ್‌ಎ ಟೆಸ್ಟ್ ಮಾಡಿಸಲಿ, ಬೇಕಾದ್ರೆ ನಾನೇ ಉಚಿತವಾಗಿ ಪರೀಕ್ಷೆ ಮಾಡಿಸುತ್ತೇನೆ ಎಂದು ಪ್ರಿಯಾಂಕ್ ಖರ್ಗೆ ವ್ಯಂಗ್ಯವಾಡಿದರು.

ಬಿಜೆಪಿಗರಿಗೆ ತಮ್ಮ ಇತಿಹಾಸ ತಮಗೆ ಗೊತ್ತಿಲ್ಲ, ಇವರು ಇದೀಗ ರಜಾಕಾರರ ಇತಿಹಾಸ ಹೇಳಲು ಹೊರಟಿದ್ದಾರೆ, ರಾಜಕೀಯದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ರಜಾಕಾರರ ಇತಿಹಾಸ ಓದಲು ಶುರು ಹಚ್ಚಿಕೊಂಡಿದ್ದಾರೆ.
-ಪ್ರಿಯಾಂಕ್ ಖರ್ಗೆ, ಜಿಲ್ಲಾ ಉಸ್ತುವಾರಿ ಸಚಿವ

ಎಲ್ಲಿದ್ದೀರಾ ಮಿಸ್ಟರ್ ವಿಜಯೇಂದ್ರ?

ಪೇಜಾವರ ಹೇಳಿಕೆಗೆ ಬಿಜೆಪಿ ಸುಮ್ಮನಿದೆ. ಒಕ್ಕಲಿಗ ಸ್ವಾಮೀಜಿ ಹೇಳಿಕೆಯನ್ನು ಸಮರ್ಥನೆ ಮಾಡಿಕೊಂಡಿದ್ದಾರೆ. ನಿಮ್ಮದೇ, ಪಕ್ಷದ ಶಾಸಕರು ಬಸವಣ್ಣನವರನ್ನು ಹೇಡಿ ಅಂತಾರೆ ಆದರೂ, ಸುಮ್ಮನೆ ಇರುತ್ತಾರೆ ಬಸವಣ್ಣನವರ ಹೆಸರು ಹೇಳಿ ಮತ ಪಡೆಯುತ್ತೀರಾ. ಆದರೆ, ಅದೇ ಬಸವಣ್ಣನವರ ಬಗ್ಗೆ ಅವಹೇಳನಕಾರಿ ಮಾತಾಡಿದಾಗ ಸುಮ್ಮನೆ ಕೂಡತಿರಾ. ಎಲ್ಲಿದ್ದೀರಾ ಮಿಸ್ಟರ್ ವಿಜಯೇಂದ್ರ ಅವರೇ. ಬಸವಣ್ಣ, ಸಂವಿಧಾನ ಮತ್ತು ಸಮಾನತೆ ಅಂದರೆ ನಿಮಗೆ ಅಲರ್ಜಿಯಾಗಿ ಬಿಟ್ಟಿದೆ ಎಂದು ಸಚಿವ ಖರ್ಗೆ ವಾಗ್ದಾಳಿ ನಡೆಸಿದರು.

ನ್ಯಾಯಾಂಗ ತನಿಖೆ ಅವಶ್ಯಕತೆ ಇಲ್ಲ: ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್

ವಿಕ್ರಂ ಗೌಡ ಎನ್‌ಕೌಂಟರ್ ನಕಲಿ ಅಲ್ಲ

ಉಡುಪಿ: ನಕ್ಸಲ್ ವಿಕ್ರಂ ಗೌಡ ಎನ್ ಕೌಂಟರ್ ನಕಲಿ ಅಲ್ಲ. ಎನ್ ಕೌಂಟರ್ ನಕಲಿ ಎಂದು ಅನುಮಾನ ಪಡುವುದು ಬೇಡ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಎನ್ ಕೌಂಟರ್ ಕುರಿತು ನ್ಯಾಯಾಂಗ ತನಿಖೆಯ ಅವಶ್ಯಕತೆ ಇಲ್ಲ. ಅಗತ್ಯವಿದ್ದರೆ ಮುಖ್ಯಮಂತ್ರಿ ಹಾಗೂ ಗೃಹ ಸಚಿವರೊಂದಿಗೆ ಚರ್ಚೆ ನಡೆಸಲಾಗುವುದು ಎಂದರು.

ಕಾನೂನು ಪ್ರಕಾರ ಕಾನೂನು ಚೌಕಟ್ಟಿನಲ್ಲಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ವಿಕ್ರಮ್ ಗೌಡ ವಿರುದ್ಧ ಹಲವು ಪ್ರಕರಣಗಳು ಇದ್ದವು. ನಕ್ಸಲೈಟ್ ಗಳನ್ನು ಕಟ್ಟಿ ಹಾಕಬೇಕು ಎಂಬುದು ಸರಕಾರದ ನಿರ್ಧಾರ. ಕೂಂಬಿಂಗ್ ಮಾಡುವ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ವಿಕ್ರಂ ಗೌಡ ಬಳಿ ಕೂಡ ಶಸ್ತ್ರಾಸ್ತ್ರಗಳು ಇದ್ದವು. ವಿಕ್ರಂ ಗೌಡ ಒಂದು ಬಾರಿ ಫೈರಿಂಗ್ ಮಾಡಿದ್ದರಿಂದ ಪ್ರತಿ ದಾಳಿ ಮಾಡದಿದ್ದರೆ ಪೊಲೀಸರ ಜೀವಕ್ಕೆ ಹಾನಿ ಆಗುತ್ತಿತ್ತು ಎಂದರು. ನಕ್ಸಲೈಟ್‌ನ್ನು ಬೇರು ಸಮೇತ ಕಿತ್ತು ಹಾಕಬೇಕು. ಇದು ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರದ ನಿಲುವು. ಪರ ವಿರೋಧ ಚರ್ಚೆ ಎಲ್ಲಾ ಸಂದರ್ಭದಲ್ಲಿ ಇರುತ್ತದೆ. ಸರಕಾರ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಿದೆ. ಸಂಶಯ ಇದ್ದವರಿಗೆ ನಾವು ಮತ್ತೆ ಸ್ಪಷ್ಟನೆ ಕೊಡಲು ತಯಾರಿದ್ದೇವೆ ಎಂದು ಹೇಳಿದರು.

ವಿಶೇಷಚೇತನರಿಗೆ ಅನುದಾನ ಕಡಿತ ಇಲ್ಲ : ವಿಶೇಷ ಚೇತನ ಹಾಗೂ ಹಿರಿಯ ನಾಗರೀಕ ಇಲಾಖೆಯ ಅನುದಾನ ಕಡಿತ ಮಾಡಲಾಗಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ನಮ್ಮ ಇಲಾಖೆ 32 ಸಾವಿರ ಕೋಟಿಗಿಂತ ಹೆಚ್ಚಿನ ಗಾತ್ರದ ಬಜೆಟ್ ಹೊಂದಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಾಂಗ ಚೇತನ ಯಾವುದೇ ಅನುದಾನವನ್ನು ನಾವು ಕಡಿತ ಮಾಡುವುದಿಲ್ಲ ಎಂದರು.

ಕಾಂಗ್ರೆಸ್ ನಲ್ಲಿ ಯಾವುದೇ ಭಿನ್ನಮತ ಇಲ್ಲ. ಭಿನ್ನಮತ ಇರೋದು ಬಿಜೆಪಿಯಲ್ಲಿ ಮಾತ್ರ. ಬಿಜೆಪಿ ಭಿನ್ನಮತದ ಬಗ್ಗೆ ಮಾಧ್ಯಮಗಳೇ ದಿನಾ ತೋರಿಸುತ್ತಿವೆ. ನಮ್ಮಲ್ಲಿ ಭಿನ್ನಮತ ಇಲ್ಲ ಅನ್ನೋದಕ್ಕೆ ಉಪಚುನಾವಣೆಯ ಫಲಿತಾಂಶವೇ ಉತ್ತರ.
-ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ಸೋಲಿನ ಹೊಣೆ ಹೊರುತ್ತೇನೆ: ಎಚ್‌ಡಿಕೆ

ರಾಮನಗರ: ಚನ್ನಪಟ್ಟಣ ಉಪ ಚುನಾವಣೆಯ ಸೋಲಿನ ಹೊಣೆ ಕಾರ್ಯಕರ್ತರು, ಮುಖಂಡರದ್ದಲ್ಲ, ಈ ಬೈಎಲೆಕ್ಷನ್ ಸೋಲಿನ ಜವಾಬ್ದಾರಿಯನ್ನ ನಾನು ವೈಯಕ್ತಿಕವಾಗಿ ತೆಗೆದುಕೊಳ್ತೇನೆ. ನಾವು ಮಾಡಿದ ಕೆಲ ವಿಳಂಬದ ನಿರ್ಧಾರವೂ ಇದಕ್ಕೆ ಕಾರಣ ಆಗಿರಬಹುದು. ಮುಂದಿನ ದಿನಗಳಲ್ಲಿ ಎಲ್ಲವನ್ನೂ ಸರಿಪಡಿಸಿಕೊಂಡು ಕೆಲಸ ಮಾಡುತ್ತೇವೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮಂಡ್ಯ ಲೋಕಸಭೆಗೆ ನಿಖಿಲ್ ನಿಲ್ಲಸಬೇಕು ಅಂತಾ ಸಾರಾ ಮಹೇಶ್ ಒತ್ತಡ ಹಾಕಿದ್ದರು. ಆಗ ನಿಖಿಲ್ ನಾನು ಸ್ಪರ್ಧೆ ಮಾಡಲ್ಲ ಅಂದ್ರು. ರಾಮನಗರ ಜಿಲ್ಲೆಯಲ್ಲೇ ಮುಂದಿನ ಹೋರಾಟ ಮಾಡ್ತೀನಿ ಅಂದಿದ್ರು. ಆ ಹಿನ್ನೆಲೆಯಲ್ಲಿ ನಾನು ಮಂಡ್ಯದಿಂದ ಸ್ಪರ್ಧೆ ಮಾಡಿದೆ. ನಿಖಿಲ್ ಅಧಿಕಾರಕ್ಕಾಗಿ ನಿಂತಿದ್ರೆ ಮಂಡ್ಯದಲ್ಲಿ ನಿಂತು ಗೆಲ್ತಿದ್ರು. ಆದರೆ ದೇವರ ಇಚ್ಛೆ ಎಂದು ಬೇಸರ ವ್ಯಕ್ತಪಡಿಸಿದರು.

ಹಿಂದುತ್ವದ ಮುಖವಾಡ ಹಾಕಿಕೊಂಡು ಪಕ್ಷ ವಿರೋಧಿ ಚಟುವಟಿಕೆ | ಶಾಸಕರ ವಿರುದ್ಧ ಸಿಡಿದೆದ್ದ ವಿಜಯೇಂದ್ರ ಬಣ

ಯತ್ನಾಳ್‌ಗೆ ಕಾಂಗ್ರೆಸ್ ಸುಪಾರಿ: ರೇಣುಕಾಚಾರ್ಯ

ಮೈಸೂರು: ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಕಾಂಗ್ರೆಸ್‌ನಿಂದ ಸುಪಾರಿ ತೆಗೆದುಕೊಂಡು ಬಿಜೆಪಿ ವಿರುದ್ಧ ಹೋರಾಟ ಮಾಡುತ್ತಿದ್ದಾರೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹರಿಹಾಯ್ದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯತ್ನಾಳ್ ಅವರದ್ದು ನಾಲ್ಕು ಜನರ ಒಂದು ಗುಂಪು ಅಷ್ಟೇ. ಅದೊಂದು ತಂಡವಲ್ಲ. ಕಾಂಗ್ರೆಸ್‌ನಿಂದ ಸುಪಾರಿ ತೆಗೆದುಕೊಂಡು ಬಿಜೆಪಿ ವಿರುದ್ಧ ಹೋರಾಟ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಹೊರ ಹೋಗಿ : ಯತ್ನಾಳ್ ಅವರು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರರನ್ನು ಬೈದರೆ, ಅದು ಪಕ್ಷದ ವರಿಷ್ಠರನ್ನು ಬೈದಂತೆ. ಏಕೆಂದರೆ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದು ಪಕ್ಷದ ವರಿಷ್ಠರು. ಇದು ನಿಮಗೆ ಇಷ್ಟವಾಗಿಲ್ಲ ಎಂದರೆ ಪಕ್ಷದಿಂದ ಹೊರಹೋಗಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸೋಲಿಗೆ ಕಾರಣ: ಯತ್ನಾಳ್ ಅವರು ಬಾಯಿ ಚಟಕ್ಕೋಸ್ಕರ ಮಾತನಾಡುತ್ತಿದ್ದಾರೆ. ಹಿಂದುತ್ವದ ಮುಖವಾಡ ಹಾಕಿಕೊಂಡು ಪಕ್ಷ ವಿರೋಧಿ ಚಟುವಟಿಕೆ ಮಾಡುತ್ತಿದ್ದಾರೆ. ಅವರ ಹರಕಲು ಬಾಯಿಯಿಂದ ನನ್ನಂತ ಹಲವು ಮಂದಿಗೆ ಕಳೆದ ಚುನಾವಣೆಯಲ್ಲಿ ಸೋಲಾಯಿತು. ಜತೆಗೆ ಉಪ ಚುನಾವಣೆಯಲ್ಲಿ ಸೋಲಲು ನೀನೇ ಕಾರಣ ಎಂದು ಆರೋಪಿಸಿದರು.

ಲೋಕಸಭೆ ಟಿಕೆಟ್ ವಂಚಿತರು, ಸೋತವರು ಒಂದಷ್ಟು ಜನರನ್ನು ಜತೆಗಿರಿಸಿಕೊಂಡು ಪಕ್ಷ ವಿರೋಧಿ ಚಟುವಟಿಕೆ ಮಾಡುತ್ತಿದ್ದೀರಿ. ನೀವು ಸೇರಿದಂತೆ ನಿಮ್ಮ ಜತೆಗಿರುವವರ ವಿರುದ್ಧ ಕ್ರಮ ಆಗುತ್ತದೆ. ನಿಮ್ಮ ಬ್ಲ್ಯಾಕ್ ಮೇಲ್ ರಾಜಕಾರಣ ಎಂದಿಗೂ ನಡೆಯುವುದಿಲ್ಲ. ಮಾತೆತ್ತಿದರೆ ಜಗಜ್ಯೋತಿ ಬಸವಣ್ಣನವರ ಬಗ್ಗೆ ಮಾತನಾಡುವ ಯತ್ನಾಳ್ ಅವರನ್ನು ಮಠಾಧೀಶರು ಛೀಮಾರಿ ಹಾಕಬೇಕು ಎಂದು ಹೇಳಿದರು.

ಸಚಿವರ ಜತೆ ಶಾಮೀಲು: ಬಿ.ಎಸ್. ಯಡಿಯೂರಪ್ಪ, ಸದಾನಂದಗೌಡ ಹಾಗೂ ವಿಜಯೇಂದ್ರ ಬಗ್ಗೆ ಮಾತನಾಡುವ ನೀವು ವಿಜಯಪುರ ಜಿಲ್ಲೆಯಿಂದ ಎಷ್ಟು ಶಾಸಕರನ್ನು ಗೆಲ್ಲಿಸಿಕೊಂಡು ಬಂದಿದ್ದೀರಾ? ವಿಜಯಪುರ ಜಿಲ್ಲೆಯಲ್ಲಿ ಅವರನ್ನು ಬಿಟ್ಟು ಬೇರೆಯರ್‍ಯಾರು ಬಿಜೆಪಿಯಿಂದ ಗೆಲ್ಲದಂತೆ ನೋಡಿಕೊಂಡಿದ್ದಾರೆ. ಅದಕ್ಕಾಗಿ ಕಾಂಗ್ರೆಸ್‌ನ ಪ್ರಭಾವಿ ಸಚಿವರೊಂದಿಗೆ ಶಾಮೀಲಾಗಿದ್ದಾರೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿದರು.

ಯತ್ನಾಳ್ ಬೆಂಬಲಿಗರೇ ಇಲ್ಲದ ಒಬ್ಬ ನಾಯಕ. ಕಾಂಗ್ರೆಸ್ ಬೈದರೇ ಪ್ರಚಾರ ಸಿಗುವುದಿಲ್ಲ ಎಂದು ಯಡಿಯೂರಪ್ಪ ಹಾಗೂ ಮಗನನ್ನು ಬೈಯುತ್ತಿದ್ದಾರೆ. ಬೈಯುದ್ದುಕೊಂಡು ನಾನು ನಾಯಕ ಆಗುತ್ತೇನೆ ಅಂದುಕೊಂಡಿದ್ದಾರೆ. ಬಿಜೆಪಿ ಹೈಕಮಾಂಡ್ ಎಲ್ಲವನ್ನೂ ಸೂಕ್ಷ್ಮವಾಗಿ ನೋಡುತ್ತಿದೆ. ನಮ್ಮ ಪಕ್ಷದಲ್ಲಿ ಹಾರಾಡಿದವರು, ಬಿಗಿದವರು, ಕುಣಿದವರು ಬಹಳ ಬೇಗ ಮುಗಿದು ಹೋಗಿದ್ದಾರೆ. ಬಹಳಷ್ಟು ಜನ ತೇವಣಿ ಕಳೆದುಕೊಂಡು ಮನೆ ಸೇರಿದ್ದಾರೆ. ಇವರ ಕಥೆಯೂ ಅಷ್ಟೇ.
-ಬಿ.ಸಿ. ಪಾಟೀಲ್, ಮಾಜಿ ಸಚಿವ.

ಯತ್ನಾಳ್ ಉಚ್ಚಾಟನೆಗೆ ಕಾರ್ಯಕರ್ತರ ಒತ್ತಾಯ

ರೇಣುಕಾಚಾರ್ಯ ಮತ್ತು ಬಿ.ಸಿ. ಪಾಟೀಲ್ ನೇತೃತ್ವದಲ್ಲಿ ಬಿಜೆಪಿಯ 20ಕ್ಕೂ ಹೆಚ್ಚು ಮಾಜಿ ಶಾಸಕರು, ಸಚಿವರುಗಳು ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಪಕ್ಷದ ಕಾರ್ಯಕರ್ತರು ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಉಚ್ಚಾಟನೆ ಮಾಡುವಂತೆ ಆಗ್ರಹಿಸಿದರು.
ಯತ್ನಾಳ್ ಅವರು ಪಕ್ಷಕ್ಕಿಂತ ದೊಡ್ಡವರಲ್ಲ. ಕೂಡಲೇ ಅವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆಯಿತು. ಈ ವೇಳೆ ಮುಖಂಡರು ಕಾರ್ಯಕರ್ತರನ್ನು ಸಮಾಧಾನಪಡಿಸಿ, ಶೀಘ್ರದಲ್ಲೇ ಯತ್ನಾಳ್ ವಿರುದ್ಧ ವರಿಷ್ಠರು ಕ್ರಮ ಕೈಗೊಳ್ಳಲಿದ್ದಾರೆ ಎಂದು ಭರವಸೆ ನೀಡಿದ ನಂತರ ಕಾರ್ಯಕರ್ತರು ಸುಮ್ಮನಾದರು.

ಜಪಾನ್ ಬಗ್ಗೆ ಆತ ಹೇಳಿದ ಮಾತನ್ನು ಕೇಳಿದ ನಂತರ ಅನಿಸಿದ್ದು!

ಪಿಕೋ ಇಯರ್ ನನಗೆ ಇಷ್ಟವಾದ ಲೇಖಕ. ಅದರಲ್ಲೂ ಅವರ ಪ್ರವಾಸ ಪುಸ್ತಕಗಳನ್ನು ಬಹಳ ಇಷ್ಟಪಡುತ್ತೇನೆ. ಆರು ದೇಶಗಳ ಪ್ರವಾಸವನ್ನು ಆಧರಿಸಿದ ಅವರ Falling Off The Map ಪುಸ್ತಕ ಓದಿ ಬೆರಗಾಗಿದ್ದೆ. ಆ ಆರು ದೇಶಗಳ ಪೈಕಿ ನಾನೂ ಎರಡು ದೇಶಗಳಿಗೆ ಭೇಟಿ ನೀಡಿದ್ದೆ. ಅವರ ಒಳನೋಟ, ದೇಶವನ್ನು ಸೂಕ್ಷ್ಮವಾಗಿ ಗಮನಿಸುವ ಗ್ರಹಿಕೆ ಬಹಳ ಇಷ್ಟವಾಗಿತ್ತು. ಅವರಿಗೆ ದಕ್ಕಿದ ಸಂಗತಿಗಳು ನನ್ನ ಗ್ರಹಿಕೆಗೂ ಬಂದಿರಲಿಲ್ಲ. ಅಂದಿನಿಂದ ನಾನು ಅವರ ಬರಹದ ಜಾಡನ್ನು ಅನುಸರಿಸುತ್ತಾ ಬಂದಿದ್ದೇನೆ.

ನಾನು ಜಪಾನಿಗೆ ಹೋಗುವ ಮುನ್ನ ಅವರು ಆ ದೇಶದ ಬಗ್ಗೆ ಬರೆದ Autumn Light ಪುಸ್ತಕವನ್ನು ಓದಿದ್ದೆ. ಹಾಗೆ ಅವರು ಜಪಾನಿನ ಬಗ್ಗೆ ಬರೆದ ಪುಟ್ಟ ಪುಟ್ಟ ಟಿಪ್ಪಣಿಗಳನ್ನು ಓದಿದ್ದೆ. ಜಪಾನಿನಲ್ಲಿ ಓಡಾಡುವಾಗ ಪಿಕೋ ಬರೆದ ಅನೇಕ ಸಾಲುಗಳು ನೆನಪಾಗುತ್ತಿದ್ದವು. ಅವರ ಗ್ರಹಿಕೆ ವಾಸ್ತವಕ್ಕೆ ತೀರಾ ಹತ್ತಿರ ಎಂದೆನಿಸುತ್ತಿತ್ತು.

ಅಂದ ಹಾಗೆ, ಆಕ್ಸ್‌ಫರ್ಡಿನಲ್ಲಿ ಓದಿದ, ದಲೈ ಲಾಮಾ ಜತೆಗೆ ವರ್ಷಾನುಗಟ್ಟಲೆ ಸುತ್ತಿದ ಪಿಕೋ ಇಯರ್ ಕಳೆದ 37 ವರ್ಷಗಳಿಂದ ಜಪಾನಿನ ಕ್ಯೋಟೋ ನಗರದ ಸನಿಹದ ಒಂದು ಪುಟ್ಟ ಹಳ್ಳಿಯಲ್ಲಿ ತಮ್ಮ ಜಪಾನಿ ಪತ್ನಿಯ (ಹೀರೋಕೋ) ಜತೆ ವಾಸಿಸುತ್ತಿದ್ದಾರೆ. ಮೂರು ವರ್ಷದ ಹುಡುಗಿ ಜಪಾನಿ ಭಾಷೆ ಮಾತಾಡುವಂತೆ ಪಿಕೋ ಇಯರ್ ಆ ಭಾಷೆಯನ್ನೂ ಮಾತಾಡುತ್ತಾರೆ. ಅವರು ವಾಸವಿರುವ ಆ ಹಳ್ಳಿಯಲ್ಲಿ ಯಾರೂ ಇಂಗ್ಲಿಷ್ ಮಾತಾಡುವುದಿಲ್ಲ. ಹೀಗಾಗಿ ಅವರಿಗೆ ಇಂಗ್ಲಿಷ್ ಮಾತಾಡುವ ಪ್ರಸಂಗವೇ ಉದ್ಭವವಾಗಿಲ್ಲ. ಪತ್ನಿ ಮತ್ತು ಮಕ್ಕಳು ಸಹ ಜಪಾನಿ ಭಾಷೆಯಲ್ಲಿಯೇ ಮಾತಾಡುತ್ತಾರೆ. ಆದರೂ ಅವರಿಗೆ ಭಾಷೆಯ ಸಮಸ್ಯೆ ಎದುರಾಗಿಲ್ಲ.

'ಜಪಾನಿನಲ್ಲಿ ಭಾಷೆಯ ಹಂಗಿಲ್ಲದೇ, ದರ್ದು ಇಲ್ಲದೇ ಅನೇಕ ಸಂಗತಿಗಳು ಜರುಗುತ್ತವೆ' ಎನ್ನುವ ಪಿಕೋ, ಜಪಾನಿನ ಬಗ್ಗೆ ಮಾರ್ಮಿಕವಾಗಿ ಇನ್ನೊಂದು ಮಾತನ್ನು ಹೇಳಿದ್ದಾರೆ– 'ನಾನು ಜಪಾನಿಗೆ ಬಂದ ಆರಂಭದಲ್ಲಿ ಆ ದೇಶದ ಬಗೆಗಿನ ಎಲ್ಲ ಸಂಗತಿಗಳು ಬಹು ಬೇಗ ಅರ್ಥವಾಗುತ್ತಿತ್ತು. ನಾನೂ ಹೆಚ್ಚು ತಿಳಿದುಕೊಂಡಿದ್ದೇನೆ ಅಂದುಕೊಂಡಿದ್ದೆ. ಆದರೆ ಮೂರೂವರೆ ದಶಕಗಳ ಕಾಲ ಜಪಾನಿನಲ್ಲಿ ಉಳಿದ ಬಳಿಕ ನಾನು ತಿಳಿದುಕೊಂಡಿದ್ದು ಬಹಳ ಕಡಿಮೆ ಅನಿಸುತ್ತಿದೆ ಮತ್ತು ನನಗೆ ಅರ್ಥವಾಗದ ಜಪಾನ್ ಹೆಚ್ಚು ಎಂದು ಅನಿಸುತ್ತಿದೆ'.

ನಿಜ, ಜಪಾನ್ ಮೊದಲ ನೋಟಕ್ಕೆ ಬಹುಬೇಗ ಎಲ್ಲರಿಗೂ ಅರ್ಥವಾಗುತ್ತದೆ. ಆದರೆ ಕ್ರಮೇಣ ಅಲ್ಲಿನ ಜೀವನ ಸಂಕೀರ್ಣವಾಗುತ್ತಾ ಹೋಗುತ್ತದೆ. ಕ್ಯೋಟೋದ ದೇವಾಲಯಗಳಲ್ಲಿ ಬರೆದಂತೆ The opposite of a great truth is also true in Japan ಎಂಬ ಸಾಲು ನಿಜಜೀವನದಲ್ಲಿ ಅನುಭವಕ್ಕೆ ಬರುತ್ತಾ ಹೋಗುತ್ತದೆ. ಜಪಾನ್ ಬುದ್ಧಿವಂತರ ದೇಶವಿರಬಹುದು. ಆದರೆ ಅವರೂ ದಡ್ಡತನ ಪ್ರದರ್ಶಿಸುತ್ತಾರೆ ಎಂಬುದನ್ನು ಮರೆಯಬಾರದು. ಅದಕ್ಕಾಗಿ ಜಪಾನಿ ಭಾಷೆಯಲ್ಲಿ ಒಂದು ಮಾತಿದೆ– 'ಸರು ಮೊ ಕಿ ಕರಾ ಒಚಿರು'. ಅದರ ಅರ್ಥ– 'ಮಂಗಗಳು ಕೂಡ ಮರದಿಂದ ಬೀಳುತ್ತವೆ'.

'37 ವರ್ಷಗಳ ಕಾಲ ಜಪಾನಿನ ಜೀವನ ಏನನ್ನು ಕಲಿಸಿದೆ?' ಎಂದು ಪಿಕೋ ಇಯರ್‌ರನ್ನು ಕೇಳಿದರೆ, ಅವರು ಹೇಳುವುದಿಷ್ಟೇ– 'ನಾನು I think ಎಂದು ಹೇಳುವಾಗಲೆಲ್ಲ I wonder ಎಂದು ಹೇಳುತ್ತೇನೆ. ನನ್ನ ಯೋಚನೆಯ ಬಹುಭಾಗ wonder ನಿಂದಲೇ ಕೂಡಿರುತ್ತದೆ.

ಭಾರತೀಯರಿಗೂ, ಜಪಾನಿಯರಿಗೂ ಏನು ವ್ಯತ್ಯಾಸ ಎಂಬ ಪ್ರಶ್ನೆಗೆ ಪಿಕೋ ನೀಡುವ ಉತ್ತರ– 'ಭಾರತೀಯರಿಗೆ ಹೂಗುಚ್ಛ ಕೊಟ್ಟರೆ, ಅದನ್ನು ನೀಡಿದ ವ್ಯಕ್ತಿಯ ಮುಖ ನೋಡುತ್ತಾರೆ, ಆದರೆ ಜಪಾನಿಯರಿಗೆ ಅದನ್ನು ಕೊಟ್ಟರೆ, ಎರಡೂ ಕೈಗಳಿಂದ ಸ್ವೀಕರಿಸಿ, ಹೂಗಳನ್ನು ನೋಡುತ್ತಾರೆ'.

ಯಾವುದೇ ದೇಶ ಮತ್ತು ಅಲ್ಲಿನ ಜನರನ್ನು ಅರ್ಥಮಾಡಿಕೊಳ್ಳಲು ಅಲ್ಲಿನ ಗಾದೆಮಾತು ಮತ್ತು ನುಡಿಗಟ್ಟುಗಳನ್ನು ಓದಬೇಕಂತೆ. ಜಪಾನಿನಲ್ಲಿ ಒಂದು ಗಾದೆಯಿದೆ– 'ಕಲ್ಲು ಬಂಡೆಯ ಮೇಲೆ ಕುಳಿತುಕೊಳ್ಳುವುದು ಸಹ ಹಿತವೆನಿಸುತ್ತದೆ, ಆದರೆ ಅದರ ಮೇಲೆ ಮೂರು ವರ್ಷ ಕುಳಿತುಕೊಳ್ಳಬೇಕಷ್ಟೆ'.

ಪಿಕೋ ಇಯರ್ ಆಗಾಗ 'ಟೈಮ್' ಮ್ಯಾಗಜಿನ್‌ಗೂ ಬರೆಯುತ್ತಾರೆ. 1999ರಲ್ಲಿ ಆ ಪತ್ರಿಕೆ ಅವರಿಗೆ ಒಂದು ಅಸೈನ್‌ಮೆಂಟ್ ನೀಡಿತ್ತು. ಕರೋಕೆ ಕಂಡುಹಿಡಿದವ ಎನ್ನಲಾದ ವ್ಯಕ್ತಿಯನ್ನು 'ಈ ಶತಮಾನದ ಪ್ರಭಾವಿ ನೂರು ಏಷ್ಯನ್ ಸಾಧಕರು' ಪಟ್ಟಿಯಲ್ಲಿ ಸೇರಿಸಿತ್ತು. ಆ ವ್ಯಕ್ತಿಯನ್ನು ಸಂದರ್ಶಿಸುವಂತೆ ಪತ್ರಿಕೆ ಪಿಕೋ ಇಯರ್‌ರಿಗೆ ಸೂಚಿಸಿತ್ತು. ಆ ವ್ಯಕ್ತಿಯನ್ನು ಪಿಕೋ ಭೇಟಿಯಾದಾಗ, ಆತ ತನ್ನ ಬಿಜಿನೆಸ್ ಕಾರ್ಡನ್ನು ನೀಡುತ್ತಾ– 'ನೀವು ಯಾವ ವಿಷಯದ ಬಗ್ಗೆ ಚರ್ಚಿಸಲು ಬಂದಿದ್ದೀರೋ, ಅದರ ಬಗ್ಗೆ ನಂತರ ಮಾತಾಡೋಣ. ಸದ್ಯ ನಾನು ನಾಯಿಗಳಿಗೆ ತರಬೇತಿ ಕೊಡುತ್ತಿದ್ದೇನೆ. ಈ ವಿಷಯ ನಿಮಗೆ ಗೊತ್ತಿಲ್ಲದಿರಬಹುದು. ನೀವು ಆ ವಿಷಯದ ಬಗ್ಗೆಯೂ ಕೇಳಬಹುದು' ಎಂದು ಹೇಳಿದನಂತೆ.

ಇದು ಟಿಪಿಕಲ್ ಜಪಾನಿಯರ ಮೆಂಟಾಲಿಟಿ. ಅವರು ತಮ್ಮ ಸಾಧನೆಯ ವೈಭವದಲ್ಲಿಯೇ ಕಳೆದುಹೋಗುವುದಿಲ್ಲ. ನಿನ್ನೆಯ ಹೆಮ್ಮೆಗಿಂತ ಇಂದಿನ ಹೊಣೆಗಾರಿಕೆ ಅವರನ್ನು ಹೆಚ್ಚು ಕಾಡುತ್ತದೆ. ಅವರು ಯಾವತ್ತೂ ತಮ್ಮ ಸದ್ಯದ ಕೆಲಸ, ಸಾಧನೆಗೆ ಒತ್ತು ನೀಡುತ್ತಾರೆ. ಆತನಿಗೆ ತಾನು ಕಂಡುಹಿಡಿದ ಕರೋಕೆ ಸಂಗೀತದ ಬಗ್ಗೆ ಮಾತಾಡುವುದರ ಜತೆಗೆ ಸದ್ಯ ತಾನು ಮಾಡುತ್ತಿರುವ ಶ್ವಾನ ತರಬೇತಿಯ ಬಗ್ಗೆಯೂ ಹೇಳುವ ಜರೂರು ಇತ್ತು.

ಪಿಕೋ ಇಯರ್ ತಮ್ಮ ಪತ್ನಿ ಹೇಳಿದ ಒಂದು ಪ್ರಸಂಗವನ್ನು ಒಂದೆಡೆ ಪ್ರಸ್ತಾಪಿಸಿದ್ದಾರೆ: 'ನನ್ನ ಜಪಾನಿ ಸ್ನೇಹಿತೆ ಪ್ರತಿದಿನ ಮೇಕಪ್ ಮಾಡಿಕೊಳ್ಳುವುದಕ್ಕೆ ಎರಡು ತಾಸು ತೆಗೆದುಕೊಳ್ಳುತ್ತಾಳೆ' ಎಂದು ಪಿಕೋ ಪತ್ನಿ ಒಂದು ದಿನ ಹೇಳಿದರಂತೆ. ಅದಕ್ಕೆ ಪಿಕೋ, 'ಎಲ್ಲರೂ ತನ್ನನ್ನು ನೋಡಲಿ ಎಂದು ಅವಳು ಅಷ್ಟು ಜೋರಾಗಿ ಮೇಕಪ್ ಮಾಡಿಕೊಳ್ಳುತ್ತಿರಬಹುದಾ?' ಎಂದು ಕೇಳಿದರಂತೆ. ಅದಕ್ಕೆ ಪಿಕೋ ಪತ್ನಿ ಹೇಳಿದರಂತೆ– 'ತನ್ನನ್ನು ಯಾರೂ ನೋಡಬಾರದೆಂದು ಆಕೆ ಹಾಗೆ ಮೇಕಪ್ ಮಾಡಿಕೊಳ್ಳುತ್ತಾಳೆ'.

ಪಿಕೋ ಹೇಳಿದ ಮಾತು ಮತ್ತು ಅವರ ಪುಸ್ತಕವನ್ನು ಓದಿದ ಬಳಿಕ ನನಗೆ ಅನಿಸಿದ್ದು– 'ಜಪಾನ್ ಬಗ್ಗೆ ಯಾರಾದರೂ ಅಧಿಕಾರವಾಣಿಯಿಂದ ಮಾತಾಡಿದರೆ ಗಮನವಿಟ್ಟು ಕೇಳಬೇಕು ಮತ್ತು ಅದು ಪೂರ್ತಿ ನಿಜ ಎಂದು ನಂಬಬಾರದು!'

ರೂಲ್ಸ್ ಅಂದ್ರೆ ರೂಲ್ಸ್ !

ಜಪಾನಿಯರು ಕಟ್ಟಾ ನಿಯಮಪಾಲಕರು. ಅವರಿಗೆ ನಿಯಮ ರೂಪಿಸುವುದು ಮತ್ತು ಅದನ್ನು ಕಟ್ಟುನಿಟ್ಟಾಗಿ ಪಾಲಿಸುವುದಷ್ಟೇ ಗೊತ್ತು. ಭಾರತೀಯರಂತೆ ನಿಯಮಗಳನ್ನು ಮುರಿಯುವುದು ಅರ್ಥಾತ್ ಉಲ್ಲಂಘಿಸುವುದು ಗೊತ್ತಿಲ್ಲ. ಯಂತ್ರಗಳು ತಮಗೆ ಹೇಳಿದಷ್ಟನ್ನೇ ಮಾಡುತ್ತವೆ. ನಿಯಮವನ್ನು ಪಾಲಿಸುವ ವಿಷಯದಲ್ಲಿ ಜಪಾನಿಯರು ಪಕ್ಕಾ ಯಂತ್ರಗಳಂತೆ. ಈ ವಿಷಯದಲ್ಲಿ ಅವರು ಯಾವ ಕಾರಣಕ್ಕೂ ರಾಜಿ ಆಗುವುದಿಲ್ಲ. ಹಾಗಂತ ನಮ್ಮ ಜತೆಗಿದ್ದ ಭಾರತೀಯ ಮೂಲದ, ಕಳೆದ 24 ವರ್ಷಗಳಿಂದ ಜಪಾನಿನಲ್ಲಿ ನೆಲೆಸಿರುವ ಗೈಡ್ ಮೀನಾ ಹೇಳಿದಳು.

ಸಮಯವನ್ನು ಸೆಕೆಂಡುಗಳಲ್ಲಿ ಲೆಕ್ಕ ಹಾಕುವ ಮತ್ತು ಅದರಂತೆ ಜೀವಿಸುವ ಜಪಾನಿಯರು, ನಿಯಮಗಳ ವಿಷಯದಲ್ಲೂ ಅಷ್ಟೇ ಕಟ್ಟುನಿಟ್ಟು ಇದ್ದಿರಬಹುದು ಎಂಬ ಬಗ್ಗೆ ನನಗೆ ಯಾವ ಸಂದೇಹವೂ ಇರಲಿಲ್ಲ. ಒಮ್ಮೆ ತನಗಾದ ಅನುಭವವನ್ನು ಮೀನಾ ಹೇಳಿದಾಗ, ನಿಯಮಗಳನ್ನು ಪಾಲಿಸುವ ವಿಷಯದಲ್ಲಿ ಇದ್ಯಾಕೋ ಅತಿಯಾಯ್ತು ಅಂತ ಅನಿಸಿದ್ದು ಸುಳ್ಳಲ್ಲ.

ಕೆಲ ವರ್ಷಗಳ ಹಿಂದೆ, ಮೀನಾ ಗುಜರಾತಿನಿಂದ ಜಪಾನಿಗೆ ಆಗಮಿಸಿದ ತನ್ನ ತಂದೆ–ತಾಯಿಯೊಂದಿಗೆ ಟೋಕಿಯೋಕ್ಕೆ ಹೋಗಿದ್ದಳಂತೆ. ಬೆಳಗ್ಗೆ ಹತ್ತು ಗಂಟೆಯಾದರೂ ಉಪಾಹಾರ ಸೇವಿಸಿರಲಿಲ್ಲ. ಕಾಫಿ ಶಾಪ್‌ನಲ್ಲಿ ಉಪಾಹಾರ ಸೇವಿಸಲೆಂದು ಅಲ್ಲಿಗೆ ಹೋದರೆ, 'ಬೆಳಗ್ಗೆ ಹತ್ತು ಗಂಟೆಗೆ ಶಾಪ್ ಓಪನ್ ಮಾಡಲಾಗುವುದು' ಎಂದು ಬೋರ್ಡ್ ಹಾಕಿದ್ದರಂತೆ. ಆಗ ಹತ್ತು ಗಂಟೆ ಆಗಲು ಇನ್ನೂ ಆರು ನಿಮಿಷ ಬಾಕಿ ಇತ್ತಂತೆ. ಆದರೂ ಕಾಫಿ ಶಾಪ್ ಕೌಂಟರ್ ಸನಿಹ ಹೋದ ಮೀನಾ, ಮೂರು ಸ್ಯಾಂಡ್‌ವಿಚ್ ಮತ್ತು ಕಾಫಿ ನೀಡುವಂತೆ ಹೇಳಿದಾಗ, ಕೌಂಟರ್‌ನಲ್ಲಿದ್ದಾತ, 'ಮೇಡಂ, ನಮ್ಮ ಶಾಪ್ ಓಪನ್ ಆಗಲು ಇನ್ನೂ ಆರು ನಿಮಿಷಗಳಿವೆ. ಅಲ್ಲಿ ತನಕ ನೀವು ಕಾಯುವುದು

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಅನಿವಾರ್ಯ. ನೋಡಿ, ಅಲ್ಲಿ ಬೋರ್ಡಿನಲ್ಲಿ ಹತ್ತು ಗಂಟೆಗೆ ಶಾಪ್ ಅನ್ನು ಓಪನ್ ಮಾಡಲಾಗುವುದು ಎಂದು ಬೋರ್ಡ್ ಹಾಕಿದ್ದೇವೆ' ಎಂದು ಮುಲಾಜಿಲ್ಲದೇ ಹೇಳಿದನಂತೆ.

'ಇನ್ನೂ ಆರು ನಿಮಿಷ ಕಾಯಲು ಸಾಧ್ಯವಿಲ್ಲ. ನನ್ನ ತಂದೆ–ತಾಯಿ ಹಸಿದಿದ್ದಾರೆ. ನಾವು ಮುಂದಿನ ಅಂಗಡಿಗೆ ಹೋಗುತ್ತೇವೆ. ಆಗ ನಿನಗೆ ಗಿರಾಕಿಗಳು ತಪ್ಪಿಹೋಗುತ್ತಾರೆ. ಹಾನಿಯಾಗುವುದು ನಿನಗೇ. ಅದಕ್ಕೆ ನಿನಗೆ ಏನೂ ಅನಿಸುವುದಿಲ್ಲವಾ?' ಎಂದು ಕೇಳಿದಳಂತೆ.

'ಗಿರಾಕಿಗಳು ತಪ್ಪಿ ಹೋಗುತ್ತಾರೆ ಎಂದು ನನಗೆ ಅನಿಸುತ್ತದೆ, ಆದರೆ ಆ ಕಾರಣಕ್ಕೆ ನಾನು ನಿಯಮವನ್ನು ಉಲ್ಲಂಘಿಸುವುದಿಲ್ಲ' ಎಂದು ಖಡಾಖಡಿ ಆತ ಹೇಳಿದನಂತೆ.

ಆತನ ನಿಯತ್ತು ಮೀನಾಗೆ ಬಹಳ ಇಷ್ಟವಾಯಿತಂತೆ. ಹತ್ತು ಗಂಟೆ ಆಗುವ ತನಕ ಕಾದು, ಅಲ್ಲಿಯೇ ಉಪಾಹಾರ ಸೇವಿಸಿ ಮುಂದೆ ತೆರಳಿದಳಂತೆ. ಜಪಾನಿನಲ್ಲಿ ಓಡಾಡುವಾಗ ನಿಯಮ ಪಾಲಿಸುವ ವಿಷಯ ಬಂದಾಗ, ಇಂಥ ಅನುಭವಗಳಿಗೆ ಕೊರತೆಯಾಗುವುದಿಲ್ಲ.

ಫೋಟೋ ಕ್ಲಿಕ್ಕಿಸುವಾಗ ಎಚ್ಚರ

ನೀವು ಜಪಾನಿನಲ್ಲಿ ಮೊಬೈಲ್ ಖರೀದಿಸಲು ಬಯಸಿದರೆ, ಒಂದು ಸಂಗತಿಯನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಅಲ್ಲಿನ ಮೊಬೈಲ್‌ನಲ್ಲಿ ಫೋಟೋ ಕ್ಲಿಕ್ಕಿಸಿದರೆ, ಕೆಮರಾದಲ್ಲಿ ಫೋಟೋ ತೆಗೆಯುವಾಗ ಬರುವಷ್ಟೇ ಸದ್ದು ಬರುತ್ತದೆ. ಈ ಮಾತು ಐಫೋನ್‌ಗೂ ಅನ್ವಯ. ಮೊಬೈಲ್‌ನಲ್ಲಿ ಡಿಫಾಲ್ಟ್ ಸೆಟ್ಟಿಂಗ್ ಆ ರೀತಿ ಇರುವುದು ಗಮನಾರ್ಹ.

ಅಂದರೆ ಯಾರೇ ಮೊಬೈಲಿನಲ್ಲಿ ಫೋಟೋ ಕ್ಲಿಕ್ಕಿಸಲಿ ಅದು ಅಕ್ಕ–ಪಕ್ಕದಲ್ಲಿದ್ದವರಿಗೆ ಗೊತ್ತಾಗುವಷ್ಟು ಜೋರಾಗಿ ಕೇಳಿಸುತ್ತದೆ. ಈ ಸೆಟ್ಟಿಂಗ್ ಅನ್ನು ಬದಲಿಸುವುದು ಸಾಧ್ಯವಿಲ್ಲ. ಇದಕ್ಕೆ ಕಾರಣ, ಅನುಮತಿ ಇಲ್ಲದೇ ಯಾರ ಫೋಟೋವನ್ನೂ ತೆಗೆಯುವಂತಿಲ್ಲ. ಒಂದು ವೇಳೆ ಬೇರೆಯವರಿಗೆ ಗೊತ್ತಾಗದಂತೆ ಫೋಟೋ ಕ್ಲಿಕ್ಕಿಸುವ ಪ್ರಯತ್ನ ಮಾಡಿದರೆ, ಕ್ಲಿಕ್ ಸದ್ದಿನಿಂದ ಅದು ಅವರಿಗೆ ಗೊತ್ತಾಗುತ್ತದೆ. ಅದರಲ್ಲೂ ಹೆಂಗಸರ ಮತ್ತು ಮಕ್ಕಳ ಫೋಟೋ ತೆಗೆಯುವಾಗ ಅವರ ಅನುಮತಿ ಅತ್ಯಗತ್ಯ. ಅವರಿಗೆ ಗೊತ್ತಿಲ್ಲದಂತೆ ಫೋಟೋ ಕ್ಲಿಕ್ಕಿಸಿದರೆ, ಮುಜುಗರಕ್ಕೊಳಗಾಗಬೇಕಾದೀತು. ನಿಮ್ಮ ಸ್ನೇಹಿತನದೋ, ಸ್ನೇಹಿತೆಯದೋ ಫೋಟೋವನ್ನು ಮೊಬೈಲಿನಲ್ಲಿ ಕ್ಲಿಕ್ಕಿಸುವಾಗ, ಹಿಂಬದಿಯಲ್ಲಿ ಯಾರಾದರೂ ಇದ್ದರೆ, ಫೋಟೋದಲ್ಲಿ ಅವರು ಬರದಂತೆ ತೆಗೆಯುವುದು ವಾಸಿ. ಒಂದು ವೇಳೆ ಅವರು ಬಂದರೆ, ಅದಕ್ಕೆ ಅವರು ಆಕ್ಷೇಪಿಸಬಹುದು.

ಮೊಬೈಲ್ ಅಂಗಡಿಯಲ್ಲಿ ಅದನ್ನು ಖರೀದಿಸುವಾಗ, ಅಲ್ಲಿಟ್ಟ ಸ್ಯಾಂಪಲ್ ಪೀಸ್ ಅನ್ನು ನೋಡುವುದು, ಅದರಿಂದ ಫೋಟೋ ತೆಗೆಯುವುದು ಸಾಮಾನ್ಯ. ಹಾಗೆ ಅವರು ತೆಗೆದ ಫೋಟೋವನ್ನು, ಸಾಮಾನ್ಯವಾಗಿ ಎಲ್ಲರೂ ಡಿಲೀಟ್ ಮಾಡುತ್ತಾರೆ. ಒಂದು ವೇಳೆ ಡಿಲೀಟ್ ಮಾಡಲು ಅವರಿಗೆ ಮರೆತುಹೋದರೆ, ಅಂಗಡಿಯವರು ಅದನ್ನು ಕಡ್ಡಾಯ ಡಿಲೀಟ್ ಮಾಡುತ್ತಾರೆ. ಡಿಸ್‌ಪ್ಲೇ ಮೊಬೈಲಿನಲ್ಲೂ ಬೇರೆಯವರ ಫೋಟೋ ಇರದಂತೆ ನೋಡಿಕೊಳ್ಳುತ್ತಾರೆ.

ಮೊಬೈಲ್ ವಾರಸುದಾರನ ಅನುಮತಿ ಇಲ್ಲದೇ ಯಾರೂ ಮೊಬೈಲ್ ಮುಟ್ಟುವುದಿಲ್ಲ. ಈ ಮಾತು ಗಂಡ–ಹೆಂಡತಿಗೂ ಅನ್ವಯ. ಈ ಸಂಪ್ರದಾಯ ಭಾರತದಲ್ಲೂ ಜಾರಿಗೆ ಬಂದಿದ್ದರೆ, ಮೊಬೈಲ್ ತಪಾಸಣೆ ಕಾಟದಿಂದ ಅವೆಷ್ಟೋ ಗಂಡಂದಿರು ಬಚಾವ್ ಆಗಿ, ಅವೆಷ್ಟೋ ಸಂಸಾರಗಳು ಒಡೆದು ಚೂರಾಗುವುದಾದರೂ ತಪ್ಪುತ್ತಿತ್ತು. ಸಾರ್ವಜನಿಕ ಸ್ಥಳಗಳಲ್ಲಿ ಮೊಬೈಲ್‌ನಲ್ಲಿ ಫೋಟೋ ಕ್ಲಿಕ್ಕಿಸುವಾಗ ನಮ್ಮ ಮೊಬೈಲ್‌ಗಳೇ ವಾಸಿ.

ಫೈವ್ ಪಿಎಂ ಬೆಲ್

ಟೋಕಿಯೋ ನಗರದಲ್ಲಿ ಓಡಾಡುವಾಗ, ಸಾಯಂಕಾಲ ಐದು ಗಂಟೆಯಾಗುತ್ತಿದ್ದಂತೆ ಹಿತವಾದ ಗಂಟೆಯ ಸದ್ದು (Chime) ಕೇಳಿಸುತ್ತದೆ. ಆ ಸದ್ದು ಕೇಳಿಸಿದರೆ, ಸಾಯಂಕಾಲ ಐದು ಗಂಟೆ ಆಯಿತೆಂದರ್ಥ. ಇದು '5 PM Bell' ಎಂದೇ ಪ್ರಸಿದ್ಧ. ಟೋಕಿಯೋ ನಗರವೊಂದೇ ಅಲ್ಲ, ಜಪಾನಿನ ಬೇರೆ ನಗರ, ಊರುಗಳಲ್ಲಿಯೂ ಸಾಯಂಕಾಲ ಐದಕ್ಕೆ ಆ ಸದ್ದು ಕೇಳಿಸುತ್ತದೆ. ಈ ರೀತಿ ಸಂಪ್ರದಾಯ ಬೇರೆ ದೇಶಗಳ ನಗರಗಳಲ್ಲೂ ಇವೆಯಾ, ಗೊತ್ತಿಲ್ಲ. ಈ ಗಂಟೆ ಸದ್ದು ಕೇಳಿದರೆ ಆ ದಿನದ ಕಚೇರಿ ಸಮಯ ಮುಗಿಯಿತು ಎಂದರ್ಥ.

ಆದರೆ ಜಪಾನಿಯರು ಕೆಲಸದ ವಿಷಯದಲ್ಲಿ ರಾಕ್ಷಸರು. ಅವರು ರಾತ್ರಿ, ತಡರಾತ್ರಿಯವರೆಗೂ ಆಫೀಸಿನಲ್ಲಿ ಕೆಲಸಮಾಡುತ್ತಾರೆ. ಹೀಗಿರುವಾಗ ಸಾಯಂಕಾಲ ಐದಕ್ಕೆ ಗಂಟೆ ಸದ್ದು ಹೊಮ್ಮುವುದು ವಿಶೇಷವೇ.

ಜಪಾನಿನಲ್ಲಿ ಭೂಕಂಪ ಮತ್ತು ಪ್ರಾಕೃತಿಕ ವಿಕೋಪಗಳು ಆಗಾಗ ಸಂಭವಿಸುತ್ತಿರುತ್ತವೆ. ಅಂಥ ಘಟನೆ ಸಂಭವಿಸಿದಾಗ, ಸಾರ್ವಜನಿಕರಿಗೆ ಸ್ಪೀಕರ್ ಸಿಸ್ಟಮ್ ಮೂಲಕ ಸೂಚನೆಗಳನ್ನು ನೀಡಲಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಅವಶ್ಯಕತೆ ಇದ್ದಾಗಲೇ ಧ್ವನಿವರ್ಧಕಗಳು ಕೆಟ್ಟು ಹೋಗಿರುತ್ತವೆ. ಇದನ್ನು ನಿತ್ಯವೂ ಪರೀಕ್ಷಿಸಲೆಂದೇ ಪ್ರತಿದಿನ ಸಾಯಂಕಾಲ ಐದು ಗಂಟೆಗೆ ಸದ್ದು ಮಾಡುವ ಸಂಪ್ರದಾಯ ಜಾರಿಗೆ ಬಂದಿರಬಹುದು.

ಮಕ್ಕಳಿಗೆ ದಿನದ ಕೊನೆಯಲ್ಲಿ ಆಟ ಮುಗಿಸಿ ಮನೆಗೆ ಹೋಗುವ ಸೂಚನೆಯೂ ಇದಾಗಿರಬಹುದು. ಮಕ್ಕಳು, ಮಹಿಳೆಯರು ಮತ್ತು ಪಾಲಕರಿಗೆ ರಾತ್ರಿ ಸಮಯ ಶುರುವಾಗುವುದರ ಸೂಚನೆಯೂ ಇದಾಗಿರಬಹುದು. ಕೆಲವು ಪಟ್ಟಣಗಳಲ್ಲಿ ತುರ್ತು ಪ್ರಕಟಣೆ ಅಥವಾ ತುರ್ತು ಸ್ಥಳೀಯ ಮಾಹಿತಿಯನ್ನು ಹಂಚಲು ಸುರಕ್ಷತೆಗಾಗಿ ಇದನ್ನು ಬಳಸುವುದುಂಟು. ಕೆಲವು ಕಡೆ ಜನಪ್ರಿಯ ಚೈಮ್ಸ್ ಟ್ಯೂನ್‌ಗಳು ಅಥವಾ ಪ್ರಾದೇಶಿಕ ಹಾಡುಗಳು ಮೊಳಗುವುದುಂಟು.

'ಫೈವ್ ಪಿಎಂ ಬೆಲ್' ಪದ್ಧತಿಯಿಂದ ಜನರಿಗೆ ಸಮಯದ ಅರಿವು ಮೂಡಿಸಲು ಮತ್ತು ಅವರು ತಮ್ಮ ತಮ್ಮ ಕಾರ್ಯಗಳಲ್ಲಿ ನಿರ್ದಿಷ್ಟ ವ್ಯವಸ್ಥೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಇದು ಪಕ್ಕಾ ಜಪಾನಿ ಪದ್ಧತಿ ಎನ್ನಬಹುದು.

ಟಿಪ್ಸ್ ಸಂಸ್ಕೃತಿ

ಭಾರತದಲ್ಲಿ ಹೆಜ್ಜೆ ಹೆಜ್ಜೆಗೆ ಟಿಪ್ಸ್ ನೀಡಬೇಕು. ಸ್ಟಾರ್ ಹೋಟೆಲಿನಲ್ಲಿ ನಿಮ್ಮ ಕಾರಿನ ಬಾಗಿಲು ತೆಗೆಯುವ ಸ್ವಾಗತಕಾರನ ಕೈಯಲ್ಲಿ ಐವತ್ತೋ, ನೂರೋ ನೋಟನ್ನು ಇಡಬೇಕು. ಇಡದಿದ್ದರೆ ಆತ ವಾರೆಗಣ್ಣಿನಿಂದ ನೋಡುತ್ತಾನೆ. ಕೆಲವರು ಅಷ್ಟಕ್ಕೇ ಐನೂರು, ಸಾವಿರ ರುಪಾಯಿಯನ್ನು ಕೊಡುವುದುಂಟು. ಏನೂ ಕೊಡದೇ ಬಂದರೆ, ಅಪರಾಧಭಾವ ಮೂಡಿದರೂ ಆಶ್ಚರ್ಯವಿಲ್ಲ. ಆದರೆ ಜಪಾನ್ ದೇಶದಲ್ಲಿ ಟಿಪಿಂಗ್ ಅಥವಾ ಟಿಪ್ಸ್ ಕೊಡುವ ಸಂಸ್ಕೃತಿಯೇ ಇಲ್ಲ ಅಂದರೆ ಆಶ್ಚರ್ಯವಾದೀತು. ಹಾಗಂತ ಅಲ್ಲಿ ಸೇವೆಯ ಗುಣಮಟ್ಟ ಅತ್ಯುತ್ತಮವಾಗಿರುತ್ತದೆ. ಆದರೆ ಸೇವೆಗೆ ಬೆಂಬಲವಾಗಿ ಟಿಪ್ಸ್ ನೀಡಲು ಜನರು ನಿರೀಕ್ಷೆ ಮಾಡುವುದಿಲ್ಲ. ಟಿಪ್ಸ್ ನೀಡುವುದು ಕೆಲವೊಮ್ಮೆ ಅಮಾನ್ಯ ಅಥವಾ ಅಪಮಾನಕಾರಿ ಎಂದು ಭಾವಿಸುವುದುಂಟು. ಇದು ಜನರ ಕೆಲಸದ ಹಿರಿಮೆ ಮತ್ತು ಸೇವಾ ತತ್ವಕ್ಕೆ ನೀಡುವ ಗರಿಷ್ಠ ಒತ್ತನ್ನು ತೋರಿಸುತ್ತದೆ.

ಜಪಾನ್ ದೇಶದಲ್ಲಿ ಕೆಲಸವನ್ನು ಪ್ರಾಮಾಣಿಕವಾಗಿ ಮತ್ತು ಸಂಪೂರ್ಣ ಶ್ರದ್ಧೆಯೊಂದಿಗೆ ಮಾಡುವ ಕಾಯಕ ತತ್ವವನ್ನು ಬಲವಾಗಿ ಪ್ರತಿಪಾದಿಸಲಾಗಿದೆ. ತಮ್ಮ ಕೆಲಸವೇ ಪ್ರತಿಫಲ ಎಂದು ಅಲ್ಲಿ ಜನರು ಭಾವಿಸುತ್ತಾರೆ. ಹೆಚ್ಚಿನ ಹೋಟೆಲ್ ಅಥವಾ ರೆಸ್ಟೋರೆಂಟ್‌ನಲ್ಲಿ ಸೇವಾ ಶುಲ್ಕ (Service Charge) ವನ್ನೇ ಬಿಲ್ ಜತೆಗೆ ಸೇರಿಸಲಾಗುತ್ತದೆ, ಆದ್ದರಿಂದ ಹೆಚ್ಚಿನ ಜಾಗದಲ್ಲಿ ಟಿಪ್ಸ್ ನೀಡಬೇಕಾದ ಅವಶ್ಯಕತೆ ಇಲ್ಲ.

ಟಿಪ್ಸ್ ನೀಡುವುದು ವಿದೇಶಿ ಸಂಸ್ಕೃತಿಯಿಂದ ಬಂದ ಸಂಪ್ರದಾಯ ಎಂದು ಜಪಾನಿಯರು ಭಾವಿಸಿದ್ದಾರೆ ಮತ್ತು ತಮ್ಮ ಸಂಸ್ಕೃತಿಗೆ ಇದು ಪೂರಕವಲ್ಲ ಎಂಬುದು ಅವರ ಧೋರಣೆ. ಎಲ್ಲ ಗ್ರಾಹಕರಿಗೆ ಸಮಾನ ಸೇವೆ ನೀಡುವುದು ಪ್ರಮುಖ ಎಂದು ಅಲ್ಲಿ ಗಮನಹರಿಸಲಾಗುತ್ತದೆ. ಹೀಗಾಗಿ, ನೀವು ಜಪಾನ್‌ಗೆ ಹೋದರೆ, ಟಿಪ್ಸ್ ಕೊಡುವುದು ಅವಶ್ಯಕವಲ್ಲ. ಅದರ ಬದಲಿಗೆ, 'ಅರಿಗಾತೋ ಗೋಜೈಮಸು' (ಧನ್ಯವಾದಗಳು) ಎಂದು ಹೇಳುವುದೇ ಅವರ ಸೇವೆಗೆ ಅತ್ಯುತ್ತಮ ಕೃತಜ್ಞತೆ ಎಂದು ಪರಿಗಣಿಸಲಾಗುತ್ತದೆ. ಇಷ್ಟಾಗಿಯೂ, ಕೆಲವೊಮ್ಮೆ ವಿದೇಶಿ ಪ್ರವಾಸಿಗರಿಗೆ ಅಲ್ಲಿನ ಸಂಸ್ಕೃತಿ ಗೊತ್ತಿಲ್ಲದೆ ಟಿಪ್ಸ್ ನೀಡಲು ಮುಂದಾದರೆ, ಹೋಟೆಲ್ ಸಿಬ್ಬಂದಿ ಅದನ್ನು ನಯವಾಗಿ ನಿರಾಕರಿಸುತ್ತಾರೆ ಅಥವಾ ಅದನ್ನು ಮರಳಿ ನೀಡುತ್ತಾರೆ.

ಕ್ಯೋಟೋ ಬಚಾವಾಗಿದ್ದು ಹೇಗೆ?

ಜಪಾನಿನ ಕ್ಯೋಟೋ ಅಥವಾ ಕ್ಯೋತೋ ನಗರ ಐತಿಹಾಸಿಕ ಮತ್ತು ಪುರಾತನ ನಗರಗಳಲ್ಲೊಂದು. ಇದು ದೇಶದ ಸಂಸ್ಕೃತಿ, ಪರಂಪರೆ ಮತ್ತು ಇತಿಹಾಸದ ಕೇಂದ್ರವಾಗಿಯೂ ಹೆಸರುವಾಸಿಯಾಗಿದೆ. 794ರಲ್ಲಿ ಸ್ಥಾಪಿತವಾದ ಕ್ಯೋಟೊ 1868ರ ತನಕ ಸುಮಾರು 1,000 ವರ್ಷಗಳ ಕಾಲ ಜಪಾನ್‌ನ ರಾಜಧಾನಿಯಾಗಿತ್ತು. ಕ್ಯೋಟೊದಲ್ಲಿ 1,600ಕ್ಕೂ ಹೆಚ್ಚು ಬೌದ್ಧ ಮಂದಿರಗಳು ಮತ್ತು 400 ಶಿಂಟೋ ದೇವಾಲಯಗಳಿವೆ.

ಅದರಲ್ಲಿ ಕಿಂಕಾಕುಜೀ (ಗೋಲ್ಡನ್ ಪೆವಿಲಿಯನ್) ಮತ್ತು ಕಿಯೋಮಿಜು–ದೇರಾ ಅತ್ಯಂತ ಪ್ರಸಿದ್ಧವಾಗಿವೆ. ಗೀಶಾಗಳ ಸಂಸ್ಕೃತಿ ಇನ್ನೂ ಕ್ಯೋಟೊದಲ್ಲಿ ಜೀವಂತವಾಗಿದೆ. ಪ್ರತಿ ವರ್ಷ ಚೆರ್ರಿ ಹೂವುಗಳು ಬಿಟ್ಟು, ನಗರವನ್ನು ಸುಂದರವಾಗಿ ಹೊಳೆಯುವಂತೆ ಮಾಡುತ್ತವೆ. ಈ ಸಮಯದಲ್ಲಿ ಕ್ಯೋಟೊ ಪ್ರವಾಸಿಗರಿಗೆ ಅಚ್ಚಳಿಯದ ಅನುಭವ ನೀಡುತ್ತದೆ. ಕ್ಯೋಟೋದಲ್ಲಿ 17 ಯುನೆಸ್ಕೊ ವಿಶ್ವ ಪರಂಪರೆ ಸ್ಥಳಗಳಿವೆ. ಕ್ಯೋಟೊದಲ್ಲಿ ಮ್ಯಾಚಾ (ಹಸಿರು ಚಹಾ) ಅತ್ಯಂತ ಜನಪ್ರಿಯ. ಕ್ಯೋಟೋ ಮೇಲೆ ಅಣುಬಾಂಬ್ ದಾಳಿ ನಡೆದಿಲ್ಲ. ಇದರಿಂದ ಅದರ ಐತಿಹಾಸಿಕ ಕಟ್ಟಡಗಳು ಮತ್ತು ಪರಂಪರೆ ಉಳಿಯಲು ಸಾಧ್ಯವಾಯಿತು. ಇತ್ತೀಚಿನ ಕಾಲದಲ್ಲಿಯೂ ಕ್ಯೋಟೊ ತನ್ನ ಪರಂಪರೆಯನ್ನು ಉಳಿಸಿಕೊಂಡು ತಂತ್ರಜ್ಞಾನ ಮತ್ತು ಆಧುನಿಕತೆಗೆ ಒಗ್ಗಿಕೊಂಡಿದೆ.

ಈ ನಗರ ಎರಡನೇ ಮಹಾಯುದ್ಧದಲ್ಲಿ ಅಣುಬಾಂಬ್ ದಾಳಿಗೆ ತುತ್ತಾಗಲಿಲ್ಲ, ಕಾರಣ ಆಗ ಅಮೆರಿಕ ಅಧ್ಯಕ್ಷರಾಗಿದ್ದ ಹ್ಯಾರಿ ಟ್ರೂಮನ್ ಈ ಊರಿಗೆ ಮಧುಚಂದ್ರಕ್ಕೆ ಬಂದಿದ್ದರಂತೆ. ಆ ನೆನಪನ್ನು ಹಸಿರಾಗಿಡಲು ಅಣುಬಾಂಬ್ ದಾಳಿಗೆ ಅನುಮತಿ ನೀಡಲಿಲ್ಲ. ಹೀಗಾಗಿ ಕ್ಯೋಟೋ ಬಚಾವ್ ಆಯಿತು. ನಾಗಾಸಾಕಿ ಮತ್ತು ಹಿರೋಷಿಮಾಕ್ಕೆ ಆದ ದುರ್ಗತಿ ಕ್ಯೋಟೊಕ್ಕೆ ಆಗಲಿಲ್ಲ.

ಭೃಕಭೌಮನು ಬೀರ್‌ಬಲ್ಲನಾಗಿ ನಡೆಸಿದ ರಾಜಿ ಪಂಚಾಯಿತಿಕೆ

ಅಮೆರಿಕದಲ್ಲಿ ಸುಮಾರು 15 ವರ್ಷಗಳ ಹಿಂದೆ, ಬರಾಕ್ ಒಬಾಮ ರಾಷ್ಟ್ರಾಧ್ಯಕ್ಷರಾಗಿದ್ದಾಗ ನಡೆದ ಒಂದು ರಸಪ್ರಸಂಗವಿದು. ಪಕ್ಕಾ ರಸವಾರ್ತೆ ಮಾದರಿಯದು. ಇದರ ಸಂಕ್ಷಿಪ್ತ ರೂಪವನ್ನು ಆಗ ನಾನು 'ವಿಜಯ ಕರ್ನಾಟಕ' ಪತ್ರಿಕೆಗೆ ಬರೆಯುತ್ತಿದ್ದ 'ಪರಾಗಸ್ಪರ್ಶ' ಅಂಕಣದಲ್ಲಿಯೂ ಒಮ್ಮೆ ಬರೆದಿದ್ದೆ. ಆದರೆ ಪ್ರಾಮಾಣಿಕವಾಗಿ ಹೇಳುತ್ತೇನೆ, ಈ ರಸಪ್ರಸಂಗದ ವಿವರಗಳೆಲ್ಲ ನನಗೆ ಮರೆತೇ ಹೋಗಿದ್ದವು. ಮೊನ್ನೆ ಸಾಮಾಜಿಕ ಜಾಲತಾಣಗಳಲ್ಲಿ 'ಒಳಗೆ ಸೇರಿದರೆ ಗುಂಡು... ಕಮಲಾ ಹ್ಯಾರಿಸ್ ಆಗುವಳೇ ಗಂಡು?' ಎಂದು ತಮಾಷೆ ಮಾಡುವುದಕ್ಕೆ ತಕ್ಕುದಾಗಿ ಹರಿದಾಡಿದ ಕಮಲಾ ಹ್ಯಾರಿಸ್‌ರ ತಥಾಕಥಿತ ಗುಂಡುಸೇವನೆ ವಿಡಿಯೋಗಳನ್ನು ನೋಡಿದಾಗ ನನಗಿದು ಥಟ್ಟನೆ ನೆನಪಾಯಿತು. ಇದರಲ್ಲೂ ಗುಂಡಿನ ಸಮಾಚಾರ ಬರುತ್ತದೆ, ಅಷ್ಟೊಂದು ಹಾಟ್ ಆಗಿ ಅಲ್ಲ, ಬರೀ ಬಿಯರ್ ಮಾತ್ರ. ಅಲ್ಲದೇ ಬರಾಕ್ ಒಬಾಮ ಆಗ ಅಧ್ಯಕ್ಷಗದ್ದುಗೆಯಲ್ಲೇ ಇದ್ದವರು, ಸೋಲಿನ ಸಂಕಟ ಮರೆಯಲಿಕ್ಕೆ ಸೋಮರಸದ ಮೊರೆಹೊಕ್ಕಿದ್ದಲ್ಲ. ತಾನೊಬ್ಬನೇ ಕುಡಿದು ದಾಂಧಲೆ ಎಬ್ಬಿಸಿದ್ದೂ ಅಲ್ಲ. ಆಗ ಉಪಾಧ್ಯಕ್ಷರಾಗಿದ್ದ ಜೋ ಬೈಡನ್‌ರನ್ನೂ ಸೇರಿಸಿ, ಇನ್ನೂ ಇಬ್ಬರು ವಿಶೇಷ ಅತಿಥಿಗಳಿಗೆ ಸತ್ಕಾರದ ನೆಪದಲ್ಲಿ ಬಿಳಿಮನೆಯ ಹುಲ್ಲುಹಾಸಿನ ಮೇಲೆ ರಾಜಾರೋಷವಾಗಿ ಬಿಯರ್‌ಪಾರ್ಟಿ ನಡೆಸಿದ್ದು.

ರಸವಾರ್ತೆ ಎಂದೆನಿಸಿಕೊಳ್ಳುವ ಹೊತ್ತಿಗೇ ಇದರಲ್ಲಿ ನಿಮಗೆ ಅಮೆರಿಕದ ಸಾಮಾಜಿಕ ಜನಜೀವನ, ನೆರೆಕೆರೆಯಲ್ಲಿ ಒಬ್ಬರಿಗೊಬ್ಬರು ಪರಿಚಯವಿಲ್ಲದೇ ಇರುವ ಪರಿಸ್ಥಿತಿಗಳು, ಕಾನೂನಿನ ಚೌಕಟ್ಟು ಮತ್ತು ಕಟ್ಟುನಿಟ್ಟು, ಪ್ರಪಂಚದೆಲ್ಲೆಡೆಯಂತೆ ಇಲ್ಲಿಯೂ ಮಾಧ್ಯಮದ ಮಂದಿ ಕೆಟ್ಟ ಕುತೂಹಲದ ಸುದ್ದಿಗಳಿಗೆ ಹಪಹಪಿಸುತ್ತಿರುವುದು, ರಾಷ್ಟ್ರಾಧ್ಯಕ್ಷನನ್ನೂ ಪ್ರಜೆಗಳು ತರಾಟೆಗೆ ತೆಗೆದುಕೊಳ್ಳುವುದು, ನಿರ್ನಾಮವಾಗಿದೆ ಎಂದು ಎಷ್ಟು ಅಂದುಕೊಂಡರೂ ಆಗಾಗ ಅಲ್ಲಲ್ಲಿ ತಲೆಯೆತ್ತುವ ವರ್ಣಭೇದನೀತಿ... ಮುಂತಾದ ಎಲ್ಲ ಸೂಕ್ಷ್ಮ ಅಂಶಗಳೂ ಗೋಚರಿಸುತ್ತವೆ. ಆದರೆ ರಸವಾರ್ತೆಯಂತೆ ಪ್ರಸ್ತುತಪಡಿಸುವುದಕ್ಕೆ ಮೊದಲು ಒಂದು ಸಿಂಪಲ್ ಚಂದಮಾಮ ಕಥೆಯಂತೆ ಘಟನೆಯನ್ನು ವಿವರಿಸುತ್ತೇನೆ. ಆಮೇಲೆ ಅಸಲಿ ರೂಪಕ್ಕೆ ಬರೋಣ.

ಒಂದಾನೊಂದು ಊರಿನಲ್ಲಿ ಗಟ್ಟಯ್ಯನೆಂಬ ಒಬ್ಬ ಬಡ ಶಿಕ್ಷಕನಿದ್ದನು. ಮನೆಯಲ್ಲಿ ಒಬ್ಬನೇ ವಾಸವಾಗಿದ್ದನು. ಅಕ್ಕಪಕ್ಕದ ಮನೆಗಳವರೊಡನೆ ಆತನ ಒಡನಾಟ, ಆತ್ಮೀಯತೆಗಳೆಲ್ಲ ಅಷ್ಟಕ್ಕಷ್ಟೇ. ಒಮ್ಮೆ ಗಟ್ಟಯ್ಯನು ದೂರದ ಊರಿಗೆ ಪ್ರವಾಸ ಹೋಗಿಬಂದನು. ಹಿಂದಿರುಗಿ ಮನೆ ತಲುಪಿದಾಗ ಅವನಿಗೊಂದು ವಿಚಿತ್ರ ಪರಿಸ್ಥಿತಿ ಎದುರಾಯಿತು. ಮುಂಬಾಗಿಲಿನ ಬೀಗ ತೆಗೆದು ಬಾಗಿಲು ತೆರೆಯೋಣವೆಂದರೆ ಏನು ಮಾಡಿದರೂ ತೆರೆಯಲಿಲ್ಲ. ಬಲಪ್ರಯೋಗ ಮಾಡಿದರೂ ಬಾಗಿಲು ಒಂಚೂರೂ ಮಿಸುಕಲಿಲ್ಲ. ಗಟ್ಟಯ್ಯನ ಪಕ್ಕದ ಮನೆಯಲ್ಲಿ ವಲಿಯಮ್ಮ ಎಂಬ ಹೆಂಗಸು ವಾಸಿಸುತ್ತಿದ್ದಳು. ಅವಳಿನ್ನೂ ಆ ವಠಾರಕ್ಕೆ ಹೊಸಬಳು. ಪಕ್ಕದ ಮನೆಗಳವರ ಪರಿಚಯ ಇಲ್ಲದವಳು. ನೆರೆಮನೆಯ ಬಾಗಿಲಿನ ಮೇಲೆ ಯಾರೋ ಅಪರಿಚಿತ ವ್ಯಕ್ತಿ ಬಲಪ್ರಯೋಗ ಮಾಡುತ್ತಿರುವುದನ್ನು ಕಂಡ ಆಕೆ ಅವನೊಬ್ಬ ಕಳ್ಳನಿರಬೇಕೆಂದುಕೊಂಡು ಬೊಬ್ಬೆ ಹಾಕಿದಳು. ಅಲ್ಲೇ ಗಸ್ತು ತಿರುಗುತ್ತಿದ್ದ ಒಬ್ಬ ಕಾವಲುಗಾರ ಬೊಬ್ಬೆ ಕೇಳಿ ಅಲ್ಲಿಗೆ ಬಂದನು. ಅಷ್ಟುಹೊತ್ತಿಗೆ ಗಟ್ಟಯ್ಯ ತನ್ನ ಮನೆಬಾಗಿಲು ತೆರೆಯುವುದರಲ್ಲಿ ಸಫಲನಾಗಿ ಮನೆಯೊಳಗೆ ಹೋಗಿ ಆಗಿತ್ತು. ಮುಂಬಾಗಿಲು ಇನ್ನೂ ತೆರೆದೇ ಇತ್ತು. ಕಳ್ಳ ಒಳನುಗ್ಗಿದ್ದಾನೆ ಎಂದುಕೊಂಡ ಕಾವಲುಗಾರ ಆ ಮನೆಯ ಒಳಗೆ ಹೋಗಿ ಬಡಪಾಯಿ ಗಟ್ಟಯ್ಯನನ್ನೇ ಹಿಡಿದುಕೊಂಡನು. ಗಲಿಬಿಲಿಯಾದ ಮತ್ತು ಸಿಡಿಮಿಡಿಗೊಂಡ ಗಟ್ಟಯ್ಯ ಕಾವಲುಗಾರನೊಡನೆ ಜಗಳವಾಡಿದನು. ಇದರಿಂದ ಕುಪಿತನಾದ ಕಾವಲುಗಾರ ಗಟ್ಟಯ್ಯನಿಗೆ ಬೇಡಿ ತೊಡಿಸಿ ಅವನನ್ನು ಬಂಧಿಸಿದನು. ಆಮೇಲೆ ಗಟ್ಟಯ್ಯ ಕಳ್ಳನಲ್ಲ, ಅವನೇ ಆ ಮನೆಯ ಯಜಮಾನ ಎಂದು ಗೊತ್ತಾದ ಮೇಲಷ್ಟೇ ಅವನನ್ನು ಬಿಟ್ಟುಬಿಟ್ಟನು.

ಈ ಘಟನೆಯಿಂದ ಊರಿನ ಜನರೆಲ್ಲ ಅಚ್ಚರಿಗೊಂಡರು. ಕೆಲವರು ಗಟ್ಟಯ್ಯನ ಪರವಾಗಿಯೂ ಮತ್ತೆ ಕೆಲವರು ಕಾವಲುಗಾರನ ಪರವಾಗಿಯೂ ಮಾತನಾಡತೊಡಗಿದರು. ಈ ಸುದ್ದಿಯು ರಾಜ ಭೃಕಭೌಮನವರೆಗೂ ಹೋಯಿತು. ಶಿಕ್ಷಕ ಸಮುದಾಯದ ಬಗ್ಗೆ ತುಸು ಜಾಸ್ತಿಯೇ ಸಹಾನುಭೂತಿ ಹೊಂದಿದ್ದ ಭೃಕಭೌಮನು ಗಟ್ಟಯ್ಯನ ಪರ ವಹಿಸಿ, ಕಾವಲುಗಾರ ಮಾಡಿದ್ದು ಶತಮೂರ್ಖತನ ಎಂದುಬಿಟ್ಟನು. ರಾಜ ಹಾಗೆ ಹೇಳಿದ್ದನ್ನು ಕೇಳಿಸಿಕೊಂಡ ಊರಿನ ಕಾವಲುಗಾರರೆಲ್ಲ ರಾಜನ ವಿರುದ್ಧ ತಿರುಗಿಬಿದ್ದರು. ರಾಜನದೂ ಅತಿಯಾಯ್ತು ಎಂದು ಕೆಲ ಪ್ರಭಾವಿ ಪ್ರಜೆಗಳು ಆಡಿಕೊಳ್ಳತೊಡಗಿದರು. ಪರಿಸ್ಥಿತಿ ಕೈಮೀರಿ ಹೋಗುತ್ತಿದೆಯೆಂದು ಎಚ್ಚರಗೊಂಡ ಭೃಕಭೌಮನು ಕಾವಲುಗಾರ ಮತ್ತು ಗಟ್ಟಯ್ಯನನ್ನು ಪ್ರತ್ಯೇಕವಾಗಿ ಮಾತನಾಡಿಸಿ ಇಬ್ಬರನ್ನೂ ಅರಮನೆಗೆ ಕರೆಸಿದನು. ಒಂದು ಪಾನಗೋಷ್ಠಿಯನ್ನು ಹಮ್ಮಿಕೊಂಡು ರಾಜಿ ಪಂಚಾಯಿತಿಕೆ ನಡೆಸಿದನು. ಭೃಕಭೌಮನ ಮಾತಿನ ಮೋಡಿಯೋ ಅಥವಾ ಪಾನಕದ ಪ್ರಭಾವವೋ ಅಂತೂ ಗಟ್ಟಯ್ಯ ಮತ್ತು ಕಾವಲುಗಾರ ಇಬ್ಬರ ಮುಖದಲ್ಲೂ ಮುನಿಸು ಮಾಯವಾಗಿ ಮಂದಹಾಸ ಮೂಡಿತು. ನಸುನಗುತ್ತ ಅವರು ತಮ್ಮತಮ್ಮ ಮನೆಗೆ ತೆರಳಿದರು. ಆಮೇಲೆ ಭೃಕಭೌಮ ಮತ್ತವನ ಪ್ರಜೆಗಳು ಸುಖಶಾಂತಿಯಿಂದ ಬಾಳಿದರು.

ಚಂದಮಾಮ ಶೈಲಿಯಲ್ಲಿದ್ದರೆ ಕಥೆ ಓದುವ ಮಜವೇ ಬೇರೆ, ಅಲ್ಲವೇ? ನಿಮಗೆ ಅಂಥ ಅನುಭವದ ನೆನಪು ತಾಜಾ ಆಗಲಿ ಎಂದು ಬೇಕಂತಲೇ ಆ ಧಾಟಿಯಲ್ಲಿ ನಿರೂಪಿಸಿದೆ. ಈಗ ನಿಜ ಘಟನೆಗೆ ಮರಳೋಣ. ಚಂದಮಾಮ ಕಥೆಯಲ್ಲಿರುವ ಪಾತ್ರಗಳು ಮತ್ತು ಸನ್ನಿವೇಶಗಳನ್ನು ನೈಜತೆಗೆ ಸಮೀಕರಿಸೋಣ. ಕಥೆಯಲ್ಲಿ ಬರುವ ಶಿಕ್ಷಕ ಗಟ್ಟಯ್ಯ ಯಾರೆಂದರೆ ಅಮೆರಿಕದ ಅತಿಪ್ರಖ್ಯಾತ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿರುವ ಪ್ರೊ. ಹೆನ್ರಿ ಲೂಯಿಸ್ ಗೇಟ್ಸ್ ಎಂಬುವವರು. ಕಾವಲುಗಾರ ಯಾರೆಂದರೆ ಕೇಂಬ್ರಿಡ್ಜ್ ಸಿಟಿ ಪೊಲೀಸ್ ಪಡೆಯ ದಕ್ಷ ಮತ್ತು ಕರ್ತವ್ಯನಿಷ್ಠ ಅಧಿಕಾರಿ ಸಾರ್ಜೆಂಟ್ ಜೇಮ್ಸ್ ಕ್ರೌಲೆ. ನೆರೆಮನೆ ಹೆಂಗಸು ವಲಿಯಮ್ಮನಾಗಿ ಪೋಷಕಪಾತ್ರ ನಿರ್ವಹಿಸಿದವಳು ಲೂಸಿಯಾ ವ್ಹಲೆನ್ ಎಂಬೊಬ್ಬ ಗೃಹಿಣಿ. ಮತ್ತೆ, ರಾಜ ಭೃಕಭೌಮ ಯಾರೆಂದು ನೀವು ಈಗಾಗಲೇ ಊಹಿಸಿರಬಹುದಲ್ಲ? ಹೌದು, ಘಟನೆ ನಡೆದಾಗ ಅಮೆರಿಕ ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟ್ ಆಗಿದ್ದ ಬರಾಕ್ ಹುಸೇನ್ ಒಬಾಮ!

2009ರ ಜುಲೈ 16, ಗುರುವಾರ. ಮಟಮಟ ಮಧ್ಯಾಹ್ನದ ಸಮಯ. ಅಮೆರಿಕದ ಈಶಾನ್ಯ ಭಾಗದಲ್ಲಿರುವ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಕ್ಕೆ ಕೂಗಳತೆಯ ದೂರದಲ್ಲಿ ಪ್ರೊ. ಹೆನ್ರಿ ಗೇಟ್ಸ್ ಮನೆಯ ಮುಂಭಾಗ. ಚೀನಾ ದೇಶಕ್ಕೆ ಪ್ರವಾಸ ಹೋಗಿದ್ದ ಪ್ರೊಫೆಸರರು ಆಗಷ್ಟೇ ಹಿಂದಿರುಗಿದ್ದಾರೆ. ಮನೆಬಾಗಿಲಿನ ಬೀಗ ತೆಗೆದು ಚಿಲಕ ಸರಿಸಿದರೂ ಬಾಗಿಲು ತೆರೆದುಕೊಳ್ಳದಿದ್ದಾಗ, ಬಹುಶಃ ಮಳೆಗೆ ಹಲಗೆ ಉಬ್ಬಿಕೊಂಡು ಹಾಗೆ ಆಗಿರಬಹುದು ಎಂದು ತಮ್ಮ ಬೆನ್ನಿನಿಂದೊಮ್ಮೆ, ಭುಜಗಳಿಂದೊಮ್ಮೆ ಬಾಗಿಲ ಮೇಲೆ ಬಲಪ್ರಯೋಗ ಮಾಡಿದ್ದಾರೆ. ಈ ದೃಶ್ಯವನ್ನು ದೂರದಿಂದ ನೋಡಿದ ನೆರೆಮನೆಯಾಕೆ ಲೂಸಿಯಾ, ಅದ್ಯಾರೋ ಕಳ್ಳನಿರಬೇಕೆಂದು ಗಾಬರಿಯಿಂದ ತುರ್ತುಸಹಾಯ ಸಂಖ್ಯೆ 911ಕ್ಕೆ ದೂರವಾಣಿ ಕರೆ ಮಾಡಿದ್ದಾರೆ. ಆ ಹೊತ್ತಿಗೆ ಅದೇ ಪ್ರದೇಶದಲ್ಲಿ ಡ್ಯೂಟಿ ನಿರ್ವಹಿಸುತ್ತಿದ್ದ ಪೊಲೀಸ್ ಆಫೀಸರ್ ಕ್ರೌಲೆಗೆ ತುರ್ತುಸಹಾಯ ಕೇಂದ್ರವು ಕರೆ ಬಂದ ವಿಳಾಸಕ್ಕೆ ಹೋಗುವಂತೆ ಆದೇಶಿಸಿದೆ. ಕ್ರೌಲೆ ಬರುವ ಹೊತ್ತಿಗೆ ಪ್ರೊಫೆಸರ್ ಬಾಗಿಲನ್ನು ತೆಗೆದು ಮನೆಯೊಳಕ್ಕೆ ಹೋಗಿ ಆಗಿದೆ. ಆದರೆ

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಕ್ರೌಲೆಗೆ ಗೇಟ್ಸ್ ಯಾರೆಂದು ಗೊತ್ತಿಲ್ಲವಾದ್ದರಿಂದ ಆತನೊಬ್ಬ ಕಳ್ಳ ಇರಬಹುದು ಎಂಬ ಶಂಕೆಯಿಂದ ಮನೆಯೊಳಕ್ಕೆ ಬಂದು, ''ಶರಣಾಗು!'' ಎಂದು ಕೂಗಿದ್ದಾರೆ. ಇದು ಗೇಟ್ಸ್‌ರನ್ನು ಕೆರಳಿಸಿದೆ. ''ನಾನೊಬ್ಬ ಕಪ್ಪುಮನುಷ್ಯ ಎಂಬ ಕಾರಣದಿಂದ ನನ್ನ ಮೇಲೆ ಗದರುತ್ತಿದ್ದೀಯಾ?'' ಎಂದು ಬಿಳಿಯ ಕ್ರೌಲೆಯನ್ನು ದಬಾಯಿಸಿದ್ದಾರೆ. ಕೋಪ ಅವಮಾನಗಳಿಂದ ಹತಾಶರಾಗಿ

ಚೆನ್ನಾಗಿ ಬೈದಿದ್ದಾರೆ. ಜನಾಂಗದ್ವೇಷಿ ಎಂದು ಜರೆದಿದ್ದಾರೆ. ಗುರುತುಚೀಟಿ ಕೇಳಿದಾಗ ಮೊದಲು ತೋರಿಸದೆ ಒರಟಾಗಿ ವರ್ತಿಸಿದ್ದಲ್ಲದೆ ಪೊಲೀಸ್ ಆಫೀಸರನ ಹೆಸರು ಮತ್ತು ಬ್ಯಾಡ್ಜ್ ಸಂಖ್ಯೆ ಕೇಳಿದ್ದಾರೆ. ಮೊದಮೊದಲು ವಿನಯದಿಂದಲೇ ಸ್ಪಂದಿಸಿದ ಕ್ರೌಲೆ ಒಂದು ಹಂತದಲ್ಲಿ ಹೆಚ್ಚುವರಿ ಪೊಲೀಸ್ ಪಡೆಯನ್ನು ಅಲ್ಲಿಗೆ ಕರೆಸಿದ್ದಾರೆ. ಪ್ರೊಫೆಸರರನ್ನು ಮನೆಯ ಹೊರಕ್ಕೆ ಕರೆಯುವಲ್ಲಿ ಯಶಸ್ವಿಯಾಗಿದ್ದಾರೆ. ಅಕ್ಕಪಕ್ಕದ ಮನೆಗಳವರೆಲ್ಲ ಹೊರಗೆ ಬಂದು ಈ ದೃಶ್ಯವನ್ನು ಬೆರಗುಗಣ್ಣಿಂದ ನೋಡಿದ್ದಾರೆ. ಸಾರ್ವಜನಿಕರೆದುರು ಅನುಚಿತ ವರ್ತನೆ ಮತ್ತು ಸಮವಸ್ತ್ರಧಾರಿ ಪೊಲೀಸ್ ಆಫೀಸರರಿಗೆ ನಿಂದನೆ ಮಾಡಿದ ಅಪರಾಧದ ಮೇಲೆ ಗೇಟ್ಸ್ ಕೈಗೆ ಕೋಳ ತೊಡಿಸಿ ಬಂಧಿಸಲಾಗಿದೆ. ಆಮೇಲೆ ಸ್ಟೇಷನ್‌ಗೆ ಒಯ್ದು ವಿಚಾರಣೆ ನಡೆಸಿ ಬಿಡುಗಡೆ ಮಾಡಲಾಗಿದೆ.

ಇಷ್ಟೇ ಆಗಿದ್ದಿದ್ದರೆ ಈ ಘಟನೆ ಮಾಧ್ಯಮಗಳಲ್ಲಿ ಒಂದು ರಸವಾರ್ತೆಯಂತೆ ಪ್ರಕಟವಾಗಿ ಕ್ರಮೇಣ ಜನಮಾನಸದಿಂದ ಮರೆಯಾಗುತ್ತಿತ್ತು. ಆದರೆ ಜುಲೈ 22ರಂದು ಬೇರೆಯೇ ಒಂದು ಪ್ರಮುಖ ವಿಷಯದ ಚರ್ಚೆಗೆಂದು ಶ್ವೇತಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯ ಕೊನೆಯಲ್ಲಿ ಪತ್ರಕರ್ತರು 'ಪ್ರೊ. ಗೇಟ್ಸ್ ಬಂಧನ ಮತ್ತು ಬಿಡುಗಡೆ' ಸಂಗತಿಯನ್ನು ಪ್ರಸ್ತಾವಿಸಿದರು. ಪತ್ರಕರ್ತರ ಚಾಳಿಯೇ ತಾನೆ ಅದು? ಮುಚ್ಚಿರುವುದನ್ನು ಬೇಕಂತಲೇ ಕೆದಕಿ ತೆಗೆಯುವುದು. ಅಧ್ಯಕ್ಷ ಬರಾಕ್ ಒಬಾಮ ಅದು ಕೇಂಬ್ರಿಡ್ಜ್ ಪೊಲೀಸರು ಮಾಡಿದ ಸ್ಟುಪಿಡ್ ಕೆಲಸ ಎಂದುಬಿಟ್ಟರು. ತಗೊಳ್ಳಿ, ಇಡೀ ಘಟನೆ ಹಠಾತ್ತನೆ ರಾಜಕೀಯ ಬಣ್ಣ ಪಡೆಯಿತು. ಕೈಗೆ ಕೋಳ ತೊಡಿಸಲ್ಪಟ್ಟು ಅವಮಾನಿತರಾದ ಪ್ರೊಫೆಸರ್ ಒಬ್ಬ ಕಪ್ಪು ಮನುಷ್ಯ, ಹಾಗಾಗಿ ಒಬಾಮ ಅವರ ಪರ ವಹಿಸಿ ಪರೋಕ್ಷವಾಗಿ ಬಿಳಿಯರನ್ನು ಮೂದಲಿಸುತ್ತಿದ್ದಾರೆ ಎಂದು ಗುಲ್ಲೆದ್ದಿತು. ಸುದ್ದಿ ಹಸಿವಿನ ಮಾಧ್ಯಮಗಳು ಇದನ್ನು ಮುಖಪುಟದ ಸುದ್ದಿಯಾಗಿಸಿದವು, ಸಂಪಾದಕೀಯ ಬರೆದವು, ಸಿಎನ್‌ಎನ್ ಮತ್ತಿತರ ಚಾನಲ್‌ಗಳಲ್ಲಿ ಇದರ ಕುರಿತೇ ಪ್ಯಾನಲ್ ಡಿಸ್ಕಷನ್‌ಗಳು ನಡೆದವು. ಫಾಕ್ಸ್ ಚಾನಲ್‌ನ ಒಬ್ಬ ಪಂಡಿತನಂತೂ ''ಒಬಾಮ ಪಕ್ಕಾ ಜನಾಂಗದ್ವೇಷಿ ಮನುಷ್ಯ'' ಎಂದು ಡೈರೆಕ್ಟ್ ಆಗಿ ಆರೋಪಿಸಿದನು. ಆಗೇನಾದರೂ ಈಗಿನಂತೆ ಸೋಶಿಯಲ್ ಮೀಡಿಯಾ ಇರುತ್ತಿದ್ದರೆ ಗೇಟ್ಸ್, ಕ್ರೌಲೆ ಮತ್ತು ಒಬಾಮ ಪರ–ವಿರೋಧವಾಗಿ ಕಾಳ್ಗಿಚ್ಚು ಹಬ್ಬುತ್ತಿತ್ತೋ ಏನೋ. ಆದರೂ ಆಗ ಫ್ಯಾಷನ್ ಆಗಿದ್ದ ಬ್ಲಾಗ್‌ಗಳಲ್ಲಿ ಒತ್ತಪ್ರೊತ ಬರಹಗಳು ಮೂಡಿದವು. ರೂಲ್‌ಬುಕ್‌ನಲ್ಲಿ ಇರುವ ನಿಯಮಗಳನ್ನು ಅಕ್ಷರಶಃ ಪಾಲಿಸುತ್ತ ತಾನು ಕರ್ತವ್ಯ ನಿರ್ವಹಿಸಿದ್ದನ್ನು 'ಸ್ಟುಪಿಡ್' ಎಂದದ್ದಕ್ಕೆ ಸಾರ್ಜೆಂಟ್ ಕ್ರೌಲೆ, ಅವನ ಬೆಂಬಲಕ್ಕೆ ಇಡೀ ಕೇಂಬ್ರಿಡ್ಜ್ ಪೊಲೀಸ್‌ಪಡೆ, ಅವರ ಬೆಂಬಲಕ್ಕೆ ದೇಶದೆಲ್ಲೆಡೆಯ ಪೊಲೀಸರು ಅಧ್ಯಕ್ಷ ಒಬಾಮ ಮೇಲೆ ಮುನಿಸಿಕೊಂಡರು. ಮೊದಲ ಬಾರಿ ಕರಿಯನೊಬ್ಬ ಅಧ್ಯಕ್ಷನಾದನೆಂಬ ಬಿಳಿಯರ ಹೊಟ್ಟೆಯುರಿ ಭುಗಿಲೆದ್ದುದರಲ್ಲಿ ಆಶ್ಚರ್ಯವೇನಿಲ್ಲ.

ಇದೆಲ್ಲೋ ಎಡವಟ್ಟಾಯಿತು ಎಂದರಿತ ಎಡಚ (ಎಲ್ಲ ರೀತಿಯಿಂದಲೂ) ಒಬಾಮ ಜುಲೈ 24ರಂದು ಶ್ವೇತಭವನದಲ್ಲಿ ಅರ್ಜೆಂಟಾಗಿ ಒಂದು ಪತ್ರಿಕಾಗೋಷ್ಠಿ ಕರೆದರು. ತಾವು ಕೇಂಬ್ರಿಡ್ಜ್ ಪೊಲೀಸರ ಬಗ್ಗೆ ಮಾತನಾಡಲು ಆಯ್ದುಕೊಂಡ ಪದಗಳು ಅಷ್ಟು ಸಮಂಜಸವಾಗಿರಲಿಲ್ಲ, ಅದಕ್ಕಾಗಿ ವಿಷಾದಿಸುತ್ತೇನೆ ಎಂದು ಕ್ಷಮೆ ಕೇಳದೆಯೇ ಕ್ಷಮೆ ಕೇಳಿದಂತೆ ಮಾಡಿದರು. ಆವತ್ತೇ ಸಂಜೆ ದೂರವಾಣಿಯಲ್ಲಿ ಪ್ರೊ. ಗೇಟ್ಸ್ ಮತ್ತು ಸಾರ್ಜೆಂಟ್ ಕ್ರೌಲೆ ಜತೆ ಪ್ರತ್ಯೇಕವಾಗಿ ಮಾತನಾಡಿದರು. ಇಬ್ಬರನ್ನೂ ಶ್ವೇತಭವನಕ್ಕೆ ಒಂದು ಸೌಹಾರ್ದ ಭೇಟಿಗೆ, ಸಂಜೆ ವೈಟ್‌ಹೌಸ್ ಪೋರ್ಟಿಕೊದಲ್ಲಿ ಕುಳಿತು ಬಿಯರ್ ಹೀರುತ್ತ ಲೋಕಾಭಿರಾಮ ಹರಟೆ ಹೊಡೆಯುವುದಕ್ಕೆ ಆಹ್ವಾನ ನೀಡಿದರು. ಅಧ್ಯಕ್ಷರೇ ಕರೆದಿದ್ದಾರೆಂದರೆ ನಿರಾಕರಿಸುವುದು ಸಾಧ್ಯವಿಲ್ಲವಷ್ಟೆ.

ತಗೊಳ್ಳಿ ಮತ್ತೊಮ್ಮೆ ಮಾಧ್ಯಮಗಳ ಜಠರಾಗ್ನಿಗೆ ತುಪ್ಪ ಸುರಿದಂತಾಯ್ತು. 'ಬಿಯರ್ ಸಮ್ಮಿಟ್', 'ಬಿಯರ್ ಡಿಪ್ಲೊಮೆಸಿ' ಅಂತೆಲ್ಲ ಕಣ್ಣಿಗೆ ರಾಚುವಂತೆ ಪತ್ರಿಕೆಗಳಲ್ಲಿ ಬ್ಯಾನರ್ ಹೆಡ್ಡಿಂಗ್‌ಗಳು ಮೂಡಿದವು. ಯಾವ ಬ್ರ್ಯಾಂಡ್‌ನ ಬಿಯರ್ ಸರ್ವ್ ಮಾಡಬಹುದು, ಯಾವ ಬ್ರ್ಯಾಂಡ್ ಸರ್ವ್ ಮಾಡಿದರೆ ಒಳ್ಳೆಯದು ಎಂದು ಆನ್‌ಲೈನ್ ಪೋಲ್‌ಗಳು, ಚರ್ಚೆಗಳು ನಡೆದವು. ಕಾಫಿಶಾಪ್‌ಗಳಲ್ಲಿ, ಕ್ಷೌರದಂಗಡಿಗಳಲ್ಲಿ ಬಿಯರ್ ಪಾರ್ಟಿಯದೇ ಮಾತಾಯಿತು. ''ಬಿಯರ್ ಪಾರ್ಟಿ ಯಾಕೆ, ಗೇಟ್ಸ್ ಮತ್ತು ಕ್ರೌಲೆ ಇಬ್ಬರಿಗೂ ಒಬಾಮ ಬೈ–ಟೂ ಟೀ ಕುಡಿಸಿ ಇನ್ನೊಂದು ಚಾರಿತ್ರಿಕ 'ಬಾಸ್ಟನ್ ಟೀ ಪಾರ್ಟಿ' ಮಾಡಬಹುದಿತ್ತಲ್ಲ'' (ಕೇಂಬ್ರಿಡ್ಜ್ ಇರುವುದು ಬಾಸ್ಟನ್‌ಗೆ ಹತ್ತಿರವೇ) ಎಂದು ಕೆಲವರು ಕೊಂಕು ತೆಗೆದರು. ''ಟೀ ಯಾಕೆ? ಅವರಿಬ್ಬರಿಗೂ ನೀರು ಕುಡಿಸಬಹುದಿತ್ತಲ್ಲ, ದೇಶಕ್ಕೆ ದೇಶವೇ ರಿಸೆಷನ್‌ನಲ್ಲಿ ಕಾಲು ಮುರಿದುಕೊಂಡು ಬಿದ್ದಿರುವಾಗ, ಇರಾಕ್, ಅಫ್ಘಾನಿಸ್ತಾನಗಳಲ್ಲಿ ಸೈನಿಕರು ದಿನಾ ಸಾಯುತ್ತಲೇ ಇರುವಾಗ ಇಲ್ಲಿ ಇವರದು ಬಿಯರ್ ಪಾರ್ಟಿಯಂತೆ ಬಿಯರ್ ಪಾರ್ಟಿ!'' ಎಂದು ಇನ್ನು ಕೆಲವರು ಮೂಗುಮುರಿದರು. ಒಬ್ಬ ಹಾಸ್ಯಲೇಖಕನಂತೂ ತನ್ನ ಕಲ್ಪನೆಯನ್ನು ಎಲ್ಲಿಯವರೆಗೆ ಹರಿಸಿದನೆಂದರೆ, ಬಿಯರ್ ಪಾರ್ಟಿಯಲ್ಲಿ ಬಿಯರ್ ಜಾಸ್ತಿಯಾಗಿ ಒಬಾಮ ಏನಾದರೂ ಅನುಚಿತ ವರ್ತನೆ (ಉದಾಹರಣೆಗೆ, ಲ್ಯಾಂಪ್‌ಶೇಡ್ ಅನ್ನು ಕಿತ್ತು ತಲೆಮೇಲೆ ಬೋರಲಾಗಿ ಹಾಕಿ ನಡೆಯುವುದು ವಗೈರಾ) ತೋರಿದರೆ ಆಗ ಸಾರ್ಜೆಂಟ್ ಕ್ರೌಲೆ ಸಾಕ್ಷಾತ್ ರಾಷ್ಟ್ರಾಧ್ಯಕ್ಷನಿಗೇ ಕೈಕೋಳ ತೊಡಿಸಬಹುದೇ ಎಂಬ ಕಪೋಲಕಲ್ಪನೆಯನ್ನೂ ಮಾಡಿದನು! ಅಥವಾ, ನಿರಾಯುಧನಾಗಿ ಸಿವಿಲ್ ಡ್ರೆಸ್‌ನಲ್ಲಿ ಬರುವ ಬಿಳಿಯ ಕ್ರೌಲೆಯನ್ನು ಬಿಳಿಮನೆಯಲ್ಲೇ ಇಬ್ಬರು ಕರಿಯರು ಸೇರಿ 'ನೋಡಿಕೊಳ್ಳಬಹುದೇ?' ಎಂದು ಸಹ ಕೆಲವರು (ಕೆಟ್ಟದ್ದನ್ನೇ ಯೋಚಿಸುವವರು) ಅನಗತ್ಯವಾಗಿ ಕಲ್ಪಿಸಿಕೊಂಡಿದ್ದೂ ಇರಬಹುದು.

ಕೊನೆಗೂ ಗುರುವಾರ ಜುಲೈ 30ರ ಸಂಜೆ ಆರು ಗಂಟೆಗೆ ಶ್ವೇತಭವನ ಪೂರ್ವಕಕ್ಷೆಯ ರೋಸ್ ಗಾರ್ಡನ್ ಅಂಗಳದ ಮೂಲೆಯಲ್ಲಿ ವಿಶಾಲವಾದ ಮರದ ಕೆಳಗೆ ವ್ಯವಸ್ಥೆ ಮಾಡಿದ್ದ ಪಿಕ್‌ನಿಕ್ ಟೇಬಲ್ ಮೇಲೆ ಬಿಯರ್ ಪಾರ್ಟಿ ನಡೆದುದನ್ನು ಟಿವಿ ವಾರ್ತಾವಾಹಿನಿಗಳು ನೇರಪ್ರಸಾರ ಮಾಡಿದವು. ಕೊನೇಗಳಿಗೆಯ ಸೇರ್ಪಡೆಯೋ ಏನೋ ವೈಸ್ ಪ್ರೆಸಿಡೆಂಟ್ ಜೋ ಬೈಡನ್ ಸಹ ನಾಲ್ಕನೆಯ ಆಟಗಾರನಾಗಿ ಕಾಣಿಸಿಕೊಂಡರು. ಇನ್ನೂ ಒಬ್ಬರು ಇದ್ದಿದ್ದರೆ ನಿಜಕ್ಕೂ ಅದೊಂದು ಪಂಚಾಯಿತಿಕೆಯೇ ಆಗುತ್ತಿತ್ತು. ಆದರೆ ಆ ನಾಲ್ವರು ಏನು ಮಾತನಾಡಿದರೆಂದು ಯಾರಿಗೂ ಗೊತ್ತಾಗದ ಹಾಗೆ ಐವತ್ತಡಿ ಸುತ್ತಳತೆಯಲ್ಲಿ ಯಾರಿಗೂ ಪ್ರವೇಶವಿರಲಿಲ್ಲವಂತೆ! ಅಂದಹಾಗೆ, ಪ್ರೊ. ಗೇಟ್ಸ್ ಮತ್ತು ಸಾರ್ಜೆಂಟ್ ಕ್ರೌಲೆ ಇಬ್ಬರಿಗೂ ಸಕುಟುಂಬರಾಗಿಯೇ ಬರುವಂತೆ ಆಹ್ವಾನವಿತ್ತಾದ್ದರಿಂದ ಗಂಡಸರು ಬಿಯರ್ ಹೀರುತ್ತ ಲೋಕಾಭಿರಾಮ ಹರಟೆಯಲ್ಲಿ ತೊಡಗಿದ್ದಾಗ ಹೆಂಗಸರು ಮತ್ತು ಮಕ್ಕಳು ಶ್ವೇತಭವನದ ವೈಭವವನ್ನು, ಒಬಾಮ ಸಂಸಾರದ ವೈಭೋಗವನ್ನು ಕಂಡು ಕುಣಿಯುತ್ತ ಕರುಬುತ್ತ ತಲ್ಲೀನರಾಗಿದ್ದರು ಎಂದು ನಾವು ಊಹಿಸಬಹುದು. ಬಿಯರ್ ಪಾರ್ಟಿ ಮುಗಿಯುವಷ್ಟರಲ್ಲಿ ಪ್ರೊ. ಗೇಟ್ಸ್ ಮತ್ತು ಸಾರ್ಜೆಂಟ್ ಕ್ರೌಲೆ ನಡುವೆ ರಾಜಿ ಆಯ್ತು. ಕಪ್ಪು–ಬಿಳಿ ನಿಂದನೆಯ ಹೊಸದೊಂದು ಅಧ್ಯಾಯಕ್ಕೆ ತೆರೆ ಬಿತ್ತು. ಚಾಣಾಕ್ಷತನದಿಂದ ಪರಿಸ್ಥಿತಿಯನ್ನು ನಿಭಾಯಿಸಿದ ಬರಾಕ್ ಒಬಾಮ ತಮ್ಮ 'ಜೆಂಟಲ್‌ಮ್ಯಾನ್ ಪೊಲಿಟಿಷಿಯನ್' ಇಮೇಜ್ ಅನ್ನು ಯಥಾಸ್ಥಿತಿಗೆ ಮರಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಇನ್ನು ಈ ವಿದ್ಯಮಾನದಲ್ಲಿ ವಾಸನೆಯೇನೂ ಇಲ್ಲ (ಸುದ್ದಿಸ್ವಾರಸ್ಯ ಇಲ್ಲ) ಎಂದು ಬಗೆದ ಮಾಧ್ಯಮಗಳು ಅಲ್ಲಿಗೇ ತಣ್ಣಗಾದವು. ಜನಜೀವನ ಮಾತ್ರ ಮೊದಲೂ ಆಮೇಲೂ ಯಾವ ಪರಿಣಾಮವೂ ಇಲ್ಲದೆ ಮುಂದುವರಿಯಿತು.

ಅಷ್ಟಾಗಿ, ಗಟ್ಟಯ್ಯನ (ಪ್ರೊ. ಗೇಟ್ಸ್ ಮಹಾಶಯರ) ಮನೆಬಾಗಿಲು ಮೊದಲು ಸುಲಭವಾಗಿ ತೆರೆದುಕೊಳ್ಳದೇ ಇದ್ದದ್ದು, ಆಮೇಲೆ ಎಷ್ಟೆಲ್ಲ ಬೆಳವಣಿಗೆಗಳನ್ನು ತೆರೆದಿಟ್ಟಿತು! 'ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ' ಎನ್ನುವಂತೆ ಗಟ್ಟಯ್ಯ ಆವತ್ತು ಏನನ್ನು ಗುನುಗುನಿಸುತ್ತ ಬಾಗಿಲು ತೆರೆಯಲು ಯತ್ನಿಸಿದನೋ ಅವನಿಗೆ ಎಂಥೆಂಥ ಸೇವೆ ಲಭಿಸಿತು ನೋಡಿ! ಮೊದಲಿಗೆ ಪೊಲೀಸರಿಂದ ಗದರಿಕೆಯ ಸೇವೆ. ತರುವಾಯ ಕೈಗಳಿಗೆ ಕೋಳಬಂಧನದ ಸೇವೆ. ರಾಷ್ಟ್ರೀಯ ವಾರ್ತಾಪತ್ರಿಕೆಗಳಲ್ಲಿ ಮುಖಪುಟ ಸುದ್ದಿಯಾಗುವ ಸೇವೆ. ಟಿವಿ ವಾಹಿನಿಗಳಲ್ಲಿ ಪ್ಯಾನಲ್ ಡಿಸ್ಕಷನ್‌ಗಳಿಗೆ ಗ್ರಾಸವಾಗುವ ಸೇವೆ. ರಾಷ್ಟ್ರಾಧ್ಯಕ್ಷನಿಂದ ಬಿಯರ್ ಸಮಾರಾಧನೆಯ ಸೇವೆ. ಇದೀಗ 'ತಿಳಿರುತೋರಣ' ಅಂಕಣದಲ್ಲೂ ಕಾಣಿಸಿಕೊಳ್ಳುವ ಸೇವೆ. ಯಾರಿಗುಂಟು ಯಾರಿಗಿಲ್ಲ ಈ ಭಾಗ್ಯ!

ಇವಿಎಂಗಳು ಶಾಪಮುಕ್ತವಾಗುವುದು ಯಾವಾಗ?



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಮಹಾರಾಷ್ಟ್ರ, ಜಾರ್ಖಂಡ್ ವಿಧಾನಸಭಾ ಚುನಾವಣೆಗಳ ಮತ್ತು ಕೆಲ ರಾಜ್ಯಗಳ ಉಪಚುನಾವಣಾ ಫಲಿತಾಂಶಗಳ ಕುರಿತು ಮತದಾನೋತ್ತರ ಸಮೀಕ್ಷೆಗಳು ಪ್ರಕಟವಾದವು. ಕರ್ನಾಟಕ ಸೇರಿದಂತೆ ಎಲ್ಲ ಕಡೆ ಎನ್‌ಡಿಎ ಪರವಾದ ಅಲೆಯಿದೆ ಎಂದು ಬಹುತೇಕ ಸಮೀಕ್ಷೆಗಳು ಅಭಿಪ್ರಾಯ ಪಟ್ಟವು. ಇವು ಬಿತ್ತರವಾಗುತ್ತಿದ್ದಂತೆ ಕರ್ನಾಟಕದಲ್ಲಿ ಮಂತ್ರಿ ಮಹದೇವಪ್ಪನವರು, ''ಮತಯಂತ್ರಗಳ (ಇವಿಎಂ) ಮೇಲೆ ಯಾಕೋ ನಮಗೆ ಅನುಮಾನ ಬರ್ತಾ ಇದೆ'' ಎನ್ನುತ್ತಾ ಫಲಿತಾಂಶಗಳಿಗೆ ಮೊದಲೇ ಸೋಲಿಗೆ ನಿರೀಕ್ಷಣಾ ಜಾಮೀನು ತೆಗೆದುಕೊಂಡುಬಿಟ್ಟರು. ಒಂದೊಮ್ಮೆ ಸಮೀಕ್ಷೆಯಂತೆ ಕಾಂಗ್ರೆಸ್ ಸೋತರೆ, ''ನಾನು ಮೊದಲೇ ಹೇಳಿಲ್ಲವೇ? ಜನಾಭಿಪ್ರಾಯ ನಮ್ಮ ಕಡೆಗೇ ಇತ್ತು, ಆದರೆ ಮತಯಂತ್ರಗಳ ಟ್ಯಾಂಪರಿಂಗ್ ಕಾರಣ ನಾವು ಸೋಲನುಭವಿಸಬೇಕಾಯಿತು'' ಎನ್ನುವುದು ಅವರ ಆಲೋಚನೆಯಾಗಿತ್ತು. ಆದರೆ ಅದೃಷ್ಟವಶಾತ್, ರಾಜ್ಯದ ಮೂರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿತು. ಈಗ ಮತಯಂತ್ರಗಳ ದುರುಪಯೋಗದ ಕುರಿತು ಮಹದೇವಪ್ಪನವರ ಮಾತೇ ಇಲ್ಲ! ಈ ಬಾರಿ ಎಲ್ಲ ಸರಿಯಿತ್ತು ಅಂತ ಕಾಣುತ್ತದೆ.

ಅಚ್ಚರಿಯೆನ್ನುವಂತೆ ಜಾರ್ಖಂಡ್‌ನಲ್ಲಿ 'ಇಂಡಿಯ' ಮೈತ್ರಿಕೂಟವು ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂದರೂ, ಪ್ರಮುಖ ರಾಜ್ಯವಾದ ಮಹಾರಾಷ್ಟ್ರದಲ್ಲಿ ಮಾತ್ರ ಬಿಜೆಪಿ ನೇತೃತ್ವದ 'ಮಹಾಯುತಿ' ಮೈತ್ರಿಕೂಟ ಅಭೂತಪೂರ್ವ ಗೆಲುವು ಸಾಧಿಸಿತು. ಇಲ್ಲಿ 'ಮಹಾವಿಕಾಸ್ ಅಘಾಡಿ' ಮೈತ್ರಿಕೂಟದ ಹೀನಾಯ ಸೋಲಿಗೆ, ಮಹಾರಾಷ್ಟ್ರದವರೇ ಆಗಿದ್ದ ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್‌ರನ್ನು ರಾಹುಲ್ ಗಾಂಧಿಯವರು ಅವಹೇಳನ ಮಾಡಿದ್ದು, ತಮ್ಮ ಭಾಷಣಗಳಲ್ಲಿ ಜಾತಿಗಳಿಗೆ ಇನ್ನಿಲ್ಲದ ಪ್ರಾಧಾನ್ಯ ನೀಡಿದ್ದು, ಅಂಬಾನಿ-ಅದಾನಿಗಳನ್ನು ಅಪರಾಧಿಗಳಂತೆ ಬಿಂಬಿಸಿದ್ದು ಮುಂತಾಗಿ ಅವರ ಪ್ರಚಾರ ವೈಖರಿಯೇ ಕಾರಣವೆಂದು ಅವರ ಮಿತ್ರಪಕ್ಷಗಳು ದೂರಲಾರಂಭಿಸಿದವು. ಕಾಂಗ್ರೆಸ್ ನೇತೃತ್ವದಲ್ಲಿ ಮಿತ್ರಕೂಟಕ್ಕೆ ಪದೇ ಪದೆ ಸೋಲಾಗುತ್ತಿರುವುದರಿಂದ, 'ಇಂಡಿಯ' ಮೈತ್ರಿಕೂಟವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಮಮತಾ ಬ್ಯಾನರ್ಜಿಯವರಿಗೆ ವಹಿಸಬೇಕೆಂದು ಪಶ್ಚಿಮ ಬಂಗಾಳದ ಸಂಸದರೊಬ್ಬರು ಕ್ಯಾತೆ ತೆಗೆದಿದ್ದೂ ಆಯಿತು. ಶರದ್ ಪವಾರ್ ಸೇರಿದಂತೆ, ಮಹಾರಾಷ್ಟ್ರದಲ್ಲಿ ಸೋತ 'ಇಂಡಿಯ' ಕೂಟದ ಯಾವ ನಾಯಕನೂ ಇವಿಎಂ ಬಗ್ಗೆ ದೂರಲಿಲ್ಲ. ಅಪರೂಪಕ್ಕೆಂಬಂತೆ ರಾಹುಲರೂ ಚುನಾವಣಾ ಸೋಲಿನ ಕುರಿತು ಪ್ರತಿಕ್ರಿಯಿಸದೆ ಮೌನಕ್ಕೆ ಶರಣಾದರು.

ಆದರೆ, ಕರ್ನಾಟಕದ ಗೃಹಮಂತ್ರಿ ಡಾ. ಜಿ.ಪರಮೇಶ್ವರ್ ಅವರು ಸ್ವಯಂಸ್ಫೂರ್ತಿಯಿಂದ ಮಹಾರಾಷ್ಟ್ರ ಚುನಾವಣಾ ಸೋಲನ್ನು ಪರಾಮರ್ಶಿಸಿ, ''ಸೋಲಿಗೆ ಇವಿಎಂಗಳೇ ಕಾರಣ'' ಎಂದುಬಿಟ್ಟರು. ಪತ್ರಕರ್ತರು ಸುಮ್ಮನಿರಬೇಕಲ್ಲ, ''ಹಾಗಾದರೆ, ಜಾರ್ಖಂಡ್‌ನಲ್ಲಿ 'ಇಂಡಿಯ' ಮೈತ್ರಿಕೂಟ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂತಲ್ಲಾ! ಅಲ್ಲಿ ಇವಿಎಂಗಳು ಸರಿಯಾಗಿ ಕಾರ್ಯನಿರ್ವಹಿಸಿವೆ ಅಂತ ಅರ್ಥವಾ?'' ಎಂದು ಪ್ರಶ್ನಿಸಿದ್ದಕ್ಕೆ, ''ನೋಡೀ, ಇವಿಎಂಗಳನ್ನು ಟ್ಯಾಂಪರ್ ಮಾಡುವುದರಲ್ಲಿ ಬಿಜೆಪಿಯವರು ನಿಸ್ಸೀಮರಿದ್ದಾರೆ. ಸಂಶಯ ಬರದಿರಲಿ ಎಂಬ ಕಾರಣಕ್ಕೆ ಸಣ್ಣ ರಾಜ್ಯಗಳನ್ನು ವಿಪಕ್ಷಗಳಿಗೆ ಬಿಟ್ಟುಕೊಟ್ಟು, ದೊಡ್ಡ ರಾಜ್ಯಗಳನ್ನು ತಾವೇ ಉಳಿಸಿಕೊಳ್ಳುವ ಹಾಗೆ ಯೋಜನೆ ಹಾಕಿ ಇವಿಎಂಗಳನ್ನು ಬಳಸಿಕೊಳ್ಳುತ್ತಾರೆ. ಹಾಗಾಗಿ, ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿರುವವರೆಗೆ, ಅಲ್ಲಿ ಮತ್ತು ಪ್ರಮುಖ ರಾಜ್ಯಗಳಲ್ಲಿ ವಿರೋಧಿಗಳ ಗೆಲುವು ಕನಸಿನ ಮಾತು'' ಎನ್ನುವ ಬಾಲಿಶ ಹೇಳಿಕೆ ಕೊಟ್ಟು ನಗೆಗೀಡಾದರು ಜಿ.ಪರಮೇಶ್ವರ್. ಕುಣಿಯಲು ಬಾರದವರು 'ನೆಲವೇ ಡೊಂಕು' ಎಂದಂತಿತ್ತು ಈ ಹೇಳಿಕೆಯ ಪರಿ! ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ, ''ಇವಿಎಂ ಬದಲಿಗೆ ಮೊದಲಿನಂತೆ ಮತಪತ್ರದ ಮೂಲಕ ಚುನಾವಣೆ ನಡೆಸುವಂತೆ ಸರಕಾರವನ್ನು ಆಗ್ರಹಿಸಲು 'ಭಾರತ್ ಜೋಡೋ' ಮಾದರಿಯಲ್ಲಿ ರಾಷ್ಟ್ರಾದ್ಯಂತ ಆಂದೋಲನ ನಡೆಸುತ್ತೇವೆ'' ಎನ್ನುವ ಮೂಲಕ ವಿಡಂಬನೆಗೊಳಗಾದರು.

ಈ ಮಧ್ಯೆ, ಇದೇ ವಿಷಯದ ಕುರಿತು ತೆಲಂಗಾಣದ ಪೌಲ್ ಎನ್ನುವವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದು ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಚಾರಣೆಗೆ ಬಂದಿತ್ತು. ''ಇವಿಎಂ ಬರುವುದಕ್ಕಿಂತ ಮುಂಚೆ ಭಾರತದಲ್ಲಿ ಚುನಾವಣಾ ಅಕ್ರಮಗಳು ಯಾವ ಪ್ರಮಾಣದಲ್ಲಿ ನಡೆಯುತ್ತಿದ್ದವು ಎಂಬ ಅರಿವು ನ್ಯಾಯಾಲಯಕ್ಕಿದೆ. ಒಂದೊಮ್ಮೆ ಮತ್ತೆ ಮತಪತ್ರದ ಮೂಲಕ ಚುನಾವಣೆ ನಡೆಯುವಂತಾದರೆ, ಎಲ್ಲವೂ ಸರಿಯಾಗಿ ನಡೆಯಲಿದೆ ಎಂಬ ಭರವಸೆಯನ್ನಂತೂ ಯಾರೂ ಕೊಡಲಾರರು. ಹಾಗಾಗಿ, ಭಾರತದ ಚುನಾವಣಾ ಸುಧಾರಣೆಗಳನ್ನು ಹಿಂದೆಳೆಯುವ ಯಾವುದೇ ಪ್ರಸ್ತಾವನೆಯನ್ನು ತಂದು ನ್ಯಾಯಾಲಯದ ಸಮಯವನ್ನು ವ್ಯರ್ಥಮಾಡಬೇಡಿ'' ಎಂಬ ತೀಕ್ಷ್ಣ ಸಂದೇಶ ನೀಡುವ ಮೂಲಕ ನ್ಯಾಯಾಲಯ ಅರ್ಜಿಯನ್ನು ತಿರಸ್ಕರಿಸಿತು. ಇವಿಎಂ ಬಳಕೆಯ ವಿರುದ್ಧ ವಿವಿಧ ರಾಜ್ಯಗಳ ಉಚ್ಚ ನ್ಯಾಯಾಲಯಗಳಲ್ಲಿ ಮತ್ತು ಭಾರತದ ಸುಪ್ರೀಂಕೋರ್ಟ್‌ನಲ್ಲಿ ಈ ಮೊದಲೂ ಹಲವು ಪ್ರಕರಣಗಳು ದಾಖಲಾಗಿದ್ದಿದೆ. ಅವು ಇಂಥ ಪ್ರಕರಣಗಳನ್ನು ವಜಾಗೊಳಿಸಿ ಚುನಾವಣಾ ಆಯೋಗದ ಪರವಾಗಿ ತೀರ್ಪು ನೀಡಿದ್ದಿದೆ.

ಚುನಾವಣೆಯಲ್ಲಿ ಕಳಪೆ ಪ್ರದರ್ಶನ ನೀಡುವ ಪಕ್ಷಗಳು ತಮ್ಮ ವೈಫಲ್ಯವನ್ನು ಇವಿಎಂ ಮೇಲೆ ಹೊರಿಸುವುದು ಇದೇ ಮೊದಲೇನಲ್ಲ. ''ಇವಿಎಂ ವಂಚನೆಯಿಂದಾಗಿ ಲೋಕಸಭಾ ಚುನಾವಣೆಯಲ್ಲಿ ಯುಪಿಎ ಒಕ್ಕೂಟ ಗೆದ್ದಿದೆ'' ಎಂದು 2009ರಲ್ಲಿ ಬಿಜೆಪಿ ಹೇಳಿಕೊಂಡಿತ್ತು. ''ಚುನಾವಣಾ ಆಯೋಗವು ಇವಿಎಂನಿಂದ ಸಾಂಪ್ರದಾಯಿಕ ಮತಪತ್ರ ವ್ಯವಸ್ಥೆಗೆ ಹಿಂದಿರುಗಬೇಕು'' ಎಂದು ಬಿಜೆಪಿ ನಾಯಕ ಆಡ್ವಾಣಿಯವರೂ ಆಗ ಆಗ್ರಹಿಸಿದ್ದರು.

ವರ್ಷಪೂರ್ತಿ ಒಂದಲ್ಲಾ ಒಂದು ಕಡೆ ಚುನಾವಣೆ ನಡೆಯುತ್ತಲೇ ಇರುವ ಭಾರತದಲ್ಲಿ, ಸದಾ ಏರುತ್ತಿರುವ ಚುನಾವಣಾ ವೆಚ್ಚಗಳಿಗೆ ಕಡಿವಾಣ ಹಾಕಲೆಂದು ಮತ್ತು ಇತರ ಆಡಳಿತಾತ್ಮಕ ಕಾರಣಗಳಿಂದಾಗಿ, ಎಲ್ಲ ಪಕ್ಷಗಳ ಮತ್ತು ತಜ್ಞರ ಅಭಿಪ್ರಾಯ ಪಡೆದೇ ಇವಿಎಂ ಅನ್ನು ಪರಿಚಯಿಸಲಾಗಿತ್ತು. ಸಾರ್ವಜನಿಕ ಸ್ವಾಮ್ಯದ 'ಇಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ' ಮತ್ತು 'ಭಾರತ್ ಇಲೆಕ್ಟ್ರಾನಿಕ್ಸ್' ಅಭಿವೃದ್ಧಿಪಡಿಸಿದ ಇವಿಎಂಗಳನ್ನು 1990ರ ದಶಕದ ಉತ್ತರಾರ್ಧದಲ್ಲಿ ಚುನಾವಣೆಗಳಲ್ಲಿ ಹಂತಹಂತವಾಗಿ ಪರಿಚಯಿಸಲಾಯಿತು. 2000ನೇ ಇಸವಿಯಿಂದೀಚೆಗೆ 4 ಲೋಕಸಭೆ ಮತ್ತು 122 ರಾಜ್ಯ ವಿಧಾನಸಭಾ ಚುನಾವಣೆಗಳನ್ನು ಇವಿಎಂ ಮೂಲಕವೇ ನಡೆಸಲಾಗಿದೆ.

ಭಾರತದಲ್ಲಿ ಇವಿಎಂ ಬಳಕೆಯ ಪರಿಕಲ್ಪನೆ ಶುರುವಾಗಿದ್ದು 1977ರಲ್ಲಿ ಆದರೂ, ಮೇ 1982ರಲ್ಲಿ ಕೇರಳದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಮೊದಲ ಬಾರಿಗೆ ಇವಿಎಂ ಬಳಕೆಯಾಯಿತು. ಆದಾಗ್ಯೂ, ಅದರ ಬಳಕೆಯನ್ನು ಸೂಚಿಸುವ ನಿರ್ದಿಷ್ಟ ಕಾನೂನಿನ ಅನುಪಸ್ಥಿತಿಯಿಂದಾಗಿ ಸುಪ್ರೀಂಕೋರ್ಟ್ ಆ ಚುನಾವಣೆಯನ್ನು ರದ್ದುಗೊಳಿಸುವಂತಾಯಿತು. ತರುವಾಯ 1989ರಲ್ಲಿ, ಇವಿಎಂ ಬಳಕೆಗೆ ಅವಕಾಶ ಕಲ್ಪಿಸಲು 'ಪ್ರಜಾಪ್ರತಿನಿಧಿ ಕಾಯ್ದೆ, 1951'ಕ್ಕೆ ತಿದ್ದುಪಡಿ ತರಲಾಯಿತು. 1998ರಲ್ಲಿ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ದೆಹಲಿ ರಾಜ್ಯಗಳಲ್ಲಿ ಹರಡಿರುವ 25 ವಿಧಾನಸಭಾ ಕ್ಷೇತ್ರಗಳಲ್ಲಿ ಇವನ್ನು ಪ್ರಾಯೋಗಿಕವಾಗಿ ಬಳಸಲಾಯಿತು. 1999ರಲ್ಲಿ 45 ಸಂಸದೀಯ ಕ್ಷೇತ್ರಗಳಿಗೆ, ಫೆಬ್ರವರಿ 2000ದಲ್ಲಿ ಹರಿಯಾಣ ವಿಧಾನಸಭಾ ಚುನಾವಣೆಯ ಕೆಲ ಕ್ಷೇತ್ರಗಳಿಗೆ ಇವಿಎಂ ಬಳಕೆಯನ್ನು ವಿಸ್ತರಿಸಲಾಯಿತು. ಮೇ 2001ರಲ್ಲಿ, ತಮಿಳುನಾಡು, ಕೇರಳ, ಪುದುಚೇರಿ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಇವಿಎಂಗಳನ್ನು ಬಳಸಲಾಯಿತು. ಅಂದಿನಿಂದ ಪ್ರತಿ ರಾಜ್ಯ ವಿಧಾನಸಭಾ ಚುನಾವಣೆಗೆ ಆಯೋಗವು ಇವಿಎಂಗಳನ್ನು ಬಳಸುತ್ತಾ ಬಂದಿದೆ. 2004ರ ಲೋಕಸಭಾ ಚುನಾವಣೆಯಲ್ಲಿ ದೇಶದ ಎಲ್ಲಾ 543 ಕ್ಷೇತ್ರಗಳಲ್ಲಿ ಮೊದಲ ಬಾರಿಗೆ ಇವಿಎಂಗಳನ್ನು ಬಳಸಲಾಯಿತು. 2010ರಲ್ಲಿ, ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚಿಸಿದ ನಂತರ ಚುನಾವಣಾ ಆಯೋಗವು, ಪಾರದರ್ಶಕತೆಯ ಮಾನದಂಡವಾಗಿ ಇವಿಎಂಗಳಲ್ಲಿ 'ಮತದಾರರ ಪರಿಶೀಲಿಸಿದ ಪೇಪರ್ ಆಡಿಟ್ ಟ್ರಯಲ್' (VVPAT) ಕಾರ್ಯಸಾಧ್ಯತೆಯ ಅಧ್ಯಯನಕ್ಕೆ ಪರಿಣತ ತಾಂತ್ರಿಕ ಸಮಿತಿಯನ್ನು ನೇಮಿಸಿತು. ಯಾವ ಪಕ್ಷಕ್ಕೆ ಮತ ಹಾಕಲಾಗಿದೆಯೋ ಅದರ ಚಿಹ್ನೆಯನ್ನು ಒಳಗೊಂಡಿರುವ ಮುದ್ರಿತ ಕಾಗದವನ್ನು ಮತದಾರರಿಗೆ ಪ್ರದರ್ಶಿಸುವ ಸಾಧ್ಯತೆಯ ಪರಿಶೀಲನಾ ಕಾರ್ಯವನ್ನು ಈ ಸಮಿತಿಗೆ ವಹಿಸಲಾಯಿತು. ಸಮಿತಿಯ ಶಿಫಾರಸಿನ ಆಧಾರದ ಮೇಲೆ VVPAT ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಯಿತು.

ಇವಿಎಂ ಟ್ಯಾಂಪರಿಂಗ್ ಸಾಧ್ಯತೆಯನ್ನು ಚುನಾವಣಾ ಆಯೋಗದವರು ಮತ್ತು ಇವಿಎಂ ತಯಾರಕರು ಸತತವಾಗಿ ಅಲ್ಲಗಳೆಯುತ್ತಲೇ ಬಂದಿದ್ದಾರೆ. ಪ್ರೋಗ್ರಾಮಿಂಗ್ ಅನ್ನು ಸುರಕ್ಷಿತ ಉತ್ಪಾದನಾ ಸೌಲಭ್ಯದಲ್ಲಿ ಮಾಡಲಾಗಿರುವುದರಿಂದ ಯಂತ್ರಗಳು 'ಟ್ಯಾಂಪರ್-ಪ್ರೂಫ್' ಆಗಿವೆಯೆಂದು ಅವರು ಪದೇಪದೆ ಸಮರ್ಥಿಸಿಕೊಂಡಿದ್ದಾರೆ. ಮೊದಲಿದ್ದ ಮತಪತ್ರಗಳಿಗೆ ಹೋಲಿಸಿದರೆ, ಇವಿಎಂ ಬಳಕೆಯಾದಾಗಿನಿಂದ ಸಣ್ಣ ಸಣ್ಣ ರಾಜಕೀಯ ಪಕ್ಷಗಳ ಮತಗಳಿಕೆಯಲ್ಲಿ ಮತ್ತು ರಾಜಕೀಯ ಸ್ಪರ್ಧೆಯಲ್ಲಿ ಹೆಚ್ಚಳವಾಗಿರುವುದು ಮುಂತಾದ ಅನೇಕ ಪ್ರಯೋಜನಗಳನ್ನು ತಜ್ಞರ ವರದಿಗಳು ಸಾರುತ್ತವೆ. ಯಂತ್ರಗಳ ವಿನ್ಯಾಸವು ಮತಗಟ್ಟೆಯನ್ನು ವಶಪಡಿಸಿಕೊಳ್ಳುವ ಸಾಧ್ಯತೆಯನ್ನು ಸಂಪೂರ್ಣವಾಗಿ ನಿವಾರಿಸಿದೆ ಎನ್ನುತ್ತಾರೆ ತಜ್ಞರು. ಹಾಗಾಗಿ, ಚುನಾವಣಾ ವಂಚನೆಗಳಲ್ಲಿ ಗಣನೀಯ ಇಳಿಕೆಯಾಗುವುದಕ್ಕೆ ಇವಿಎಂ ಬಳಕೆಯು ಕಾರಣವಾಯಿತು ಎಂಬುದನ್ನು ಅವರ ವಿಶ್ಲೇಷಣೆ ತೋರಿಸುತ್ತದೆ. ಹೊಸ ತಂತ್ರಜ್ಞಾನದ ಪರಿಚಯವು ಮಹಿಳೆಯರ ಹಾಗೂ ಪರಿಶಿಷ್ಟ ಜಾತಿಗಳು-ಬುಡಕಟ್ಟುಗಳಿಗೆ ಸೇರಿದ ಮತದಾರರ ಭಾಗವಹಿಸುವಿಕೆಯ ಹೆಚ್ಚಳಕ್ಕೆ ಕಾರಣವಾಗಿ ಒಟ್ಟಾರೆ ಚುನಾವಣಾ ಪ್ರಕ್ರಿಯೆಯು ಹೆಚ್ಚು ಸ್ಪರ್ಧಾತ್ಮಕವಾಯಿತು ಎನ್ನುವವರಿದ್ದಾರೆ. ಮಾತ್ರವಲ್ಲದೆ, ಇಲೆಕ್ಟ್ರಾನಿಕ್ ಮತದಾನವು, ಮಾನ್ಯವಾಗುವ ಮತಗಳ ಸಂಖ್ಯೆಯನ್ನು ಹೆಚ್ಚಿಸುವ ಅತ್ಯಂತ ಸೂಕ್ತ ಮಾರ್ಗವಾಗಿದೆ. ಇವಿಎಂ ಪರಿಚಯದ ನಂತರ ಭಾರತದಲ್ಲಿ ಚುನಾವಣಾ ಅಪರಾಧ ಪ್ರಕರಣಗಳಲ್ಲಿ ಗಮನಾರ್ಹ ಇಳಿಕೆಯಾಗಿದೆ ಎನ್ನುವುದನ್ನಂತೂ ಒಪ್ಪಲೇಬೇಕು. ಮೊದಲೆಲ್ಲಾ ಸಾವಿರಾರು ಬೂತ್‌ಗಳಲ್ಲಿ ಮರುಮತದಾನ ನಡೆಯುತ್ತಿತ್ತು, ಈಗ ಅದು ಬಹುತೇಕ ಶೂನ್ಯವೆಂತಲೇ ಹೇಳಬೇಕು. ''70 ಕೋಟಿಗೂ ಹೆಚ್ಚಿನ ಮತಗಳನ್ನು ಒಂದೇ ದಿನದಲ್ಲಿ ಎಣಿಸಿ ಮುಗಿಸುವ ಭಾರತದ ಮುಂದೆ, ತಂತ್ರಜ್ಞಾನದ ಬಳಕೆಯಲ್ಲಿ ಮುಂಚೂಣಿಯಲ್ಲಿರುವ ನಮ್ಮ ಕ್ಯಾಲಿಫೋರ್ನಿಯಾದಂಥ ಒಂದು ರಾಜ್ಯದ ಮತಗಳ ಎಣಿಕೆಯನ್ನು ಪೂರ್ಣಮಾಡಿ ಮುಗಿಸಲಾಗಲಿಲ್ಲವಲ್ಲಾ'' ಎಂದು ಅಮೆರಿಕದ ಎಲಾನ್ ಮಸ್ಕ್‌ರಂಥವರೂ ಭಾರತದ ಸಾಧನೆಯನ್ನು ಪ್ರಶಂಸಿಸಿದ್ದಾರೆ. ಇಷ್ಟೆಲ್ಲಾ ಪ್ರಯೋಜನಗಳು ನಮ್ಮ ಕಣ್ಣ ಮುಂದಿದ್ದರೂ, ನಮ್ಮ ಚುನಾವಣಾ ಪ್ರಕ್ರಿಯೆಯನ್ನು ಇತರ ಮುಂದುವರಿದ ದೇಶಗಳು ಕೊಂಡಾಡುತ್ತಿದ್ದರೂ, ನಮ್ಮದೇ ಕೆಲ ರಾಜಕೀಯ ಪಕ್ಷಗಳು ಮಾತ್ರ ಈ ತಂತ್ರಜ್ಞಾನವನ್ನು ಅನುಮಾನದಿಂದ ನೋಡುತ್ತಿರುವುದೇಕೆ ಎಂಬುದೇ ಅರ್ಥವಾಗುತ್ತಿಲ್ಲ.

ಒಂದೆಡೆ, ಚುನಾವಣಾ ವೆಚ್ಚಗಳನ್ನು ಗಣನೀಯವಾಗಿ ತಗ್ಗಿಸಲು 'ಒಂದು ದೇಶ, ಒಂದು ಚುನಾವಣೆ' ಕುರಿತು ದೇಶದಲ್ಲಿ ಚರ್ಚೆಗಳು ನಡೆಯುತ್ತಿದ್ದರೆ ಮತ್ತು ಮತದಾನದ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲು ಮನೆಯಲ್ಲಿ ಅಥವಾ ಕಚೇರಿಗಳಲ್ಲಿದ್ದುಕೊಂಡೇ ಮತಹಾಕುವ ಸುಲಭದ ವ್ಯವಸ್ಥೆಗಳ ಜಾರಿಗೆ ಚಿಂತನೆ ನಡೆಯುತ್ತಿದ್ದರೆ, ಇನ್ನೊಂದೆಡೆ ಕೆಲವರು ಇರುವ ಸುಧಾರಿತ ವ್ಯವಸ್ಥೆಯನ್ನೂ ಹಿಂದಿನ ತಲೆಮಾರಿಗೆ ಕೊಂಡೊಯ್ಯುವ ಯತ್ನದಲ್ಲಿರುವುದು ಅಚ್ಚರಿಯ ಸಂಗತಿ. ಇವಿಎಂ, ಗುರುತಿನ ಚೀಟಿ ಮುಂತಾದ ಕ್ರಾಂತಿಕಾರಕ ಮತ್ತು ಸ್ವಾಗತಾರ್ಹ ಬದಲಾವಣೆಗಳನ್ನು ಭಾರತೀಯ ಚುನಾವಣಾ ವ್ಯವಸ್ಥೆಯಲ್ಲಿ ಜಾರಿಗೆ ತಂದ ಕಾಂಗ್ರೆಸ್ ಪಕ್ಷವೇ ಇಂದು ಅವುಗಳ ವಿರುದ್ಧ ಮಾತನಾಡುತ್ತಿರುವುದು ಸಖೇದಾಶ್ಚರ್ಯವನ್ನು ಉಂಟುಮಾಡುತ್ತಿದೆ. ಹಾಗೊಮ್ಮೆ ಇವಿಎಂಗಳ ಸರ್ವನಿಯಂತ್ರಣವೂ ಬಿಜೆಪಿಯ ಕೈಯಲ್ಲೇ ಇದೆ ಅಂತಾದರೆ, ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತ ಸಿಗಬೇಕಿತ್ತು, ರಾಹುಲ್ ಗಾಂಧಿಯವರು 2 ಕಡೆ ಗೆಲ್ಲಲು ಸಾಧ್ಯವಾಗಬಾರದಿತ್ತು, ಸೋತು ಸುಣ್ಣವಾಗಿದ್ದ ಕಾಂಗ್ರೆಸ್‌ಗೆ 99 ಸ್ಥಾನ ಬರಬಾರದಿತ್ತು ಮತ್ತು ಅಧಿಕಾರದಲ್ಲಿದ್ದ ಬಿಜೆಪಿ ಕರ್ನಾಟಕದಂಥ ಶ್ರೀಮಂತ ರಾಜ್ಯವನ್ನು ಕಳೆದುಕೊಳ್ಳಬಾರದಿತ್ತು ಅಲ್ಲವೇ? 2004ರಿಂದ ಕಾಂಗ್ರೆಸ್‌ಗೆ ದಕ್ಕಿದ್ದ ಚುನಾವಣಾ ಗೆಲುವುಗಳು ಇವಿಎಂ ಟ್ಯಾಂಪರಿಂಗ್ ಮೂಲಕವೇ ಸಾಧಿಸಿದ್ದೇ? ಎಂಬೆಲ್ಲಾ ಪ್ರಶ್ನೆಗಳಿಗೆ ಕಾಂಗ್ರೆಸ್ ಸೇರಿದಂತೆ ಇವಿಎಂಗಳ ಬಗ್ಗೆ ಸಂಶಯಿಸುವವರೇ ಉತ್ತರಿಸಬೇಕಿದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ದರ್ಶನ್‌ಗೆ 'ಬ್ಯಾಕ್' ಟು 'ಬ್ಯಾಕ್' ಸಮಸ್ಯೆ

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ನಮ್ಮ ಸಿನಿಮಾಗಳಲ್ಲಿ ಮಾಸ್ ಸಿನಿಮಾಸ್ ಜಾಸ್ತಿ ಫೇಮಸ್ ಅಂತ ಎಲ್ಲರಿಗೂ ಗೊತ್ತು. ಆದರೆ ಆಗಾಗ ಕ್ಲಾಸ್ ಸಿನಿಮಾಗಳೂ ಬರ್ತಾ ಇರ್ತವೆ. ಬಂದ ಕ್ಲಾಸ್ ಸಿನಿಮಾಗಳೆಲ್ಲ ಕ್ಲಾಸಿಕ್ ಅನ್ನಿಸಿಕೊಳ್ಳಲ್ಲ. ಆದರೆ ಕಳೆದ ವಾರ ಬಿಡುಗಡೆಯಾದ 'ಮರ್ಯಾದೆ ಪ್ರಶ್ನೆ' ಸಿನಿಮಾ ಹಲವು ಪ್ರಶ್ನೆಗಳನ್ನು ಎತ್ತುತ್ತೆ. ಅದಕ್ಕೆ ಮನುಷ್ಯತ್ವದ ಉತ್ತರವನ್ನೂ ಕೊಡುತ್ತೆ. 'ನಾನು ಬಾಲ್ಕನಿ ಕ್ಲಾಸ್ ಪ್ರೇಕ್ಷಕರಿಗೂ ಸಿನಿಮಾ ಮಾಡಲ್ಲ, ಗಾಂಧಿ ಕ್ಲಾಸಿಗೂ ಸಿನಿಮಾ ಮಾಡಲ್ಲ' ಅಂತ ಮಿಡಲ್ ಕ್ಲಾಸ್ ಕಥೆ ಹೇಳಿದ್ದಾರೆ ನಿರ್ದೇಶಕ ನಾಗರಾಜ್ ಸೋಮಯಾಜಿ. ಅದನ್ನು ಹೇಳೋಕೆ ಅವರು ತಗೊಂಡಿರೋದು 2 ಗಂಟೆ. ಆದರೆ ಈ 2 ಗಂಟೆಯಲ್ಲಿ ಅವರು ಈ ಜೀವನ ಅಂದ್ರೆ ಮೂರು ದಿನದ ಬಾಳು ಅನ್ನೋದನ್ನು ತುಂಬಾ ಸಮರ್ಥವಾಗಿ ಹೇಳಿದ್ದಾರೆ. ಸಿನಿಮಾದ ಸ್ಟಾರ್ ಕಾಸ್ಟ್ ದೊಡ್ಡದಾಗಿದ್ದರೂ ಸಿನಿಮಾವನ್ನು ಮೀರಿ ಬೆಳೆಯುವ ಸ್ಟಾರ್‌ಗಳು ಇಲ್ಲಿಲ್ಲ. ಇಂಥ ಅಪ್ಪಟ ನಟ-ನಟಿಯರನ್ನು ಬಳಸಿಕೊಂಡು ಸಿಂಪಲ್ ಆಗೊಂದು ಲೈಫ್ ಸ್ಟೋರಿ ಹೇಳಿದ್ದಾರೆ ನಾಗರಾಜ್ ಸೋಮಯಾಜಿ. ಮಧ್ಯಮ ವರ್ಗದ ಕುಟುಂಬದ ಮಕ್ಕಳು, ಆದರೆ ಅವರಲ್ಲಿರೋ ದೊಡ್ಡ ದೊಡ್ಡ ಆಸೆಗಳು, ಅವರಲ್ಲಿ ಇಲ್ಲದೇ ಇರೋ ಸಣ್ಣ ಬುದ್ಧಿ, ಈ ಸಿನಿಮಾದ ಹೈಲೈಟ್. ಹಾಸಿ ಹೊದ್ದುಕೊಳ್ಳುವಷ್ಟು ಸಮಸ್ಯೆಗಳು ಇದ್ದರೂ, ಹಾಸಿ ಹೊದ್ದುಕೊಳ್ಳುವಷ್ಟು ಇದ್ದರೆ ಸಾಕು ಅನ್ನೋ ಜೀವನ ಮೀರಿ ಬೆಳೆಯುವ ಅವರ ಆಶಯಗಳ ಮಧ್ಯೆ ಸಿನಿಮಾ ಬೆಳೆಯುತ್ತೆ. ಮರ್ಯಾದೆ ಪ್ರಶ್ನೆಯ ಕಥೆ ಒಂದು ಹಂತದಲ್ಲಿ ಸೇಡಿನ ಪ್ರಶ್ನೆಯಾಗಿ ಚೇಂಜ್ ಆದ್ರೂ, ಅದನ್ನ ರೆಗ್ಯುಲರ್ ಕಮರ್ಷಿಯಲ್ ರೇಂಜ್‌ಗೆ ತಗೊಂಡು ಹೋಗದೆ ಮನುಷ್ಯತ್ವದ ಉತ್ತರ ಕೊಟ್ಟೇ ಸಿನಿಮಾ ಮುಗಿಸಿದ್ದಾರೆ ನಿರ್ದೇಶಕರು ಅನ್ನೋದು ಈ ಸಿನಿಮಾದ ಹೆಗ್ಗಳಿಕೆ. ಈ ಸಿನಿಮಾ ಸಹಜವಾಗಿದೆ ಅನ್ನಿಸೋಕೆ ಅದೂ ಒಂದು ಕಾರಣ. ಮಧ್ಯಮ ವರ್ಗದ ಕಥೆ ಅಂದ್ರೆ, ಅದು ಮುಗ್ಗಲು ಬಂದಿರೋ ಹಳೇ ವಸ್ತು ಅನ್ನಿಸಬಹುದು. ಆದರೆ ಮುಗ್ಗಲು ಬದಲಾಯಿಸಿದಾಗಲೊಮ್ಮೆ ಜೀವನ ಹೊಸ ಆಯಾಮಕ್ಕೆ ತೆರೆದುಕೊಳ್ಳುವ ಈ ವರ್ಗದ ಕಥೆಯನ್ನು, ಸ್ವರ್ಗಕ್ಕೆ ಹತ್ತಿರ ಆಗೋದು ಮನುಷ್ಯತ್ವದಿಂದ ಮಾತ್ರ ಅಂತ ನಿರೂಪಿಸಲಾಗಿದೆ.

ಲೂಸ್ ಟಾಕ್

ದರ್ಶನ್ ತೂಗುದೀಪ

- **ಏನ್ ದರ್ಶನ್ ಅವರೇ ನಿಮ್ಮ ಬ್ಯಾಕ್ ಸಮಸ್ಯೆ ಹೇಗಿದೆ?**
- ಅಯ್ಯೋ, ಬ್ಯಾಕ್ ಟು ಬ್ಯಾಕ್ ಸಮಸ್ಯೆಗಳನ್ನು ನೋಡಿ ನೋಡಿ, ಈ ಬ್ಯಾಕ್ ಸಮಸ್ಯೆ ಕಾಮನ್ ಆಗೋಗಿದೆ ಬಿಡಿ.
- **ನಿಜ ಬಿಡಿ. ಮತ್ತೆ ನೀವು ಜೈಲಿಗೆ ಕಮ್‌ಬ್ಯಾಕ್ ಮಾಡೋದು ಯಾವಾಗ?**
- ನನ್ 'ಬಾಡಿ'ಗೆ ಸಮಸ್ಯೆ ಆಗಿದೆ ಅಂತ ಆಸ್ಪತ್ರೆ ಅನ್ನೋ 'ಬಾಡಿಗೆ' ಗೂಡಿಗೆ ಬಂದಿದ್ದೀನಿ. ವಾಪಸ್ ಹೋಗ್ಲೇಬೇಕಲ್ಲ.
- **ಅದ್ಸರಿ. ಆದ್ರೆ, ನೀವು ಬೆನ್ನುನೋವು ಅಂತ ಸುಮ್ನೆ ನಾಟಕ ಮಾಡ್ತಾ ಇದ್ದೀರಾ ಅಂತ ಹೇಳ್ತಾರೆ ನಿಜಾನಾ?**
- ಅದ್ಯಾಕ್ರೀ ಬೆನ್ನುನೋವು ಯಾರಿಗೆ ಬೇಕಾದರೂ ಬರಬಹುದು, 'ಬೆನ್' ಸ್ಟೋಕ್ಸ್‌ಗೂ ಬರುತ್ತೆ.
- **ಸರಿ, ಆಸ್ಪತ್ರೆ ಜೀವನ ಹೆಂಗಿದೆ? ಡಾಕ್ಟು ಏನಂದ್ರು?**
- ಜೈಲ್ ಥರ ಇಲ್ಲೂ, ನಂಗೆ ಅದ್ ಬೇಕು, ಇದ್ ಬೇಕು ಅಂತ ಡಿಮ್ಯಾಂಡ್ ಮಾಡಂಗಿಲ್ಲ, ನಾವ್ ಕೊಟ್ಟಿದ್ ತಗೊಂಡು ಸುಮ್ನೆ ಇರ್ಬೇಕು ಅಂದ್ರು.
- **ನೀವು ಆಸ್ಪತ್ರೆಗೆ ಬರೋ ಬದಲು, ಬಿಗ್ ಬಾಸ್‌ಗೆ ಹೋಗಿದ್ದಿದ್ರೆ ನೂರು ದಿನ ಆರಾಮಾಗಿರ್ಬೋರ್ದಿತ್ತಲ್ಲ?**
- ಅಯ್ಯೋ ಸುಮ್ನೆ ಇರ್ರಿ, ಆ ಬಿಗ್ ಬಾಸ್‌ಗಿಂತ ಈ ಜೈಲೇ ಎಷ್ಟೋ ವಾಸಿ, ಅಲ್ಲಿ ಸುದೀಪ್ ಬೇರೆ ಇರ್ತಾನೆ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಚರ್ಚ್ ಒಂದರಲ್ಲಿ ಕೆಲಸ ಮಾಡುತ್ತಿದ್ದ 18 ವರ್ಷದ ಹುಡುಗ ತನ್ನ ಒಂದು ತಪ್ಪನ್ನು ಕನ್‌ಫೆಸ್ ಮಾಡಿಕೊಳ್ಳಲು ಚರ್ಚಿಗೆ ಹೋದ. ಫಾದರ್ ಅವರನ್ನು ಕಂಡು ''ಫಾದರ್, ನಾನು ಒಂದು ಹುಡುಗಿಯ ಜತೆ ದೈಹಿಕ ಸಂಬಂಧ ಬೆಳೆಸಿದ್ದೇನೆ. ನನಗೆ ನನ್ನ ತಪ್ಪಿನ ಅರಿವಾಗಿದೆ. ಈಗ ನಾನು ಅದನ್ನು ಕನ್‌ಫೆಸ್ ಮಾಡಿಕೊಳ್ಳುತ್ತಿದ್ದೇನೆ'' ಅಂದ. ಕನ್‌ಫೆಷನ್ ಫಾರ್ಮಾಲಿಟಿಗಳನ್ನೆಲ್ಲಾ ಮುಗಿಸುವ ಮುಂಚೆ ಫಾದರ್ ''ಸರಿ ಕಣಪ್ಪಾ, ನಿನ್ನ ಕನ್‌ಫೆಷನ್‌ಗೆ ವ್ಯವಸ್ಥೆ ಮಾಡುತ್ತೇನೆ. ಆದರೆ ನೀನು ಸಂಬಂಧ ಬೆಳೆಸಿದ ಆ ಹುಡುಗಿಯ ಹೆಸರೇನು?'' ಅಂತ ಕೇಳಿದರು. ಅದಕ್ಕೆ ಹುಡುಗ ''ಸಾರಿ ಫಾದರ್, ನಾನು ಅದನ್ನು ಡಿಸ್‌ಕ್ಲೋಸ್ ಮಾಡೋಕಾಗಲ್ಲ'' ಅಂದ. ಫಾದರ್ ಕೇಳುತ್ತಲೇ ಹೋದರು, ಹುಡುಗ ಉತ್ತರಿಸುತ್ತಲೇ ಹೋದ.

''ಅದ್ಸರಿ, ನಮ್ಮ ಏರಿಯಾದಲ್ಲಿ ಅಂಥ ಹುಡುಗಿಯರು ಯಾರಿದ್ದಾರೆ?''

''ಸಾರಿ ಫಾದರ್, ಅದನ್ನು ಡಿಸ್‌ಕ್ಲೋಸ್ ಮಾಡೋಕಾಗಲ್ಲ''

''ಚರ್ಚ್ ಹಿಂದಿನ ರೋಡಿನ ತೆರೆಸಾನಾ?''

''ಸಾರಿ ಫಾದರ್, ಅದನ್ನು ಡಿಸ್‌ಕ್ಲೋಸ್ ಮಾಡೋಕಾಗಲ್ಲ''

''ಲೈಬ್ರೆರಿಯನ್ ಕ್ಯಾಥಿನಾ?''

''ಸಾರಿ ಫಾದರ್, ಅದನ್ನು ಡಿಸ್‌ಕ್ಲೋಸ್ ಮಾಡೋಕಾಗಲ್ಲ''

''ಫ್ಲವರ್ ಶಾಪ್‌ನಲ್ಲಿ ಕೆಲಸ ಮಾಡೋ ರೋಸಿ?''

''ಸಾರಿ ಫಾದರ್, ಅದನ್ನು ಡಿಸ್‌ಕ್ಲೋಸ್ ಮಾಡೋಕಾಗಲ್ಲ''

ಸರಿ, ಫಾದರ್‌ಗೆ ಇವನು ಬಾಯಿ ಬಿಡಲ್ಲ ಅಂತ ಗೊತ್ತಾಯ್ತು. ಕನ್‌ಫೆಷನ್ ಮುಗಿಸಿ, ''ನೀನು ಯಾರ ಹೆಸರನ್ನೂ ಹೇಳಲಿಲ್ಲ. ಅದನ್ನು ನಾನು ಮೆಚ್ಚಿದ್ದೇನೆ. ಆದರೆ ತಪ್ಪಿಗೆ ಶಿಕ್ಷೆ ಆಗಲೇಬೇಕು. ಹಾಗಾಗಿ ನೀನು 4 ವಾರಗಳ ಕಾಲ ಚರ್ಚಿಗೆ ಬರುವಂತಿಲ್ಲ'' ಅಂತ ಹೇಳಿ ಕಳುಹಿಸಿದ. ಹೊರಗೆ ಬಂದ ಹುಡುಗನನ್ನು ಅವನ ಸ್ನೇಹಿತ ಕೇಳಿದ, ''ನೋಡಿದ್ಯಾ, ಸತ್ಯ ಹೇಳಿ ಏನ್ ಉಪಯೋಗ? ಅದರಿಂದ ನಿಂಗೇನ್ ಸಿಕ್ತು?''. ಅದಕ್ಕೆ ಕಿಲಾಡಿ ಹುಡುಗ ತುಂಟದನಿಯಲ್ಲಿ ಹೇಳಿದ ''4 ವಾರಗಳ ರಜೆ ಮತ್ತು ನನ್ನಂಥ ಹುಡುಗರ ಬಲೆಗೆ ಬೀಳುವಂಥ 3 ಹುಡುಗಿಯರ ಡೀಟೇಲ್ಸ್''.

ಲೈನ್ ಮ್ಯಾನ್

- ಇರೋವರ್ಗೂ ತುಂಬಾ ಚೆನ್ನಾಗಿದ್ದು ಬಿಟ್ ಹೋಗೋ ಟೈಮಲ್ಲಿ ಕಿರಿಕ್ ಮಾಡಿ ತಮ್ಮ ಸಣ್ಣ ಬುದ್ಧಿ ತೋರಿಸೋರು
  1. **ಗರ್ಲ್ ಫ್ರೆಂಡು**
  2. **ಮನೆ ಓನರ್ರು**
- ಕುತ್ತಿಗೆವರೆಗೂ ಇರೋ ನದಿ ನೀರಲ್ಲಿ ಮುಳುಗಿದ್ದ ಜಿರಾಫೆ ಹಂದಿಗೆ ಹೇಳಿತಂತೆ, 'ಜಿಗಿಯೋಲೇ, ಇದೇನ್ ಆಳ ಇಲ್ಲ' ಅಂತ
- **ಉಪದೇಶ ಯಾರು ಕೊಡ್ತಾರೆ ಅನ್ನೋದು ಮುಖ್ಯ**
- ಫೇಸ್‌ಬುಕ್ ಕಾಮೆಂಟ್‌ಗಳಿಗೆ ಎರಡೆರಡು ಸಲ ರಿಯಾಕ್ಟ್ ಮಾಡಿದ್ರೆ ಮಾತ್ರ ಆಗ್ತಿದೆ ಅಂತ ಮೋದಿಗೆ ದೂರು ಕೊಟ್ಟನಂತೆ
- One nation, One reaction
- ಧೂಮಪಾನದಿಂದ ಆರೋಗ್ಯ ಕೆಡಿಸಿಕೊಂಡವರನ್ನು ಏನೆನ್ನಬಹುದು?
- **'ಹೋಮ' ಸಿಕ್**
- ಸಿಗರೇಟು ಸೇದುವ ಹುಡುಗಿಯರನ್ನು ಏನಂತಾರೆ?
- **ಹೋಮ 'ಚಿಕ್'**
- **ಚಿಕ್ಕವಯಸ್ಸಿನ ಹುಡುಗರು ಸಿಗರೇಟು ಸೇದುವುದನ್ನು ಏನಂತಾರೆ?**
- **'ಮಾಸ್ಟರ್' ಸ್ಮೋಕ್**
- ಸಿಗರೇಟು ಸೇದಿ ಸತ್ತವರ ಶ್ರದ್ಧಾಂಜಲಿ ಕಾರ್ಯಕ್ರಮ
- **ಸ್ಮೋಕಾಚರಣೆ**
- ಒಂದು ಡೌಟು
- **ನೋ ಸ್ಮೋಕಿಂಗ್ ಅಂದ್ರೆ 'ಕಿಂಗ್' ಸಿಗರೇಟು ಸೇದಬಾರದು ಅಂತ ಅರ್ಥನಾ?**
- ಇನ್ನೊಂದ್ ಡೌಟು
- **ನಿಂಗೆ 'ಇಗೋ' ಜಾಸ್ತಿ ಅಂತ ಹೇಳಿದಾಗ, 'ಹೌದು' ಅಂತ ಒಪ್ಪಿಕೊಳ್ಳೋನಿಗೆ ಇಗೋ ಇದೆ ಅಂತ ಅರ್ಥನಾ? ಇಲ್ಲ ಅಂತ ಅರ್ಥನಾ?**
- ಕಾವೇರಿ ನದಿ 'ದಡ'ದಲ್ಲಿರುವ ಕಾವೇರಿ ಗ್ರಾಮೀಣ ಬ್ಯಾಂಕ್ ಅನ್ನು ಏನಂತಾರೆ ?
- **ಕಾವೇರಿ 'ಬ್ಯಾಂಕ್'**
- ವಿದ್ಯೆ, ಕೆಲಸ ಇಲ್ಲದೆ ಮನೆಗೆ ದೊಡ್ಡ ತಲೆನೋವಾಗಿರುವ ಮಗ
- **ಅಮೃತಾಂಜನೀಪುತ್ರ**

ಪುಟ್ಟಿ ರೇಗಿದಳೆಂದು ಸಿಟ್ಟಿಗೇಳದಿರಿ, ಪ್ಲೀಸ್...

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ನಿಮ್ಮ ಖಾತೆಗೆ ಹಣವನ್ನು ತುಂಬಲೆಂದು ಬ್ಯಾಂಕಿನ ಕೌಂಟರ್ ಬಳಿಯ ಸರತಿ ಸಾಲಿನಲ್ಲಿ ನಿಂತಿರುತ್ತೀರಿ. ಕೌಂಟರ್ ಒಳಗೆ ಕೂತಿರುವುದು ಒಬ್ಬ ಹೆಣ್ಣುಮಗಳು. ನಿಮ್ಮ ಸರದಿ ಬರುತ್ತಿದ್ದಂತೆ ರೊಕ್ಕದ ಕಂತೆಯನ್ನು ಕೌಂಟರ್‌ನ ಕಿಂಡಿಯಲ್ಲಿ ತೂರಿಸಿ, ಆಕೆಯೆಡೆಗೆ ಒಂದು ನಸುನಗು ಬೀರುತ್ತೀರಿ. ಬಲವಂತಕ್ಕೆಂಬಂತೆ ಆಕೆ ನಗುವಿನ ಪ್ರತಿಕ್ರಿಯೆಯಿತ್ತು, ನೀವು ನೀಡಿದ ಹಣವನ್ನು ಎಣಿಸತೊಡಗುತ್ತಾಳೆ. ನಡುನಡುವೆ ತಲೆಯ ನರಗಳನ್ನು ತನ್ನ ಕೋಮಲ ಬೆರಳುಗಳಿಂದ ನವಿರಾಗಿ ಸವರಿಕೊಳ್ಳುತ್ತಾಳೆ. ಬ್ಯಾಂಕ್ ವ್ಯವಹಾರಕ್ಕೆ ಸಂಬಂಧಿಸಿ ನೀವು ಆಕೆಯನ್ನು ಏನೋ ಕೇಳುತ್ತೀರಿ. ಅದಕ್ಕವಳು ನಿಮ್ಮ ಮುಖ ನೋಡದೆಯೇ, ಅಗತ್ಯ ಮಾಹಿತಿಯನ್ನು ಸಂಕ್ಷಿಪ್ತವಾಗಿ ನೀಡಿ ಕೆಲಸದಲ್ಲಿ ವ್ಯಸ್ತಳಾಗುತ್ತಾಳೆ. ನೀವು ಕೌಂಟರ್‌ನ ಕಿಂಡಿಯಲ್ಲಿ ಇಣುಕಿ ಮತ್ತಾವುದೋ ವಿಷಯಕ್ಕೆ ಸ್ಪಷ್ಟೀಕರಣ ಬಯಸಿ ಅದೇನೋ ಪ್ರಶ್ನಿಸುತ್ತೀರಿ.. ಅಷ್ಟೇ! ಇದ್ದಕ್ಕಿದ್ದಂತೆ ನಿಮ್ಮ ಮೇಲೆ ರೇಗಿಬಿಡುತ್ತಾಳೆ. ''ಆಗ್ಲೇ ಹೇಳಿದೆನಲ್ಲಾ ರೀ, ಎಷ್ಟು ಸಲ ಕೇಳ್ತೀರಿ...?'' ಅಂತ ಮುಖ ಗಂಟುಹಾಕಿಕೊಳ್ಳುತ್ತಾಳೆ. ವಾಸ್ತವವಾಗಿ, ಬ್ಯಾಂಕ್ ವ್ಯವಹಾರ ಪರಿಪೂರ್ಣವಾಗಿ ಗೊತ್ತಿಲ್ಲದ ನೀವು, ಸಹಜವಾಗಿಯೇ ಅದೇನೋ ಮಾಹಿತಿ ಕೇಳಿರುತ್ತೀರಿ. ಅದೇನೂ ತಪ್ಪು ನಡೆ ಆಗಿರುವುದಿಲ್ಲ. ಆದರೂ ಆ ಹುಡುಗಿ ನಿಮ್ಮ ಮೇಲೆ ಸಿಡುಕಿರುತ್ತಾಳೆ. ಉಳಿದ ಗ್ರಾಹಕರೆದುರು ಆಕೆ ಹೀಗೆ ವರ್ತಿಸಿದ್ದು ಕಂಡು ನಿಮಗೆ ಕೊಂಚ ಬೇಸರವಾಗುತ್ತದೆ. ಹೀಗಾಗಿ, ''ಅದು ಹಾಗಲ್ಲ ಮೇಡಂ... ನಾನು ಏನು ಕೇಳೋಕ್ಕೆ ಹೊರಟಿದ್ದೆ ಅಂದ್ರೇ...'' ಅಂತ ಆಕೆಗೆ ನೀವು ಏನೋ ಸಮಜಾಯಿಷಿ ಕೊಡೋಕೆ ಹೋಗ್ತೀರಿ. ಆದರೆ ಆಕೆ ನೋಡನೋಡುತ್ತಿದ್ದಂತೆಯೇ 'ಅಮ್ಮಾ' ಎಂದು ಸಣ್ಣಗೆ ನರಳಿ ಎರಡೂ ಕೈಗಳಿಂದ ತನ್ನ ತಲೆಯನ್ನು ಒತ್ತಿಹಿಡಿದುಕೊಳ್ಳುತ್ತಾಳೆ. ನೀವು ದಿಗ್ಭ್ರಾಂತರಾಗುತ್ತೀರಿ. ಇವಿಷ್ಟನ್ನೂ ನೋಡುತ್ತ ಸರತಿ ಸಾಲಿನಲ್ಲಿ ನಿಮ್ಮ ಹಿಂದೆ ನಿಂತಿದ್ದವರು, ''ಆಯ್ತೇನ್ರೀ ನಿಮ್ಮ ರಾಮಾಯಣಾ... ಬೇಗ ಮುಗಿಸ್ರೀ... ನಿಮ್ ಥರಾ ನಾವೂ ಕಸ್ಟಮರ್‌ಗಳೇ ಕಣ್ರೀ...'' ಎಂದು ಮಾತಲ್ಲೇ ತಿವಿಯುತ್ತಾರೆ. ವಿನಾಕಾರಣ ಆಪಾದಿತನ ಸ್ಥಾನದಲ್ಲಿ ನಿಲ್ಲಬೇಕಾಗಿ ಬಂದಿದ್ದಕ್ಕೆ ಹಣೆಬರಹವನ್ನು ಹಳಿದುಕೊಂಡು ''ಈ ಯಮ್ಮ ಮಾಡ್ತಾ ಇರೋದು ಕ್ಯಾಷಿಯರ್ ಕೆಲಸ, ಆದ್ರೆ ತನ್ನನ್ನು ಫೈನಾನ್ಸ್ ಮಿನಿಸ್ಟ್ರು ಅಂತ ಅಂದ್ಕೊಂಡುಬಿಟ್ಟಿದ್ದಾಳೆ ಅನ್ಸುತ್ತೆ....'' ಅಂತ ಗೊಣಗಿಕೊಂಡು ಅಲ್ಲಿಂದ ಜಾಗ ಖಾಲಿಮಾಡುತ್ತೀರಿ.

• • •

ಆಕೆ ಹದಿನೆಂಟರ ಚೆಲುವೆ. ಕಾಲೇಜಿನ ಗ್ರಂಥಾಲಯದ 'ರೆಫರೆನ್ಸ್ ಸೆಕ್ಷನ್'ನಲ್ಲಿ ಕೂತು, ಎದುರಿನ ಟೇಬಲ್ ಮೇಲೆ ಒಂದೆರಡು ಪುಸ್ತಕಗಳನ್ನು ಹರಡಿಕೊಂಡಿದ್ದಾಳೆ. ಕೆಲ ಹೊತ್ತಿನ ನಂತರ ಅಲ್ಲಿಗೆ ಬರುವ ಹುಡುಗನೊಬ್ಬ ''ಹಾಯ್, ಹೇಗಿದ್ದೀಯಾ...?'' ಎಂದು 'ವಿಶ್' ಮಾಡಿ ನಸುನಗುತ್ತಾ, ಅವಳೆದುರಿನ ಖಾಲಿ ಕುರ್ಚಿಯಲ್ಲಿ ಕೂರುತ್ತಾನೆ. ಆದರೆ ಪ್ರತಿಯಾಗಿ ಅವಳು ನಗುವುದೂ ಇಲ್ಲ, 'ವಿಶ್' ಮಾಡುವುದೂ ಇಲ್ಲ; ಬದಲಿಗೆ ದುರ್ದಾನ ತೆಗೆದುಕೊಂಡವಳಂತೆ ತನ್ನ ಪುಸ್ತಕ ಮತ್ತು ಬ್ಯಾಗ್ ಎತ್ತಿಕೊಂಡು 'ಛೇ!' ಎಂದು ಸಣ್ಣಗೆ ಸಿಡುಕುತ್ತಾ ಅಲ್ಲಿಂದ 'ರುಮ್ಮನೆ' ಹೊರಟುಬಿಡುತ್ತಾಳೆ. ಈ ಸೀನ್ ನೋಡಿ ಸುತ್ತಮುತ್ತಲ ಟೇಬಲ್‌ನಲ್ಲಿದ್ದವರೆಲ್ಲಾ ತಮ್ಮತಮ್ಮಲ್ಲೇ ಮುಸುಮುಸು ನಗತೊಡಗುತ್ತಾರೆ.

ಹಾಗೆ 'ವಿಶ್' ಮಾಡಿ ನಸುನಗುತ್ತಾ ಅವಳೆದುರು ಕೂತ ಆ ಹುಡುಗ ಅನಾಮಿಕನೇನಲ್ಲ, ಆಕೆಯ ಸಹಪಾಠಿಯೇ! ಹಿಂದಿನ ದಿನವಷ್ಟೇ ಆಕೆಯೊಂದಿಗೆ ಕಾಲೇಜು ಪಕ್ಕದ ಪಾರ್ಕಿನಲ್ಲಿ ಹೆಜ್ಜೆಹಾಕಿದವನು, ಕ್ಯಾಂಟೀನ್‌ನಲ್ಲಿ ಐಸ್‌ಕ್ರೀಂ ಸವಿದವನು. ಆತ ಪುಂಡು-ಪೋಕರಿ ಹುಡುಗನೇನಲ್ಲ, ಸಭ್ಯನೇ. ಇಷ್ಟಾಗಿಯೂ ತನ್ನ ಗೆಳತಿ ಹಾಗೆ ಒರಟಾಗಿ ನಡೆದುಕೊಂಡಿದ್ದನ್ನು ಕಂಡು, ''ಈ ಹುಡುಗಿಯರೇ ಹೀಗೆ... '' ಎಂದು ಏನೇನೋ ಕಲ್ಪಿಸಿಕೊಳ್ಳತೊಡಗುತ್ತಾನೆ. ಅಕ್ಕಪಕ್ಕದಲ್ಲಿ ಬಂದು ನಿಲ್ಲೋ ಗೆಳೆಯರೆನಿಸಿಕೊಂಡ ಮೂತಿಗಳು, ''ಬಿಡು ಗುರೂ, ಇವಳೊಬ್ಬಳೇನಾ ತ್ರಿಪುರ ಸುಂದರಿ?! ನೀನು ಮನಸ್ಸು ಮಾಡಿದ್ರೆ, ಇಂಥ ನೂರು ಹುಡುಗೀರು ಕ್ಯೂನಲ್ಲಿ ನಿಲ್ತಾರೆ...'' ಅಂತ ಪಕ್ಕವಾದ್ಯ ನುಡಿಸುತ್ತವೆ! ಹುಡುಗಿಯ ಬಿರುಸು ಪ್ರತಿಕ್ರಿಯೆಯ ಫಲಾನುಭವಿಯಾದ ಹುಡುಗ ಭಾರವಾದ ಹೆಜ್ಜೆಗಳನ್ನಿಡುತ್ತಲೇ ಅಲ್ಲಿಂದ ತೆರಳುತ್ತಾನೆ...

• • •



ಬರೆಯುತ್ತಾ ಹೋದರೆ, ಇಂಥ ಹತ್ತಾರು ನಿದರ್ಶನಗಳನ್ನು ಇಲ್ಲಿ ಹರವಿಡಬಹುದು. ನಿಮ್ಮಲ್ಲೂ ಕೆಲವರು ಇಂಥ 'ಒರಟು ಅಭಿವ್ಯಕ್ತಿಯ, ವಿಲಕ್ಷಣ ಪ್ರತಿಕ್ರಿಯೆಯ' ಫಲಾನುಭವಿಗಳಾಗಿರಬಹುದು. ಆದರೆ, ಇಂಥ ಘಟನೆ ಜರುಗಿದ ಕ್ಷಣಕ್ಕೆ ಮತ್ತು ನಂತರವೂ ನಾವು ''ಛೇ, ಯಾವತ್ತೂ ಹೀಗಾಡದವಳು ಇವತ್ತು ಹೀಗೆ ಮಾಡಿಬಿಟ್ಟಳಲ್ಲಾ?'' ಎಂದು ಅಸಮಾಧಾನವನ್ನೂ, ಕೊಂಚ ಆಕ್ರೋಶವನ್ನೂ ಹೊಮ್ಮಿಸುತ್ತೇವೆಯೇ ಹೊರತು, ಆ ಹುಡುಗಿಯ ಅಂಥ ವರ್ತನೆಗೆ ಕಾರಣವೇನಿರಬಹುದು ಎಂಬುದನ್ನು ವಿಶ್ಲೇಷಿಸುವುದು ಕಮ್ಮಿ. ಏಕೆಂದರೆ, ಹೇಳಿಕೇಳಿ ನಮ್ಮದು ಗಂಡುಜಾತಿ; ಹೆಣ್ಣಿನ ಕೆಲ ತಲ್ಲಣಗಳು ನಮಗೆ ಹೇಗೆ ತಾನೇ ಅರ್ಥವಾಗಬೇಕು?!

ಹೆಣ್ಣಿನ ದೇಹ ಮತ್ತು ಮನಸ್ಸನ್ನು ಕವಿಗಳು 'ಸುಮಕೋಮಲ' ಎಂದು ವರ್ಣಿಸುವುದಿದೆ. ಹೆಣ್ಣಿನ 'ಹೂವಿನಂಥ' ಮನಸ್ಸೂ ಹೀಗೆ ಕೆಲವೊಮ್ಮೆ ನಮ್ಮಂಥವರಿಗೆ 'ಮುಳ್ಳಿನಂತೆ' ಚುಚ್ಚಿದರೆ, ಆಕೆ ವಿನಾಕಾರಣ ರೇಗಿದಳು ಎನಿಸಿದರೆ ಪ್ರತಿಯಾಗಿ ನಾವೂ ರೇಗಬಾರದು, ಸಿಟ್ಟಿಗೇಳಬಾರದು. ಕಾರಣ, ಪ್ರಾಯಶಃ ಆಕೆ ತನ್ನದೇ ಆದ ದೈಹಿಕ ಮತ್ತು ಮಾನಸಿಕ ತಲ್ಲಣಗಳಲ್ಲಿ ಬಂದಿಯಾಗಿರುವ ಸಾಧ್ಯತೆ ಇರುತ್ತದೆ. ಅಂಥ ತಲ್ಲಣಗಳ ಪೈಕಿ ಒಂದು- ಆಕೆಯ ಮಾಸಿಕ ಋತುಧರ್ಮ. ಹೌದು, ಮೇಲೆ ಉಲ್ಲೇಖಿಸಿದಂತೆ ನಮ್ಮಂಥ ಗಂಡುಜಾತಿಗೆ ಅದು ಅರ್ಥವಾಗದ, ಅನುಭವಕ್ಕೆ ಬಾರದ ಸಂಗತಿ. ಆದರೆ 'ಪರಾನುಭೂತಿ ಶಕ್ತಿ'ಯನ್ನಾದರೂ ನಾವು ರೂಢಿಸಿಕೊಂಡು ಆ ತಲ್ಲಣವನ್ನು ಗ್ರಹಿಸಬಹುದಲ್ಲವೇ?

ಹುಡುಗಿಯು ಬಾಲ್ಯಾವಸ್ಥೆಯಿಂದ ಹದಿಹರೆಯಕ್ಕೆ ಅಡಿಯಿಡುವ ಸಂದರ್ಭದಲ್ಲಿ ಆಗುವ ಒಂದಷ್ಟು ದೈಹಿಕ-ಮಾನಸಿಕ ಸ್ಥಿತ್ಯಂತರಗಳಲ್ಲಿ ಪ್ರಮುಖವಾದದ್ದು ಆಕೆಯ ಋತುಚಕ್ರದ ಆರಂಭ. ಆಡುಭಾಷೆಯಲ್ಲಿ ಇದನ್ನು 'ಮುಟ್ಟಾಗುವುದು' ಎಂದೇ ಕರೆಯುವುದು ವಾಡಿಕೆ. ಇಂಥ ಘಟ್ಟದಲ್ಲಿ ಕೆಲ ಹೆಣ್ಣು ಮಕ್ಕಳಲ್ಲಿ ಅವ್ಯಕ್ತ ಭಯ, ಮುಜುಗರ, ಹಿಂಜರಿಕೆ ಇತ್ಯಾದಿಗಳು ಮಡುಗಟ್ಟಿರುತ್ತವೆ. ಬದಲಾದ ತಮ್ಮ ಶಾರೀರಿಕ-ಮಾನಸಿಕ ಸ್ಥಿತಿಗತಿಗೆ ಅವರಿನ್ನೂ ಹೊಂದಿಕೊಂಡಿರುವುದಿಲ್ಲ, ಜತೆಗೆ ಋತುಚಕ್ರದ ನಿರ್ವಹಣೆಯ ಕಿರಿಕಿರಿಯೂ ಅವರಲ್ಲಿ ಒಂದಷ್ಟು ಗೊಂದಲವನ್ನು ಹುಟ್ಟುಹಾಕಿರುತ್ತದೆ. ಇದು ಎಲ್ಲ ಹೆಣ್ಣುಮಕ್ಕಳಲ್ಲೂ ಒಂದೇ ರೀತಿಯಲ್ಲಿರುವುದಿಲ್ಲ ಅಥವಾ ತೊಂದರೆಯ ತೀವ್ರತೆ ಒಂದೇ ಸ್ತರದಲ್ಲಿರುವುದಿಲ್ಲ. ಇಂಥ ವೇಳೆ ಕೆಲವರು ತಮಗೆ ಆಗುತ್ತಿರುವ ತೊಂದರೆಗಳನ್ನು ಹೊರಗೆ ಹೇಳಿಕೊಳ್ಳಲಾಗದೇ ಮುಚ್ಚಿಟ್ಟುಕೊಂಡು ಒಳಗೊಳಗೇ ತಲ್ಲಣ ಮತ್ತು ವೇದನೆಯನ್ನು ಅನುಭವಿಸುವುದುಂಟು. ಬದಲಾಗುತ್ತಿರುವ ಜೀವನಶೈಲಿ, ಆಹಾರಕ್ರಮ, ಕಾಲಘಟ್ಟ, ಹವಾಮಾನ ಅಥವಾ ಪರಿಸರದ ಪ್ರಭಾವ, ದೈಹಿಕ ಚಟುವಟಿಕೆಗಳ ಪ್ರಮಾಣದಲ್ಲಿನ ಕುಸಿತ ಇತ್ಯಾದಿ ಕಾರಣಗಳಿಂದಾಗಿ ಈಗೆಲ್ಲಾ 10-11 ವಯಸ್ಸಿನ ಹೆಣ್ಣು ಮಕ್ಕಳಲ್ಲೇ ಋತುಚಕ್ರ ಶುರುವಾಗುತ್ತಿರುವಂಥ ನಿದರ್ಶನಗಳನ್ನು ನೀವು ಕೇಳಿರಬಹುದು. ಮನೆಯಲ್ಲಿನ ಇಂಥ ಹೆಣ್ಣು ಮಕ್ಕಳನ್ನು 'ಪುಟ್ಟೀ...' ಎಂದು ಕರೆಯುವುದು ಬಹುತೇಕರ ವಾಡಿಕೆ ಎಂದಿಟ್ಟುಕೊಳ್ಳೋಣ. ಒಮ್ಮೆ ಕಲ್ಪಿಸಿಕೊಳ್ಳಿ ಅಥವಾ ಪ್ರಶ್ನಿಸಿಕೊಳ್ಳಿ: ನಮ್ಮ-ನಿಮ್ಮ ಮನೆಯ 'ಪುಟ್ಟಿ' ಇಂಥ ಬದಲಾದ ದೇಹಸ್ಥಿತಿ-ಮನಸ್ಥಿತಿಗಳಲ್ಲಿ ಅದಿನ್ನೆಂಥಾ ಮಾನಸಿಕ ಆಂದೋಲನಗಳಿಗೆ ತನ್ನನ್ನು ಒಡ್ಡಿಕೊಂಡಿರಬಹುದು?

'ಮಾಸಿಕ ಮುಟ್ಟಿನ' ಈ ಘಟ್ಟದಲ್ಲಿ 'ಪುಟ್ಟಿ'ಯ ಗರ್ಭಾಶಯದ ಒಳಪದರವು ಬೆಳೆಯುತ್ತದೆ; ಒಂದೊಮ್ಮೆ ಸಂತಾನೋತ್ಪತ್ತಿ ಕ್ರಿಯೆ/ಫಲವಂತಿಕೆ ನಡೆಯದಿದ್ದಲ್ಲಿ ಆ ಒಳಪದರವು ಕಳಚಿಕೊಂಡು ರಕ್ತಸ್ರಾವದ ರೂಪದಲ್ಲಿ ದೇಹದಿಂದ ಹೊರಬರುತ್ತದೆ. ನೆನಪಿಡಿ, 'ರಕ್ತಸ್ರಾವ' ಎಂಬುದು ಸಾಮಾನ್ಯ ಸಂದರ್ಭದಲ್ಲೂ ಒಂದಷ್ಟು ಮಟ್ಟಿಗೆ ಸುಸ್ತು ಮಾಡುವ ಬಾಬತ್ತು. ಹೀಗಿರುವಾಗ ಕನಿಷ್ಠ ಪಕ್ಷ ನಾಲ್ಕೈದು ದಿನಗಳವರೆಗೆ ಹೀಗೆ ಆಗಿಂದಾಗ್ಗೆ ರಕ್ತಸ್ರಾವವಾಗುವ ಈ ಘಟ್ಟದಲ್ಲಿ 'ಪುಟ್ಟಿ' ದೈಹಿಕವಾಗಿ ಮತ್ತು ಮಾನಸಿಕವಾಗಿ ಅದೆಷ್ಟು ನಿತ್ರಾಣಳಾಗಿರಬೇಕು? (ಅಧಿಕ ರಕ್ತಸ್ರಾವದಿಂದಾಗಿ ಕೆಲವರಿಗೆ ಕಣ್ಣು ಕತ್ತಲಿಟ್ಟುಕೊಂಡು ಬರುವುದೂ ಇದೆ). ಹಾಗಂತ ದಿನನಿತ್ಯದ ಕೆಲಸಗಳನ್ನು ಆಕೆ ನಿಲ್ಲಿಸಲಾದೀತೇ? ಶಾಲಾ-ಕಾಲೇಜಿಗೆ ಹೋಗಲೇಬೇಕು, ಕಚೇರಿ ಕೆಲಸಗಳನ್ನು ನಿರ್ವಹಿಸಲೇಬೇಕು. ಇಲ್ಲದಿದ್ದರೆ ಬದುಕಿನ ಬಂಡಿ ಸಾಗುವುದಾದರೂ ಹೇಗೆ? ಒಟ್ಟಾರೆಯಾಗಿ, ಒಂಥರಾ ಅಸ್ಥಿರ ತಳಹದಿಯ ಮೇಲೇ ಹೆಜ್ಜೆಹಾಕುತ್ತಿರುವಂತಿರುತ್ತದೆ ಆಕೆಯ ಸ್ಥಿತಿ. ಇದು 'ಪುಟ್ಟಿ'ಯಲ್ಲಿ ಮಾತ್ರವಲ್ಲದೆ, ಕೆಲವು ಮಧ್ಯವಯಸ್ಕ ಮಹಿಳೆಯರಲ್ಲೂ ಕಾಣಬರುವಂಥದ್ದೇ. ಇಂಥ ಸಂದರ್ಭಗಳಲ್ಲಿ ಸೊಂಟನೋವು, ಕೆಲವೊಮ್ಮೆ ತಲೆನೋವು, ಮೈ-ಕೈ ಹಿಂಡಿದಂತಾಗುವಿಕೆ ಸೇರಿದಂತೆ, ಆಯಾ ಹೆಣ್ಣು ಮಕ್ಕಳ ದೇಹಪ್ರಕೃತಿಯನ್ನಾಧರಿಸಿ ವಿಭಿನ್ನ ಸ್ವರೂಪದ ಅಸಹಜ ಕದಲಿಕೆಗಳು ಆಗಬಹುದು. ಹೀಗೆ, ಅವ್ಯಕ್ತ ನೋವಿನ ಚಾಟಿ ತನ್ನನ್ನು ಅಪ್ಪಳಿಸುತ್ತಿದ್ದರೂ ಅದನ್ನು ನುಂಗಿಕೊಂಡು ಮನೆಯಲ್ಲಿ, ಸಮಾಜದ ವಿವಿಧ ಕಾರ್ಯಕ್ಷೇತ್ರಗಳಲ್ಲಿ ನಗುನಗುತ್ತಲೇ ಕಾರ್ಯನಿರ್ವಹಿಸಿಕೊಂಡು ಹೋಗಬೇಕಾದ 'ಸಾಂದರ್ಭಿಕ ಶಿಶು' ಆಗುತ್ತಾಳೆ ನಮ್ಮ-ನಿಮ್ಮೆಲ್ಲರ 'ಪುಟ್ಟಿ'. ಅಂಥ ವೇಳೆ, ತನ್ನ ಪಾಡಿಗೆ ತನ್ನನ್ನು ಬಿಟ್ಟರೆ ಸಾಕು, ಯಾರೂ ತನ್ನನ್ನು ಅನವಶ್ಯಕವಾಗಿ ಮಾತಾಡಿಸುವುದು, ಕಿರಿಕಿರಿ ಮಾಡುವುದು ಬೇಡ ಎಂಬ ಧೋರಣೆ ಅವಳಲ್ಲಿ ಕೆನೆಗಟ್ಟಿರುತ್ತದೆ...

ಈಗ ಹೇಳಿ, ತಿಂಗಳಿಗೊಮ್ಮೆ ಇಂಥ ದೈಹಿಕ-ಮಾನಸಿಕ ತುಮುಲಗಳ ಹಾದಿಯಲ್ಲಿ ಹೆಜ್ಜೆಹಾಕಬೇಕಾಗಿ ಬರುವ 'ಪುಟ್ಟಿ', ತನ್ನೊಳಗಿನ ಅವ್ಯಕ್ತ ಆಂದೋಲನದ ಕಾರಣದಿಂದಾಗಿ ನಮ್ಮ ಮೇಲೆ ಅಕಸ್ಮಾತ್ ರೇಗಿದರೆ, ಅಸಮಾಧಾನ ತೋರಿದರೆ, ನಮ್ಮನ್ನು ನಿರ್ಲಕ್ಷಿಸಿದರೆ, ನಾವೂ ಪ್ರತಿಯಾಗಿ ಸಿಟ್ಟಿಗೇಳುವುದು ತರವೇ? 'ಪುಟ್ಟಿ'ಯ ಕುರಿತಾಗಿ ಸಹಾನುಭೂತಿ ಇಟ್ಟುಕೊಳ್ಳೋಣ. ಹಾಗಂತ ನಾವು ಆಕೆಯನ್ನು 'ಅಬಲೆ' ಎಂದು ಪರಿಭಾವಿಸುವುದು, ಲೊಚಗುಟ್ಟಿಕೊಂಡು ಅನುಕಂಪ ತೋರಿಸುವುದು ಬೇಡ. ಏಕೆಂದರೆ, 'ಈ ಶತಮಾನದ ಮಾದರಿ ಹೆಣ್ಣು, ಸ್ವಾಭಿಮಾನದ ಸಾಹಸಿ ಹೆಣ್ಣು' ಆಗಿರುವ ಆಕೆ ಅದನ್ನು ಇಷ್ಟಪಡುವುದೂ ಇಲ್ಲ. ಆಕೆಯ ಆ ಕ್ಷಣದ ತಲ್ಲಣ ನಮ್ಮಂಥವರಿಗೆ ಅರ್ಥವಾದರೆ ಸಾಕು.

ಈ ಸೃಷ್ಟಿಯಲ್ಲಿ ಜನ್ಮ ಕೊಡುವ ಶಕ್ತಿ ಇರುವುದು ಎರಡಕ್ಕೇ- ಅವುಗಳಲ್ಲಿ ಒಂದು 'ಮಣ್ಣು', ಇನ್ನೊಂದು 'ಹೆಣ್ಣು'. ಈ 'ಹೆಣ್ಣು' ತಾಯಿಯಾಗಿ ನಮ್ಮನ್ನು ಪೊರೆಯುತ್ತಾಳೆ, ಗೆಳತಿಯಾಗಿ ಬದುಕಿಗೆ ಆಹ್ಲಾದ ತುಂಬುತ್ತಾಳೆ, ಮಡದಿಯಾಗಿ ಕಷ್ಟ-ಸುಖಗಳನ್ನು ಹಂಚಿಕೊಳ್ಳುತ್ತಾಳೆ. ಅಷ್ಟೇಕೆ, ಗೃಹಿಣಿಯಾಗೇ ಉಳಿದುಬಿಟ್ಟರಂತೂ ಜೀವನಪರ್ಯಂತ 'ಸಂಬಳವಿಲ್ಲದ ದುಡಿಮೆ'ಗೆ ಒಡ್ಡಿಕೊಂಡು, ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯುವ ಎತ್ತಿನಂತೆ ಸಂಸಾರದ ನೊಗವನ್ನು ಹೊತ್ತು ಸಾಗುತ್ತಾಳೆ. ಹೀಗಾಗಿ ಅವಳನ್ನು ಆದರಿಸಿ ಗೌರವಿಸುವುದು ನಮ್ಮ ಆದ್ಯತೆಯಾಗಬೇಕು. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' (ಎಲ್ಲಿ ಸ್ತ್ರೀಯರಿಗೆ ಗೌರವ, ಸನ್ಮಾನಗಳು ದೊರೆಯುತ್ತವೆಯೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ) ಎಂಬ ದಿವ್ಯವಾಣಿಯು ನಮ್ಮ ಪೂರ್ವಜರಿಂದ ಹೊಮ್ಮಿರುವುದು ಈ ಆಶಯದಿಂದಲೇ.

'ಹೆಣ್ಣು' ಎಂಬ ಅನುಪಮ ಸೃಷ್ಟಿಯನ್ನು ಸದಾಶಯದ ರಕ್ಷಾಬಂಧನದಲ್ಲಿ ಕಾಪಿಟ್ಟುಕೊಳ್ಳುವುದು ನಮ್ಮ ಧರ್ಮವಾಗಲಿ. ಆಕೆಯ ನೋವನ್ನು ನಾವು ಹಂಚಿಕೊಳ್ಳಲಾಗದಿದ್ದರೂ, ಅದನ್ನು ಮತ್ತಷ್ಟು ಹೆಚ್ಚಿಸದಿರೋಣ.

ಒಟ್ಟಿನಲ್ಲಿ, 'ಪುಟ್ಟಿ' ರೇಗಿದಳೆಂದು ಸಿಟ್ಟಿಗೇಳದಿರೋಣ...

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 206

ಸಮಾಚಾರ ಸಣ್ಣದಲ್ಲ

ಫೋನ್ ಇನ್ ಕಾರ್ಯಕ್ರಮ ನಾಳೆ

ಬಳ್ಳಾರಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಳ್ಳಾರಿ ವಿಭಾಗದ ವತಿಯಿಂದ ಬಳ್ಳಾರಿ ಭಾಗದ ಸಾರ್ವಜನಿಕ ಪ್ರಯಾಣಿಕರ ಕುಂದು ಕೊರತೆಗಳನ್ನು ಆಲಿಸಲು ಡಿ.2 ರಂದು ಮಧ್ಯಾಹ್ನ 3.30 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ 'ಫೋನ್ ಇನ್ ಕಾರ್ಯಕ್ರಮ'ಏರ್ಪಡಿಸಲಾಗಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಳ್ಳಾರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಇನಾಯತ್ ಬಾಗ್‌ಬಾನ್ ತಿಳಿಸಿದ್ದಾರೆ. ಬಳ್ಳಾರಿ ಭಾಗದ ಸಾರ್ವಜನಿಕ ಪ್ರಯಾಣಿಕರ ಬಸ್ ಸೌಕರ್ಯದ ಕುರಿತು ಕುಂದುಕೊರತೆ, ಸಮಸ್ಯೆಗಳಿದ್ದಲ್ಲಿ ಮೊ. 7760992152, 6366423885ಗೆ ಕರೆ ಮಾಡಿ ತಿಳಿಸಬಹುದು. ಬಳ್ಳಾರಿ ವಿಭಾಗದ ವ್ಯಾಪ್ತಿಯಲ್ಲಿ ಪ್ರತಿ ತಿಂಗಳ ಒಂದನೇ ಸೋಮವಾರದಂದು ಬಳ್ಳಾರಿ, ಸಿರುಗುಪ್ಪ, ಕುರುಗೋಡು, ಕಂಪ್ಲಿ ಮತ್ತು ಸಂಡೂರು ತಾಲೂಕುಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಪ್ರಯಾಣಿಕರ ಬಸ್ ಸೌಕರ್ಯದ ಕುರಿತು ಕುಂದು-ಕೊರತೆಗಳನ್ನು ಆಲಿಸಲು ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಸಾರ್ವಜನಿಕ ಪ್ರಯಾಣಿಕರ ಬಸ್ ಸೌಕರ್ಯದ ಕುರಿತು ಕುಂದು ಕೊರತೆಗಳಿದ್ದಲ್ಲಿ ಆಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕ ಪ್ರಯಾಣಿಕರು 'ಫೋನ್ ಇನ್ ಕಾರ್ಯಕ್ರಮ'ವನ್ನು ಸದುಪಯೋಗಪಡೆದುಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಸತಿ ಕಟ್ಟಡ ಮುಗಿಸಲು ಸೂಚನೆ

ಬಳ್ಳಾರಿ: ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 2010-11 ರಿಂದ 2018-19ನೇ ಸಾಲಿನ ರಾಜ್ಯ ಮತ್ತು ಕೇಂದ್ರ ಸರಕಾರದ ವಿವಿಧ ನಗರ ವಸತಿ ಯೋಜನೆಗಳಡಿ ವಸತಿ ಸೌಲಭ್ಯಕ್ಕಾಗಿ ಆಯ್ಕೆಯಾಗಿರುವ ಫಲಾನುಭವಿಗಳು ಕೂಡಲೇ ತಮ್ಮ ಮನೆಯ ಕಟ್ಟಡವನ್ನು ಪೂರ್ಣಗೊಳಿಸಿಕೊಳ್ಳುವಂತೆ ಮಹಾನಗರ ಪಾಲಿಕೆಯು ಸೂಚಿಸಿದೆ. ಈಗಾಗಲೇ ಹಲವಾರು ಬಾರಿ ನೋಟಿಸ್ ಜಾರಿ ಮಾಡಲಾಗಿದ್ದು, ಫಲಾನುಭವಿಗಳು ಮನೆಯ ಕಟ್ಟಡವನ್ನು ಡಿ.5 ರೊಳಗಾಗಿ ಪೂರ್ಣಗೊಳಿಸಿಕೊಳ್ಳಬೇಕು. ಇಲ್ಲವಾದಲ್ಲಿ ಈಗಾಗಲೇ ಬಿಡುಗಡೆಯಾಗಿರುವ ಪೂರ್ಣ ಪ್ರಮಾಣದ ಕೇಂದ್ರ ಮತ್ತು ರಾಜ್ಯ ಸರಕಾರದ ಸಹಾಯಧನವನ್ನು ಹಿಂದುರಿಗಿಸಲು ಬೆಂಗಳೂರು ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯು ಫಲಾನುಭವಿಗಳಿಗೆ ತಿಳಿಸಿ ನೋಟಿಸ್ ಜಾರಿ ಮಾಡುವಂತೆ ತಿಳಿಸಿದೆ. ಹಾಗಾಗಿ ವಿವಿಧ ನಗರ ವಸತಿ ಸೌಲಭ್ಯಕ್ಕಾಗಿ ಆಯ್ಕೆಯಾದ ಫಲಾನುಭವಿಗಳು ಮನೆಯ ಕಟ್ಟಡವನ್ನು ಹಂತ ಹಂತವಾಗಿ ನಿರ್ಮಾಣ ಮಾಡಿಕೊಂಡು ಮಹಾನಗರಪಾಲಿಕೆಯ ಆಶ್ರಯ ಶಾಖೆಯ ಗಮನಕ್ಕೆ ತರಬೇಕು. ಬಳ್ಳಾರಿ ಮಹಾನಗರ ಪಾಲಿಕೆಯು ಪ್ರಕಟಣೆ ತಿಳಿಸಿದೆ.

ವಿವಿಧ ಸೌಲಭ್ಯಗಳಿಗೆ ಪಾವತಿ ಶುಲ್ಕ ರಸೀದಿ

ಬಳ್ಳಾರಿ: ಇಲ್ಲಿನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರು ಪಾವತಿಸುವ ಆಸ್ತಿ ತೆರಿಗೆ, ನೀರಿನ ತೆರಿಗೆ, ಒಳಚರಂಡಿ ಶುಲ್ಕ, ಎಸ್‌ಡಬ್ಲ್ಯೂ.ಎಂ ಶುಲ್ಕ, ನಮೂನೆ-2 ಶುಲ್ಕ, ಹಕ್ಕು ಬದಲಾವಣೆ ಶುಲ್ಕ, ಉದ್ದಿಮೆ ಪರವಾನಿಗೆ, ನವೀಕರಣ ಶುಲ್ಕ, ಕಟ್ಟಡ ಪರವಾನಿಗೆ ಶುಲ್ಕ, ಜನನ-ಮರಣ ಪ್ರಮಾಣ ಪತ್ರ ಶುಲ್ಕ ಹಾಗೂ ಇತ್ಯಾದಿ ಶುಲ್ಕಗಳನ್ನು ಪಾವತಿಸುವಾಗ ವಲಯ ಅಥವಾ ಪಾಲಿಕೆಯ ನೌಕರರಿಂದ ಪಡೆದ ರಶೀದಿ, ಚಲನ್‌ಗಳ ನೈಜತೆಯನ್ನು ಬಳ್ಳಾರಿ ಒನ್ ಮತ್ತು ಮಹಾನಗರ ಪಾಲಿಕೆಯ ಲೆಕ್ಕ ಶಾಖೆಯಿಂದ ದೃಢೀಕರಣಗೊಳಿಸಿಕೊಳ್ಳಬೇಕು ಎಂದು ಬಳ್ಳಾರಿ ಮಹಾನಗರ ಪಾಲಿಕೆಯು ತಿಳಿಸಿದೆ. ಪಾಲಿಕೆಯ ವ್ಯಾಪ್ತಿಯ ಸಾರ್ವಜನಿಕರು ತಮ್ಮ ಆಸ್ತಿ ತೆರಿಗೆ ಹಾಗೂ ಇನ್ನಿತರೆ ತೆರಿಗೆಯನ್ನು ಸಕಾಲದಲ್ಲಿ ಪಾವತಿಸಿದಲ್ಲಿ ನಗರ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ಪಾಲಿಕೆ ಪ್ರಕಟಣೆ ತಿಳಿಸಿದೆ.

ವ್ಯಕ್ತಿ ಕಾಣೆ: ಪತ್ತೆಗೆ ಮನವಿ

ಬಳ್ಳಾರಿ: ನಗರದ ಉಮಾಶಂಕರ್ ಕಾಲೋನಿಯ 1ನೇ ಕ್ರಾಸ್‌ನ ಹುಲಿಗೆಮ್ಮ ಗುಡಿ ಹತ್ತಿರದ ನಿವಾಸಿ ಗಂಗಾಧರ ಎನ್ನುವ (34)ರ ವ್ಯಕ್ತಿ ನ.22 ರಂದು ಕಾಣೆಯಾಗಿರುವ ಕುರಿತು ಬ್ರೂಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ. ಚಹರೆ ಗುರುತು: ಅಂದಾಜು 5.6 ಅಡಿ ಎತ್ತರ, ಅಗಲಮುಖ, ಗೋಧಿ ಮೈಬಣ್ಣ, ಕಪ್ಪು ತಲೆ ಕೂದಲು, ದುಂಡನೇಯ ಮೈಕಟ್ಟು ಹೊಂದಿದ್ದು, ಕಾಣೆಯಾದ ಸಂದರ್ಭದಲ್ಲಿ ಕಟುನೀಲಿ ಬಣ್ಣದ ತುಂಬುತೋಳಿನ ಅಂಗಿ, ಬ್ರೌನ್ ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ವ್ಯಕ್ತಿಯು ಕನ್ನಡ, ಹಿಂದಿ, ತೆಲುಗು, ಭಾಷೆ ಮಾತನಾಡುತ್ತಾನೆ. ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬ್ರೂಸ್‌ಪೇಟೆ ಪೊಲೀಸ್ ಠಾಣೆಯ ದೂ.08392-272022, ಪಿಐ 9480803045, 9480803091 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಜನಾರ್ದನ ರೆಡ್ಡಿ} ಶಾಸಕ

ಈ ಬಾರಿ ಡಿ.12 ಮತ್ತು 13 ರಂದು ಹನುಮ ಮಾಲೆ ಕಾರ್ಯಕ್ರಮ ನಡೆಯಲಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಈ ಬಾರಿ ಹನುಮ ಮಾಲೆ ಧರಿಸಿ, ಅಂಜನಾದ್ರಿಗೆ ಬರಲಿದ್ದಾರೆ. ರಾಜ್ಯಾದ್ಯಂತ ಬಿಜೆಪಿ ಯುವ ಮೋರ್ಚಾ ದಿಂದ ಹನುಮ ಮಾಲೆ ಹಾಕಿ ಭಕ್ತರು ಬರಲಿದ್ದಾರೆ. ಮೂರು ದಿನ 3 ಹೊತ್ತು ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

ಕಲಿಕಾ ಆಂದೋಲನ, ಜಿಲ್ಲಾ ಮಟ್ಟದ ಗಣಿತ ವಿಚಾರ ಸಂಕಿರಣ

ಮಕ್ಕಳ ವಿದ್ಯಾಭ್ಯಾಸದಲ್ಲಿ ಸ್ಪರ್ಧೆ ಅವಶ್ಯ: ಡಿಡಿಪಿಐ

ಜಿಲ್ಲಾ ಮಟ್ಟದ ಗಣಿತ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿಶಿಕ್ಷಣ ಇಲಾಖೆ ಉಪ ನಿರ್ದೇಶಕ ಒ.ಆರ್.ಪ್ರಕಾಶ್ ಮಾತನಾಡಿದರು.

ಹೊಸಪೇಟೆ: ವಿಜಯನಗರ ಜಿಲ್ಲೆಯಲ್ಲಿ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿದ್ದಾರೆ. ಅವರಿಗೆ ವಿದ್ಯಾಭ್ಯಾಸದಲ್ಲಿ ಸ್ಪರ್ಧಾ ಮನೋಬಾವ ಮೂಡಿಸಿದರೆ ಮಾತ್ರ ಮಕ್ಕಳು ಕಲಿಕೆಯಲ್ಲಿ ಪ್ರಗತಿಕಾಣಲು ಸಾಧ್ಯ ಎಂದು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಓ.ಆರ್.ಪ್ರಕಾಶ್ ಅಭಿಪ್ರಾಯಪಟ್ಟರು.

ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಮತ್ತು ಅಕ್ಷರ ಫೌಂಡೇಶನ್ ಸಹಯೋಗದಲ್ಲಿ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಗಣಿತ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆ ವಿಷಯಗಳಿಗೆ ಹೆಚ್ಚು ಒತ್ತು ನೀಡುವುದರ ಮೂಲಕ ಮಕ್ಕಳಿಗೆ ವಿದ್ಯಾಭ್ಯಾಸದ ಅಭಿರುಚಿ ಹೆಚ್ಚಿಸಬೇಕು ಎಂದು ಹೇಳಿದರು.

ಅಕ್ಷರ ಫೌಂಡೇಶನ್‌ನ ಪ್ರೋಗ್ರಾಮ್ ಮ್ಯಾನೇಜರ್ ಹೆಚ್.ಬಿ.ಕಣ್ಣಿ ಮಾತನಾಡಿ, ಶಾಲಾ ಶಿಕ್ಷಣ ಇಲಾಖೆ, ಗ್ರಾಮ ಪಂಚಾಯಿತಿಗಳು ಹಾಗೂ ಸಮುದಾಯಗಳ ಸಹಭಾಗಿತ್ವದಲ್ಲಿ ನಡೆದ ಗಣಿತ ಕಲಿಕಾ ಆಂದೋಲನವು ಯಶಸ್ವಿಯಾಗಿ ಮುಕ್ತಾಯವಾಗಿದೆ. ಮಕ್ಕಳ ಗುಣಾತ್ಮಕ ಶಿಕ್ಷಣಕ್ಕಾಗಿ ಅಕ್ಷರ ಫೌಂಡೇಶನ್ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಭಾಗಿತ್ವದಲ್ಲಿ ಕೆಲಸ ಮಾಡುತ್ತದೆ. ಈ ಆಂದೋಲನದ ವರದಿಯ ಪ್ರಕಾರ ಪ್ರತಿ ವರ್ಷಕಿಂತ ಈ ವರ್ಷ ಹೆಚ್ಚಿನ ಫಲಿತಾಂಶ ಬಂದಿರುವುದು ಕಂಡುಬರುತ್ತದೆ. ಜಿಲ್ಲೆಯಲ್ಲಿ 756 ಶಾಲೆಗಳ 23,385 ಮಕ್ಕಳು ಭಾಗವಹಿಸಿದ್ದು, ಈ ಆಂದೋಲನಕ್ಕೆ ಗ್ರಾಮ ಪಂಚಾಯಿತಿಗಳು ಹಾಗೂ ಶಾಲಾ ಶಿಕ್ಷಕರ ಕಾರ್ಯ ಶ್ಲಾಘನೀಯ. ಅಕ್ಷರ ಫೌಂಡೇಶನ್ ವತಿಯಿಂದ ಜಿಕೆ 2.7 ಕೋರ್ಸ್ ಪರಿಚಯಿಸಿದ್ದು, ಎಲ್ಲ ಶಿಕ್ಷಕರು ಇದರ ಸದುಪಯೋಗ ಪಡೆಸಿಕೊಂಡು ಗಣಿತ ಕಲಿತು, ಮಕ್ಕಳಿಗೆ ಗಣಿತದ ಆಸಕ್ತಿಯನ್ನು ಇನ್ನಷ್ಟು ಹೆಚ್ಚಿಸಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 25 ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ 25 ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಿಡಿಒಗಳಿಗೆ ಸನ್ಮಾನ ಮಾಡಲಾಯಿತು.

> **ಶಿಕ್ಷಕರು ಮತ್ತು ಪೋಷಕರು ಮಕ್ಕಳ ಸಮಗ್ರ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮವಹಿಸಬೇಕು. ಗಣಿತ ಕಲಿಕಾ ಆಂದೋಲನದ ವರದಿಯ ಪ್ರಕಾರ ಜಿಲ್ಲೆಯ ಎಲ್ಲ ತಾಲೂಕುಗಳಿಗೆ ಹೋಲಿಸಿದರೆ ಹರಪನಹಳ್ಳಿ ತಾಲೂಕು ಪ್ರಗತಿಯಲ್ಲಿದೆ, ಹೊಸಪೇಟೆ ತಾಲೂಕು ಹಿಂದುಳಿದಿದೆ. ಶಿಕ್ಷಕರು, ಈ ವರದಿಯನ್ನು ಅವಲೋಕಿಸಿ ಮಕ್ಕಳು ಯಾವುದರಲ್ಲಿ ಹಿಂದುಳಿದಿದ್ದಾರೆ.**
> -ಓ.ಆರ್.ಪ್ರಕಾಶ್, ಉಪ ನಿರ್ದೇಶಕ

ಕಾರ್ಯಕ್ರಮದಲ್ಲಿ ಕೂಡ್ಲಿಗಿ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭ, ಶಾಲಾ ಶಿಕ್ಷಣ ಇಲಾಖೆಯ ಕವಿತಾ ಸೇರಿದಂತೆ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಪಿಡಿಒಗಳು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು

ಕನ್ನಡ ನಾಡಿನಲ್ಲಿ ಜನಿಸುವುದೇ ಪುಣ್ಯ

ಸುವರ್ಣ ಕರ್ನಾಟಕ ಸಂಭ್ರಮ-ಕರ್ನಾಟಕ ರಾಜ್ಯೋತ್ಸವ-69 ಕಾರ್ಯಕ್ರಮವನ್ನು ಉಪಕುಲಪತಿ ಡಾ.ಜಯಕರ ಎಸ್.ಎಂ ಉದ್ಘಾಟಿಸಿದರು.

ಬಳ್ಳಾರಿ: ಶ್ರೀಮಂತ ಸಂಸ್ಕೃತಿ, ಮನಸೂರೆಗೊಳ್ಳುವ ಕಲೆ, ಭೌಗೋಳಿಕ ವಿಶೇಷತೆ ಹಾಗೂ ವೈವಿಧ್ಯತೆಯಿಂದ ಕೂಡಿದ ಕನ್ನಡ ನಾಡಿನಲ್ಲಿ ಜನಿಸುವುದೇ ಪುಣ್ಯ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಜಯಕರ ಎಸ್.ಎಂ ಹೇಳಿದರು.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ ಸುವರ್ಣ ಕರ್ನಾಟಕ ಸಂಭ್ರಮ-ಕರ್ನಾಟಕ ರಾಜ್ಯೋತ್ಸವ-69 ಕಾರ್ಯಕ್ರಮ ಉದ್ಘಾಟಿಸಿದರು. ಕರ್ನಾಟಕದ ಪ್ರದೇಶಗಳಲ್ಲಿ ಒಂದು ಭಾಗದಿಂದ ಮತ್ತೊಂದು ಭಾಗದಲ್ಲಿ ಪ್ರಾದೇಶಿಕವಾರು ಮಾತನಾಡುವ ಭಾಷೆ ಶೈಲಿ, ಆಚಾರ-ವಿಚಾರ, ಉಡುಗೆ-ತೊಡುಗೆ ಬದಲಾವಣೆಗೊಳ್ಳುತ್ತದೆ. ಎಲ್ಲೇ ಇದ್ದರೂ ನಾವಾಡೋ ಮಾತು, ಉಸಿರಾಡೋ ಗಾಳಿ, ನಮ್ಮ ನಡೆ-ನುಡಿಯಲ್ಲೂ ಕನ್ನಡತವನ್ನು ಮೈಗೂಡಿಸಿಕೊಂಡು ವೈವಿಧ್ಯತೆಯಲ್ಲೂ ಏಕತೆಯನ್ನು ಎತ್ತಿಹಿಡಿಯಬೇಕು ಎಂದು ಆಶಯ ವ್ಯಕ್ತಪಡಿಸಿದರು.

ನಾಡಿನ ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ ಮಾತನಾಡಿ, ಕನ್ನಡ ಭಾಷೆಗೆ ಅವಿರತ ಇತಿಹಾಸವಿದೆ. ಅನೇಕ ಶಾಸನ, ಸಾಹಿತ್ಯ, ವಚನ, ಕೃತಿ, ಲೇಖನಗಳನ್ನು ಕೊಡುಗೆ ನೀಡುವಲ್ಲಿ ಕನ್ನಡ ಮೇರು ಸ್ಥಾನ ಹೊಂದಿದ್ದು, ಕನ್ನಡದ ಇತಿಹಾಸವನ್ನು ಅರಿತು ಗೌರವಿಸಬೇಕು ಎಂದು ಹೇಳಿದರು. ವೈವಿಧ್ಯಮಯ ನಾಡು, ಸರ್ವ ಜನಾಂಗದ ಶಾಂತಿಯ ತೋಟವಾದ ಕನ್ನಡ ನಾಡಿನಲ್ಲಿ ಜಾತಿ-ಧರ್ಮದ ಎಲ್ಲೆ ಮೀರಿ ಜೀವಿಸಲಾಗುತ್ತಿದ್ದು, ಕನ್ನಡಿಗರು ಪರಿಷ್ಕೃತ ಗುಣ ಬೆಳೆಸಿಕೊಳ್ಳಬೇಕು ಎಂದರು.

ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ.ರವಿ ರಾಜ್ಯೋತ್ಸವ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿ, ವಿಜಯನಗರ ಸಾಮ್ರಾಜ್ಯ ಉದಯಿಸಿರುವ ಈ ಭಾಗ ಪವಿತ್ರ ಭೂಮಿಯಾಗಿದ್ದು, ಕಲೆ, ಸಾಹಿತ್ಯ, ಸಮಾಜಕ್ಕೆ ಅಪಾರ ಕೊಡುಗೆ ನೀಡಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದರು. ಕನ್ನಡ ಭಾಷೆ, ಸಾಹಿತ್ಯ, ಜಾನಪದ ಸೊಗಡಿನ ಕುರಿತು ಮುಂದಿನ ಪೀಳಿಗೆಗೆ ಪರಿಚಯಿಸಬೇಕಿದೆ. ಕನ್ನಡ ಕೀಳರಿಮೆ ಭಾವನೆ ತ್ಯಜಿಸಿ ಸಮ ಸಮಾಜದ ಚಿಂತನೆ ಬೆಳೆಸಿಕೊಂಡು, ಕನ್ನಡತನವನ್ನು ಉಳಿಸಿ-ಬೆಳೆಸುವಲ್ಲಿ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ತಿಳಿಸಿದರು.

ಇದೇ ವೇಳೆ ಗಣ್ಯರು ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಸಂಗೀತಾ ತಂಡದ ಗೀತೆಗಳು ಕನ್ನಡಾಭಿಮಾನಿಗಳಿಗೆ ಇಂಪು ನೀಡಿತು.

ವಿವಿಯ ಕುಲಪತಿ ಪ್ರೊ.ಎಂ.ಮುನಿರಾಜು, ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ಡಾ.ನಿಷ್ಠಿ ರುದ್ರಪ್ಪ, ಬಳ್ಳಾರಿಯ ಲೋಹಿಯಾ ಪ್ರಕಾಶನದ ಪ್ರಕಾಶಕ ಸಿ.ಚನ್ನಬಸವಣ್ಣ, ಕುಲಸಚಿವರಾದ ಎಸ್.ಎನ್ ರುದ್ರೇಶ್, ಮೌಲ್ಯಮಾಪನ ಕುಲಸಚಿವ ಪ್ರೊ.ರಮೇಶ್ ಓಲೇಕಾರ್, ಹಣಕಾಸು ಅಧಿಕಾರಿಗಳಾದ ನಾಗರಾಜ, ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ರಾಬರ್ಟ್ ಜೋಸ್, ಸಿಂಡಿಕೇಟ್ ಸದಸ್ಯ ಪೀರ್ ಬಾಷಾ, ಶಿವಕುಮಾರ್ ಇತರರು ಉಪಸ್ಥಿತರಿದ್ದರು.

ಸಂಭ್ರಮ-ಸಡಗರದ ಮೆರವಣಿಗೆ

ಸುವರ್ಣ ಕರ್ನಾಟಕ ಸಂಭ್ರಮ, ಕರ್ನಾಟಕ ರಾಜ್ಯೋತ್ಸವ-69 ಕಾರ್ಯಕ್ರಮ ಅಂಗವಾಗಿ ಏರ್ಪಡಿಸಿದ್ದ ಅದ್ದೂರಿ ಮೆರವಣಿಗೆಯು ತಾಯಿ ಭುವನೇಶ್ವರಿಯ ರಥದೊಂದಿಗೆ ಕುಂಭ ಹೊತ್ತ ಮಹಿಳೆಯ ಸಮ್ಮುಖದಲ್ಲಿ ವಿವಿಧ ಕಲಾತಂಡಗಳ ವಾದ್ಯಗಳ ಮೂಲಕ ರಾಜ್ಯದ 31 ಜಿಲ್ಲೆಗಳ ಸಂಸ್ಕೃತಿ, ವಿಶೇಷತೆ ಒಳಗೊಂಡ ಮಾಹಿತಿ ಕೈಪಿಡಿಯ ಚಿತ್ರಣ ಹಿಡಿದು, ಬುಲೆಟ್ ಬೈಕ್‌ಗಳ ಕಲರವದಿಂದ ವಿವಿಯ ಆವರಣದಲ್ಲಿ ಸಾಗಿಬಂದ ಮೆರವಣಿಗೆಯು ಸಂಭ್ರಮ-ಸಡಗರಕ್ಕೆ ಸಾಕ್ಷಿಯಾಯಿತು. ವಿವಿಧ ಕಲಾ ತಂಡಗಳಿಂದ ಜಾನಪದ ಕಲೆಗಳ ಪ್ರದರ್ಶನಕ್ಕೆ ಮೆರವಣಿಗೆಯು ಮೆರಗು ತಂದಿತು.

> **ಕನ್ನಡ ನಾಡಿನ ಜನರು ಇತರೆ ಭಾಗಗಳಿಗೆ ಹೋದರೂ ಕನ್ನಡವನ್ನು ಸಂಭ್ರಮಿಸುವ ಗುಣ ಹೊಂದಿದ್ದಾರೆ. ಐತಿಹಾಸಿಕ ಹಿನ್ನೆಲೆ ಹೊಂದಿದ ಕನ್ನಡ ಸಂಸ್ಕೃತಿ ಉನ್ನತ ಮಟ್ಟಕ್ಕೆ ಬೆಳೆಸುವಲ್ಲಿ ಕನ್ನಡಾಭಿಮಾನಿಗಳು ಶ್ರಮಿಸಬೇಕು.**
> -ಡಾ.ಜಯಕರ ಎಸ್.ಎಂ, ಉಪಕುಲಪತಿ ಬೆಂಗಳೂರು ವಿವಿ

ಅನಿಷ್ಟ ಪದ್ಧತಿ ಬಾಲ್ಯ ವಿವಾಹ ಹೋಗಲಾಡಿಸಿ

ಪ್ರೌಢಶಾಲೆಯಲ್ಲಿ ತಾಲೂಕು ಕಾನೂನು ಅರಿವು ಕಾರ್ಯಕ್ರಮವನ್ನು ವಕೀಲರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ್ ಉದ್ಘಾಟಿಸಿದರು.

ಹರಪನಹಳ್ಳಿ: ಸಮಾಜದಲ್ಲಿ ಉದ್ಭವವಾಗಿರು ಅನಿಷ್ಠ ಪದ್ಧತಿಯಾದ ಬಾಲ್ಯ ವಿವಾಹ ಪದ್ಧತಿ ಹೋಗಲಾಡಿಸಲು ಶಿಕ್ಷಣದಿಂದ ಮಾತ್ರ ಸಾದ್ಯ ಎಂದು ವಕೀಲ ಸಂಘದ ಅಧ್ಯಕ್ಷ ರಾಮಗೌಡ ಪಾಟೀಲ್ ಹೇಳಿದರು.

ತಾಲೂಕಿನ ಬಾಗಳಿ ಗ್ರಾಮದಲ್ಲಿ, ತಾಲೂಕು ಕಾನೂನು ಸೇವಾ ಸಮಿತಿ ವಕೀಲರ ಸಂಘ, ಬಾಗಳಿ ಗ್ರಾಮದ ರಾಮನಗೌಡ್ರು, ಹಾಲಮ್ಮ ಚನ್ನನಗೌಡ ಪ್ರೌಢಶಾಲೆಯ ಇವರ ಸಂಯುಕ್ತಾಶ್ರಯದಲ್ಲಿ ಬಾಲ್ಯ ವಿವಾಹ ಮುಕ್ತ ಭಾರತ ಅಭಿಯಾನ ಕುರಿತು ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿದರು.

18. ವರ್ಷ ದೊಳಗಿನ ಮಕ್ಕಳು ಬಾಲ್ಯವನ್ನು ಹೊಂದಿರುತ್ತಾರೆ. ನಂತರ ವಯಸ್ಕರಾಗುತ್ತಾರೆ. ಮನೆಯಲ್ಲಿ ವಿವಿಧ ಕಾರಣಗಳಿಂದ ಇಂತಹ ಬಾಲ್ಯ ವಿವಾಹಕ್ಕೆ ಪೋಷಕರು ಮುಂದಾಗುತ್ತಾರೆ ಇದರ ಬಗ್ಗೆ ಅರಿವು ಮೂಡಿಸುವುದಾಗಿದೆ ಎಂದರು.

ಪ್ಯಾನಲ್ ವಕೀಲ ಸಣ್ಣ ನಿಂಗನಗೌಡ ಮಾತಾನಾಡಿ, ಅನಿಷ್ಟ ಪದ್ಧತಿಯಲ್ಲಿ ಒಂದಾದ ಬಾಲ್ಯ ವಿವಾಹ ಪದ್ಧತಿ ಹೋಗಲಾಡಿಸಲು ಶಿಕ್ಷಣದಿಂದ ಮಾತ್ರ ಸಾಧ್ಯ. ಇಂತಹ ಶಿಕ್ಷಣವನ್ನು ವಿದ್ಯಾರ್ಥಿಗಳು ಪ್ರತಿನಿತ್ಯ ಸಮಾಜದಲ್ಲಿ ನಡೆಯುವ ಬೆಳವಣಿಗೆಗಳ ಬಗ್ಗೆ ಅರಿತು ಕೊಳ್ಳಬೇಕೆಂದರು.

ಪ್ಯಾನಲ್ ವಕೀಲ ಎಂ. ಮೃತ್ಯುಂಜಯ ಇವರು ಬಾಲ್ಯ ವಿವಾಹ ನಿಷೇಧ ಕುರಿತು ಕಾನೂನು ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಕಾರ್ಯದರ್ಶಿ ಕೇಶವ ಮೂರ್ತಿ ಎಚ್.ಎಂ. ಶಿಶು ಸಂರಕ್ಷಣಾಧಿಕಾರಿ ಅಶೋಕ ವಿದ್ಯಾರ್ಥಿಗಳಿಗೆ ಪ್ರತಿಜ್ಞಾನ ವಿಧಿ ಬೋಧಿಸಿದರು. ಬಾಗಳಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಕೆ.ಸುರೇಶ ಕಾರ್ಯಕ್ರಮ ಅಧ್ಯಕ್ಷತೆಯನ್ನು ವಹಿಸಿದ್ದರು. ಸಿ.ನಾಗರಾಜನಾಯ್ಕ, ಮೇಲ್ವಿಚಾರಕಿ ವಿಜಯಲಕ್ಷ್ಮಿ, ದೈಹಿಕ ಶಿಕ್ಷಕ ಲೋಕೇಶ, ಗ್ರಾಪ. ಅಧ್ಯಕ್ಷೆ ರೇಣುಕಾ, ಕೊಟ್ರೇಶ್ ಸೇರಿದಂತೆ ಶಾಲೆಯ ಸಹ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇದ್ದರು.

> **ಬಾಲ್ಯದಲ್ಲಿ ಮದುವೆ ಮಾಡುವುದರಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ಬೆಳವಣಿಗೆ ಆಗಿರುವುದಿಲ್ಲ. ದೇಶದಲ್ಲಿ ಹಿಂದಿನಿಂದಲೂ ಅನೇಕ ಅನಿಷ್ಟ ಪದ್ದತಿಗಳಿದ್ದವು ಅದರಲ್ಲಿ ಬಾಲ್ಯವಿವಾಹವು ಒಂದಾಗಿದೆ. ಈಗಲೂ ಇದು ಅಲ್ಲಿ, ಇಲ್ಲಿ ಕಂಡು ಬರುತ್ತಿದ್ದು, ಸಾಮಾಜಿಕ ಅನಿಷ್ಟ ಪದ್ಧತಿ ತಡೆಗಟ್ಟಲು ಮುಂದಾಗಬೇಕು.**
> -ರಾಮಗೌಡ ಪಾಟೀಲ್, ವಕೀಲ ಸಂಘದ ಅಧ್ಯಕ್ಷ

ಮಾದಿಗರ ಕಾಳಜಿಗಾಗಿ ಒಳ ಮೀಸಲು ತನ್ನಿ

ಲಾಲ್ ಬಹದ್ದೂರ್ ಶಾಸ್ತ್ರಿವೃತ್ತದಲ್ಲಿ ಹಮ್ಮಿಕೊಂಡಿದ್ದ ಬಹಿರಂಗ ಸಭೆಯಲ್ಲಿ ರಾಜ್ಯ ದಲಿತ ನಾಯಕ ಭಾಸ್ಕರ್ ಪ್ರಸಾದ್ ಮಾತನಾಡಿದರು.

ಹೂವಿನಹಡಗಲಿ: ನಯವಂಚಕರ ಮೋಸದಿಂದ 35 ವರ್ಷಗಳ ಒಳ ಮೀಸಲಾತಿ ಹೋರಾಟಕ್ಕೆ ಅನ್ಯಾಯವಾಗಿದೆ ಎಂದು ರಾಜ್ಯ ದಲಿತ ನಾಯಕ ಭಾಸ್ಕರ್ ಪ್ರಸಾದ್ ದೂರಿದರು.

ಪಟ್ಟಣದಲ್ಲಿ ಒಳ ಮೀಸಲಾತಿ ಹೋರಾಟ ಸಮಿತಿವತಿಯಿಂದ ಸುಪ್ರೀಂ ಕೋರ್ಟ್ ತೀರ್ಪಿನಂತೆ ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆಯ ನಂತರ ಪಟ್ಟಣದ ಲಾಲ್ ಬಹದ್ದೂರ್ ಶಾಸ್ತ್ರಿ ವೃತ್ತದಲ್ಲಿ ಹಮ್ಮಿಕೊಂಡಿದ್ದ ಬಹಿರಂಗ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

35 ವರ್ಷಗಳ ಸುದೀರ್ಘ ಹೋರಾಟದ ಮಧ್ಯದಲ್ಲಿಯೂ ಒಳ ಮೀಸಲಾತಿ ಜಾರಿಯಾಗಿಲ್ಲವೆಂದರೆ ಮಾದಿಗ ಸಮಾಜದ ಶಾಸಕರು ಮಂತ್ರಿಗಳು ರಾಜೀನಾಮೆ ಕೊಟ್ಟು ಹೊರ ಬರಬೇಕಾಗಿದೆ ಎಂದು ಎಂದು ರಾಜ್ಯ ನಾಯಕ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಮಾದಿಗ ಸಮುದಾಯಕ್ಕೆ ಮೋಸ ಮಾಡುತ್ತಿದ್ದಾರೆ. ನೀವು ನಿಜವಾಗಿಯೂ ದಲಿತರ ಪರವಾಗಿದ್ದರೆ ನಮಗಾದ ಅನ್ಯಾಯವನ್ನು ಸರಿಪಡಿಸಬೇಕು. ನಿಮಗೆ ನಮ್ಮ ಜನಾಂಗದ ಬಗ್ಗೆ ಕಾಳಜಿ ಇದ್ದರೆ ಒಳ ಮೀಸಲಾತಿಯನ್ನು ಜಾರಿಗೊಳಿಸಿ ಎಂದರು.

ಹಡಗಲಿ ಕ್ಷೇತ್ರದಲ್ಲಿ 2008ರಿಂದ ಮೀಸಲು ಕ್ಷೇತ್ರವಾದ ನಂತರ ಒಂದು ಬಾರಿಯೂ ಮಾದಿಗ ಜನಾಂಗ ಶಾಸಕ ಹುದ್ದೆಯನ್ನು ಪಡಯಲಿಕ್ಕೆ ಸಾಧ್ಯವಾಗಿಲ್ಲ ಎಂದರೆ ನಮ್ಮ ಹೋರಾಟ ವಿಫಲತೆಯಲ್ಲಿದೆ ಎಂದರು. ಒಳ ಮೀಸಲಾತಿ ಹೋರಾಟ ಸಮಿತಿ ತಾಲೂಕು ಅಧ್ಯಕ್ಷ ಉಚ್ಚೆಂಗೆಪ್ಪ, ದಲಿತ ಮುಖಂಡ ಎಚ್.ಪೂಜಪ್ಪ, ಪುತ್ರೇಶ ಮಾತನಾಡಿದರು.

ದಲಿತ ಮುಖಂಡರಾದ ನಿಂಗಪ್ಪ, ವಿಲ್ಸನ್ ಸ್ವಾಮಿ, ಹನುಮಂತಪ್ಪ, ಹಲಗಿ ಸುರೇಶ, ಶಿವರಾಜ, ಹನುಮಂತ, ಹೊಳಗುಂದಿ ಸ್ವಾಮಿ, ನಿಂಗರಾಜ್.ಎಸ್, ಜಯಕೀರ್ತಿ, ದೇವೇಂದ್ರಪ್ಪ, ದುರ್ಗಮ್ಮ, ಲಲಿತಮ್ಮ, ಗುಡದೆಪ್ಪ, ಎಚ್.ಚಂದ್ರಪ್ಪ, ಉಪಸ್ಥಿತರಿದ್ದರು.

ಪ್ರತಿಭಟನೆಯ ರ್‍ಯಾಲಿ ಪಟ್ಟಣದ ಮೈಲಾರಲಿಂಗೇಶ್ವರ ದೇವಸ್ಥಾನದಿಂದ ಹೊರಟು ಪ್ರಮುಖ ಬೀದಿಗಳ ಮೂಲಕ ಸಾಗಿ ಪಟ್ಟಣದ ಲಾಲ್ ಬಹದ್ದೂರ್ ಶಾಸ್ತ್ರಿ ವೃತ್ತದಲ್ಲಿ ಹಮ್ಮಿಕೊಂಡಿದ್ದ ಬಹಿರಂಗ ಸಭೆ ಸೇರಲಾಯಿತು.

> **ಬಿಜೆಪಿ 8-10 ವರ್ಷಗಳ ಕಾಲ ನಮ್ಮನ್ನು ವಂಚಿಸಿದರೆ, ಕಾಂಗ್ರೆಸ್ ಪಕ್ಷ 25 ವರ್ಷಗಳಿಂದ ಮೋಸ ಮಾಡುತ್ತಾ ಬಂದಿದ್ದಾರೆ ಎಂದರು. ಹಾವನೂರು ವರದಿಯ ಪ್ರಕಾರ ನಮ್ಮ ಜನಾಂಗಕ್ಕೆ ಶೇಕಡ 9ರಷ್ಟು ಮೀಸಲಾತಿ ದೊರಕಬೇಕಾಗಿತ್ತು. ಅದಾದ ನಂತರ ಸದಾಶಿವ ಆಯೋಗದ ಪ್ರಕಾರ ಶೇಕಡ 6ಮೀಸಲು ನಮ್ಮ ಜನಾಂಗಕ್ಕೆ ದೊರಕಬೇಕಾಗಿದೆ.**
> -ಭಾಸ್ಕರ್ ಪ್ರಸಾದ್, ದಲಿತ ನಾಯಕ

ಭತ್ತ ಕಟಾವು ಬಾಡಿಗೆ ನಿಗದಿ

ಬಳ್ಳಾರಿ: ಜಿಲ್ಲೆಯಲ್ಲಿ ಭತ್ತ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ಗರಿಷ್ಠ 2,300 ರು. ಮೀರದಂತೆ ಬಾಡಿಗೆ ನಿಗದಿಪಡಿಸಲಾಗಿದ್ದು, ಹೆಚ್ಚಿನ ದರ ಪಡೆಯಲು ಮುಂದಾದರೆ ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 91,225 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆಯ ಕ್ಷೇತ್ರ ಆವರಿಸಿದ್ದು, ಈಗಾಗಲೇ ಹಲವು ಕಡೆ ಕಟಾವು ಪ್ರಾರಂಭವಾಗಿದೆ.

ಕಂಪ್ಲಿ ಮತ್ತು ಸಿರುಗುಪ್ಪ ತಾಲೂಕುಗಳಲ್ಲಿ ಖಾಸಗಿ ಭತ್ತ ಕಟಾವು ಯಂತ್ರಗಳ ಮಾಲೀಕರು ರೈತರಿಂದ ಪ್ರತಿ ಗಂಟೆಗೆ 2,500 ರು. ರಿಂದ 3,000 ರು. ಗಳವರೆಗೆ ಬಾಡಿಗೆ ಹಣ ವಸೂಲಿ ಮಾಡುತ್ತಿರುವ ಬಗ್ಗೆ ರೈತರಿಂದ ದೂರುಗಳು ಕೇಳಿ ಬಂದಿರುತ್ತವೆ.

ಈಗಾಗಲೇ ರೈತ ಮುಖಂಡರು ಮತ್ತು ಭತ್ತ ಕಟಾವು ಯಂತ್ರದ ಮಾಲೀಕರೊಂದಿಗೆ ಸಭೆ ನಡೆಸಿದ್ದು, ಅಂದಾಜು 2300 ರು. ಗಳಿಗೆ ದರ ನಿಗದಿಪಡಿಸಿ ಕೊಡಲು ಕೋರಿರುತ್ತಾರೆ.

ಹಾಗಾಗಿ ಜಿಲ್ಲೆಯಲ್ಲಿರುವ ಭತ್ತ ಕಟಾವು ಯಂತ್ರದ ಮಾಲೀಕರು 2,300 ರು. ದರಕ್ಕೆ ಮೀರದಂತೆ ಭತ್ತ ಕಟಾವು ಮಾಡಬೇಕು. ತಪ್ಪಿದ್ದಲ್ಲಿ ಭತ್ತ ಕಟಾವು ಯಂತ್ರದ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

> **ಜಿಲ್ಲೆಯಲ್ಲಿ ಶೇ.95 ರಷ್ಟು ರೈತರು ಭತ್ತದ ಬೆಳೆಯನ್ನು ಭತ್ತ ಕಟಾವು ಯಂತ್ರಗಳ ಮೂಲಕ ಕಟಾವು ಮಾಡುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಬೆಳೆದ ಭತ್ತಕ್ಕೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇಲ್ಲದ ಕಾರಣ ಹಾಗೂ ಅಕಾಲಿಕ ಮಳೆಯಿಂದ ರೈತರು ಸಂಕಷ್ಟದಲ್ಲಿರುವ ಪ್ರಯುಕ್ತ ಜಿಲ್ಲೆಯಲ್ಲಿ ಭತ್ತ ಬೆಳೆದ ರೈತರಿಗೆ ಹೆಚ್ಚಿನ ಆರ್ಥಿಕ ಹೊರೆಯಾಗಲಿದೆ.**
> -ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾಧಿಕಾರಿ

ನಾಳೆ ಜಿಲ್ಲಾ ಮಟ್ಟದ ಪತ್ಯ ಚಟುವಟಿಕೆಗಳ ಸ್ಪರ್ಧೆ

ಬಳ್ಳಾರಿ: ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರುಗಳಿಗೆ ಜಿಲ್ಲಾ ಮಟ್ಟದ ಸಹ ಪತ್ಯ ಚಟುವಟಿಕೆಗಳ ಸ್ಪರ್ಧೆಗಳನ್ನು ಡಿ.2 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸರಕಾರಿ (ಮಾಜಿ ಪುರಸಭೆ) ಪದವಿ ಪೂರ್ವ ಕಾಲೇಜ್ ನಲ್ಲಿ ಏರ್ಪಡಿಸಲಾಗಿದೆ.

ಪ್ರಬಂಧ ಸ್ಪರ್ಧೆಯ ವಿಷಯಗಳು: ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ: ಪ್ರಾಥಮಿಕ ಶಿಕ್ಷಣದಲ್ಲಿ ತಂತ್ರಜ್ಞಾನ ಬಳಕೆ, ಕಲಿಕಾ ಚೇತರಿಕೆ ಉಪಕ್ರಮದ ಸಾಧಕ ಬಾಧಕಗಳು, ಗುರುಕುಲ ಪದ್ಧತಿ-ಒಂದು ಚಿಂತನೆ.

ಪ್ರೌಢಶಾಲಾ ಶಿಕ್ಷಕರಿಗಾಗಿ: ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸಮುದಾಯದ ಪಾತ್ರ, ರಾಷ್ಟ್ರೀಯ ನೂತನ ಶಿಕ್ಷಣ ನೀತಿ, 21ನೇ ಶತಮಾನದ ಶೈಕ್ಷಣಿಕ ಸವಾಲುಗಳು.

ಚಿತ್ರಕಲಾ ಸ್ಪರ್ಧೆಯ ವಿಷಯಗಳು: ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ ಗ್ರಾಮೀಣ ಉದ್ಯೋಗಗಳು, ಸರಕಾರದ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು, ಸ್ವಚ್ಛ ಭಾರತ. ಪ್ರೌಢಶಾಲಾ ಶಿಕ್ಷಕರಿಗಾಗಿ ಕಲಿಕಾ ಸ್ನೇಹಿ ಪರಿಸರ, ಯುದ್ದದಿಂದ ಉಂಟಾಗುವ ದುಷ್ಪರಿಣಾಮಗಳು, ಸ್ವಚ್ಛ ಭಾರತ ಅಭಿಯಾನದಲ್ಲಿ ಶಿಕ್ಷಕರ ಪಾತ್ರ. ಸ್ಪರ್ಧೆಗೆ ತಾಲೂಕು ಮಟ್ಟದಲ್ಲಿ ನಡೆದ ಸಹ ಪತ್ಯ ಚಟುವಟಿಕೆಗಳ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದ ಶಿಕ್ಷಕರುಗಳು ತಪ್ಪದೇ ಭಾಗವಹಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಉಮಾದೇವಿ.ಬಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕ್ಕಿ ರಫ್ತಿಗೆ ರೈತ ಸಂಘದಿಂದ ಮನವಿ

ತುಂಗಭದ್ರ ರೈತ ಸಂಘದ ಪದಾಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಂಘದ ಅಧ್ಯಕ್ಷ ದರೂರು ಪುರುಷೋತ್ತಮಗೌಡ ಮನವಿ ಸಲ್ಲಿಸಿದರು.

ಬಳ್ಳಾರಿ: ಅಕ್ಕಿಯನ್ನು ರಫ್ತು ಮಾಡಲು ಅನುಮತಿ ನೀಡುವಂತೆ ತುಂಗಭದ್ರ ರೈತ ಸಂಘದ ಪದಾಧಿಕಾರಿಗಳು ಒತ್ತಾಯಿಸಿದರು. ನಗರಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಸಂಘದ ಅಧ್ಯಕ್ಷ ದರೂರು ಪುರುಷೋತ್ತಮ ಗೌಡ ಮನವಿ ಸಲ್ಲಿಸಿ ಮಾತನಾಡಿ, ತುಂಗಭದ್ರ ಜಲಾಶಯದ ವ್ಯಾಪ್ತಿಗೆ ಒಳಪಟ್ಟಿರುವ ಬಳ್ಳಾರಿ, ವಿಜಯನಗರ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ 9 ಲಕ್ಷ ಎಕರೆ ನೀರಾವರಿ ಪ್ರದೇಶವಿದ್ದು, ಇದರಲ್ಲಿ ಸುಮಾರು 5 ಲಕ್ಷ ಎಕರೆಗಳವರೆಗೆ ರೈತರು ಭತ್ತವನ್ನು ಬೆಳೆದಿರುತ್ತಾರೆ. ಸರಕಾರದ ಬೆಂಬಲ ಬೆಲೆ 100 ಕೆ.ಜಿ. ಭತ್ತಕ್ಕೆ 2320 ರು. ನಿಗದಿಪಡಿಸಲಾಗಿದೆ. ಆದರೆ ಈ ವರ್ಷ 100 ಕೆ.ಜಿ ಭತ್ತಕ್ಕೆ 1800 ರು. ಗಳಿಂದ 2000 ದಂತೆ ಬೆಂಬಲ ಬೆಲೆಗಿಂತಲೂ ಕಡಿಮೆ ದರದಲ್ಲಿ ಭತ್ತ ಖರೀದಿ ನಡೆದಿದೆ ಎಂದರು.

ಹಿಂದಿನ ವರ್ಷ 100 ಕೆ.ಜಿ ಭತ್ತಕ್ಕೆ 2600 ರಿಂದ 3000 ರು.ಗಳವರೆಗೆ ರೈತರು ಮಾರಾಟ ಮಾಡಿದ್ದರು. ಹಿಂದಿನ ವರ್ಷಕ್ಕಿಂತಲೂ ಈ ವರ್ಷ 100 ಕೆ.ಜಿ. ಭತ್ತಕ್ಕೆ 1000 ದರ ಕಡಿಮೆಯಾಗುವುದರಿಂದ ರೈತರು ಅತ್ಯಂತ ನಷ್ಟಕ್ಕೆ ಈಡಾಗುತ್ತಿದ್ದಾರೆ.

ಸರಕಾರದಿಂದ ಖರೀದಿ ಕೇಂದ್ರಗಳನ್ನು ತಡವಾಗಿ ತೆಗೆದದು ಅದರಿಂದ ಕೇವಲ ವ್ಯಾಪಾರಿಗಳಿಗೆ ಮಾತ್ರ ಅನುಕೂಲವಾಗಲಿದೆ. ಏಕೆಂದರೆ ರೈತರು ಭತ್ತವನ್ನು ಒಣಗಿಸಿ, ಖಾಲಿ ಚೀಲಗಳಲ್ಲಿ ತುಂಬಿಸಿ, ಖರೀದಿ ಕೇಂದ್ರಗಳಿಗೆ ಕೊಂಡೊಯ್ಯುವ ಖರ್ಚುಗಳು ಹೆಚ್ಚಾಗುವುದರಿಂದ ರೈತರಿಗೆ ಖರೀದಿ ಕೇಂದ್ರಗಳಿಂದ ಅನುಕೂಲವಾಗುತ್ತಿಲ್ಲ ಎಂದರು ಹೇಳಿದರು.

ಅಕ್ಕಿಯನ್ನು ಬೇರೆ ರಾಜ್ಯಗಳಿಗೆ ಸಾಗಿಸಲು ಮತ್ತು ವಿದೇಶಗಳಿಗೆ ರಫ್ತುಮಾಡಲು ಕ್ರಮಕ್ಕೈಗೊಳ್ಳಿರಿ. ಇದರಿಂದ ಭತ್ತದ ಬೆಲೆ ಹೆಚ್ಚಾಗಿ ರೈತರಿಗೆ ನ್ಯಾಯ ಸಿಗಲಿದೆ ಎಂದು ಹೇಳಿದ್ದಾರೆ.

ಡಿ.3 ರಂದು ವಿಶ್ವ ವಿಕಲಚೇತನರ ದಿನ

ಬಳ್ಳಾರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ, ವಿಕಲಚೇತನರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಸಂಯುಕ್ತಾಶ್ರಯದಲ್ಲಿ ಡಿ.3 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಕಾರ್ಯಕ್ರಮ ಉದ್ಘಾಟಿಸುವರು. ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು. ಶಾಸಕ ಜೆ.ಎನ್ ಗಣೇಶ್, ಸಂಸದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕ ಬಿ.ನಾಗೇಂದ್ರ, ಬಿ.ಎಂ. ನಾಗರಾಜ, ಈ. ಅನ್ನಪೂರ್ಣ, ಶಾಸಕ ಡಾ.ಚಂದ್ರಶೇಖರ್ ಬಿ. ಪಾಟೀಲ, ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗ ಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಅತಿಥಿಗಳಾಗಿ ಭಾಗವಹಿಸುವರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ರಾಜೇಶ್.ಎನ್ ಹೊಸಮನೆ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಅಂಗವಿಕಲರ ಉಪಸ್ಥಿತರಿರುವರು.

ಪ್ರಗತಿಗೆ ಪೂರಕವಾದ ಅನ್ವೇಷಣೆ ಹೆಚ್ಚಾಗಲಿ

ಬಳ್ಳಾರಿ: ಶೈಕ್ಷಣಿಕ ಪ್ರಗತಿಗೆ ಪೂರಕವಾದ ಹೊಸ ಅನ್ವೇಷಣೆಗಳು ಹೆಚ್ಚಾಗಬೇಕು ಎಂದು ಕರ್ನಾಟಕ ನಿವೃತ್ತ ಲೋಕಾಯುಕ್ತರು ಹಾಗೂ ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಾಧೀಶ ಸಂತೋಷ ಹೆಗ್ಡೆ ಹೇಳಿದರು.

ತಾಲೂಕಿನ ಮೋಕಾದ ಭೈರದೇವನಹಳ್ಳಿಯ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗೆ ಗುರುವಾರ ಭೇಟಿ ನೀಡಿ ಶಾಲೆಯಲ್ಲಿ ಚಿಕ್ಕಮಗಳೂರಿನ ಯುವಸ್ಫೂರ್ತಿ ಅಕಾಡೆಮಿ ಮತ್ತು ಬಿ.ಡಿ.ಹಳ್ಳಿ ಮೊರಾರ್ಜಿ ಮಾದರಿ ವಸತಿ ಶಾಲೆ ಇವರ ವತಿಯಿಂದ ವಿದ್ಯಾರ್ಥಿಗಳೊಂದಿಗೆ ಆಯೋಜಿಸಿದ್ದ ಸಂವಾದ ಕಾರ್ಯಕ್ರಮ ಉದ್ಘಾಟಿಸಿದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ಕಲ್ಪನಾ, ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ ವ್ಯಕ್ತಿಗಳಿಗೆ ಏಕೆ ಬೇಗ ಶಿಕ್ಷೆಯಾಗುತ್ತಿಲ್ಲ ಮತ್ತು ತಂತ್ರಜ್ಞಾನ ಮುಂದುವರೆದರೂ ರೈತರಿಗೆ ಮತ್ತು ಸಾಮಾನ್ಯ ಜನರಿಗೆ ಸರಿಯಾಗಿ ಸಮಯಕ್ಕೆ ಏಕೆ ಸೌಲಭ್ಯಗಳು ದೊರೆಯುತ್ತಿಲ್ಲ ಎಂದು ನಿವೃತ್ತ ನ್ಯಾಯಾಧೀಶರನ್ನು ಪ್ರಶ್ನಿಸಿದರು.

ಹೀಗೆ ಹಲವಾರು ವಿದ್ಯಾರ್ಥಿಗಳು ಸುಮಾರು ಪ್ರಶ್ನೆಗಳನ್ನು ಕೇಳಿದರು. ಬಳಿಕ ನಿವೃತ್ತ ನ್ಯಾಯಾಧೀಶರಾದ ಸಂತೋಷ ಹೆಗ್ಡೆ ಅವರು ಮಕ್ಕಳ ಪ್ರಶ್ನೆಗಳನ್ನು ಆಲಿಸುತ್ತಾ ಪ್ರಸ್ತುತ ದಿನಮಾನಗಳಲ್ಲಿರುವ ಪರಿಸ್ಥಿತಿಗಳ ಆಧಾರವಾಗಿಟ್ಟುಕೊಂಡು ಸವಿವರವಾಗಿ ಉತ್ತರಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಅತಿಹೆಚ್ಚು ಅಂಕ ಪಡೆದ ಶಾಲೆಯ ವಿದ್ಯಾರ್ಥಿಗಳಾದ ತರುಣ್ ಕುಮಾರ್.ಎಸ್.ಕೆ ಮತ್ತು ಸವಿತಾ.ಕೆ.ಎಂ ಅವರನ್ನು ಗಣ್ಯರು ಸನ್ಮಾನಿಸಿದರು.

> **ಶೈಕ್ಷಣಿಕ ಬೆಳವಣಿಗೆಯಲ್ಲಿ ವಿದ್ಯಾರ್ಥಿಗಳ ಕೊಡುಗೆ ಅಪಾರವಾಗಿದೆ. ಶಾಲೆಯಲ್ಲಿ ಉತ್ತಮ ವಿಜ್ಞಾನ ಪ್ರಯೋಗಾಯಲವಿದ್ದು, ಇದರ ಸದುಪಯೋಗಪಡೆದುಕೊಳ್ಳಬೇಕು.**
> -ಸಂತೋಷ ಹೆಗ್ಡೆ, ನ್ಯಾಯಾಧೀಶ

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಬಿಡಿ ಹಳ್ಳಿ ಗ್ರಾಪಂ ಸದಸ್ಯ ಹೊನ್ನಾರೆಡ್ಡಿ, ಯುವಸ್ಫೂರ್ತಿ ಅಕಾಡೆಮಿಯ ಅಧ್ಯಕ್ಷ ಸುಂದರೇಶ್, ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಜಿಲ್ಲಾ ಸಮನ್ವಯ ಅಧಿಕಾರಿ, ಬಸವರಾಜ ಬನ್ನಿಹಟ್ಟಿ, ಬಿಡಿ ಹಳ್ಳಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ವೀರಾರೆಡ್ಡಿ, ಬಿಡಿ ಹಳ್ಳಿ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಯ ಪ್ರಾಂಶುಪಾಲರಾದ ಅನುಸೂಯ.ಕೆ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಮಕ್ಕಳ ರಕ್ಷಣೆ ಕುರಿತು ಒಂದು ದಿನದ ತರಬೇತಿ

ಬಳ್ಳಾರಿ: ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಂಯುಕ್ತಾಶ್ರಯದಲ್ಲಿ ಬಾಲ್ಯವಿವಾಹ, ಪೋಕ್ಸೋ, ಆರ್.ಟಿ.ಐ ಕಾಯ್ದೆ ಹಾಗೂ ಮಕ್ಕಳ ರಕ್ಷಣೆ ಕುರಿತು ಜಿಲ್ಲಾ, ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಒಂದು ದಿನದ ಕಾರ್ಯಾಗಾರವನ್ನು ಡಿ.2 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ ಮಿಶ್ರಾ, ಅಧ್ಯಕ್ಷತೆವಹಿಸುವರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಧೀಶ ರಾಜೇಶ್ ಎನ್. ಹೊಸಮನೆ, ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ.ವಿ.ಜೆ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್.ಕೆ.ಎಚ್, ಜಲಾಲಪ್ಪ.ಎ.ಕೆ., ರಾಮಕೃಷ್ಣ ನಾಯಕ, ಯೂನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆಯ ಪ್ರಾದೇಶಿಕ ಸಂಯೋಜಕ ಡಾ.ಕೆ. ರಾಘವೇಂದ್ರ ಭಟ್ ಸೇರಿದಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಮತ್ತು ಸರಕಾರಿ ಮಕ್ಕಳ ಪಾಲನಾ ಸಂಸ್ಥೆಯ ಅಧೀಕ್ಷಕರುಗಳು ಹಾಗೂ ಇತರರು ಉಪಸ್ಥಿತರಿರುವರು.

ಸಮಾಚಾರ ಸಣ್ಣದಲ್ಲ

ವರ್ಗಾವಣೆ ಸ್ಥಳಕ್ಕೆ ನಿಯೋಜನೆಗೆ ಒತ್ತಾಯ

ಲಿಂಗಸುಗೂರು: ವರ್ಗಾವಣೆಯಾದರು ಕೇಂದ್ರದಿಂದ ಬಿಡುಗಡೆಗೊಳ್ಳದೆ ತಾಲೂಕ ಆರೋಗ್ಯಧಿಕಾರಿಗಳು ಮಾಡಿರುವ ಆದೇಶವನ್ನು ದಿಕ್ಕರಿಸಿ ವಸತಿ ಗೃಹದಲ್ಲಿರುವ ನರ್ಸ ಸೀತಾ ಇವರ ವಿರುದ್ಧ ಕ್ರಮಕ್ಕೆ ಸರ್ಜಾಪೂರ ಆರೋಗ್ಯ ಉಪ ಕೇಂದ್ರ ವ್ಯಾಪ್ತಿಗೆ ಒಳಹಡುವ ಸಾರ್ವಜನಿಕರು ತಾಲೂಕ ಆರೋಗ್ಯಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಈಗಾಗಲೆ ಸೀತಾ ಪಿಎಚ್ ಸಿಒ ಗುತ್ತಿಗೆ ಆಧಾರ ಪ್ರಾಥಮಿಕ ಆರೋಗ್ಯ ಕೇಂದ್ರ ಗೆಜ್ಜಲಗಟ್ಟ ಉಪಕೇಂದ್ರ, ಸರ್ಜಾಪೂರ ಇವರ ವಿರುದ್ಧ ಅನೇಕ ದೂರುಗಳು ಬಂದ ಕಾರಣ ಸದರಿಯವರನ್ನು ಸರ್ಜಾಪೂರ ಕೇಂದ್ರದಿಂದ ಬಿಡುಗಡೆಗೊಳಿಸಿದರು. ವರ್ಗಾವಣೆ ಆದೇಶ ಮಾಡಿದರು ಸಹ ನರ್ಸ ಸೀತಾ ನಿಗದಿತ ಸಮಯಕ್ಕೆ ಬಂದು ಕೆಲಸಕ್ಕೆ ಹಾಜರಾಗದೆ ಸರ್ಜಾಪೂರ ಗ್ರಾಮದಲ್ಲಿ ತಮ್ಮ ಕರ್ತವ್ಯವನ್ನು ಮುಂದುವರೆಸಿದ್ದಾರೆ. ಕಾರಣ ಪತ್ರ ವ್ಯವಹಾರಕ್ಕೆ ಸೀಮಿತವಾಗದೆ ಮೇಲಾಧಿಕಾರಿಗಳ ಆದೇಶದಂತೆ ವರ್ಗಾವಣೆ ಸ್ಥಳಕ್ಕೆ ಹೋಗಬೇಕು. ಅನಾಧಿಕೃತವಾಗಿ ಸರಕಾರಿ ವಸತಿ ಗೃಹದಲ್ಲಿ ವಾಸವಾಗಿದ್ದು ಅವರನ್ನು ಕೂಡಲೆ ವಸತಿ ಗೃಹದಿಂದ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಹೊಳೆಯಪ್ಪ, ಅಮರೇಶ, ದೇವಪ್ಪ, ರಾಯಪ್ಪ, ಬಸವರಾಜ, ಸಿದ್ದಪ್ಪ, ಮೌನೇಶ ಸೇರಿದಂತೆ ಇತರರು ಇದ್ದರು.

ಡಿಜಿಟಲ್ ಸಾಕ್ಷರತಾ ಅರಿವಿಗೆ ಚಾಲನೆ

ಮಾನ್ವಿ: ತಾಲೂಕಿನ ಮದ್ಲಾಪುರದಲ್ಲಿ ಅರಿವು ಕೇಂದ್ರ ಗ್ರಾಮ ಪಂಚಾಯಿತಿ ಗ್ರಂಥಾಲಯದ ಗ್ರಂಥಪಾಲಕ ಚಕ್ರಪಾಣಿ ಮದ್ಲಾಪುರ ಇವರ ಮಾರ್ಗದರ್ಶನದಲ್ಲಿ ಎನ್‌ಆರ್‌ಎಲ್‌ಎಂ ಸ್ವ ಸಹಾಯ ಸಂಘದ ಮಹಿಳಾ ಸದಸ್ಯರಿಗೆ ಡಿಜಿಟಲ್ ಸಾಕ್ಷರತೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ನಂತರ ಮಾತಾನಾಡಿದ ಇವರು ಮೊಬೈಲ್ ಹೇಗೆ ಬಳಕೆಮಾಡಬೇಕು. ನಂಬರ್ ಸೇವ್ ಮಾಡುವುದು, ಮೆಸೇಜ್ ಕಳಿಸುವುದು,ಕ್ರೊಂಮ್ನಲ್ಲಿ ನಮಗೆ ಬೇಕಾದ ವಿಷಯದ ಬಗ್ಗೆ ಹುಡುಕುವುದು. ಈ ಸಂದರ್ಭದಲ್ಲಿ ಗ್ರಾಂ,ಪಂ, ಅಧ್ಯಕ್ಷೆ ಹುಸೇನಿಬೀ, ಅಭಿವೃದ್ಧಿ ಅಧಿಕಾರಿಗಳು ದೇವಪ್ಪ ಮರಡಿ, ಕಾರ್ಯದರ್ಶಿ ವಿರುಪಾಕ್ಷಪ್ಪ,ಎಸ್ ಡಿ ಎ ನರಸಿಂಗ್ ರಾವ್ ಕುಲಕರ್ಣಿ, ತಾಲೂಕು ಪಂಚಾಯತ ಸಿಬ್ಬಂದಿ ಆನಂದ, ಮತ್ತು ಡಿಜಿ ವಿಕಾಸನ ಜಿಲ್ಲಾ ಸಂಚಾಲಕ ಜ್ಯೋತಿಬಸು, ಗ್ರಂಥಪಾಲಕರ ಜಿಲ್ಲಾ ಸಂಘದ ಅಧ್ಯಕ್ಷ ವಿರುಪಾಕ್ಷಪ್ಪ ಗೋರ್ಕಲ್, ರಾಜ್ಯ ಸಂಘದ ಕಾರ್ಯದರ್ಶಿ ವಿರೇಶ್ ಸುಂಕೇಶ್ವರ, ಪಂಚಾಯಿತಿ ಸಿಬ್ಬಂದಿ ಮಹ್ಮದ್, ಸಿದ್ದಲಿಂಗಪ್ಪ,,ಸ್ವ ಸಹಾಯ ಸಂಘದ ಎಲ್ಲಾ ಪದಾಧಿಕಾರಿಗಳು ಸದಸ್ಯರು ಭಾಗವಹಿಸಿದ್ದರು.

ಕರ ವಸೂಲಿಗೆ ತೆರಿಗೆ ವಸೂಲಾತಿ ಅಭಿಯಾನ

ರಾಯಚೂರು: ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ತೆರಿಗೆ ವಸೂಲಾತಿ ಅಭಿಯಾನ ಈಗಾಗಲೇ ಪ್ರಾರಂಭಿಸಿ ಕರ

ವಸೂಲಾತಿಗಾಗಿ ವಿಶೇಷ ಆಂದೋಲನ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಇತಿಹಾಸದಲ್ಲಿಯೇ ನಿನ್ನೇ ಒಂದೇ ದಿನ 1ಕೋಟಿ 79ಲಕ್ಷ ರೂಗಳ ದಾಖಲೆಯ ತೆರಿಗೆ ವಸೂಲಿ ಮಾಡಿರುವುದಕ್ಕೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ರಾಹುಲ್ ತುಕಾರಾಂ ಪಾಂಡ್ವೆ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಗ್ರಾಮ ಪಂಚಾಯತಿಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಕ್ರೂಢೀಕರಿಸಿಕೊಳ್ಳಲು ಕರವಸೂಲಾತಿ ಅಭಿಯಾನದ ಪ್ರಕ್ರಿಯೆಯನ್ನು ಒಂದು ವಿಶೇಷ ಆಂದೋಲನವನ್ನಾಗಿ ನಡೆಸಲು ನಿರ್ದೇಶನ ನೀಡಲಾಗಿತ್ತು. ರಾಯಚೂರು ತಾಲೂಕು ತೆರಿಗೆ ಸಂಗ್ರಹದಲ್ಲಿ ಉತ್ತಮ ಪ್ರಗತಿ ಸಾಧಿಸಿರುವುದಕ್ಕೆ ಜಿಲ್ಲಾ ಪಂಚಾಯಿತಿ ಸಿಇಒ ಅಭಿನಂದನೆ ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ. ಇನ್ನೂ ಇದೇ ರೀತಿಯಲ್ಲಿ ಹೆಚ್ಚಿನ ತೆರಿಗೆ ವಸೂಲಿ ಮಾಡುವಂತೆ ಸಲಹೆ ನೀಡಿದ್ದಾರೆ.

ವಿದ್ಯುತ್ ಅಳವಡಿಕೆಗೆ ತಾಂಡಾಗಳ ಒತ್ತಾಯ

ಸಿರವಾರ: ತಾಲೂಕಿನ ಮುರ್ಕಿಗುಡ್ಡ ರಾಮಸಿಂಗ್ ನಾಯಕ ತಾಂಡಾದಲ್ಲಿ ಕೆಲ ದಿನಗಳ ಹಿಂದೆ ವಿದ್ಯುತ್ ಪರಿವರ್ತಕ (ಟಿಸಿ) ಸುಟ್ಟು ಹೋಗಿದ್ದು ಸಂಬಂಧಿಸಿದ ಅಧಿಕಾರಿಗಳು ಟಿಸಿ ಅಳವಡಿಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿದ್ದಾರೆ. ಶೀಘ್ರವಾಗಿ ನೂತನ 63 ಸಾಮರ್ಥ್ಯದ ವಿದ್ಯುತ್ ಪರಿವರ್ತಕ ವನ್ನು ಅಳವಡಿಸುವಂತೆ ತಾಂಡಾದ ನಿವಾಸಿಗಳು ಶುಕ್ರವಾರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ ಸಲ್ಲಿಸಿದರು. ನೂತನ 63 ಸಾಮರ್ಥ್ಯದ ಟಿಸಿಯನ್ನು ಅಳವಡಿಸಿ ನಿವಾಸಿಗಳಿಗೆ ಆಗುತ್ತಿರುವ ತೊಂದರೆ ತಪ್ಪಿಸುವಂತೆ ಮನವಿಯಲ್ಲಿ ಒತ್ತಾಯಿಸ ಲಾಗಿದೆ. ಈ ಸಂದರ್ಭದಲ್ಲಿ ಅಮರೇಶ ಪವಾರ್, ಶೇಖರಪ್ಪ ರಾಠೋಡ್, ಪಾಂಡು ನಾಯ್ಕ, ತಿಪ್ಪಣ್ಣ ರಾಠೋಡ್, ಅಮರೇಶ ರಾಠೋಡ್, ಶಾಂತಪ್ಪ ಪವಾರ್, ಕ್ರಿಷ್ಟಪ್ಪ ಪವಾರ್,ಪಂಪಣ್ಣ ಪವಾರ್, ಸೋಮಲಪ್ಪ ರಾಠೋಡ್ ಸೇರಿದಂತೆ ನಿವಾಸಿಗಳು ಇದ್ದರು.

{ಬಿ.ಸಿ. ಪಾಟೀಲ್ } ಮಾಜಿ ಸಚಿವ

ಯತ್ನಾಳ್ ಬೆಂಬಲಿಗರೇ ಇಲ್ಲದ ಒಬ್ಬ ನಾಯಕ. ಕಾಂಗ್ರೆಸ್ ಬೈದರೇ ಪ್ರಚಾರ ಸಿಗುವುದಿಲ್ಲ ಎಂದು ಯಡಿಯೂರಪ್ಪ ಹಾಗೂ ಮಗನನ್ನು ಬೈಯುತ್ತಿದ್ದಾರೆ. ಬೈಯುದ್ಕೊಂಡು ನಾನು ನಾಯಕ ಆಗುತ್ತೇನೆ ಅಂದುಕೊಂಡಿದ್ದಾರೆ. ನಮ್ಮ ಪಕ್ಷದಲ್ಲಿ ಹಾರಾಡಿದವರು, ಬಿಗಿದವರು, ಕುಣಿದವರು ಬಹಳ ಬೇಗ ಮುಗಿದು ಹೋಗಿದ್ದಾರೆ.

ಕರ್ನಾಟಕ ಸುವರ್ಣ ಸಂಭ್ರಮ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ| ಶಾಸಕ ಬಸವರಾಜ ರಾಯರೆಡ್ಡಿ ಆಶಯ

ಕನ್ನಡದಲ್ಲೇ ಮೆಡಿಕಲ್ ಶಿಕ್ಷಣ ದೊರೆಯಲಿ

ಕೊಪ್ಪಳ: ಇಂಗ್ಲಿಷ್‌ಗಿಂತ ಕನ್ನಡ ಭಾಷೆ ಕಡಿಮೆ ಏನೂ ಇಲ್ಲ. ಇಂಜಿನಿಯರಿಂಗ್ ಮತ್ತು ಮೆಡಿಕಲ್ ಶಿಕ್ಷಣದ ಪಠ್ಯ ಕನ್ನಡದಲ್ಲೂ ಬರಬೇಕಿದೆ. ಈ ಬಗ್ಗೆ ನಮ್ಮ ವಿಶ್ವವಿದ್ಯಾಲಯಗಳು ಚಿಂತನೆ ಮಾಡಬೇಕಿದೆ ಎಂದು ಸಿಎಂ ಆರ್ಥಿಕ ಸಲಹೆಗಾರ ಹಾಗೂ ಶಾಸಕ ಬಸವರಾಜ ರಾಯರೆಡ್ಡಿ ಆಶಿಸಿದರು.

ನಗರದ ಸಾಹಿತ್ಯ ಭವನದಲ್ಲಿ ಕೊಪ್ಪಳ ವಿಶ್ವವಿದ್ಯಾಲಯ ಆಯೋಜಿಸಿದ್ದ ಕರ್ನಾಟಕ ಸುವರ್ಣ ಸಂಭ್ರಮ, ಕನ್ನಡ ರಾಜ್ಯೋತ್ಸವ ಹಾಗೂ ಕನ್ನಡ ಸಂಘ ಉದ್ಘಾಟಿಸಿದರು.

ಭಾಷಾ ಅಭಿಮಾನಕ್ಕೆ ತಮಿಳರು ನಮಗೆ ಮಾದರಿ ಆಗಬೇಕಿದೆ. ಇಂಗ್ಲೀಷ್ ಶಾಲೆ ತೆರೆಯಲು ನನ್ನ ವಿರೋಧ ಇದೆ. ಹಿಂದೆ ಪರ್ಷಿಯನ್ ಭಾಷೆಯಲ್ಲೇ ಶಿಕ್ಷಣ ನೀಡುತ್ತಿದ್ದರು. ಅದರಂತೆ ಕನ್ನಡದಲ್ಲೇ ಎಲ್ಲ ರೀತಿಯ ಶಿಕ್ಷಣ ನೀಡುವುದಕ್ಕೆ ಪ್ರಯತ್ನ ಮಾಡಿದರೆ, ಖಂಡಿತ ಸಫಲವಾಗಬಹುದು. ಭಾಷೆ, ಸಂಸ್ಕೃತಿ ಉಳಿಸಲು ವಿದ್ಯಾರ್ಥಿಗಳು ಶಪತ ಮಾತನಾಡಬೇಕು. ಕನ್ನಡ ಮಾತನಾಡಿದರೆ ನಮಗೆ ಗೌರವ ಸಿಗಲ್ಲ. ಇಂಗ್ಲಿಷ್‌ನಲ್ಲಿ ಮಾತನಾಡಿದರೆ ಗೌರವ ಹೆಚ್ಚುತ್ತದೆ ಎನ್ನುವ ಮಾನಸಿಕ ರೋಗ ನಮ್ಮಲ್ಲಿ ಸೇರಿದೆ. ಇದು ತೊಡೆಯಬೇಕಿದೆ. ಮಾತೃ ಭಾಷೆ ಬಿಟ್ಟು ಯೂರೋಪ್ ಭಾಷೆ ಮಾತನಾಡುವುದು ತಪ್ಪು. ನಮ್ಮ ಭಾಷೆಯಲ್ಲೇ ನಾವೆಲ್ಲರೂ ಮಾತನಾಡಬೇಕು ಎಂದು ಅಭಿಪ್ರಾಯಪಟ್ಟರು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಮೇಲೆ

ಕರ್ನಾಟಕ ಸುವರ್ಣ ಸಂಭ್ರಮ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಶಾಸಕ ಬಸವರಾಜ ರಾಯರೆಡ್ಡಿ ಉದ್ಘಾಟಿಸಿದರು.

ಭಾಷಾವಾರು ಪ್ರಾಂತ್ಯ ರಚನೆಯಾದವು. ಕರ್ನಾಟಕದ ಏಕೀಕರಣಕ್ಕಾಗಿ ಅಂದು ದೊಡ್ಡ ಚಳುವಳಿ, ಹೋರಾಟ ನಡೆದವು. ಹಲವಾರು ಜನರು ಜೈಲಿಗೆ ಹೋಗಿದ್ದರು. ಅವರ ತ್ಯಾಗ ಬಲಿದಾಗಳನ್ನು ನಾವು ಸ್ಮರಿಸಬೇಕಿದೆ ಎಂದು ಇತಿಹಾಸ ಮೆಲುಕು ಹಾಕಿದರು.

ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಅವರು ವಿವಿ ಪ್ರಾಯೋಗಿಕ ಪತ್ರಿಕೆ ಕಲ್ಯಾಣ ವಾಣಿಯ ಸುವರ್ಣ ಸಂಭ್ರಮ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿ, ಉತ್ತರ ಕರ್ನಾಟಕದ ಜನರು ಕನ್ನಡ

> **ಈ ಬಜೆಟ್ ನಲ್ಲೇ ಕೊಪ್ಪಳವಿವಿಗೆ ಅನುದಾನ ಮೀಸಲಿರಿಸಬೇಕು. ಬಿ.ಕೆ.ರವಿ ಅವರು ಇರುವಾಗಲೇ ಅನುದಾನ ತರಬೇಕು. ಇದಕ್ಕೆ ನಾನು ಕೂಡ ನಿಮ್ಮ ಜೊತೆಯಾಗಿ ಬರುತ್ತೇನೆ. ಮಾಧ್ಯಮ ಕ್ಷೇತ್ರದಲ್ಲಿ ಇಂದು ಎಲ್ಲ ವರ್ಗದ ಜನ ಇದ್ದಾರೆ. ಇದರಲ್ಲಿ ಬಿ.ಕೆ.ರವಿ ಪಾತ್ರ ದೊಡ್ಡದಿದೆ.**
> -ಎಚ್.ಎಂ.ರೇವಣ್ಣ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ

ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಒಟ್ಟು 8 ಜ್ಞಾನಪೀಠ ಪ್ರಶಸ್ತಿ ಪಡೆದ ಶ್ರೇಷ್ಟ ಭಾಷೆ ನಮ್ಮದಾಗಿದೆ. ನಾವೆಲ್ಲರೂ ಮಾತೃಭಾಷೆಗೆ ಆದ್ಯತೆ ನೀಡಬೇಕಿದೆ ಎಂದರು.

ಸಂಸದ ಕೆ.ರಾಜಶೇಖರ ಹಿಟ್ನಾಳ ಮಾತನಾಡಿ, ಬಸವಣ್ಣನವರು ಜಗತ್ತಿಗೆ ಮೊದಲ ಸಂಸತ್ ನೀಡಿದ್ದರು. ಎಲ್ಲರಿಗೂ ಸಮಾನತೆ ಸಾರಿದ ನಾಡು ನಮ್ಮದಾಗಿದೆ. ಪಾರ್ಲಿಮೆಂಟ್ ನಲ್ಲಿ ವಿವಿಧ ರಾಜ್ಯದಿಂದ ಬಂದವರು ತಮ್ಮದೆ ಭಾಷೆಯಲ್ಲಿ ಮಾತನಾಡುವ ಮೂಲಕ ತಮ್ಮ ಮಾತೃಭಾಷೆ ಬಗ್ಗೆ ಅಭಿಮಾನ ತೋರಿಸುತ್ತಾರೆ. ಇದು ನಮಗೆ ಮಾದರಿ ಆಗಬೇಕು ಎಂದರು.

ಕೊಪ್ಪಳ ವಿವಿ ಕುಲಪತಿ ಪ್ರೊ. ಬಿ.ಕೆ. ರವಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೊಪ್ಪಳ ವಿವಿ ಸ್ಥಾಪನೆಯಾಗಿ ಒಂದೂವರೆ ವರ್ಷ ಕಳೆದಿದೆ. ಮೈಸೂರು ದಸರಾದಲ್ಲಿ ನಡೆದಂತೆ ಇಲ್ಲಿಯೂ ಕವಿಗೋಷ್ಠಿ ಮಾಡಿದ್ದೇವೆ. ಈ ಭಾಗದಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಾಂಸ್ಕೃತಿಯ ಮೇಲೆ ಪ್ರೀತಿ ಇರುವ ಅಪಾರ ಜನರು ಈ ಭಾಗದಲ್ಲಿದ್ದಾರೆ. ಜನ ಸಾಮಾನ್ಯರ ಹತ್ತಿರ ಇದ್ದಾಗ ಮಾತ್ರ ವಿವಿ ಜಾಗತಿಕವಾಗಿ ಹೆಸರು ಮಾಡಲು ಸಾಧ್ಯ. ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಅನೇಕ ಕೋರ್ಸ್ ಆರಂಭಿಸುತ್ತಿದ್ದೇವೆ. ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಅಭಿನಂದನೆಗಳು ಎಂದು ಹೇಳಿದರು.

ಬಳ್ಳಾರಿ ವಿಜಯನಗರ ಶ್ರೀಕೃಷ್ಣದೇವರಾಯ ವಿವಿ ಕುಲಪತಿ ಪ್ರೊ.ಎಂ. ಮುನಿರಾಜು, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ ಮಾತನಾಡಿದರು. ಬಳ್ಳಾರಿ ವಿವಿ ಕುಲಸಚಿವ ಎಸ್.ಎನ್. ರುದ್ರೇಶ, ಕೊಪ್ಪಳ ವಿವಿ ಹಣಕಾಸು ಅಧಿಕಾರಿ ಅಮೀನಸಾಬ್, ಕೊಪ್ಪಳ ವಿವಿ ಪ್ರಭಾರಿ ಕುಲಸಚಿವ ಪ್ರೊ. ಕೆ.ವಿ. ಪ್ರಸಾದ ಇದ್ದರು.

ಶಾಸಕ ಹಿಟ್ನಾಳಗೆ ಇಚ್ಛಾಶಕ್ತಿಯೇ ಇಲ್ಲವೆ?

ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ಬಸವರಾಜ ರಾಯರೆಡ್ಡಿ, ಸರಕಾರದಲ್ಲಿ ಹಣದ ಕೊರತೆ ಇಲ್ಲ. ಯಲಬುರ್ಗಾದಲ್ಲಿ ವಿವಿ ಮಾಡುವುದಾದರೆ ಹೇಳಿ ನಾಳೆಯೇ 100 ಕೋಟಿ ಬಿಡುಗಡೆ ಮಾಡಿಸುವೆ' ಎಂದರು. ಅವರ ಈ ಮಾತು ಯಲಬುರ್ಗಾಕ್ಕೆ ಸಾಧ್ಯವಾದರೆ ಕೊಪ್ಪಳಕ್ಕೆ ಏಕಿಲ್ಲ? ಎಂಬ ಪ್ರಶ್ನೆ ಸಾರ್ವಜನಿಕರಲ್ಲಿ ಹುಟ್ಟು ಹಾಕಿತು. ಅಥವಾ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ತರುವಲ್ಲಿ ಶಾಸಕ ರಾಘವೇಂದ್ರ ಹಿಟ್ನಾಳ ಇಚ್ಛಾಶಕ್ತಿ ತೋರುತ್ತಿಲ್ಲವೆ ಎಂಬ ಪ್ರಶ್ನೆ ಹುಟ್ಟಿತು. ಮುಂದುವರೆದ ರಾಯರೆಡ್ಡಿ, ಕೊಪ್ಪಳದಲ್ಲಿ ಕನ್ನಡ ಸಂಸ್ಕೃತಿ ಭವನ ನಿರ್ಮಾಣದ ಅಗತ್ಯ ಇದೆ. ಸುಮಾರು 15 ಕೋಟಿ ವೆಚ್ಚದಲ್ಲಿ ನಿರ್ಮಾಣ ಆಗಬೇಕಿದೆ. ಸ್ಥಳೀಯ ಶಾಸಕರು ಪ್ರಪೋಸಲ್ ಕೊಟ್ಟರೆ ಈ ಬಾರಿ ಬಜೆಟ್ ನಲ್ಲಿ ಹಣ ಕೊಡಿಸುತ್ತೇನೆ ಎಂದರು. ಶಾಸಕರು ಕನಿಷ್ಠ ಪ್ರಸ್ತಾವನೆ ಪತ್ರ ಕೊಡುವ ಕೆಲಸ ಮಾಡುತ್ತಾರಾ ಕಾದು ನೋಡಬೇಕಿದೆ.

ಲ್ಯಾಂಡ್ ಜಿಹಾದ್ ವಿರೋಧಿಸಿ ಪ್ರತಿಭಟನೆ

ಕೊಪ್ಪಳ: ರಾಜ್ಯದಲ್ಲಿ ನಡೆದಿರುವ ಲ್ಯಾಂಡ್ ಜಿಹಾದ್ ವಿರುದ್ಧ ಬಿಜೆಪಿ ಸಂಘಟನಾತ್ಮಕ ಹೋರಾಟ ರೂಪಿಸಿದ್ದು, ಜಿಲ್ಲೆಯ ಡಿ.6 ರಂದು ಬೃಹತ್ ಹೋರಾಟ ನಡೆಯಲಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ ಹೇಳಿದರು.

ಕೊಪ್ಪಳದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ರೈತರ ಜಮೀನು, ಮಠ, ದೇವಸ್ಥಾನಗಳ ಆಸ್ತಿಗೆ ವಕ್ಫ ಮಂಡಳಿ ನೋಟೀಸ್ ನೀಡಿದೆ. ಸರಕಾರ ಹಪಣಿಯಲ್ಲಿ ವಕ್ಫ ಹೆಸರು ನಮೂದು ಮಾಡಿದೆ. ಇದನ್ನು ಬಿಜೆಪಿ ಗಂಭೀರವಾಗಿ ಪರಿಗಣಿಸಿದೆ. ಈ ಎಲ್ಲ ವಿಚಾರಗಳ ಹಿನ್ನೆಲೆ ಕೇಂದ್ರ ಸರಕಾರ ವಕ್ಫ ಕಾಯ್ದೆ ತಿದ್ದುಪಡಿ ಮಾಡಲು ಮುಂದಾಗಿದೆ. ರಾಜ್ಯ ಬಿಜೆಪಿ ರಾಜ್ಯಾದ್ಯಂತ ಮೂರು ತಂಡಗಳಾಗಿ ಹೋರಾಟ ಆರಂಭಿಸಿದೆ. ಡಿ.6ರ ಬೆಳಗ್ಗೆ 11.30ಕ್ಕೆ ಸಾವಿರಾರು ರೈತರೊಂದಿಗೆ ಕಾರಟಗಿ ಪಟ್ಟಣದಲ್ಲಿ ಹೋರಾಟ ಮಾಡುತ್ತೇವೆ ಎಂದರು.

ಸಿಎಂ ಸೂಚನೆ ಹಿನ್ನೆಲೆ ರೈತರಿಗೆ ನೋಟೀಸ್ ಜಾರಿ ಮಾಡಿದ್ದೇವೆ ಎಂದು ಸಚಿವ ಜಮೀರ್ ಅಹ್ಮದ್ ಹೇಳಿದ್ದಾರೆ. ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರು ಈವರೆಗೆ ಯಾವುದೇ ಸ್ಪಷ್ಟನೆ ನೀಡಿಲ್ಲ. ಕೂಡಲೇ ಸಿಎಂ ಅವರು ಜಮೀರ್ ಅಹ್ಮದ್ ಅವರ ಹೇಳಿಕೆ ಬಗ್ಗೆ ಸ್ಪಷ್ಟನೆ ನೀಡಬೇಕು. ಹಮೀರ್ ಅವರು ನಿಮ್ಮ ಹೆಸರನ್ನು ದುರುಪಯೋಗ ಮಾಡಿಕೊಂಡಿದ್ದರೆ ಅವರನ್ನು ಸಂಪುಟದಿಂದ ಕೈ ಬಿಡಬೇಕು ಎಂದು ಬಿಜೆಪಿ ಆಗ್ರಹಿಸುತ್ತದೆ.

ಬಿಜೆಪಿಯಲ್ಲಿ ಯಾವುದೇ ಬಣಕ್ಕೆ ಅವಕಾಶ ಇಲ್ಲ. ಈ ಸರಕಾರದ ಹಗರಣಗಳ ಬಗ್ಗೆ ಹೋರಾಟ ಮಾಡುತ್ತೇವೆ. ಯತ್ನಾಳ ಅವರು ಕೂಡ ಸದನದ ಒಳಗೆ ಮತ್ತು ಹೊರಗೆ ಹೋರಾಟ ಮಾಡುತ್ತಾರೆ ಎಂದು ಭರವಸೆ ವ್ಯಕ್ತಪಡಿಸಿದರು.

> **ಈ ಬಾರಿ ಡಿ.12 ಮತ್ತು 13 ರಂದು ಹನುಮ ಮಾಲೆ ಕಾರ್ಯಕ್ರಮ ನಡೆಯಲಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಈ ಬಾರಿ ಹನುಮ ಮಾಲೆ ಧರಿಸಿ, ಅಂಜನಾದ್ರಿಗೆ ಬರಲಿದ್ದಾರೆ. ರಾಜ್ಯಾದ್ಯಂತ ಬಿಜೆಪಿ ಯುವ ಮೋರ್ಚಾ ದಿಂದ ಹನುಮ ಮಾಲೆ ಹಾಕಿ ಭಕ್ತರು ಬರಲಿದ್ದಾರೆ. ಮೂರು ದಿನ 3 ಹೊತ್ತು ಪ್ರಸಾದ ವ್ಯವಸ್ಥೆ ಮಾಡಲಾಗಿದೆ.**
> -ಜನಾರ್ದನ ರೆಡ್ಡಿ, ಶಾಸಕ

ಉಪ ಚುನಾವಣೆ ಸೋಲಿನ ವಿಚಾರಕ್ಕೆ ಪ್ರತಿಕ್ರಿಯಿಸಿ, ಈ ಹಿಂದಿನ ಉಪ ಚುನಾವಣೆಯ ಫಲಿತಾಂಶ ನೋಡಿದರೆ ಈ ಬಗ್ಗೆ ತಿಳಿಯುತ್ತದೆ. ಉಪ ಚುನಾವಣೆ ಭ್ರಷ್ಟಾಚಾರದಿಂದ ರಕ್ಷಣೆಗೆ ರಕ್ಷಾಕವಚ ಅಲ್ಲ. ಸಂಡೂರಿನಲ್ಲಿ ಹೆಚ್ಚಿನ ಪ್ರಮಾಣ ಮತ ಪಡೆದಿದ್ದೇವೆ. ಉಪ ಚುನಾವಣೆ ಸರಕಾರದ ವೈಫಲ್ಯದ ಮಾನದಂಡ ಅಲ್ಲ ಎಂದು ಸಮರ್ಥಿಸಿಕೊಂಡರು. ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಗುಳಗಣ್ಣವರ್, ಶಾಸಕರಾದ ದೊಡ್ಡನಗೌಡ ಪಾಟೀಲ್, ಜನಾರ್ದನ ರೆಡ್ಡಿ ಎಂಎಲ್ಸಿ ಹೇಮಲತಾ ನಾಯಕ, ಶರಣು ತಳ್ಳಿಕೇರಿ, ಅರುಣ್ ಶಹಪೂರ, ಹಾಲಪ್ಪ ಆಚಾಚ, ಡಾ.ಬಸವರಾಜ ಕ್ಯಾವಟರ್, ಪರಣ್ಣ ಮುನವಳ್ಳಿ ಇದ್ದರು.

ಕರವೇ ವೇದಿಕೆಯಿಂದ ಕನ್ನಡ ರಾಜ್ಯೋತ್ಸವ

ಮಹಾನೀಯರಿಗೆ ಅಭಿನಂದನೆ ಕಾರ್ಯಕ್ರಮದಲ್ಲಿ 108 ಆಂಬುಲೆನ್ಸ್ ಡ್ರೈವರ್‌ಗಳಿಗೆ ಹಾಗೂ ಸಮಾಜಸೇವಕ ವೀರೇಶ್ ಮುಳ್ಳೂರುಗೆ ಸನ್ಮಾನಿಸಿದರು.

ಸಿಂಧನೂರು: ಕನ್ನಡ ನಾಡು ನುಡಿಗಾಗಿ ಎಲ್ಲರೂ ಅಗಲಿರಳು ದುಡಿಯಿರಿ ಕನ್ನಡದ ನೆಲ ಜಲ ಭಾಷೆಗಾಗಿ ಎಲ್ಲಾ ಸಂಘಟನೆಯರು ಒಗ್ಗಟ್ಟಾಗಿ ಒಂದು ಬೃಹತ್ ಕಾರ್ಯಕ್ರಮ ಆಯೋಜನೆ ಮಾಡಿದರು ಎಂದು ಮಾಜಿ ಸಚಿವರು ಹಾಗೂ ಕೆ.ಒ.ಎಫ್ ರಾಜ್ಯಾಧ್ಯಕ್ಷ ವೆಂಕಟರಾವ್ ನಾಡಗೌಡ ಮಾತನಾಡಿದರು.

ನಗರದ ಸ್ತ್ರೀ ಶಕ್ತಿ ಭವನದಲ್ಲಿ ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಮುಂಜಾನೆ ತಾಯಿ ಭುವನೇಶ್ವರಿ ಮೆರವಣಿಗೆ ಮತ್ತು ಸಂಜೆ ಹಾಸ್ಯ ಕಾರ್ಯಕ್ರಮ ಹಾಗೂ ವಿವಿಧ ಸೇವೆ ಗೈದ ಮಹಾನೀಯರಿಗೆ ಅಭಿನಂದನೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕರ್ತರಾದ ಸುರೇಶ್ ಗೊಬ್ಬರಕಲ್ ಹಾಗೂ ನಗರ ಘಟಕದ ಅಧ್ಯಕ್ಷ ದಾವಲ್ ಸಾಬ್ ದೊಡ್ಮನಿ ಇವರ ನೇತೃತ್ವದಲ್ಲಿ ಅದ್ದೂರಿಯಾಗಿ ಕನ್ನಡ ರಾಜ್ಯೋತ್ಸವ ಹಾಗೂ ನಗರಸಭೆಯ ಪೌರಕಾರ್ಮಿಕರಿಗೆ ಹಾಗೂ ಸರಕಾರಿ ಆಸ್ಪತ್ರೆಯ ನರ್ಸ್‌ಗಳಿಗೆ ಹಾಗೂ 108 ಆಂಬುಲೆನ್ಸ್ ಡ್ರೈವರ್‌ಗಳಿಗೆ ಹಾಗೂ ಸಮಾಜ ಸೇವಕ ವೀರೇಶ್ ಮುಳ್ಳೂರು ಇವರಿಗೆ ಸನ್ಮಾನ ಕಾರ್ಯಕ್ರಮ ನೆರವೇರಿಸಲಾಯಿತು. ನಂತರ ರಸಮಂಜರಿ ಕಾರ್ಯಕ್ರಮಗಳನ್ನು ಜೂನಿಯರ್ ರವಿಚಂದ್ರ ಹಾಗೂ ಜೂನಿಯರ್ ವಿಷ್ಣುವರ್ಧನ್ ಹಾಗೂ ಜೂನಿಯರ್ ಉಪೇಂದ್ರ ಅವರ ಕಡೆಯಿಂದ ನೆರವೇರಿತು.

> **ನಮ್ಮಲ್ಲಿರುವಂತ ಬೇರೆ ಭಾಷೆಯವರಿಗೆ ನಾವು ಅವರ ಬಾಷೆಯಲ್ಲಿ ಮಾತನಾಡುವುದಕ್ಕಿಂತ ಮುಂಚೆ ಕನ್ನಡ ಮಾತನಾಡಿ ಕನ್ನಡ ಕಲಿಸಿ ಕನ್ನಡ ಭಾಷೆ ಅತ್ಯಂತ ಪ್ರಾಚೀನವಾದದ್ದು ಹೆಚ್ಚಿನ ಪ್ರಶಸ್ತಿಗಳು ಕನ್ನಡಕ್ಕೆ ದೊರಕಿವೆ.**
> -ವೆಂಕಟರಾವ್ ನಾಡಗೌಡ, ಮಾಜಿ ಸಚಿವರು

ಈ ಕಾರ್ಯಕ್ರಮದಲ್ಲಿ ಶ್ರದ್ಧಾನಂದ ಶ್ರೀಗಳು ಬಂಗಾರಿ ಕ್ಯಾಂಪ್, ಅಬ್ಬಸಲಿ ತಾತ ಗೋನವಾರ್, ಚನ್ನಬಸಪ್ಪ ಗೊರೆಬಾಳ, ಎಮ್ ದೊಡ್ಡ ಬಸವರಾಜ್, ಶಿವನಗೌಡ ಗೊರೆಬಾಳ, ಶಿವರಾಜ್ ಡಾಕ್ಟರ್ ಸಹನಾ ಆಸ್ಪತ್ರೆ, ಅಶೋಕ್ ಉಮಲೂಟಿ, ಸಿದ್ದು ಹೂಗಾರ್, ಆರ್ ಕೆ ನಾಯಕ ಮಸ್ಕಿ, ಸಿದ್ದಣ್ಣ ಮೆದಿಕಿನಾಳ, ಪ್ರದೀಪ್ ಪೂಜಾರಿ, ಪಂಪಯ್ಯ ಸ್ವಾಮಿ ಅಂತರಗಂಗೆ, ಕಾರ್ಯಕರ್ತರಾದ ದೇವರಾಜ ಬಪ್ಪೂರ ದುರಗೇಶ್, ಸೇರಿದಂತೆ ಅನೇಕ ಕಾರ್ಯಕರ್ತರು ಇದ್ದರು.

ಜಮೀನಿಗೆ ದಾರಿ ನಿರ್ಮಿಸಿದ ರೈತರು

ಮಸ್ಕಿ: ತಾಲೂಕಿನ ಗುಡದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಂಗಾಪುರ ಗ್ರಾಮದ ರೈತರು ತಮ್ಮ ಜಮೀನುಗಳಿಗೆ ಹೋಗುವ ದಾರಿಯನ್ನು ತಾವೇ ಸರಿಪಡಿಸಿಕೊಂಡಿದ್ದಾರೆ. ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯಕ್ಕೆ ಸಂಬಂಧಿಸಿದ ಇಲಾಖೆಗೆ ರೈತರು ಹಿಡಿಶಾಪ ಹಾಕಿದ್ದಾರೆ. ರಂಗಾಪುರ ಗ್ರಾಮದಿಂದ ತುಂಗಭದ್ರ ಎಡದಂಡೆ ಕಾಲುವೆಗೆ ಹೊಂದಿಕೊಂಡಿರುವ ಸುಮಾರು ನೂರಾರು ರೈತರ ಸಾವಿರಾರು ಎಕರೆ ಜಮೀನುಗಳಿಗೆ ಹೋಗುವ ಈ ರಸ್ತೆಯಲ್ಲಿ ಪ್ರತಿನಿತ್ಯ ರೈತರ ವಾಹನಗಳು ಕೂಲಿ ಕಾರ್ಮಿಕರು ಓಡಾಡುತ್ತಾರೆ ಸ್ವಲ್ಪ ಯಾಮಾರಿದರೂ ಕಾಲುವೆಗೆ ಜಾರಿ ಪ್ರಾಣ ಕಳೆದುಕೊಳ್ಳುವುದು ಶತಸಿದ್ಧವಾಗಿದೆ. ರೈತರು ಬೆಳೆಯುವ ಭತ್ತ, ತೊಗರಿ, ಜೋಳ ಸೇರಿದಂತೆ ಅನೇಕ ವಸ್ತುಗಳನ್ನು ನಗರಕ್ಕೆ ಸಾಗಿಸುವ ಪ್ರಧಾನ ರಸ್ತೆಗೆ ಇದು ಕೂಡಿಕೊಳ್ಳುತ್ತದೆ. ಸುಮಾರು ವರ್ಷಗಳಿಂದಲೂ ಸಂಬಂಧಪಟ್ಟ ಜನಪ್ರತಿನಿಧಿಗಳಿಗೆ ರಸ್ತೆ ಸರಿಪಡಿಸಿಕೊಡಲು ಬೇಡಿಕೆ ಇಟ್ಟಿದ್ದರು ಸಹ ಕಿವಿಗೊಡದ ಇಲಾಖೆಗಳು ಹಾಗೂ ಜನಪ್ರತಿನಿಧಿಗಳು ನಿದ್ರಾವಸ್ಥೆಯಲ್ಲಿರುವುದನ್ನು ಕಂಡು ರೈತರೇ ತಮ್ಮ ರಸ್ತೆಯನ್ನು ಸ್ವತ: ಸರಿಪಡಿಸಿಕೊಂಡಿದ್ದಾರೆ. ರಸ್ತೆ ನಿರ್ಮಾಣದ ಬಗ್ಗೆ ರಂಗಾಪುರ ಗ್ರಾಮದ ಮುಖಂಡ ಗೋವಿಂದಪ್ಪ ನಾಯಕ ಮಾತನಾಡಿ, ನಾವು ಕೇವಲ ಜನಪ್ರತಿನಿಧಿಗಳಿಗೆ ಮತ ಚಲಾಯಿಸುವುದಕ್ಕೆ ಮಾತ್ರ ಬೇಕಾಗಿದ್ದೇವೆ. ನಮ್ಮ ಸಮಸ್ಯೆಗಳನ್ನು ಈಡೇರಿಸುವುದಕ್ಕೆ ಅವರಿಗೆ ಸಮಯವಿಲ್ಲ. ಈ ಸಂದರ್ಭದಲ್ಲಿ ರಂಗಾಪುರ ಗ್ರಾಮದ ಶರಣಪ್ಪ, ಗುಂಡಪ್ಪ, ಬಸವರಾಜ, ಯಂಕಪ್ಪ, ಹನುಮಣ್ಣ ಸೇರಿದಂತೆ ಅನೇಕರು ಇದ್ದರು.

ರಾಯಚೂರು ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟದ ಅಂಗವಾಗಿ ಪೊಲೀಸ್ ಅಧಿಕಾರಿಗಳ ತಂಡ ಮತ್ತು ಪತ್ರಕರ್ತರ ತಂಡಗಳ ಮಧ್ಯೆ ಕ್ರಿಕೆಟ್ ಪಂದ್ಯಾವಳಿ ಜಿಲ್ಲಾ ಪೊಲೀಸ್ ಮೈದಾನದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಅವರು ಬ್ಯಾಟ್ ಮಾಡುವ ಮೂಲಕ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಡಾ.ಶಿವ ಕುಮಾರ, ಹರೀಶ್ ಕುಮಾರ ಲಿಂಗಸುಗೂರು ಡಿವೈಎಸ್‌ಪಿ ದತ್ತಾತ್ರೆಯ ಕರ್ನಾಡ್ ಇತರರು ಭಾಗವಹಿಸಿದ್ದರು.

ಕೊಪ್ಪಳದಲ್ಲಿ ವಕೀಲರ ದಿನಾಚರಣೆ ಡಿ.3ರಂದು

ಕೊಪ್ಪಳ: ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಡಿ. 3ರಂದು ಬೆಳಗ್ಗೆ 10 ಗಂಟೆಗೆ ಬಾಬು ರಾಜೇಂದ್ರ ಪ್ರಸಾದ್ ಅವರ ಜನ್ಮದಿನದ ಅಂಗವಾಗಿ ಜಿಲ್ಲಾ ವಕೀಲರ ಸಂಘದಿಂದ ವಕೀಲರ ದಿನ ಆಚರಿಸಲಾಗುವುದು ಎಂದು

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎ.ವಿ. ಕಣವಿ ಹೇಳಿದರು. ನಗರದ ಮೀಡಿಯಾ ಕ್ಲಬ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲಾ ಮತ್ತು ಸಷೆನ್ಸ್ ನ್ಯಾಯಾಲಯದ ನ್ಯಾಯಾಧೀಶ ಸಿ. ಚಂದ್ರಶೇಖರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಖ್ಯಾತ ವಕೀಲ ಸಿ.ಎಚ್. ಹನುಮಂತರಾಯ್ ಭಾಗವಹಿಸುವರು. ಸಾಧಕರಿಗೆ ಹಾಗೂ ವಕೀಲರಿಗೆ ಸನ್ಮಾನ ಕಾರ್ಯಕ್ರಮ, ವಕೀಲರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಜರುಗಲಿದೆ ಎಂದು ತಿಳಿಸಿದರು. ಶಾಸಕ ರಾಘವೇಂದ್ರ ಹಿಟ್ನಾಳ, ಮಾಜಿ ಸಂಸದ ಸಂಗಣ್ಣ ಕರಡಿ, ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸ ಗುಪ್ತಾ, ರಾಜ್ಯ ವಕೀಲರ ಪರಿಷತ್ ಸದಸ್ಯ ಎಸ್.ಎಸ್. ಮಿಠ್ಠಲಕೋಡ, ಆಸೀಫ್ ಅಲಿ, ಕಾನೂನು ಅಧಿಕಾರಿ ಬಿ.ಎಸ್. ಪಾಟೀಲ, ಮಹಿಳಾ ನ್ಯಾಯವಾದಿಗಳ ಒಕ್ಕೂಟದ ಅಧ್ಯಕ್ಷೆ ಸಂಧ್ಯಾ ಬಿ. ಮಾದಿನೂರು ಪಾಲ್ಗೊಳ್ಳುವರು ಎಂದು ಮಾಹಿತಿ ನೀಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಲ್. ಹಾದಿಮನಿ, ಉಪಾಧ್ಯಕ್ಷ ಬಿ.ವಿ. ಸಜ್ಜನ್, ಜಂಟಿ ಕಾರ್ಯದರ್ಶಿ ಸಂತೋಷ ಸಿ. ಕವಲೂರು ಹಾಗೂ ವಕೀಲ ಬಸವರಾಜ ಗಡಾದ ಇದ್ದರು.

ಪೌಷ್ಟಿಕ ಆಹಾರ ಸೇವನೆಗೆ ಕೈತೋಟ ಸದ್ಬಳಕೆ ಮಾಡಿಕೊಳ್ಳಿ

ರಾಯಚೂರು: ಸರಕಾರಿ ಬಾಲಕಿಯರ ಬಾಲಮಂದಿರದಲ್ಲಿ ನ್ಯೂಟ್ರಿ ಕಿಚನ್ ಗಾರ್ಡನ್ ಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಅಮರೇಶ ಚಾಲನೆ ನೀಡಿದರು.

ನಗರದ ಬಾಲಕಿಯರ ಬಾಲಮಂದಿರದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ರಾಯಚೂರು ಮತ್ತು ಬಾಲಕಿಯರ ಬಾಲಮಂದಿರ ಸಹಯೋಗದಲ್ಲಿ ಮಿಷನ್ ವಾತ್ಸಲ್ಯ, ಸ್ವಚ್ಛತಾ ಕ್ರಿಯಾ ಯೋಜನೆಯಡಿ ಆಯೋಜಿಸಲಾದ ನ್ಯೂಟ್ರಿ ಕಿಚನ್ ಗಾರ್ಡನ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪೌಷ್ಟಿಕತೆಯುಳ್ಳ ಆಹಾರ ಸೇವನೆ ಆರೋಗ್ಯಕರ ಸಮಾಜದ ವೃದ್ಧಿಗೆ ಸಾಕ್ಷಿ. ವಸತಿ ನಿಲಯದಲ್ಲಿ ಪೌಷ್ಟಿಕತೆ ಕೈತೋಟ ಬೆಳೆಸುವ ಮೂಲಕ ದಿನನಿತ್ಯದಲ್ಲಿ ಬಳಸುವ ಕಾಯಿಪಲ್ಲೆಗಳನ್ನು ಸ್ವತಃ ನಾವೇ ಬೆಳೆದು ನಾವೇ ಸೇವಿಸಬಹುದು ಎಂದು ತಿಳಿಸಿದರು. ಜಿಲ್ಲೆಯ 4 ಕೇಂದ್ರಗಳಿಗೆ ನ್ಯೂಟ್ರಿ ಕಿಚನ್ ಗಾರ್ಡನ್ ಮಂಜೂರಾಗಿದ್ದು, ಇದನ್ನು ಉತ್ತಮ ರೀತಿಯಲ್ಲಿ ಬೆಳೆಸಬೇಕೆಂದರು. ಈ ತೋಟದಲ್ಲಿ ಬೆಂಡೆಕಾಯಿ, ಚವಳಿಕಾಯಿ, ಬದನೆಕಾಯಿ, ಕೊತ್ತಂಬರಿ, ಪಾಲಕಸೊಪ್ಪು, ಮೆಂತೆಪಲ್ಲೆ, ಮೆಣಸಿನಕಾಯಿ,ಮೂಲಂಗಿ, ಹಾಗಲಕಾಯಿ ಇತ್ಯಾದಿ ತರಕಾರಿ ಬೆಳೆಗಳನ್ನು ಬೆಳೆದು ಸದ್ಬಳಕೆ ಮಾಡಿಕೊಳ್ಳಬೇಕುಂದರು. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಮಂಗಳಾ ಹೆಗಡೆ ಮಾತನಾಡಿ, ವಿದ್ಯಾರ್ಥಿಗಳು ಪರಿಸರದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ, ಪರಿಸರದಲ್ಲಿ ಸಿಗುವ ಹಣ್ಣು ಹಂಪಲು, ಕಾಯಿಪಲ್ಲೆಗಳ ಹೇಗೆ ಬೆಳೆಯುತ್ತಾರೆ ಎಂಬ ತಿಳುವಳಿಕೆ ಹೊಂದಿರಬೇಕು. ಈ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸಮಿತಿ ಸದಸ್ಯ ಬಸವರಾಜ ಬ್ಯಾಗವಾಟ, ಫಾ.ಸತೀಶ ಫರ್ನಾಂಡಿಸ್, ಶಾರದಾ ಪವನ್ ಪಾಟೀಲ್, ಬಾಲಕಿಯರ ಬಾಲಮಂದಿರದ ಆದಿಕ್ಷಕ ಭಾರತಿ ನಾಯಕ, ರಾಧಾಬಾಯಿ, ಆಪ್ತಸಮಾಲೋಚಕರಾದ ಕವಿತಾ, ವಿಜಯಲಕ್ಷ್ಮೀ ಸೇರಿದಂತೆ ಸಿಬ್ಬಂದಿ ಪಾಲ್ಗೊಂಡಿದ್ದರು.

ಕಾಂಗ್ರೆಸ್ ಚಿನ್ಹೆಯಡಿ ಹಾಸನ ಸಮಾವೇಶ

ಕೊಪ್ಪಳ: ಕಾಂಗ್ರೆಸ್ ಚಿನ್ಹೆಯಡಿಯೇ ಹಾಸನದ ಸ್ವಾಭಿಮಾನಿ ಸಮಾವೇಶ ನಡೆಯಲಿದ್ದು, ಕೆಪಿಸಿಸಿ ಅಧ್ಯಕ್ಷರು ಸೇರಿ ಎಲ್ಲ ನಾಯಕರು ಭಾಗಿ ಆಗಲಿದ್ದಾರೆ ಎಂದು ಕೊಪ್ಪಳದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್. ಎಂ.ರೇವಣ್ಣ ಹೇಳಿದರು.



ಕೊಪ್ಪಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಅನಾಮಧೇಯ ಪತ್ರಗಳ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ನಮ್ಮ ಪಕ್ಷದ ಚಿನ್ಹೆಯ ಅಡಿಯಲ್ಲೇ ಸಮಾವೇಶ ಮಾಡಿ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಇದರಿಂದ ಪಕ್ಷದ ಚಿನ್ಹೆಯ ಅಡಿಯಲ್ಲೇ ಸಮಾವೇಶ ನಡೆಯಲಿದೆ. ಸಮಾವೇಶದ ಬಗ್ಗೆ ಸಿಡಬ್ಲ್ಯೂಸಿ ಸಭೆಯಲ್ಲೂ ಚರ್ಚೆ ಆಗಿದೆ. ಸಚಿವ ಸಂಪುಟ ಪುನರಚನೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯ ಯಾವುದೂ ಸದ್ಯಕ್ಕೆ ಇಲ್ಲ ಎಂದು ಸ್ಪಷ್ಟಪಡಿಸಿದರು. ಇಂದಿರಾ ಗಾಂಧಿ, ದೇವರಾಜ ಅರಸು ಕಾಲದಿಂದಲೂ ಇಂತ ಯೋಜನೆಯನ್ನು ಕಾಂಗ್ರೆಸ್ ಮಾಡಿದೆ. ಹೀಗಾಗಿ ಯುವ ನಿಧಿಯನ್ನು ಕೊಡುತ್ತಿದ್ದೇವೆ. ಈ ಯೋಜನೆಗಳನ್ನು ಸಾಮಾನ್ಯ ಜನ ವಿರೋಧ ಮಾಡುತ್ತಿಲ್ಲ ಎಂದರು. ರಾಜ್ಯ ಸಾರಿಗೆ ಇಲಾಖೆಯಲ್ಲಿ ಪಿಎಫ್ ಹಣ ಪಾವತಿಗೂ ಹಣ ಇಲ್ಲದ ಎಂಬುದು ತಪ್ಪು ಮಾಹಿತಿ. ನಾನು ಕೂಡ ಸಾರಿಗೆ ಸಚಿವನಾಗಿ ಕೆಲಸ ಮಾಡಿದ್ದೇನೆ. ಬಿಜೆಪಿ ಸರಕಾರದಲ್ಲಿ ಆದ ಕೆಲಸಗಳಿಗೆ ಈಗ ನಾವು ಹಣ ಕೊಡುತ್ತಿದ್ದೇವೆ. ನಿಗಮಗಳಿಗೆ ಸರಕಾರದಿಂದ ನೀಡುವ ಹಣ ಕೊಟ್ಟಿದ್ದೇವೆ ಎಂದರು.

ದೇವಸ್ಥಾನ ನಿರ್ಮಾಣಕ್ಕೆ ನೀಲನಕ್ಷೆ ವೀಕ್ಷಣೆ

ಕಾರಟಗಿ: ಪಟ್ಟಣದ 11ನೇ ವಾರ್ಡನ ಕೋಟೆ ಪ್ರದೇಶದ ಪುರಾತನ ಗ್ರಾಮ ದೇವತೆ ಶ್ರೀ ದ್ಯಾವಮ್ಮದೇವಿ ದೇವಸ್ಥಾನದ ನಿರ್ಮಾಣ ಸಂಬಂಧ ತಯಾರಿಸಲಾಗಿರುವ ನೀಲನಕ್ಷೆಯನ್ನು ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಶುಕ್ರವಾರ ಸಂಜೆ ವೀಕ್ಷಿಸಿದರು.

ದೇವಸ್ಥಾನ ಸಮಿತಿ ಪದಾಧಿಕಾರಿಗಳು, ಗಣ್ಯರು ಹಾಗೂ ಪಟ್ಟಣದ ಪ್ರಮುಖರು ದೇವಸ್ಥಾನದ ಸ್ಥಳ ವೀಕ್ಷಣೆಗೆ ಗವಿಶ್ರೀ ಗಳಿಗೆ ಅರಿಕೆ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಶ್ರೀಗಳು ಆಗಮಿಸಿ ನೀಲನಕ್ಷೆ ವೀಕ್ಷಿಸಿದ್ದಾರೆ. ಈಗಾಗಲೇ ಕೆಲ ನೀಲನಕ್ಷೆಗಳನ್ನು ಸಿದ್ದಪಡಿಸಿದ್ದರು. ಸಾಗರ ಹಾಗೂ ಮುರಡೇಶ್ವರದ ಮಂದಿರ ನಿಮರ್ಣ ಶಿಲ್ಪಿಗಳು ಅಂದಾಜು ಪ್ರತಿ ತಯಾರಿಸಿದ್ದಾರೆ.

ಗವಿಶ್ರೀ ಗಳು ಮಂದಿರದ ಸ್ಥಳಕ್ಕೆ ಆಗಮಿಸಿದ ವೇಳೆ ಸಮಿತಿ ಪದಾಧಿಕಾರಿಗಳು ಗವಿಶ್ರೀ ಗಳಿಗೆ ನೀಲನಕ್ಷೆ ಬಗ್ಗೆ ವಿಸ್ತೃತವಾಗಿ ವಿವರಿಸಿ ತಾವು ಯೋಜಿಸಿರುವ ಕಟ್ಟಡದ ವಿನ್ಯಾಸದ ಬಗ್ಗೆ ಚರ್ಚಿಸಿದರು. ಗರ್ಭಗುಡಿ, ಪ್ರಾಂಗಣ, ಧ್ವಜಾ ಸ್ತಂಭ, ರಾಜಗೋಪುರ ನಿರ್ಮಾಣ ಸೇರಿ ಇತರೆ

ಶ್ರೀ ದ್ಯಾವಮ್ಮದೇವಿ ದೇವಸ್ಥಾನದ ನಿರ್ಮಾಣಕ್ಕೆ ನೀಲನಕ್ಷೆಯನ್ನು ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ವೀಕ್ಷಿಸಿದರು.

ವಿಷಯಗಳನ್ನು ಶ್ರೀಗಳ ಗಮನಕ್ಕೆ ತಂದರು. ಇಂತಿಷ್ಟು ಜಾಗವಿದೆ. ಇದರಲ್ಲಿ ಅಚ್ಚುಕಟ್ಟಾದ ದೇವಸ್ಥಾನ ನಿರ್ಮಾಣಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಬಳಿಕ ಶ್ರೀಗಳು ಟ್ರಸ್ಟ್ ನ ಪದಾಧಿಕಾರಿಗಳಿಗೆ ಕೆಲ ಸಲಹೆ ಹಾಗೂ ಸೂಚನೆ ನೀಡಿದರು.

ಪಟ್ಟಣದ ಪ್ರಮುಖರಾದ ಚನ್ನಬಸಪ್ಪ ಸುಂಕದ್, ಶಿವರಡ್ಡಿ ನಾಯಕ, ಕೆ. ಸಿದ್ದನಗೌಡ, ತಾಯಪ್ಪ ಕೋಟ್ಯಾಳ್, ಕೆ. ಯಂಕಾರಡ್ಡೆಪ್ಪ, ಶರಣಪ್ಪ ಪರಕಿ, ಶಶಿಧರಗೌಡ ಪಾಟೀಲ್, ಅಯ್ಯಪ್ಪ ಉಪ್ಪಾರ, ಬಿ. ಶರಣಯ್ಯ ಸ್ವಾಮಿ, ಜಿ. ಯಂಕನಗೌಡ, ಸಣ್ಣ ವಿರೇಶಪ್ಪ ಚಿನಿವಾಲ್, ಅಮರೇಶ್ ಕುಳಗಿ, ಗದ್ದೆಪ್ಪ ನಾಯಕ, ಸಂದೀಪ್ ಗೌಡ, ಯೂಸೂಫ್, ಶೇಷಗಿರಿ ವಕೀಲರು, ಬಸವರಾಜ ಪಗಡದಿನ್ನಿ, ಖಾಜಾ ಹುಸೇನ್ ಮುಲ್ಲಾ, ಹಿರೇಬಸಪ್ಪ ಸಜ್ಜನ್, ಮಹಾಬಳೇಶ ಹುರಕಡ್ಲಿ, ಸೋಮಶೇಖರಪ್ಪ ಗ್ಯಾರೇಜ, ನಾರಾಯಣ ಈಡಿಗೇರ್ ಸೇರಿ ಇತರರಿದ್ದರು.

ಮಂಗನ ದಾಳಿಯಿಂದ ಮಹಿಳೆಯ ಕೈ ಮುರಿತ

ಮಸ್ಕಿ: ತಾಲೂಕಿನ ಅಂಕುಶದೊಡ್ಡಿ ಗ್ರಾಪಂ ವ್ಯಾಪ್ತಿಯ ಬುದ್ದಿನ್ನಿ ಎಸ್ ಗ್ರಾಮದಲ್ಲಿ ಬೀಡು ಬಿಟ್ಟಿರುವ ಕರಿ ಮುಸುಡಿಯ ಮಂಗ ವೊಂದು ಶಾಲಾ ಮಕ್ಕಳು ಹಾಗೂ ಸಾರ್ವಜನಿಕರ ಮೇಲೆ ದಾಳಿ ಮಾಡುತ್ತಾ

ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದೆ. ಶಾಲೆಯ ಮೈದಾನದಲ್ಲಿನ ಗಿಡ ಮರಗಳಿಗೆ ನುಗ್ಗಿ ಶಾಲಾ ಮಕ್ಕಳು ಹಾಲು ಕುಡಿಯುವ ಮತ್ತು ಊಟ ಮಾಡುವ ಸಂದರ್ಭದಲ್ಲಿ ಮಕ್ಕಳ ಮೇಲೆ ದಾಳಿ ಮಾಡಲು ಪ್ರಯತ್ನಿಸುತ್ತಿರುವುದರಿಂದ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು ಮತ್ತು ಮುಖ್ಯಗುರುಗಳು ಗ್ರಾಪಂ ಅಭಿವೃದ್ಧಿ ಅಧಿಕಾರಿಗಳ ಗಮನಕ್ಕೆ ಪೋನ ಮೂಲಕ ಮಾಹಿತಿ ನೀಡಿದರೆ ಅರಣ್ಯಾಧಿಕಾರಿಗಳ ಗಮನಕ್ಕೆ ತರುವಂತೆ ಸೂಚಿಸುತ್ತಾರೆ. ಲಿಂಗಸುಗೂರು ತಾಲೂಕಿನ ಅರಣ್ಯಾಧಿಕಾರಿ ವಿದ್ಯಾ ರವರ ಗಮನಕ್ಕೆ ತಂದರೆ ಪಿಡಿಒ ರವರು ಪತ್ರ ಕೊಟ್ಟರೆ ನಮ್ಮ ಇಲಾಖೆಯಿಂದ ಮಂಗ ಹಿಡಿಯುವ ತಂಡವನ್ನು ನಾವು ಕಳಿಸುತ್ತೇವೆ ಮಂಗ ಹಿಡಿಯುವ ತಂಡಕ್ಕೆ ಗ್ರಾಪಂನವರೆ ಖರ್ಚುಕೊಡಬೇಕೆಂದರು. ಗ್ರಾಮಕ್ಕೆ ರಾಯಚೂರು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಖುದ್ದು ಭೇಟಿ ಮಾಡಿ ಮಂಗವನ್ನು ಸ್ಥಳಾಂತರಿಸಬೇಕು ಗಾಯಗೊಂಡ ಮಹಿಳೆಗೆ ಪರಿಹಾರ ನೀಡಬೇಕೆಂದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ನಾಗರೆಡ್ಡೆಪ್ಪ ದೇವರಮನಿ ಹಾಗೂ ಗ್ರಾಮಸ್ಥರು ಮನವಿ ಮಾಡಿದರು.

ಸಮಾಚಾರ ಸಣ್ಣದಲ್ಲ

ಪಿಂಕ್‌ಬಾಲ್ ಅಭ್ಯಾಸ ಪಂದ್ಯ ಮೊದಲ ದಿನದಾಟ ರದ್ದು

ಕ್ಯಾನ್ಬೆರಾ: ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಬಾರ್ಡರ್-ಗವಾಸ್ಕರ್ ಟ್ರೋಫಿಯ ಎರಡನೇ ಪಂದ್ಯಕ್ಕೂ ಮುನ್ನ ಭಾರತ ತಂಡ ಕ್ಯಾನ್ಬೆರಾದಲ್ಲಿ ಅಭ್ಯಾಸ ಪಂದ್ಯವನ್ನು ಆಡುತ್ತಿದೆ. ಆದರೆ ಮಳೆಯಿಂದಾಗಿ ಮೊದಲ ದಿನದಾಟದ ಪಂದ್ಯ ಶನಿವಾರ ರದ್ದಾಗಿದೆ. ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ಐದು ಟೆಸ್ಟ್ ಪಂದ್ಯಗಳ ಬಾರ್ಡರ್-ಗವಾಸ್ಕರ್ ಟ್ರೋಫಿ ಸರಣಿಯ ಮೊದಲ ಪಂದ್ಯದಲ್ಲಿ ಟೀಂ ಇಂಡಿಯಾ ಭರ್ಜರಿ ಜಯ ಸಾಧಿಸಿತ್ತು. ಸರಣಿಯ ಎರಡನೇ ಪಂದ್ಯ ಡಿಸೆಂಬರ್ 6ರಿಂದ ಅಡಿಲೇಡ್‌ನಲ್ಲಿ ಆರಂಭವಾಗಲಿದೆ. ಅದು ಹಗಲು-ರಾತ್ರಿ ಪಂದ್ಯವಾಗಿದ್ದು, ಗುಲಾಬಿ ಬಣ್ಣದ ಚೆಂಡಿನೊಂದಿಗೆ ಆಡಲಾಗುತ್ತದೆ. ಕಳೆದ ಬಾರಿ ನಡೆದಿದ್ದ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಟೀಂ ಇಂಡಿಯಾ 36 ರನ್‌ಗಳಿಗೆ ಆಲೌಟ್ ಆಗಿತ್ತು. ಹೀಗಾಗಿ ತಂಡವು ಈ ಬಾರಿ ಪಿಂಕ್ ಬಾಲ್ ಟೆಸ್ಟ್‌ಗಾಗಿ ಭರ್ಜರಿ ತಯಾರಿ ನಡೆಸುತ್ತಿದ್ದು, ಈ ಟೆಸ್ಟ್‌ಗೂ ಮುನ್ನ ಅಭ್ಯಾಸ ಪಂದ್ಯವನ್ನು ಆಡಲು ನಿರ್ಧರಿಸಿತ್ತು. ಆದರೆ ಈ ಅಭ್ಯಾಸ ಪಂದ್ಯಕ್ಕೆ ಮೊದಲ ದಿನ ವರುಣನ ಅವಕೃಪೆ ಎದುರಾಗಿದ್ದರೂ, ಎರಡನೇ ದಿನದಾಟ ರವಿವಾರ ನಡೆಯಬಹುದೆಂದು ನಿರೀಕ್ಷಿಸಲಾಗಿದ್ದು ಇತ್ತಂಡಗಳೂ ಐವತ್ತು ಓವರ್‌ನ ಅಭ್ಯಾಸ ಪಂದ್ಯ ಆಡುವ ಸಾಧ್ಯತೆ ಇದೆ.

ಅನ್ವಯ್ ದ್ರಾವಿಡ್ ಉಪನಾಯಕ

ಬೆಂಗಳೂರು: ಭಾರತ ಕ್ರಿಕೆಟ್‌ಗ ತಂಡದ ಮಾಜಿ ನಾಯಕ ಹಾಗೂ ಕೋಚ್ ರಾಹುಲ್ ದ್ರಾವಿಡ್

ಅವರ ಕಿರಿಯ ಮಗ ಅನ್ವಯ್ ದ್ರಾವಿಡ್ 16 ವಯೋಮಿತಿಯ ವಿಜಯ್ ಮರ್ಚೆಂಟ್ ಟ್ರೋಫಿಗೆ ಕರ್ನಾಟಕ ತಂಡ ಉಪನಾಯಕನಾಗಿ ಆಯ್ಕೆಯಾಗಿದ್ದು, ಧ್ರುವ ಕೃಷ್ಣನ್ ನಾಯಕನಾಗಿದ್ದಾರೆ. ವಿಜಯ್ ಮರ್ಚೆಂಟ್ ಟ್ರೋಫಿ ಪಂದ್ಯಾವಳಿಯು ಡಿಸೆಂಬರ್ 6ರಿಂದ 28ರ ವರೆಗೆ ವಿಜಯವಾಡದಲ್ಲಿ ನಡೆಯಲಿದೆ. ಅನ್ವಯ್ ದ್ರಾವಿಡ್ ವಿಕೆಟ್ ಕೀಪರ್-ಬ್ಯಾಟರ್ ಆಗಿ ತಂಡದಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ವಿದರ್ಭ ಎದುರು ಕಣಕ್ಕಿಳಿಯುವ ಮೂಲಕ ಕರ್ನಾಟಕ ತಂಡ ತನ್ನ ಅಭಿಯಾನ ಆರಂಭಿಸಲಿದೆ.

ಆಟದ ಲಯವನ್ನು ಮತ್ತೆ ಕಂಡುಕೊಂಡ ಸಿಂಧು
ಮಿಶ್ರ ಡಬಲ್ಸ್‌ನಲ್ಲೂ ಭಾರತಕ್ಕೆ ಪ್ರಶಸ್ತಿ ಅವಕಾಶ

ಸೈಯದ್ ಮೋದಿ ಬ್ಯಾಡ್ಮಿಂಟನ್ ಟೂರ್ನಿ: ಫೈನಲ್ ತಲುಪಿದ ಪಿ.ವಿ ಸಿಂಧು

ಲಕ್ನೋ: ಭಾರತದ ಸ್ಟಾರ್ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ ಸಿಂಧು ಅವರು ಸೈಯದ್ ಮೋದಿ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್‌ನಲ್ಲಿ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ್ದಾರೆ. ಮಿಶ್ರ ಡಬಲ್ಸ್‌ನಲ್ಲೂ ಭಾರತದ ಜೋಡಿ ಧ್ರುವ ಕಪಿಲ-ತನಿಶಾ ಕ್ಯಾಸ್ಟ್ರೋ ಅಮೋಘ ಆಟವನ್ನು ಶನಿವಾರ ಪ್ರದರ್ಶಿಸಿದ್ದು, ಪ್ರಶಸ್ತಿ ಸುತ್ತಿಗೆ ಅರ್ಹತೆ ಪಡೆದಿದೆ.

ಮಹಿಳೆಯರ ಸಿಂಗಲ್ಸ್ ಸೆಮಿಫೈನಲ್ ಪಂದ್ಯದಲ್ಲಿ ಸಿಂಧು ತಮ್ಮ ಅನುಭವದ ಸಂಪೂರ್ಣ ಲಾಭ ಪಡೆದು ಆಡಿ, ಅರ್ಹ ಜಯ ದಾಖಲಿಸಿದರು. ಉಪಾಂತ್ಯ ಪಂದ್ಯದಲ್ಲಿ ಸಿಂಧು 21-12, 21-09ರಿಂದ ಭಾರತದವರೇ ಆದ ಉನ್ನತಿ ಹೂಡಾರನ್ನು ಎರಡು ನೇರ ಸೆಟ್‌ಗಳಲ್ಲಿ ಮಣಿಸಿದರು. ಕೇವಲ 36 ನಿಮಿಷದ ಆಟದಲ್ಲಿ ಅವರು ತನ್ನ ಫೈನಲ್ ಸ್ಥಾನವನ್ನು ಖಚಿತಪಡಿಸಿದರು, ಈ ಮೂಲಕ ಸಿಂಧು ಪ್ರಸಕ್ತ ವರ್ಷದ

ಕೊನೆಯಲ್ಲಿ ಲಯಕ್ಕೆ ಮರಳುವ ಸೂಚನೆ ನೀಡಿದ್ದಾರೆ.

ರಿಯೋ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ, ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಕಂಚಿನ ಸಾಧನೆ ಮಾಡಿರುವ ಸಿಂಧು, ಭಾರತದ ಯುವ ಶಟ್ಲರ್ ಸವಾಲನ್ನು ಮೆಟ್ಟಿನಿಂತರು. ಇವರಿಗೆ ಮೊದಲ ಗೇಮ್‌ನ, ಫಸ್ಟ್ ಹಾಫ್‌ನಲ್ಲಿ ಉನ್ನತಿ ಹೂಡ ಕೊಂಚ ಪ್ರತಿರೋಧವನ್ನು ಒಡ್ಡಿದರು. ಆ ಅವಧಿಯಲ್ಲಿ ಸ್ಕೋರ್ 9-8ರಿಂದ ಕೂಡಿತ್ತು. ಆಗ ಸಿಂಧು ಮನಮೋಹಕ ಆಟವನ್ನು ಪ್ರದರ್ಶಿಸಿ ಗೆಲುವು ದಾಖಲಿಸಿದರು. ಎರಡನೇ ಗೇಮ್‌ನಲ್ಲೂ ಸಿಂಧು ಅಮೋಘ ಆಟದ ಪ್ರದರ್ಶನ ನೀಡಿ ಸತತ ಅಂಕಗಳನ್ನು ಕಲೆ ಹಾಕಿ ಮಿಂಚಿದರು. ಅದರ ಪರಿಣಾಮವಾಗಿ ಉನ್ನತಿ ಹೂಡಾ ಪುಟಿದೇಳುವ ಆಸೆ ಮಣ್ಣು ಪಾಲಾಯಿತು. ಸಿಂಧು ಫೈನಲ್ ಪಂದ್ಯದಲ್ಲಿ ಚೀನಾ ಆಟಗಾರ್ತಿಯ ಸವಾಲು ಎದುರಿಸಲಿದ್ದಾರೆ. ಚೀನಾ ಆಟಗಾರ್ತಿ ವು ಲು ಯು 21-19, 21-12 ರಿಂದ ಥೈವಾನ್ ಆಟಗಾರ್ತಿ ವಿರುದ್ಧ 41 ನಿಮಿಷಗಳ ಕಾಲ ನಡೆದ ಹೋರಾಟದಲ್ಲಿ ಜಯ ಸಾಧಿಸಿದರು.

ಫೈನಲ್ ತಲುಪಿದ ಭಾರತದ ಮಿಶ್ರ ಜೋಡಿ: ಮಿಶ್ರ ಡಬಲ್ಸ್‌ನಲ್ಲಿ ಭಾರತದ ಜೋಡಿಯಾದ ಧ್ರುವ ಕಪಿಲ-ತನಿಶಾ ಕ್ರಾಸ್ಟೊ 21-16, 21-15ರಿಂದ ಚೀನಾ ಆಟಗಾರ್ತಿಯ ವಿರುದ್ಧ 42 ನಿಮಿಷಗಳ ಹೋರಾಟದಲ್ಲಿ ಜಯ ಸಾಧಿಸಿ, ಪ್ರಶಸ್ತಿ ಸುತ್ತಿನ ಕಾದಾಟಕ್ಕೆ ಅರ್ಹತೆ ಪಡೆದಿದೆ.

100 ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದ ಕ್ರಿಕೆಟರ್ ಬಗ್ಗೆ ಆರೋಪ | ಅಪರಾಧ ತನಿಖಾ ವಿಭಾಗದಿಂದ ತನಿಖೆ

ದ.ಆಫ್ರಿಕಾ: ಮ್ಯಾಚ್ ಫಿಕ್ಸಿಂಗ್ ಆರೋಪ ಮೂವರು ಮಾಜಿ ಕ್ರಿಕೆಟಿಗರ ಬಂಧನ

ಡರ್ಬನ್: ಸದ್ಯ ದಕ್ಷಿಣ ಆಫ್ರಿಕಾ ಮತ್ತು ಶ್ರೀಲಂಕಾ ನಡುವಿನ ಟೆಸ್ಟ್ ಸರಣಿಯ ಮೊದಲ ಪಂದ್ಯ ಡರ್ಬನ್‌ನಲ್ಲಿ ಈಗ ನಡೆಯುತ್ತಿದೆ. ಈ ಪಂದ್ಯದಲ್ಲಿ ಆತಿಥೇಯ ದಕ್ಷಿಣ ಆಫ್ರಿಕಾ ಮೇಲುಗೈ ಸಾಧಿಸಿದ್ದು, ಗೆಲುವಿನ ಸನಿಹದಲ್ಲಿದೆ. ಈ ನಡುವೆ ದಕ್ಷಿಣ ಆಫ್ರಿಕಾ ಕ್ರಿಕೆಟ್‌ಗೆ ಆಘಾತ ಎದುರಾಗಿದ್ದು, ತಂಡದ ಪರ ಸುಮಾರು 100 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದ ಮಾಜಿ ಅನುಭವಿ ಆಟಗಾರ, ವೇಗದ ಬೌಲರ್ ಲೊನ್ವಾಬೊ ತ್ಸೊಟ್ಸೊಬೆ ಸೇರಿದಂತೆ ಮೂವರನ್ನು ದಕ್ಷಿಣ ಆಫ್ರಿಕಾದ ಅಪರಾಧ ತನಿಖಾ ವಿಭಾಗವು ಮ್ಯಾಚ್ ಫಿಕ್ಸಿಂಗ್ ಆರೋಪದಡಿ ಬಂಧಿಸಿದೆ.

ವರದಿಗಳ ಪ್ರಕಾರ, ಒಂಬತ್ತು ವರ್ಷಗಳ ಹಿಂದಿನ ಮ್ಯಾಚ್ ಫಿಕ್ಸಿಂಗ್ ಪ್ರಕರಣದಲ್ಲಿ ಈ ಮೂವರು ಮಾಜಿ ಕ್ರಿಕೆಟಿಗರನ್ನು ಬಂಧಿಸಿದ್ದು, ಸೋತ್ಸೋಬೆ ಹೊರತಾಗಿ, ಬಂಧಿತ ಆಟಗಾರರಲ್ಲಿ ತಮ್ಸಂಕಾ ಸೊಲೆಕಿಲೆ ಮತ್ತು ಮಭಾಲಟಿ ಕೂಡ ಸೇರಿದ್ದಾರೆ. ಈ ಪೈಕಿ ಸೊಲೆಕಿಲ್ ದಕ್ಷಿಣ ಆಫ್ರಿಕಾ ಪರ 3 ಟೆಸ್ಟ್ ಪಂದ್ಯಗಳನ್ನು ಆಡಿದ್ದು, 160 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ. ಮಭಾಲಟಿ ದಕ್ಷಿಣ ಆಫ್ರಿಕಾ ಪರ ಒಂದೇ ಒಂದು ಪಂದ್ಯವನ್ನಾಡದಿದ್ದರೂ, ದೇಶೀಯ ಕ್ರಿಕೆಟ್‌ನಲ್ಲಿ 129 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ.

ಈ ಮೂವರ ಬಂಧನವು ಕ್ರಿಕೆಟ್ ದಕ್ಷಿಣ ಆಫ್ರಿಕಾದ ಹಳೆಯ ಟಿ20 ಟೂರ್ನಮೆಂಟ್ ರಾಮ್‌ಸ್ಲಾಮ್‌ನಲ್ಲಿ ನಡೆದ ಮ್ಯಾಚ್‌ನಲ್ಲಿ ಫಿಕ್ಸಿಂಗ್‌ಗೆ ಸಂಬಂಧಿಸಿದ್ದಾಗಿದೆ. ಈ ಮೂವರೂ ಪಂದ್ಯಾವಳಿಯಲ್ಲಿ ಫಿಕ್ಸಿಂಗ್

ಮಾಡಿಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಆ ನಂತರ ಕ್ರಿಕೆಟ್ ದಕ್ಷಿಣ ಆಫ್ರಿಕಾ ಈ ಮೂವರು ಆಟಗಾರರನ್ನು ಅಮಾನತುಗೊಳಿಸಿತು. ವರದಿಗಳ ಪ್ರಕಾರ, ಮಭಾಲಟಿ ಅವರನ್ನು ನವೆಂಬರ್ 18ರಂದು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ವಿಚಾರಣೆಯನ್ನು 20 ಫೆಬ್ರವರಿ 2025ಕ್ಕೆ ಮುಂದೂಡಲಾಗಿದೆ. ಉಳಿದಂತೆ ನವೆಂಬರ್ 28ರಂದು ಸೋಲೆಕಿಲ್ ಮತ್ತು ನವೆಂಬರ್ 29ರಂದು ಸೋತ್ಸೋಬೆಯನ್ನು ಬಂಧಿಸಲಾಗಿದ್ದು, ಇವರೆಲ್ಲರ ವಿರುದ್ಧ ಬಹಳ ದಿನಗಳಿಂದ ತನಿಖೆ ನಡೆಯುತ್ತಿತ್ತು.

ಅಂಡರ್-19 ಏಷ್ಯಾ ಕಪ್ ಪಂದ್ಯಾವಳಿ | ಪಾಕಿಸ್ತಾನ ತಂಡದ ಮೊತ್ತವನ್ನು ಬೆನ್ನಟ್ಟಲು ವಿಫಲವಾದ ಭಾರತದ ಯುವಪಡೆ

ಪಾಕಿಸ್ತಾನದ ವಿರುದ್ಧ ಮುಗ್ಗರಿಸಿದ ಭಾರತ

ದುಬೈ: ನಿನ್ನೆಯಿಂದ ಆರಂಭವಾಗಿರುವ ಪುರುಷರ ಅಂಡರ್-19 ಏಷ್ಯಾಕಪ್ ಪಂದ್ಯಾವಳಿಯಲ್ಲಿ ಟೀಂ ಇಂಡಿಯಾ ಯುವಪಡೆಯು ಇಂದು ತನ್ನ ಮೊದಲ ಪಂದ್ಯದಲ್ಲಿ ಸಾಂಪ್ರಾದಾಯಿಕ ಎದುರಾಳಿ ಪಾಕಿಸ್ತಾನವನ್ನು ಎದುರಿಸಿತ್ತು. ಆದರೆ ಉಭಯ ತಂಡಗಳ ನಡುವೆ ಹೈವೋಲ್ಟೇಜ್ ಕದನವನ್ನು ಪ್ರೇಕ್ಷಕರು ನಿರೀಕ್ಷಿಸಿದ್ದರೂ, ಏಕಪಕ್ಷೀಯವಾಗಿ ಪಂದ್ಯ ಗೆದ್ದುಕೊಳ್ಳುವಲ್ಲಿ ಪಾಕಿಸ್ತಾನ ಯುವ ಪಡೆ ಯಶಸ್ವಿಯಾಗಿದೆ.

ದುಬೈ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಟೀಂ ಇಂಡಿಯಾ, ಪಾಕಿಸ್ತಾನದ ವಿರುದ್ಧ 43 ರನ್‌ಗಳ ಸೋಲನುಭವಿಸಿದೆ. ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡೂ ವಿಭಾಗದ ವೈಫಲ್ಯವೇ ಈ ಪಂದ್ಯದ ಸೋಲಿಗೆ ಪ್ರಮುಖ ಕಾರಣವಾಗಿದೆ. ಬೃಹತ್ ಮೊತ್ತ ಕಲೆಹಾಕಿದ ಪಾಕ್: ಪಂದ್ಯದಲ್ಲಿ ಪಾಕಿಸ್ತಾನ ತಂಡ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಲು ನಿರ್ಧರಿಸಿತು. ಅದರಂತೆ ನಿಗಧಿತ 50 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 281 ರನ್ ಗಳಿಸಿತು. ಪಾಕ್ ಪರ ಇನ್ನಿಂಗ್ಸ್ ಆರಂಭಿಸಿದ್ದ ಉಸ್ಮಾನ್ ಖಾನ್ ಮತ್ತು ಶಹಜೇಬ್ ಖಾನ್ ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದರು. ಇಬ್ಬರೂ ಆಟಗಾರರು ಮೊದಲ ವಿಕೆಟ್‌ಗೆ 160 ರನ್‌ಗಳ ಜೊತೆಯಾಟ ನೀಡಿದರು. ಈ ವೇಳೆ ಉಸ್ಮಾನ್ ಖಾನ್ 94 ಎಸೆತಗಳಲ್ಲಿ 60 ರನ್ ಗಳಿಸಿದರೆ, ಶಹಜೇಬ್ ಖಾನ್ 147 ಎಸೆತಗಳಲ್ಲಿ 10 ಸಿಕ್ಸರ್ ಮತ್ತು 5 ಬೌಂಡರಿ ಸಹಿತ 159 ರನ್ ಕಲೆಹಾಕಿದರು. ಭಾರತದ ಪರ ಸಮರ್ಥ್ ನಾಗರಾಜ್

ಗರಿಷ್ಠ 3 ವಿಕೆಟ್ ಪಡೆದರೆ, ಆಯುಷ್ ಮ್ಹಾತ್ರೆ 2 ವಿಕೆಟ್ ಮತ್ತು ಯುಧಾಜಿತ್ ಗುಹಾ-ಕಿರಣ್ ಚೋರ್ಮಲೆ ತಲಾ ಒಂದು ವಿಕೆಟ್ ಪಡೆದರು.

ಭಾರತದ ಬ್ಯಾಟಿಂಗ್ ವಿಫಲ: 282 ರನ್‌ಗಳ ಗುರಿ ಬೆನ್ನಟ್ಟ ತೊಡಗಿದ ಭಾರತ ತಂಡವು 28 ರನ್ ಗಳಿಸುವಷ್ಟರಲ್ಲಿ ಆಯುಷ್ ಮ್ಹಾತ್ರೆ ರೂಪದಲ್ಲಿ ಮೊದಲ ವಿಕೆಟ್ ಕಳೆದುಕೊಂಡಿತು. ಆ ಬಳಿಕ ಭಾರತದ ಪೆವಿಲಿಯನ್ ಪರೇಡ್ ಆರಂಭವಾಯಿತು. ತಂಡದ ಅರ್ಧದಷ್ಟು ಮಂದಿ ಕೇವಲ 134 ರನ್‌ಗಳಿಗೆ ಪೆವಿಲಿಯನ್ ಸೇರಿಕೊಂಡರು. ಏಕಾಂಗಿ ಹೋರಾಟ ನೀಡಿದ ನಿಖಿಲ್ ಕುಮಾರ್ 77 ಎಸೆತಗಳಲ್ಲಿ 67 ರನ್ ಬಾರಿಸಿದರಾದರೂ ತಂಡವನ್ನು ಗೆಲುವಿನ ದಡ ಮುಟ್ಟಿಸಲು ಅವರಿಗೆ ಸಾಧ್ಯವಾಗಲಿಲ್ಲ. ಭಾರತ ತಂಡವು ಕೇವಲ 47.1 ಓವರುಗಳಲ್ಲಿ ಆಲೌಟ್ ಆಗುವ ಮೂಲಕ 237 ರನ್‌ಗಳಿಸಲಷ್ಟೇ ಶಕ್ತವಾಯಿತು.

ನ್ಯೂಜಿಲೆಂಡ್ ಕ್ರಿಕೆಟರ್: ವಿಲಿಯಮ್ಸನ್ ಸಾಧನೆ

ಕ್ರೈಸ್ಟ್‌ಚರ್ಚ್: ಇಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯದಲ್ಲಿ ಶನಿವಾರ ಇಂಗ್ಲೆಂಡ್ ವಿರುದ್ಧ ಎರಡನೇ ಇನಿಂಗ್ಸ್‌ನಲ್ಲಿ ಕಿವೀಸ್ ಪರ ಕೇನ್ ವಿಲಿಯಮ್ಸ್ ಅಮೋಘ ದಾಖಲೆ ನಿರ್ಮಿಸಿದ್ದಾರೆ. ಎರಡನೇ ಇನಿಂಗ್ಸ್‌ನಲ್ಲಿ 26 ರನ್ ಗಳಿಸುತ್ತಿದ್ದಂತೆ ವಿಲಿಯಮ್ಸ್‌ನ್ 9000 ರನ್ ಪೂರೈಸಿದ ಸ್ಮರಣೀಯ ದಾಖಲೆಯನ್ನು ಬರೆದರು.

ಇದರೊಂದಿಗೆ 9000 ಟೆಸ್ಟ್ ರನ್ ಗಳಿಸಿದ ನ್ಯೂಜಿಲೆಂಡ್‌ನ ಮೊದಲ ಬ್ಯಾಟರ್ ಎನಿಸಿಕೊಂಡರು. ಇದಕ್ಕೂ ಮೊದಲು, ಕಿವೀಸ್ ಪರ ಯಾವೊಬ್ಬ ಬ್ಯಾಟರ್ ಈ ಸಾಧನೆ ಮಾಡಿರಲಿಲ್ಲ. ಟೆಸ್ಟ್ ಕ್ರಿಕೆಟ್‌ನಲ್ಲಿ 9 ಸಾವಿರ ರನ್ ಪೂರೈಸಿದ ವಿಶ್ವದ 19ನೇ ಬ್ಯಾಟರ್ ಎಂಬ ಹೆಗ್ಗಳಿಕೆಯನ್ನು ತಮ್ಮದಾಗಿಸಿ ಕೊಂಡರು. ಕೇನ್ ವಿಲಿಯಮ್ಸನ್ ತಮ್ಮ ವೃತ್ತಿ ಜೀವನದ 103ನೇ ಟೆಸ್ಟ್ ಪಂದ್ಯದ 182ನೇ ಇನಿಂಗ್ಸ್‌ನಲ್ಲಿ ಈ ಮೈಲುಗಲ್ಲು ತಲುಪಿದರು. ಈ ಪಟ್ಟಿಯಲ್ಲಿ ಸ್ಟೀವನ್ ಸ್ಮಿತ್ ಮೊದಲನೇ ಸ್ಥಾನದಲ್ಲಿದ್ದಾರೆ. ಎರಡನೇ ಸ್ಥಾನದಲ್ಲಿ ವಿಂಡೀಸ್ ತಂಡದ ಬ್ರಿಯಾನ್ ಲಾರಾ ಇದ್ದು, ನಂತರದ ಸ್ಥಾನದಲ್ಲಿ ಕುಮಾರ್ ಸಂಗಕ್ಕಾರ ಮತ್ತು ಯೂನಿಸ್ ಖಾನ್ ಇದ್ದಾರೆ.

ಶ್ರೀಲಂಕಾ-ದ.ಆಫ್ರಿಕಾ ಮೊದಲ ಟೆಸ್ಟ್: ದ. ಆಫ್ರಿಕಾಕ್ಕೆ 233 ರನ್‌ಗಳ ಜಯ

ಡರ್ಬನ್: ಶ್ರೀಲಂಕಾ ಮತ್ತು ದ.ಆಫ್ರಿಕಾ ಮಧ್ಯೆ ಶನಿವಾರ ಮುಗಿದ ಪ್ರಥಮ ಟೆಸ್ಟ್ ಪಂದ್ಯದಲ್ಲಿ ದ.ಆಫ್ರಿಕಾ ತಂಡವು 233 ರನ್‌ಗಳಿಂದ ಜಯಗಳಿಸಿದೆ. ಆ ಮೂಲಕ ಎರಡು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ 1-0 ಅಂತರ ದಿಂದ ದ. ಆಫ್ರಿಕಾ ಮುನ್ನಡೆಯನ್ನು ಸಾಧಿಸಿದೆ.

ಮೊದಲ ಇನ್ನಿಂಗ್ಸ್‌ನಲ್ಲಿ ದ. ಆಫ್ರಿಕಾ ತಂಡವು ಟೆಂಬ ಬಹುಮಾ (70) ಮತ್ತು ಕೇಶವ್ ಮಹಾರಾಜ್‌ರ (24) ಬ್ಯಾಟಿಂಗ್ ನೆರವಿನಿಂದ 191 ರನ್‌ಗಳನ್ನು ಗಳಿಸಿ ಆಲೌಟ್ ಆಗಿತ್ತು. ಆದರೆ ಶ್ರೀಲಂಕಾ ತಂಡವು ದ. ಆಫ್ರಿಕಾದ ಮಾರ್ಕೊ ಜಾನ್ಸನ್‌ರ (13 ರನ್‌ಗೆ 7 ವಿಕೆಟ್) ಮಾರಕ ದಾಳಿಯ ಎದುರು ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ಬರೀ 42 ರನ್‌ಗಳನ್ನು ಗಳಿಸಿ, ಸರ್ವಪತನವನ್ನು ಕಂಡಿತ್ತು.

ಆ ಬಳಿಕ ದ್ವಿತೀಯ ಇನ್ನಿಂಗ್ಸ್‌ನಲ್ಲಿ ದ.ಆಫ್ರಿಕಾ ತಂಡವು ಟ್ರಿಟನ್ ಸ್ಟಬ್ಸ್ (122) ಹಾಗೂ ಟೆಂಬಾ ಬಹುಮಾರ (113) ಅತ್ಯಾಕರ್ಷಕ ಬ್ಯಾಟಿಂಗ್ ನೆರವಿನಿಂದ 5 ವಿಕೆಟ್‌ಗೆ 366 ರನ್ ಗಳಿಸಿದಾಗ ತನ್ನ ಇನ್ನಿಂಗ್ಸ್ ಅನ್ನು ಡಿಕ್ಲೇರ್ ಮಾಡಿಕೊಂಡಿತ್ತು. ಶ್ರೀಲಂಕಾ ಪರ ವಿಶ್ವ ಫೆರ್ನಾಂಡೊ ಹಾಗೂ ಪ್ರಬತ್ ಜಯಸೂರ್ಯ ತಲಾ ಎರಡು ವಿಕೆಟ್ ಪಡೆದಿದ್ದರು.

516 ರನ್‌ಗಳ ಜಯದ ಗುರಿಯನ್ನು ಬೆನ್ನಟ್ಟಿದ ಲಂಕಾ ತಂಡವನ್ನು ದ. ಆಫ್ರಿಕಾ ತಂಡವು 282 ರನ್‌ಗಳಿಗೆ ಆಲೌಟ್ ಮಾಡುವ ಮೂಲಕ ನಾಲ್ಕನೇ ದಿನವಾದ ಶನಿವಾರ 233 ರನ್‌ಗಳ ಜಯವನ್ನು ದಾಖಲಿಸಿತು. ಶ್ರೀಲಂಕಾ ಪರವಾಗಿ ದಿನೇಶ್ ಚಂಡಿಮಲ್ (83) ಹಾಗೂ ಧನಂಜಯ ಡಿಸಿಲ್ವರವರು ದ. ಆಫ್ರಿಕಾ ಬೌಲರ್‌ಗಳ ಎದುರು ಸ್ವಲ್ಪ ಮಟ್ಟಿಗಿನ ಪ್ರತಿರೋಧವನ್ನು ತೋರಿದರು. ದ. ಆಫ್ರಿಕಾ ಪರವಾಗಿ ಎರಡನೇ ಇನ್ನಿಂಗ್ಸ್‌ನಲ್ಲಿ ಮಾರ್ಕೊ ಜಾನ್ಸನ್ (73 ರನ್‌ಗೆ 4 ವಿಕೆಟ್) ಹಾಗೂ ರಬಾಡ (65 ರನ್‌ಗೆ 2 ವಿಕೆಟ್) ಉತ್ತಮ ಬೌಲಿಂಗ್ ನಡೆಸುವ ಮೂಲಕ ದ. ಆಫ್ರಿಕಾ ತಂಡದ ಗೆಲುವಿಗೆ ಕಾರಣರಾದರು.

ಶ್ರೀಲಂಕಾ ಮತ್ತು ದ. ಆಫ್ರಿಕಾ ನಡುವಿನ ಎರಡನೇ ಟೆಸ್ಟ್ ಡಿಸೆಂಬರ್ 5ರಿಂದ 9ರ ತನಕ ನಡೆಯಲಿದೆ.

ಮನಗೆದ್ದ ಸಂಗಮೇಶ್ವರ ಗಾನ

ಸಮರ್ಥ ಸದ್ಗುರು ಶ್ರೀಸಂಗಮೇಶ್ವರ ಮಹಾರಾಜರು ಚಿತ್ರದ ಲಿರಿಕಲ್ ವಿಡಿಯೋ ಹಾಡು ಬಿಡಿಗಡೆಯಾಗಿದೆ. ಈ ಹಿಂದೆ ಇಂಚಗೇರಿ ಮಠದ ಸದ್ಗುರು

ರೇವಣಸಿದ್ದೇಶ್ವರ ಮಹಾರಾಜರು ಪೋಸ್ಟರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು.

ಸದ್ಗುರು ಸಂಗಮೇಶ್ವರ ಮಹಾರಾಜರ 93ನೇ ಪುಣ್ಯಸ್ಮರಣೆಯಂದು ಹಾಡು ಬಿಡುಗಡೆಯಾಗಿದೆ. ವಿಜಯಪುರ ಜಿಲ್ಲೆಯ ಶ್ರೀಕ್ಷೇತ್ರ ಇಂಚಗೇರಿ ಮಠದ ಶ್ರೀ ಸದ್ಗುರು ರೇವಣಸಿದ್ದೇಶ್ವರ ಮಹಾರಾಜರು ಲಿರಿಕಲ್ ವಿಡಿಯೋ ವೀಕ್ಷಿಸಿ, ಪೋಸ್ಟರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಕೋರಿದ್ದಾರೆ.

ಚುಟು ಚುಟು ಹಾಡಿನ ಮೂಲಕ ಗಮನ ಸೆಳೆದ, ತಮ್ಮ ಅದ್ಭುತ ಗಾಯನದಿಂದ ಜನಪ್ರಿಯರಾಗಿರುವ ಗಾಯಕ ರವೀಂದ್ರ ಸೊರಗಾವಿ ಅವರು ಇಂಚಗೇರಿ ಆಧ್ಯಾತ್ಮಿಕ ಸಂಪ್ರದಾಯ ಗುರುಲಿಂಗ ಜಂಗಮ ಮಹಾರಾಜ ಭಕ್ತಿ ಪ್ರಧಾನ ಹಾಡಿಗೆ ಸದ್ಗುರು ರೇವಣಸಿದ್ದೇಶ್ವರ ಮಹಾರಾಜರು ಪ್ರಶಂಸಿಸಿದರು.

ಗಿರಿಮಲ್ಲೇಶ್ವರ ಕಂಬೈನ್ಸ್ ಬ್ಯಾನರ್‌ನಲ್ಲಿ ಮಾಧವಾನಂದ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದು, ಸಮರ್ಥ ಸದ್ಗುರು ಶ್ರೀ ಸಂಗಮೇಶ್ವರ ಮಹಾರಾಜರು ಚಿತ್ರದ ಹಾಡುಗಳು ಅದ್ಭುತವಾಗಿ ಮೂಡಿಬಂದಿವೆ. ಚಿತ್ರತಂಡದ ಸದಸ್ಯರು ಧರ್ಮಸ್ಥಳಕ್ಕೆ ಭೇಟಿ ನೀಡಿ ಶ್ರೀಮಂಜನಾಥಸ್ವಾಮಿ ದರ್ಶನ ಪಡೆದುಕೊಂಡು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಚಿತ್ರ ಯಶಸ್ವಿಯಾಗಲೆಂದು ಹಾರೈಸಿ ಆಶೀರ್ವದಿಸಿದ್ದರು.

ಹೊಸ ಪ್ರತಿಭೆ ರವಿ ನಾರಾಯಣ್ ಶ್ರೀಸಂಗಮೇಶ್ವರರ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಬಡವರ ಮಕ್ಕಳಿಗೆ ಡಾಲಿ ಸಾಥ್

ಬಡವರ ಮಕ್ಕಳು ಬೆಳಿಬೇಕು ಕಣ್ರಯ್ಯ ಇದು ನಟ ಡಾಲಿ ಧನಂಜಯ ಅವರು ಹೇಳಿದ ಮಾತು. ಆ ಮಾತೇ ಚಲನಚಿತ್ರದ ಶೀರ್ಷಿಕೆಯಾಗಿದ್ದು, ತೆರೆಗೆ ಬರಲು ಸಿದ್ಧವಾಗಿದೆ. . ಸದ್ಯ ಬಡವರ ಮಕ್ಕಳು ಬೆಳಿಬೇಕು ಕಣ್ರಯ್ಯ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ನಟ ಡಾಲಿ ಧನಂಜಯ ಬಿಡುಗಡೆ ಮಾಡಿ ಶುಭಕೋರಿದರು. ಮಂಜು ಕವಿ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಶ್ರೀರಾಮ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ಸಿ.ಎಸ್ ವೆಂಕಟೇಶ್ ಚಿತ್ರ ನಿರ್ಮಾಣ ಮಾಡಿದ್ದಾರೆ. ಸುಚೇಂದ್ರ ಪ್ರಸಾದ್ ಹಾಗೂ ಸಂಗೀತಾ ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದು, ಮಕ್ಕಳ ಪಾತ್ರದಲ್ಲಿ ರಾಜವರ್ಧನ್, ಲಾವಣ್ಯಾ ವೈಭವಿ ನಟಿಸಿದ್ದಾರೆ. ಚಂದ್ರಪ್ರಭ, ವಿನೋದ್ ಗೊಬ್ರಗಾಲ, ಮುಖೇಶ್, ಶಿವರೆಡ್ಡಿ, ಮೂಗು ಸುರೇಶ್, ಜಗದೀಶ್ ಕೊಪ್ಪ, ಟೆನ್ನಿಸ್ ಕೃಷ್ಣ, ರೇಖಾ ದಾಸ್, ಸಿಲ್ಲಿ ಲಲ್ಲಿ ಶ್ರೀನಿವಾಸ್ ಗೌಡ್ರು, ಚಿದಾನಂದ, ವಿನೋದ್, ತಾರಾ, ಚೈತ್ರ ಕೊಟ್ಟೂರು, ಪವಿತ್ರ, ಧನುಷ್, ಯಶೋದಮ್ಮ,

ನಾಗರಾಜ್, ಸುರೇಶ್ ಉದ್ದೂರು ಮುಂತಾದವರು ತಾರಾಬಳಗದಲ್ಲಿದ್ದಾರೆ. ವೆಂಕಿ ಯುಡಿಐ ಸಂಕಲನ , ರೇಣು ಕುಮಾರ್ ಛಾಯಾಗ್ರಹಣವಿರುವ ಈ ನಿರ್ದೇಶನ ತಂಡದಲ್ಲಿ ಎಸ್. ಜೆ ಸಂಜಯ್, ಗಿರೀಶ್ ಸಾಕಿ, ಸಂಗೀತ ಶೆಟ್ಟಿ, ರಾಜಿ ಕಾರ್ಯ ನಿರ್ವಹಿಸಿದ್ದಾರೆ. ಕುಟುಂಬ ಸಮೇತ ನೋಡಬಹುದಾದ ಈ ಚಿತ್ರವನ್ನು ಅತಿ ಶೀಘ್ರದಲ್ಲೇ ಬಿಡುಗಡೆ ಮಾಡಲು ಎಲ್ಲಾ ತಯಾರಿ ಮಾಡಿಕೊಂಡಿದ್ದೇವೆ ಎಂದು ನಿರ್ಮಾಪಕ ಸಿ ಎಸ್ ವೆಂಕಟೇಶ್ ತಿಳಿಸಿದ್ದಾರೆ.

ವಿಟಾಕೀಸ್

ಭಾವನೆಗಳ ಸುಂದರ ಪಯಣ

ಚಿತ್ರ: ಮೇಘ
ನಿರ್ದೇಶನ: ಚರಣ್
ನಿರ್ಮಾಣ: ಎಚ್. ಆರ್.ಯತೀಶ್
ತಾರಾಗಣ: ಕಿರಣರಾಜ್, ಕಾಜಲ್, ರಾಜೇಶ್, ಶೋಭರಾಜ್ ಮತ್ತಿತರರು.
ರೇಟಿಂಗ್ : ★★★

ಪ್ರೀತಿ ಎಷ್ಟು ಮುಖ್ಯವೋ ಸ್ನೇಹವೂ ಅಷ್ಟೇ ಮುಖ್ಯ. ಇದೇ ಕಥೆಯನ್ನು ಮೇಘ ಹೊತ್ತು ಬಂದಿದೆ. ನಾಯಕ ಹಾಗೂ ನಾಯಕಿ ಇಬ್ಬರು ಗೆಳೆಯರು, ಮುಂದೆ ಈ ಗೆಳೆತನ ಪ್ರೀತಿಗೆ ತಿರುಗುತ್ತದೆ. ಗೆಳತನದಲ್ಲಿದ್ದ ಸುಂಸರವಾದ ಸಂಬಂಧ ಒಂದಷ್ಟು ಕಹಿ ಭಾವನೆಗಳನ್ನು ಕಾಡುವಂತೆ ಮಾಡುತ್ತದೆ. ಇತ್ತ ಪ್ರೀತಿಯ ಜತೆಗೆ ಕುಟುಂಬದ ಸಂಬಂಧವೂ ಮುಖ್ಯ, ಈ ತೊಳಲಾಟದಲ್ಲಿ ನಾಯಕ ನಾಯಕಿ ಸಾಗುವಂತಾಗುತ್ತದೆ. ಹೀಗೆ ಭಾವನೆಗಳ ಲೋಕದಲ್ಲಿ ಭಾವನಾತ್ಮಕ ನೆಲೆಗಟ್ಟಿನಲ್ಲಿ ಮೇಘ ಸುಂದರವಾಗಿ ಸಾಗುತ್ತದೆ. ನವಿರಾದ ಪ್ರೇಮ ಕಥೆಯ ಮೇಘ ಎಲ್ಲರ ಮನವನ್ನು ಕಾಡುತ್ತದೆ. ಹಾಗಂತ ಇದು ಪ್ರೇಮಕಥೆಗೆ ಸೀಮಿತವಾಗಿಲ್ಲ, ಇಲ್ಲಿ ಸಂಬಂಧಗಳ ಮಿಡಿತ, ಸ್ನೇಹದ ತುಡಿತ ಎಲ್ಲವೂ ಇದೆ. ಮೇಘ ರೋಮಾಂಚನದ ಜತೆಗೆ ರೋಚಕವಾಗಿದ್ದು ನಮ್ಮನ್ನು ಆವರಿಸುತ್ತದೆ. ಹಾಗಾಗಿ ಮೇಘವನ್ನು ತೆರೆಯಲ್ಲಿ ನೋಡಿದರೇ ಚೆಂದ.

ಇದು ಎಲ್ಲರಿಗೂ ಕನೆಕ್ಟ್ ಆಗುವ ಕಥೆಯಾಗಿದ್ದು ಪ್ರೇಕ್ಷಕ ಮನಸ್ಸಿನಲ್ಲೂ ಸ್ನೇಹ-ಪ್ರೀತಿಯ ಭಾವ ಮೂಡುತ್ತದೆ. ಭಾವನಾ ಲೋಕದಲ್ಲಿ ವಿಹರಿಸಿದಂತಾಗುತ್ತದೆ. ಪ್ರತಿಯೊಬ್ಬರಿಗೂ ಸ್ನೇಹ, ಪ್ರೀತಿ ಎಲ್ಲವೂ ಮುಖ್ಯ ಎಂಬುದನ್ನು ಮನಕ್ಕೆ ಮುಟ್ಟುವಂತೆ ನಿರೂಪಿಸಿದ್ದಾರೆ ನಿರ್ದೇಶಕ ಚರಣ್. ನವಿರಾದ ಪ್ರೇಮ ಕಥೆಗೆ ಕೌಟುಂಬಿಕ ಕಥೆಯನ್ನು ಬೆರೆಸಿ ನಿರ್ದೇಶಕರು ತೆರೆಯಲ್ಲಿ ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ. ಕಿರಣ್ ರಾಜ್‌ಗೆ ಇದು ಹೇಳಿ ಮಾಡಿಸಿದ ಕಥೆಯಾಗಿದ್ದು, ಕಿರಣ್ ತಮ್ಮ ಪಾತ್ರದ ಮೂಲಕ ಜೀವಿಸಿದ್ದಾರೆ. ಕಾಜಲ್ ಕುಂದರ್ ಮುಗ್ಧತೆಯ ಮೂಲಕ ಮನಗೆಲ್ಲುತ್ತಾರೆ. ರಾಜೇಶ್ ನಟರಂಗ, ಶೋಭರಾಜ್, ನಾಗೇಂದ್ರ ಶಾ, ಗಿರಿ ಶಿವಣ್ಣ, ಹಂಸಾ ಎಲ್ಲರೂ ತಮ್ಮ ಪಾತ್ರಗಳನ್ನು ಅದ್ಭುತವಾಗಿ ನಿರ್ವಹಿಸಿದ್ದಾರೆ. ಜೋಯಲ್ ಸಕ್ಕರಿ ಸಂಗೀತ ಚಿತ್ರಕ್ಕೆ ಶಕ್ತಿ ತುಂಬಿದೆ. ಒಟ್ಟಾರೆ ಮೇಘ ಇಡೀ ಕುಟುಂಬ ಸಮೇತ ಕುಳಿತು ನೋಡುವ ಸಿನಿಮಾವಾಗಿದೆ.



ಎಕ್ಕನಿಗೆ ಮುಹೂರ್ತ

ಪಿ.ಆರ್.ಕೆ ಪ್ರೊಡಕ್ಷನ್ಸ್, ಜಯಣ್ಣ ಫಿಲಂಸ್, ಕೆ.ಆರ್.ಜಿ.ಸ್ಟುಡಿಯೋಸ್ ನಲ್ಲಿ ನಿರ್ಮಾಣವಾಗುತ್ತಿರುವ ಯುವ ರಾಜ್ ಕುಮಾರ್ ಅಭಿನಯಿಸುತ್ತಿರುವ ಎಕ್ಕ ಚಿತ್ರದ ಮುಹೂರ್ತ ಇಂದು ಬಂಡೆ ಮಾಕಾಳಮ್ಮ ದೇವಸ್ಥಾನದಲ್ಲಿ ನೆರವೇರಿತು. ವಿಜಯ್ ಕಿರಗಂದೂರ್ ಅವರ ಪತ್ನಿ ಶೈಲಜಾ ವಿಜಯ್ ಕ್ಲಾಪ್ ಮಾಡುವ ಮೂಲಕ ಚಿತ್ರಕ್ಕೆ ಶುಭಕೋರಿದರು. ಮೊದಲ ಶಾಟ್ ಅನ್ನು ನಟರಾಕ್ಷಸ ಡಾಲಿ ಧನಂಜಯ್ ನಿರ್ದೇಶಿಸಿದರು.

ಎಕ್ಕ ಒಂದು ಮೆಗಾ ಚಿತ್ರವಾಗಿದ್ದು, ಇದರ ಜವಾಬ್ದಾರಿ ಹೊತ್ತಿರುವ ಹೆಮ್ಮೆ ನನಗಿದೆ. ಚಿತ್ರದ ಎಲ್ಲ ನಿರ್ಮಾಪಕರು, ಕನ್ನಡ ಜನರು, ಯುವ ರಾಜ್ ಕುಮಾರ್ ಮತ್ತು ಅವರ ಅಭಿಮಾನಿಗಳ ಎಲ್ಲರ ನಂಬಿಕೆಯನ್ನು ಈ ಚಿತ್ರ ಉಳಿಸಲಿದೆ, ಜನರ ಮೇಲೆ ಆಳವಾದ ಭಾವನಾತ್ಮಕ ಪ್ರಭಾವ ಬೀರಲಿದೆ ಎಂದು ನಿರ್ದೇಶಕ ರೋಹಿತ್ ಪದಕಿ ತಿಳಿಸಿದರು.

ತಾಯಿ ಆಶೀರ್ವಾದದೊಂದಿಗೆ, ಅಪ್ಪು ಚಿಕ್ಕಪ್ಪನ ಆಶೀರ್ವಾದದೊಂದಿಗೆ ಎಕ್ಕ ಚಿತ್ರವನ್ನು ಆರಂಭಿಸಿದ್ದೇವೆ. ಮೂರು ಹೆಸರಾಂತ ನಿರ್ಮಾಣ ಸಂಸ್ಥೆಗಳೊಡನೆ, ರೋಹಿತ್ ಪದಕಿ ಅಂತಹ ದೊಡ್ಡ ನಿರ್ದೇಶಕರೊಡನೆ ಕೆಲಸ ಮಾಡುತ್ತಿರುವುದು ನನಗೆ ತುಂಬಾ ಖುಷಿ ಇದೆ ಎಂದು ಯುವರಾಜ ಕುಮಾರ್ ಸಂತಸ ವ್ಯಕ್ತಪಡಿಸಿದರು. ನಾಯಕಿಯಾಗಿ ಸಂಪದಾ ಬಣ್ಣಹಚ್ಚಿದ್ದಾರೆ. ಅತುಲ್ ಕುಲಕರ್ಣೀ, ಶ್ರುತಿ ಕೃಷ್ಣ, ರಾಹುಲ್ ದೇವ್ ಶೆಟ್ಟಿ ಮುಂತಾದವರು ನಟಿಸುತ್ತಿದ್ದಾರೆ. ಚರಣ್ ರಾಜ್ ಸಂಗೀತ ಸಂಯೋಜಿಸುತ್ತಿದ್ದಾರೆ. ವಿ.ನಾಗೇಂದ್ರ ಪ್ರಸಾದ್, ನಾಗಾರ್ಜುನ ಶರ್ಮ, ನಟರಾಕ್ಷಸ ಡಾಲಿ ಧನಂಜಯ, ರೋಹಿತ್ ಪದಕಿ ಸಾಹಿತ್ಯ ರಚಿಸಿದ್ದಾರೆ. ಎಕ್ಕ 2026 ಕ್ಕೆ ತೆರೆಗೆ ಬರಲಿದೆ.

ಕಾಶ್ಮೀರ, ಬೆಂಗಳೂರು, ಮೈಸೂರು, ದೆಹಲಿ, ಕೋಲ್ಕತ್ತಾ, ಮುಂಬೈ ಸೇರಿದಂತೆ ಹಲವಾರು ಸ್ಥಳಗಳಲ್ಲಿ ಎಕ್ಕ ಚಿತ್ರದ ಚಿತ್ರೀಕರಣ ನಡೆಯುವುದಾಗಿ ತಂಡ ಇಂದು ತಿಳಿಸಿದೆ.



ಅತ್ಯುತ್ತಮ ಪರಿಸರ ಕಾಳಜಿಯುಳ್ಳ ಚಿತ್ರ ಎಂಬ ಖ್ಯಾತಿಯ 'ಬೆಟ್ಟದ ಜೀವ' ಚಲನಚಿತ್ರಕ್ಕೆ, ಆ ಕಾರಣದಿಂದಾಗಿ ರಾಷ್ಟ್ರಪ್ರಶಸ್ತಿಯೂ ಸಂದಿದೆ. ಶಿವರಾಮ ಕಾರಂತರ 'ಬೆಟ್ಟದ ಜೀವ' ಕಾದಂಬರಿಯನ್ನು ಚಲನಚಿತ್ರ ರೂಪಕ್ಕೆ ತರಲು ನಿರ್ದೇಶಕ ಪಿ.ಶೇಷಾದ್ರಿಯವರು ಆ ಹಿಂದೆಯೂ ಪ್ರಯತ್ನ ನಡೆಸಿ, ಇದು ಚಲನಚಿತ್ರಕ್ಕೆ ಸೂಕ್ತವಾಗದು ಎಂದೇ ಸುಮ್ಮನಾಗಿದ್ದರು! ವಿಶೇಷವೆಂದರೆ, ಜಿಗಣೆ ಕಚ್ಚಿಸಿಕೊಂಡು ಕಾಡಿನ ನಡುವೆ ತಯಾರಿಸಿದ 'ಬೆಟ್ಟದ ಜೀವ' ಚಲನಚಿತ್ರವು ಪ್ರೇಕ್ಷಕರ ಮೆಚ್ಚುಗೆಯನ್ನೂ ಗಳಿಸಿತು! ವಿಪರ್ಯಾಸವೆಂದರೆ, ಪಿ.ಶೇಷಾದ್ರಿಯವರು ರಚಿಸಿದ ಈ ಚಿತ್ರಕಥೆಯನ್ನು ಮುಂಬಯಿಯ ನ್ಯಾಷನಲ್ ಫಿಲಂ ಡೆವಲೆಪ್‌ಮೆಂಟ್ ಕಾರ್ಪೊರೇಷನ್ ತನ್ನ ಯೋಜನೆಯಡಿ ಪುರಸ್ಕರಿಸಲಿಲ್ಲ! ನಮ್ಮ ನಡುವಿನ ಪ್ರಮುಖ ನಿರ್ದೇಶಕರಾದ ಪಿ. ಶೇಷಾದ್ರಿಯವರು ಇಂತಹ ಹಲವು ಕುತೂಹಲಕಾರಿ ಅನುಭವಗಳನ್ನು ತಮ್ಮ ಹೊಸ ಪುಸ್ತಕ 'ದಕ್ಕಿದ್ದು ಮಿಕ್ಕಿದ್ದು, ಕಥೆಯೊಳಗಿನ ಗಾಥೆ'ದಲ್ಲಿ ಬರೆದುಕೊಂಡಿದ್ದಾರೆ. ಕಳೆದವಾರ ಬಿಡುಗಡೆಯಾದ ಆ ಪುಸ್ತಕದ ಆಯ್ದ ಭಾಗ ಇಲ್ಲಿದೆ.

ದ್ವೀಪದಂತಹ ಮನೆಯ ಸುತ್ತಲೂ ಜಿಗಣೆ ಕಾಟ!

» ಪಿ.ಶೇಷಾದ್ರಿ

ಮೂವತ್ತು ವರ್ಷಗಳ ಹಿಂದಿನ ಮಾತು. ಆಗ ನಾನು ಹೈಸ್ಕೂಲ್ ಓದುತ್ತಿದ್ದೆ. ವಾರಕ್ಕೊಮ್ಮೆ ನಮ್ಮ ಹಳ್ಳಿಯ ಹಳೇ ಲೈಬ್ರರಿಯಿಂದ ಎನ್.ನರಸಿಂಹಯ್ಯ, ಮಾಭೀಶೇ ಮುಂತಾದವರ ಕಾದಂಬರಿಗಳನ್ನು ತಂದು ಓದಿ ಅಚ್ಚರಿಪಡುತ್ತಾ, ನಾನೊಬ್ಬ ಸಾಹಿತ್ಯದ ವಿದ್ಯಾರ್ಥಿ ಎಂದು ಬೀಗುತ್ತಿದ್ದೆ. ಒಮ್ಮೆ ಮೇಷ್ಟ್ರ ಕೈಗೆ ಈ ಕಾದಂಬರಿ ಸಿಕ್ಕಿತು, ನನ್ನನ್ನು ಕರೆದು, 'ನೀನು ಓದಿದರೆ ಶಿವರಾಮ ಕಾರಂತರು, ಕುವೆಂಪು, ಎಸ್.ಎಲ್.ಭೈರಪ್ಪ ಮುಂತಾದವರ ಕೃತಿಗಳನ್ನು ಓದಬೇಕು, ಆಗ ಬುದ್ಧಿ ಬೆಳೆಯುತ್ತದೆ, ಇವೆಲ್ಲ ಬರೀ ಮನರಂಜನೆಗಷ್ಟೇ ಮೀಸಲು...' ಎಂದರು. ನಮ್ಮೂರ ಲೈಬ್ರರಿಯಿಂದ 'ಬೆಟ್ಟದ ಜೀವ' ಪಡೆದು ಓದಿದೆ. ಮೊದಲ ಓದಿಗೆ ಆ ಕಾದಂಬರಿ ನನಗೆ ಏನೇನೂ ರುಚಿಸಲಿಲ್ಲ. ಇದರಲ್ಲೇನು ಕಥೆ ಇದೆ? ನಮ್ಮ ಮೇಷ್ಟ್ರು ಇಂಥವನ್ನು ಓದಬೇಕು ಎಂದು ಯಾಕಾದರೂ ಹೇಳುತ್ತಾರೋ! ಈ ಮೇಷ್ಟ್ರುಗಳ ತಲೆ ಸರಿ ಇಲ್ಲ ಎಂದು ಮನಸ್ಸಿನಲ್ಲೇ ಗೊಣಗಿ ಕೊಂಡಿದ್ದೆ.

ಮುಂದೆ ನಾನು ಎಂ.ಎ. ಓದುವ ಸಂದರ್ಭದಲ್ಲಿ ಮತ್ತೆ ಕಾರಂತರು ನನ್ನನ್ನು ಕಾಡಬೇಕೆ! ಈ ಬಾರಿ ಪರೀಕ್ಷೆಗಾಗಿ 'ಬೆಟ್ಟದ ಜೀವ' ಓದುವ ಸಂದರ್ಭ ಬಂತು. ಎಷ್ಟು ಓದಿದರೂ ಅಷ್ಟೇ, ಅಂಕಗಳೇನೂ ಹೆಚ್ಚು ಬರಲಿಲ್ಲ...

ಅಂತೂ ಇಂತೂ ನಾನು ಆ ದಡ ಈ ದಡ ಬಡಿದು ಚಿತ್ರರಂಗಕ್ಕೆ ಬಂದೆ. ಇಲ್ಲೂ ಮತ್ತೆ ಕಾರಂತರು ಎದುರಾಗಬೇಕೆ! ಯಾರೋ ಸ್ನೇಹಿತರು 'ಬೆಟ್ಟದ ಜೀವ' ಕಾದಂಬರಿ ಓದಿ 'ಸಿಂಗಲ್ ಲೈನ್' ಮಾಡಿಕೊಡಲು ಕೇಳಿದರು. ಇದಕ್ಕಾಗಿ ದುಡ್ಡು ಕೊಡುತ್ತೇನೆ ಎಂದು ಆಸೆ ಬೇರೆ ತೋರಿಸಿದರು. ಮತ್ತೆ ಕಾದಂಬರಿ ಓದಿದೆ, ಈ ಬಾರಿ ಸಿನಿಮಾ ವಿದ್ಯಾರ್ಥಿಯಾಗಿ. ಆಗಲೂ ಇದು ಹೆಚ್ಚು ದಕ್ಕಲಿಲ್ಲ... ಅವರು ದುಡ್ಡೂ ಕೊಡಲಿಲ್ಲ. ಮುಂದೆ ನಾಲ್ಕು ಚಿತ್ರಗಳನ್ನು ಮಾಡಿದೆ. ನಾಲ್ಕಕ್ಕೂ ರಾಷ್ಟ್ರಮಟ್ಟದ ಮನ್ನಣೆ ದೊರೆಯಿತು. ಐದನೆಯ ಚಿತ್ರಕ್ಕಾಗಿ ವಸ್ತುವಿನ ಹುಡುಕಾಟದಲ್ಲಿದ್ದಾಗ, ಚಿತ್ರರಂಗದ ಹಿರಿಯ ಮಿತ್ರ ಎಚ್.ಎನ್.ನರಹರಿರಾಯರು 'ಬೆಟ್ಟದ ಜೀವ ಮಾಡಿ, ಅದು ಅದ್ಭುತವಾದ ಕಾದಂಬರಿ' ಎಂದು ಹುರಿದುಂಬಿಸಿದರು. ನನಗೂ ಕೊಂಚ ವಯಸ್ಸಾಗಿ, ನಾಲ್ಕು ಕೊಂಬು ಬೇರೆ ಮೂಡಿತ್ತಲ್ಲ, ಇನ್ನೊಂದು ಕೈ ನೋಡೇ ಬಿಡೋಣ ಎಂದು ಮತ್ತೆ ಕಾದಂಬರಿ ಓದಿದೆ. ಉಹುಂ, ಈಗಲೂ ಇದು ಹಿಡಿತಕ್ಕೆ ಸಿಗಲಿಲ್ಲ. ನಂತರ ಇದರ ಸಹವಾಸವೇ ಬೇಡ ಎಂದು 'ವಿಮುಕ್ತಿ' ಚಿತ್ರ ಮಾಡಿದೆ.

ಮತ್ತೆ ಮತ್ತೆ ಕಾಡಿದ ಬೆಟ್ಟದ ಜೀವ

ಮತ್ತೆ ಎರಡು ವರ್ಷ ಕಳೆದು ಚಿತ್ರಮಾಡಲು ಹೊರಟಾಗ 'ಬೆಟ್ಟದ ಜೀವ' ಕಣ್ಣ ಮುಂದೆ ಬಂತು. ಮತ್ತೆ ಓದಿದೆ. ಕೆಲವು ಮಿತ್ರರು ಇದನ್ನು ದೃಶ್ಯಕ್ಕೆ ಪರಿವರ್ತಿಸುವುದು ಕಷ್ಟ ಎಂದರು. ನಾನು ನಿರ್ಧರಿಸಿ ಆಗಿತ್ತು. ಸರಿ ಹೊರಟೇ ಬಿಟ್ಟೆ. ಸಾಲಿಗ್ರಾಮಕ್ಕೆ ಹೋಗಿ ಮಾಲಿನಿ ಮಲ್ಯರ ಬಳಿ ಮಾತಾಡಿದೆ. ಅವರೂ ಸೈ ಅಂದರು. 'ಬೆಟ್ಟದ ಜೀವ' ಕೃತಿಯ ಬಗ್ಗೆ ಬಂದಿದ್ದ ವಿಮರ್ಶೆಗಳನ್ನೆಲ್ಲಾ ಸಂಗ್ರಹಿಸಿ ಕೊಟ್ಟರು. ಓದುತ್ತಾ, ಓದುತ್ತಾ, ಕೃತಿ ದಕ್ಕತೊಡಗಿತು.

ಶಿವರಾಮ ಕಾರಂತರಿಗೆ ಈ ಕಾದಂಬರಿಯ ಪ್ರೇರಣೆ ಹೇಗೆ ಸಿಕ್ಕಿತು ಎನ್ನುವ ದಿಕ್ಕಿನಲ್ಲೂ ಯೋಚಿಸಿದೆ. ಅವರೇ ಒಂದೆಡೆ ಹೇಳಿದ್ದು ನನ್ನ ಗಮನಕ್ಕೆ ಬಂತು. ಅವರು ಒಮ್ಮೆ ಯಾವುದೋ ಕೆಲಸದ ಮೇಲೆ ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಿದ್ದರಂತೆ. ಅಲ್ಲಿದ್ದಾಗ ಅವರಿಗೆ ಜ್ವರ ಬಂದು ಕೆಲವು ಕಾಲ ಅಲ್ಲಿಯ

ಛತ್ರದಲ್ಲಿ ಉಳಿದಿದ್ದರಂತೆ. ಇವರು ನರಳುತ್ತಾ ಮಲಗಿರುವುದು ಕಟ್ಟಾ ಗೋವಿಂದಯ್ಯನವರಿಗೆ ತಿಳಿಯಿತಂತೆ. ಅವರು ಇವರನ್ನು ಹತ್ತಿರದಲ್ಲೇ ಇದ್ದ ತಮ್ಮ ಊರಾದ ಕಟ್ಟಾಗೆ ಕರೆದುಕೊಂಡು ಹೋದರಂತೆ. ಅಲ್ಲಿ ವಾರದ ಕಾಲ ಕಾರಂತರ ಶುಶ್ರೂಷೆ ನಡೆದು ಇವರು ಸುಧಾರಿಸಿಕೊಂಡರಂತೆ. ಅಲ್ಲಿದ್ದಷ್ಟು ಕಾಲ ಕಾರಂತರು ಗೋವಿಂದಯ್ಯನವರ ವ್ಯಕ್ತಿತ್ವ, ಅಲ್ಲಿಯ ಪರಿಸರ, ಅವರ ಮನೆ, ತೋಟ, ಅವರಿಗಿದ್ದ ಕೃಷಿಕ ಆಸಕ್ತಿ ಎಲ್ಲವನ್ನೂ ಹತ್ತಿರದಿಂದ ಕಂಡರಂತೆ. ಗೋವಿಂದಯ್ಯನವರ ವ್ಯಕ್ತಿತ್ವ ಇವರ ಮನಸ್ಸಿನಲ್ಲಿ ನೆಟ್ಟಿತಂತೆ. ಹೀಗೆ ಬೇರೆ ಬೇರೆ ಅನುಭವಗಳನ್ನು ಆಧರಿಸಿ ಕಾದಂಬರಿ ಬರೆಯಲು ನಿರ್ಧರಿಸಿದರಂತೆ.

ಓಡಿಹೋದ ಶಂಭು ನಾನಲ್ಲ!

ಈ ಪ್ರೇರಣೆಯನ್ನೇ ಹಿಡಿದು ಸಾಹಿತಿ ಮಿತ್ರರಾದ ಗೋಪಾಲಕೃಷ್ಣ ಪೈ ಜತೆಗೂಡಿಕೊಂಡು ಕುಕ್ಕೆ ಸುಬ್ರಹ್ಮಣ್ಯ ಸುತ್ತಮುತ್ತಲಿನ ಪ್ರದೇಶಗಳನ್ನೆಲ್ಲಾ ಸುತ್ತಿ ಬಂದೆ. ಕಾರಂತರ ಈ ಕೃತಿಗೆ ಪ್ರೇರಣೆ ಒದಗಿಸಿದ್ದ ಕಟ್ಟಾ ಗೋವಿಂದಯ್ಯನವರ ಮನೆಗೂ ಹೋಗಿದ್ದೆವು. ಬೆಟ್ಟದ ಬುಡದಲ್ಲಿದ್ದ ಈ ಮನೆ ಮತ್ತು ಪರಿಸರ ಈಗ ಸಂಪೂರ್ಣ ಬದಲಾಗಿತ್ತು. ಕಾಂಕ್ರೀಟ್ ಆವರಿಸಿ, ಅದೊಂದು ಸಾಧಾರಣ ಪ್ರದೇಶವಾಗಿ ಬದಲಾಗಿತ್ತು. ಕಾರಂತರಿಗೆ ಇಲ್ಲಿ ಅದೆಂಥ ನೋಟ ಕಂಡಿರಬಹುದು ಎಂದು ಅಚ್ಚರಿಯಾಯಿತು. ಕವಿಯ ನೋಟ ವಿಶಿಷ್ಟವಾದದ್ದು ಎಂದು ಸಮಾಧಾನ ಮಾಡಿಕೊಂಡೆ. ಗೋವಿಂದಯ್ಯನವರ ಮಗ ಸಿಕ್ಕರು. ನಮ್ಮನ್ನು ಆದರಿಸಿದರು. ಕಾರಂತರು ಓಡಾಡಿದ ಜಾಗಗಳನ್ನು ತೋರಿಸಿದರು. ಕಾರಂತರು ಹಲವು ದಶಕಗಳ ಹಿಂದೆ ಅವರ ತಂದೆಗೆ ಬರೆದಿದ್ದ ಕೆಲವು ಪತ್ರಗಳನ್ನು ಓದಲು ಕೊಟ್ಟರು. ಆದರೆ ಕಾದಂಬರಿಯಲ್ಲಿ ಓಡಿ ಹೋಗುವ 'ಗೋಪಾಲಯ್ಯನ ಮಗ ಶಂಭು ಮಾತ್ರ ನಾನಲ್ಲ!' ಎಂದು ಹೇಳುವುದನ್ನು ಅವರು ಮರೆಯಲಿಲ್ಲ. ಅಲ್ಲೇ ನನಗೆ 'ಬೆಟ್ಟದ ಜೀವ'ದ ಆರಂಭದ ಮುದ್ರಣದ ಪ್ರತಿ ಸಿಕ್ಕಿತು. ಕಾರಂತರು ತಮ್ಮ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಪುಸ್ತಕದಲ್ಲಿ ತಾವು 'ಬೆಟ್ಟದ ಜೀವ' ಬರೆದ ಕುರಿತು ಹೀಗೆ ಬರೆದಿದ್ದಾರೆ.

'...ಇಲ್ಲಿ- ಕಾಲ, ಸ್ಥಳ, ಕ್ರಿಯೆ- ಇವುಗಳ ಐಕ್ಯವನ್ನು, ಆಧುನಿಕ ನಾಟಕಗಳಲ್ಲಿ ತರುವಂತೆ, ತರಲು ಪ್ರಯತ್ನಿಸಿದೆ. ಆ ಮಾದರಿಯಿಂದ ಅದು ಹೊಸತು. ಕಾಡುಗಳನ್ನು ಸದಾ ಸುತ್ತಾಡುತ್ತಿದ್ದ ನನಗೆ, ಆ ಆವರಣ ಪರಿಚಿತವಾದದ್ದು. ಅಲ್ಲಿನ ವ್ಯಕ್ತಿಗಳು ನವೀನರಲ್ಲ. ಹಳ್ಳಿಗೆ ಹೋಗಿ, ಎಷ್ಟೋ ಗೆಳೆಯರ ಕೃಷಿಯ ಸಾಹಸದ ಕೆಲಸಗಳನ್ನು ನೋಡಿ ಮೆಚ್ಚಿದ್ದೇನೆ. ಅದರ ಚಿತ್ರವನ್ನು ಬರೆಯಬೇಕೆಂಬ ಆಸೆ ಮೂಡಿತ್ತು. ಒಮ್ಮೆ ನಾನು ಏನನ್ನಾದರೂ ಬರೆಯಬೇಕು ಎಂದು ಎಣಿಸಿಕೊಂಡು ಸ್ವಲ್ಪ ವಿಶ್ರಾಂತಿಯನ್ನರಸಿ, ಕೊಡಗಿನ ಗೆಳೆಯರಾದ ಶ್ರೀ ಮಂಜುನಾಥಯ್ಯನವರ ಮನೆಗೆ ಹೊರಟೆ. ಹೊರಟಾಗ, ಏನನ್ನೋ ಬರೆಯಬೇಕೆಂದು ಅನಿಸಿತ್ತು. ಆ 'ಏನು' ಎಂಬುದು ನಿಶ್ಚಯವಾಗಿರಲಿಲ್ಲ. ಸಂಪಾಜೆಯ ಘಟ್ಟವನ್ನೇರಿ, ಮಡಿಕೇರಿಗೆ ನಾಲ್ಕು ಮೈಲು ದೂರವಿರುವಾಗ, ಬಸ್ಸು ಹಾಳಾಯಿತು. ಅಲ್ಲಿಯೇ ಕುಳಿತಿರಲಾರದೆ, ಮಡಿಕೇರಿಗೆ ನಡೆದು ಮುಂದುವರಿದೆ. ಕಣ್ಣೆದುರಿಗೆ ನಿಂತಿದ್ದ ಗುಡ್ಡ ಮತ್ತು ಕಾಡುಗಳು 'ಬೆಟ್ಟದ ಜೀವ' ಎಂಬ ಹೆಸರನ್ನು ಸೂಚಿಸಿದವು. ಮಡಿಕೇರಿಗೆ ಹೋದಾಗ ಮಂಜುನಾಥಯ್ಯನವರ ಮೋಟರು ನನಗಾಗಿ ಕಾದಿತ್ತು. ಅವರ ಮನೆಯನ್ನು ಸೇರಿದ್ದಾಯಿತು. ಅದು ಕಾಫಿ ತೋಟಗಳಿಂದ ತುಂಬಿರುವ ಸುಂದರ ಗುಡ್ಡಬೆಟ್ಟಗಳ ನಡುವಣ ಸ್ಥಳ. ಅವರ ಮನೆಯಲ್ಲಿ ಕುಳಿತು, ಆರು ದಿನಗಳ ಕಾಲ ಗೀಚಿ, ಹವ್ಯಕ ಬ್ರಾಹ್ಮಣರ ಕತೆಯೊಂದನ್ನು ಬರೆದು ಮುಗಿಸಿದೆ. ಪ್ರಾದೇಶಿಕ ಚಿತ್ರವಾದ ಅದನ್ನು ಕಂಡು 'ಅದರಲ್ಲಿ ಕತೆಯೇನಿದೆ?' ಎಂದವರೂ ಉಂಟು. ಕತೆ ಹೇಳುವುದಕ್ಕೆ ಕುಳಿತವ ನಾನಲ್ಲ. ನನ್ನ ಮಗಳಿಗೆ ಕತೆ ಹೊಸೆದು ಹೇಳುತ್ತೇನೆ. ಜನರು, ಕಾದಂಬರಿಯಿರುವುದು ಶೀಲ ನಿರೂಪಣೆಗೆ ಎಂದು ತಿಳಿದರಾಯಿತು...' (ಪುಟ-223)

ನನಗೆ ಈ ಕೃತಿಯನ್ನು ಸಿನಿಮಾ ಮಾಡಲು ಪದೇ ಪದೇ ಹೇಳುತ್ತಿದ್ದವರು ಸುಚಿತ್ರ ಫಿಲಂ ಸೊಸೈಟಿಯನ್ನು ಕಟ್ಟಿ ಬೆಳೆಸಿದ್ದ ಹೆಚ್.ಎನ್.ನರಹರಿರಾಯರು ಎಂದು ಹೇಳಿದೆನಲ್ಲ. ಅವರಂತೂ ಇದೊಂದು ಶ್ರೇಷ್ಠ ಕೃತಿ, ದೃಶ್ಯಮಾಧ್ಯಮಕ್ಕೆ ಬರಲೇ ಬೇಕು ಎಂದು ಒತ್ತಾಯಿಸುತ್ತಿದ್ದರು. ಅವರ ಒಳನೋಟವೂ ನನಗೆ ದಕ್ಕಲಿ ಎಂದು ಅವರಿಗೂ ಚಿತ್ರಕತೆ ಬರೆಯಲು ಕೋರಿಕೊಂಡೆ. ಅವರು ಇಂಗ್ಲೀಷಿನಲ್ಲಿ ಬರೆದರು. ಆಗ ಎನ್‌ಎಫ್‌ಡಿಸಿ (ನ್ಯಾಷನಲ್ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್) ಈ ರೀತಿಯ ಸದಭಿರುಚಿಯ ಚಿತ್ರಗಳಿಗೆ ಹಣ ಸಹಾಯ ಮಾಡುತ್ತಿತ್ತು. ಆರ್ಥಿಕ ನೆರವಿಗಾಗಿ ಅವರಿಗೆ ಸ್ಕ್ರಿಪ್ಟ್‌ನ ಏಳು ಪ್ರತಿಗಳನ್ನು ಕಳಿಸಬೇಕಾಗಿತ್ತು. ಅರ್ಜಿ ತುಂಬಿ ಮುಂಬಯಿ ಕಚೇರಿಗೆ ಕಳುಹಿಸಿದೆ. ಒಂದು, ಎರಡು, ಮೂರು... ಆರು ತಿಂಗಳು ಆಯಿತು. ಅವರಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ನಾನು ಸಿನಿಮಾ ಮಾಡುವ ಆಸೆಯನ್ನೇ ಬಿಟ್ಟಿದ್ದೆ. ಅಷ್ಟರಲ್ಲಿ ಬಸಂತ್‌ಕುಮಾರ್ ಪಾಟೀಲ್ ಅವರು 'ನನಗೊಂದು ಚಿತ್ರ ಮಾಡಿಕೊಡಿ' ಎಂದು ಕೇಳಿದರು. ಅವರು ಒಪ್ಪಲಿಕ್ಕಿಲ್ಲ ಎಂದು ಮನಸ್ಸಿಲ್ಲದ ಮನಸ್ಸಿನಿಂದ 'ಬೆಟ್ಟದಜೀವ'ದ ಕತೆ ಹೇಳಿದೆ. ಆಶ್ಚರ್ಯ ಎಂದರೆ ಅವರು ಒಪ್ಪಿಯೇ ಬಿಟ್ಟರು. 'ಚಿತ್ರ ಮಾಡಿ' ಎಂದು ಅಡ್ವಾನ್ಸ್ ಕೊಟ್ಟೇ ಬಿಟ್ಟರು. ಅಂದು ಅವರ ಜನ್ಮದಿನವಾಗಿತ್ತು.

ಬೆಟ್ಟದ ಜೀವಕ್ಕೆ ಜೀವ ಕೊಡುವ ಕ್ರಿಯೆಯಲ್ಲಿ ನನ್ನ ತಂಡ



ದಕ್ಕಿದ್ದು ಮಿಕ್ಕಿದ್ದು
ಲೇ: ಪಿ. ಶೇಷಾದ್ರಿ
ಪ್ರ: ಅಂಕಿತ ಪುಸ್ತಕ ಬೆಂಗಳೂರು
ಬೆಲೆ ರು.250/-

ಈ ನಡುವೆ ಕಾದಂಬರಿಯನ್ನು ಮತ್ತೆ ಓದಿದೆ. ಚಿತ್ರದ ಬಿಂಬಗಳು ಸ್ಪಷ್ಟವಾಗತೊಡಗಿದವು. ಚಿತ್ರಕಥೆ ಬರೆದೆ, ಪೈ ಸಂಭಾಷಣೆ ಬರೆದುಕೊಟ್ಟರು. ಚಿತ್ರಕಥೆಯನ್ನು ಕೆಲವು ಮಿತ್ರರಿಗೆ ಓದಲು ಕೊಟ್ಟೆ, ಅವರೂ ಮೆಚ್ಚುಗೆಯ ಮಾತಾಡಿದರು. ಧೈರ್ಯ ಬಂತು. ಚಿತ್ರೀಕರಣಕ್ಕೆ ಹೊರಟೆ. ಉತ್ಸಾಹೀ ಅನಂತ್ ಅರಸ್ ಕ್ಯಾಮರಾ ಹಿಡಿದರು. ದತ್ತಣ್ಣ, ಸುಚೇಂದ್ರಪ್ರಸಾದ್, ರಾಮೇಶ್ವರಿ ವರ್ಮ ಮುಂತಾದ ಕಲಾವಿದರನ್ನು ಒಳಗೊಂಡ ಅರವತ್ತು ಜನರ ತಂಡ ಕಟ್ಟಿಕೊಂಡು ಕುಕ್ಕೆ ಸುಬ್ರಹ್ಮಣ್ಯದಲ್ಲಿ ಬಿಡಾರ ಹೂಡಿದೆವು.

ಕಾರಂತರಂತಹ ಗಟ್ಟಿ ಜೀವಕ್ಕೆ ಕಾಡು-ಮೇಡು ದೊಡ್ಡ ವಿಚಾರವಲ್ಲ. ಆದರೆ ನಮ್ಮಂಥ ನಗರವಾಸಿಗಳಿಗೆ? ಕಥೆ ನಡೆಯುವ ಕಾಲ ಸ್ವಾತಂತ್ರ್ಯ ಪೂರ್ವದ್ದು, ಜಾಗ ದಕ್ಷಿಣ ಕನ್ನಡದ ಕುಕ್ಕೆ ಸುಬ್ರಹ್ಮಣ್ಯದ ಬದಿಯ ಕಾಡಿನ ಮೂಲೆಯೊಂದರಲ್ಲಿ... ಕಾರಂತರ ಕೆಳಬೈಲನ್ನು ಸುಬ್ರಹ್ಮಣ್ಯದ ಬಳಿಯ ಕೂಜುಗೋಡಿನ ಬಳಿ ಕಂಡುಕೊಂಡೆವು. ಸುತ್ತಲೂ ಹೊಳೆ ಮಧ್ಯೆ ಒಂಟಿ ಮನೆ. ಆ ಜಾಗಕ್ಕೆ ಮೊದಲು ಹೋದಾಗ ನಮ್ಮನ್ನು ಸ್ವಾಗತಿಸಿದ್ದು ಜಿಗಣೆಗಳು! ಬೆವರು ಹರಿದದ್ದಕ್ಕಿಂತ ರಕ್ತವೇ ಹೆಚ್ಚು ಹರಿಯಿತು.

ಗುಡುಗು ಸಿಡಿಲು ಹಾವುಗಳ ಕಾಟ

ಕೂಜುಗೋಡು ಮನೆಯ ಅರ್ಧ ಮೈಲು ದೂರದಲ್ಲಿ ನಮ್ಮ ವಾಹನ ನಿಲ್ಲಿಸಿ ಅಲ್ಲಿಗೆ ಕಾಲ್ನಡಿಗೆಯಲ್ಲಿ ನಡೆದೇ ಹೋಗಬೇಕಿತ್ತು. ಎಪ್ಪತ್ತರ ಹರೆಯದ ದತ್ತಣ್ಣ, ರಾಮೇಶ್ವರಿ ವರ್ಮ ಇವರೆಲ್ಲ ನನ್ನನ್ನು ಎಷ್ಟು ಬೈದುಕೊಂಡರೋ... ಎಲ್ಲವನ್ನೂ ನಾನು ಕುಕ್ಕೆ ಸುಬ್ರಹ್ಮಣ್ಯನ ತಲೆಗೆ ಕಟ್ಟಿದೆ. ಮಧ್ಯರಾತ್ರಿ ಚುಕ್ಕಿಯ ಬೆಳಕಲ್ಲಿ ಒಬ್ಬರ ಅಂಗಿಯ ಚುಂಗನ್ನು ಇನ್ನೊಬ್ಬರು ಹಿಡಿದು ಕಾಲುದಾರಿಯಲ್ಲಿ ನಮ್ಮ ವಾಹನ ಸೇರಬೇಕಿತ್ತು. ಅಲ್ಲಿಂದ ನಮ್ಮ ಬಿಡಾರಕ್ಕೆ ಒಂದು ಗಂಟೆಯ ಹಾದಿ. ಹೊರಗೆ ಧೋ ಎಂಬ ಮಳೆ. ಗುಂಯ್‌ಗುಡುವ ಜೀರುಂಡೆ. ಹಾವುಗಳ ಕಾಟ. ಆಗಾಗ ಬಂದು ಹೆದರಿಸುವ ಗುಡುಗು-ಸಿಡಿಲು... ಅಬ್ಬ! ಆ ಇಪ್ಪತ್ತು ದಿನಗಳನ್ನು ಮರೆಯಲು ಸಾಧ್ಯವೇ ಇಲ್ಲ.

ಅರವತ್ತು ಜನರ ನಮ್ಮ ತಂಡ ನನಗೆ ಹಿಡಿ ಹಿಡಿ ಶಾಪ ಹಾಕಿತು. ಇದರಿಂದ ಕಾರಂತರೂ ಹೊರತಾಗಲಿಲ್ಲ. ಒಮ್ಮೆಯಂತೂ ಕುಕ್ಕೆ ಬಳಿಯ ಕುಮಾರಧಾರದಲ್ಲಿ ನಮ್ಮ ದತ್ತಣ್ಣ ಸ್ನಾನ ಮಾಡುವ ದೃಶ್ಯ ಮಾಡುವಾಗ ಕೊಚ್ಚಿಕೊಂಡು ಹೋಗಿಯೇಬಿಟ್ಟರು. ಸುಬ್ರಹ್ಮಣ್ಯನ ಕೃಪೆಯಿಂದ ನಾನು ಜೈಲು ಸೇರುವುದು ತಪ್ಪಿತು. ನನ್ನನ್ನು ಹೈಸ್ಕೂಲ್ ದಿನದಿಂದಲೂ ಕಾಡಿದ ಬೆಟ್ಟದ ಜೀವಕ್ಕೆ ಅಂತೂ ಮುಕ್ತಿ ದೊರಕಿತು. ಈ ಚಿತ್ರಕ್ಕೆ 'ಅತ್ಯುತ್ತಮ ಪರಿಸರ ಕಾಳಜಿ ಉಳ್ಳ ಚಿತ್ರ' ಎಂಬ ರಾಷ್ಟ್ರಪ್ರಶಸ್ತಿ ಬಂದಿತು. ನಾನು, ಬಸಂತ್ ಕುಮಾರ್ ಪಾಟೀಲರು ನವದೆಹಲಿಗೆ ಹೋಗಿ ಪ್ರಶಸ್ತಿ ಪಡೆದು ಬಂದೆವು.

ನಂತರ ಅಳುಕಿನಿಂದಲೇ ಚಿತ್ರಮಂದಿರದಲ್ಲಿ ಚಿತ್ರವನ್ನು ಬಿಡುಗಡೆ ಮಾಡಿದೆವು. ಆಶ್ಚರ್ಯ ಎಂದರೆ ಪ್ರೇಕ್ಷಕರೂ ಇದನ್ನು ಮೆಚ್ಚಿಕೊಂಡರು. ಸುಮಾರು ಐದಾರು ವಾರ ಚಿತ್ರಮಂದಿರಗಳಲ್ಲಿ ಪ್ರದರ್ಶನಗೊಂಡಿತು. ಇನ್‌ಫೋಸಿಸ್‌ನ ನಾರಾಯಣ ಮೂರ್ತಿ, ಸುಧಾಮೂರ್ತಿಯಂತಹವರು ಚಿತ್ರಮಂದಿರಕ್ಕೆ ಬಂದು ಚಿತ್ರ ನೋಡಿ ಬೆನ್ನು ತಟ್ಟಿದರು. ಗಿರೀಶ್ ಕಾರ್ನಾಡ್, ಅನಂತಮೂರ್ತಿ, ಮೈಸೂರಿನ ಪ್ರದರ್ಶನದಲ್ಲಿ ಎಸ್.ಎಲ್.ಭೈರಪ್ಪ ಕೂಡ ಚಿತ್ರ ನೋಡಲು ಬಂದಿದ್ದರು. ಮೆಚ್ಚಿದರು. ಸಂತೋಷವಾಯಿತು.

ಇದಾದ ಕೆಲವು ದಿನಗಳ ನಂತರ ನನಗೆ ಮುಂಬಯಿಯ ಕಚೇರಿಯಿಂದ ಕಾಗದವೊಂದು ಬಂದಿತು. ಅದರ ಒಕ್ಕಣೆ ಹೀಗಿತ್ತು: 'ನೀವು ಕಳುಹಿಸಿದ ಬೆಟ್ಟದ ಜೀವ ಚಿತ್ರದ ಚಿತ್ರಕಥೆ ನಮ್ಮ ಸಮಿತಿಗೆ ಒಪ್ಪಿಗೆಯಾಗಿಲ್ಲ...'. ಅದನ್ನು ಓದಿ ನಾನು ನಿಟ್ಟುಸಿರುಬಿಟ್ಟೆ!

ಸಾಹಸ ಕ್ರೀಡೆಯ ಹುಚ್ಚು!

ಸಮುದ್ರದ ಮ್ಯಾರಥಾನರ್ ಈಜುಗಾರರಾದ, ವೃತ್ತಿಯಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಲೇಖಕರು, 32 ಕಿ.ಮೀ. ದೂರದ ಇಂಗ್ಲಿಷ್ ಕಾಲುವೆ ಈಜಿದ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.

» ಪ್ರಕಾಶ ಹೆಗಡೆ



ಸಮುದ್ರದಲ್ಲಿ ಈಜುವವರು ಅದೇಕೆ ತೀವ್ರ ಶ್ರಮದ ಸಾಹಸಮಯ ಈಜುಗಾರಿಕೆಯಂತಹ ಕ್ರೀಡೆಯಲ್ಲಿ ತೊಡಗುತ್ತಾರೆ? - ನಮ್ಮ ಈಜು ಸಂಘದ ತರಬೇತುದಾರ ಮತ್ತು ಮಾರ್ಗದರ್ಶಕರು ನನ್ನನ್ನು ಪ್ರಶ್ನಿಸಿದರು. ಪಶ್ಚಿಮ ಇಂಗ್ಲೆಂಡಿನ ಡೋವರ್‌ನಲ್ಲಿ ಈಜು ತರಬೇತಿಯ ಸನ್ನಿವೇಶ; ವಿರಾಮದ ಸಮಯದಲ್ಲಿ ನಾವು ಡೋವರ್ ಸಮುದ್ರ ಕೊಲ್ಲಿಯಲ್ಲಿ, ತೀವ್ರ ಚಳಿ ಮತ್ತು ಕೊರೆಯುವ ನೀರಿನಲ್ಲಿ ಚಡಪಡಿಸುತ್ತಿದ್ದಾಗಿನ ಸಂದರ್ಭವದು. ಇಂಗ್ಲಿಷ್ ಚಾನೆಲ್ ದಾಟಬೇಕು ಎಂದು ತರಬೇತಿ ಪಡೆಯುತ್ತಿದ್ದ ದಿನಗಳು. ಈ ರೀತಿಯ ವಿಪರಿತದ ಸಾಹಸ ಕ್ರೀಡೆಯ ಮೋಹ, ಗೀಳು ಅಥವಾ ಆತ್ಮಾರ್ಪಣೆಯೆಂಬುದು ಆಕರ್ಷಣೆಯೆ? ಅಥವಾ ಹುಚ್ಚು ಧೈರ್ಯವೇ? ಸಾಹಸ ಕ್ರೀಡೆಯ ಹಿಂದು ಮುಂದುಗಳನ್ನು ವಿಶ್ಲೇಷಿಸಲು ನಾನು ನಿರ್ಧರಿಸಿದೆ.

ಈ ರೀತಿಯ ಸ್ಟಡ್‌ಗಳು ತಮ್ಮದೇ ವಿಶೇಷ ಕಾರಣಕ್ಕೆ ಈ ರೀತಿಯ ಸಾಹಸಕ್ಕೆ ಮುಂದಾಗುತ್ತಾರೆ - ಅಪಾಯಕಾರಿ ಮತ್ತು ದುಬಾರಿ ಪ್ರವಾಸದ ರೋಮಾಂಚಕತೆಗಿರಬಹುದು. ಹೆಮ್ಮೆ ತರುವಂತಹ ಹುಮ್ಮಸ್ಸಿಗಿರಬಹುದು. ಹಣ ಮತ್ತು ಪ್ರತಿಷ್ಠೆಗಿಂತ ಹೆಚ್ಚಾಗಿರುವ ಡೋಪಮೈನ್ ಅನುಭವಕ್ಕಿರಬಹುದು.

ಇದನ್ನೇ ಸ್ಲೋವೇನಿಯಾದ ಶಸ್ತ್ರಚಿಕಿತ್ಸಕರಾದ ಟೋಮಾಜ್ ರೋಟರ್ ಹೇಳಿದ್ದರು 'ಸಮುದ್ರದ ಆಳಕ್ಕೆ ಹೋಗುವುದಾಗಿರಲಿ, ತುಂಬಾ ಎತ್ತರಕ್ಕೆ ಹತ್ತುವುದಾಗಿರಲಿ, ತುಂಬಾ ದೂರ ಓಡು ವುದಾಗಿರಲಿ - ಇದು ರಕ್ತನಾಳಗಳಲ್ಲಿನ ವಿಷದಂತಹ ಒಂದು ರೀತಿಯ ಟಾಕ್ಸಿನ್! ಅದು ಹುಚ್ಚು ಸಾಹಸಕ್ಕೆ ಪ್ರೇರೇಪಿಸುತ್ತದೆ; ಅಪಾಯವು ಮುಗಿದ ನಂತರ ಬರುವ ಆ ರೋಮಾಂಚಕ ಭಾವನೆಯನ್ನು ನೀವು ಮತ್ತೆ ಮತ್ತೆ ಬಯಸುತ್ತೀರಿ.'

ಅಂತಹ ಸಾಹಸಿಗರು ಆತ್ಮವಿಶ್ವಾಸ ಮತ್ತು ಆತ್ಮಸ್ಥೈರ್ಯ ಹೊಂದಿರುವ ಭಂಡರು, ವಿಪರೀತ ನಡವಳಿಕೆಯವರಾಗಿರುತ್ತಾರೆ. ಈ ಪ್ರಕ್ರಿಯೆಯ ಸಮಯದಲ್ಲಿ ಅನುಭವಿಸಿದ ಹ್ಯಾಲುಸಿನೇಶನ್, ಭ್ರಮೆಗಳು ಇದಕ್ಕೆ ಕಾರಣವೆಂದು ಕೆಲವು ಮನಶ್ಶಾಸ್ತ್ರಜ್ಞರ ಅಭಿಪ್ರಾಯ. ಆ ತೀವ್ರ ಪ್ರವೃತ್ತಿಯ ತಯಾರಿಯಲ್ಲಿ ಹೃದಯವನ್ನು ತ್ವರಿತಗೊಳಿಸುವ ಹಾರ್ಮೋನುಗಳು ಬಿಡುಗಡೆಯಾಗುತ್ತವೆ. ಈ ಪ್ರಕ್ರಿಯೆಯ ಭಾಗವಾಗಿ ಮೆದುಳು ದೊಡ್ಡ ಪ್ರಮಾಣದಲ್ಲಿ ಡೋಪಮೈನ್ ಅನ್ನು ಸ್ರವಿಸುತ್ತದೆ. ಇದು ಸಂತೋಷ ಮತ್ತು ಯಶಸ್ಸಿನ ಭಾವನೆಗಳೊಂದಿಗೆ ಸಂಬಂಧ ಹೊಂದಿರುವ ರಾಸಾಯನಿಕ.

ಸಾಹಸೀ ಮನೋಭಾವದ ಹಿನ್ನೆಲೆ ತುಸು ಸಂಕೀರ್ಣ. 2006ರಲ್ಲಿ ಫ್ರಾನ್ಸ್‌ನಲ್ಲಿ ಸ್ಕೀಯಿಂಗ್ ಮಾಡುವಾಗ ವಿಶ್ವದ ಅಗ್ರ ಸ್ಕೀಯರ್ ಒಬ್ಬರು ಮರಣಹೊಂದಿದಾಗ, ಈ ಅಪಾಯಕಾರಿ ಕ್ರೀಡೆಯಲ್ಲಿ ಭಾಗವಹಿಸಲು ನೂರಾರು ಜನರು ಮುಂದಾದರು. 2015ರಲ್ಲಿ ವಿಶ್ವವ್ಯಾಪಿ ದೋಣಿ ಸ್ಪರ್ಧೆಯಲ್ಲಿ ಇಬ್ಬರು ಸಾವನ್ನಪ್ಪಿದಾಗ, ಮುಂದಿನ ವರ್ಷದ ಸ್ಪರ್ಧೆಗೆ ದುಪ್ಪಟ್ಟು ಅರ್ಜಿಗಳು ಬಂದವು. ಕಷ್ಟದ ಪರ್ವತಾರೋಹಣವೆಂದೇ ಪ್ರಸಿದ್ಧವಾಗಿರುವ ಹಿಮಾಲಯದ ಕೆ2 ಶಿಖರಕ್ಕೆ 2021ರಲ್ಲಿ ಏರಲು ಪ್ರಯತ್ನಿಸಿದ ಗುಂಪಿನ ಎಲ್ಲಾ ಸದಸ್ಯರೂ ಸತ್ತುಹೋದರು! ಆದರೆ ಮುಂದಿನ ಚಳಿಗಾಲದಲ್ಲಿ ಈ ಕಠಿಣ ಆರೋಹಣವನ್ನು ಪ್ರಯತ್ನಿಸಲು ಇನ್ನಷ್ಟು ಜನ ಪರ್ವತಾರೋಹಿಗಳು ಮುಂದೆ ಬಂದರು. ಮೌಂಟ್ ಎವರೆಸ್ಟ್ ಆರೋಹಿಗಳು ಸತ್ತುಹೋದ ಸುದ್ದಿಯನ್ನು ಪ್ರತಿ ವರ್ಷವೂ ನಾವು ಕೇಳುತ್ತಿರುತ್ತೇವೆ. ಆದರೂ ಈ ಶಿಖರವನ್ನು ಏರಲು ಪ್ರಯತ್ನಿಸುವ ಪಟ್ಟಿ ಪ್ರತಿ ವರ್ಷವೂ ಬೆಳೆಯುತ್ತಲೇ ಇದೆ. ಅತಿ ಸಾಹಸದ ಅನುಭವ ಪಡೆಯಲು ಅಪಾಯವನ್ನು ಎದುರಿಸಲು ಅಂತಹವರು ಸದಾ ಸಿದ್ಧ.

ಅಪಾಯಕಾರಿ ಸುದ್ದಿ

ನಾವು ಇಂಗ್ಲಿಷ್ ಕಾಲುವೆ ಈಜುವ ತರಬೇತಿ ಪಡೆಯಲು, ಇಂಗ್ಲೆಂಡಿನ ಡೋವರ್‌ನಲ್ಲಿದ್ದಾಗಲೂ ಇಂತಹ ಘಟನೆಯೊಂದು ಜರುಗಿತು. ಇಂಗ್ಲಿಷ್ ಕಾಲುವೆಯಲ್ಲಿ ಈಜುವಾಗ ಕಾಣೆಯಾದ ಅಮೆರಿಕದ ಈಜುಗಾರ ಇಯಾನ್ ಮಿಸ್ಕೆಲ್ಲಿಗಾಗಿ ಮೂರುದಿನಗಳ ಕಾಲ ಹುಡುಕಿದ ಅನುಭವಿ ಮುಳುಗುತಜ್ಞರು, ನಂತರ ತಮ್ಮ ಪ್ರಯತ್ನವನ್ನು ಕೈಬಿಡಬೇಕಾಯಿತು. ನಾವೂ ಸಹ ಇಂಗ್ಲಿಷ್ ಚಾನೆಲ್ ಈಜಿಗಾಗಿ ತರಬೇತಿ ಮಾಡುತ್ತಿದ್ದುದರಿಂದ ಈ ಸುದ್ದಿ ಕೇಳಿ ಭ್ರಮನಿರಸನದ ಸ್ಥಿತಿಯಲ್ಲಿದ್ದೆವು. ಆದರೆ ಸ್ವಲ್ಪ ಸಮಯದವರೆಗೆ ಮಾತ್ರ. ನಂತರ ನಮ್ಮಲ್ಲಿ ಹೊಸ ಅಡ್ರಿನಾಲಿನ್ ಧಾವಿಸಿ, ನಮ್ಮಲ್ಲಿರುವ ಸಾಹಸ ಪ್ರವೃತ್ತಿಯ ಕಿಚ್ಚನ್ನು ಬಡಿದೆಬ್ಬಿಸಿತು. ನಮ್ಮ ಈಜಿನ ಸಾಹಸ ಮುಂದುವರಿಸಿದೆವು. ಇಯಾನ್‌ನ ಅಸ್ಥಿಪಂಜರವು ಒಂದು ವಾರದ ನಂತರ ಸಿಕ್ಕಿತೆಂದು ಚಾನೆಲ್ ಈಜು ಸಂಸ್ಥೆಯವರು ತಿಳಿಸಿದರು. ಅಷ್ಟರಲ್ಲಿ ನಾವು ಯಶಸ್ವಿಯಾಗಿ ಚಾನೆಲ್ ಈಜಿ ಸಂಭ್ರಮಾಚರಣೆಯಲ್ಲಿದ್ದೆವು!

ಏನೇ ಅವಘಡಗಳು ನಡೆದರೂ, ಮುಂದಿನ ದಿನಗಳಲ್ಲಿ ಇಂಗ್ಲಿಷ್ ಕಾಲುವೆ ಈಜಲು ಇನ್ನಷ್ಟು ಜನರು ಮುಂದೆ ಬರುವುದು ಖಂಡಿತ ಎಂದೇ ನಾನು ಹೇಳುತ್ತೇನೆ. ಸಾಹಸ ಕ್ರೀಡೆಯ ಮತ್ತು ಎಂದರೆ ಇದೇ ತಾನೆ! ಇದೇ.

ನಮ್ಮ ಆರು ಸದಸ್ಯರ ತಂಡವು 2023ರ ಜೂನ್ 17ರಂದು ಇಂಗ್ಲೆಂಡ್‌ನ ಡೋವರ್‌ನ ಸಂಫೈರ್ ಹೋ ಕಡಲ ತೀರದಿಂದ ಫ್ರಾನ್ಸ್‌ನ ವಿಸ್ಸೆಂಟ್ ತನಕ, 17 ಗಂಟೆ 35 ನಿಮಿಷದ ಅವಧಿಯಲ್ಲಿ ಇಂಗ್ಲಿಷ್ ಕಾಲುವೆ ಈಜುವಿಕೆಯನ್ನು ಪೂರ್ಣಗೊಳಿಸಿತು. 16 ಜೂನ್ 2023ರ ಬೆಳಿಗ್ಗೆ ಒಂಬತ್ತು ಗಂಟೆಗೆ ಪ್ರಾರಂಭವಾದ ಸಮುದ್ರ ಅಲ್ಟ್ರಾ ಮ್ಯಾರಥಾನ್, 17ರ ಬೆಳಿಗ್ಗೆ 2.35 ಕ್ಕೆ ಮುಗಿಯಿತು. ಅತೀವ ಚಳಿ, ಪ್ರಕ್ಷುಬ್ಧ ಸಾಗರ, ಅಭೂತಪೂರ್ವ ಸಹಿಷ್ಣುತೆಯನ್ನು ಅನುಭವಿಸಿ ಗೆದ್ದ ಸಂತಸದ ಗಳಿಗೆಗಳವು. ಎರಡನೇ ಬಾರಿಗೆ ಚಾನೆಲ್ ಈಜು ಪೂರ್ಣಗೊಳಿಸಿದ ನನಗೆ ಇದು ಡೇಜಾವು ಕ್ಷಣ ಎನಿಸಿತು!



ಪುಸ್ತಕ ವಿಮಾನ

ವೈವಿಧ್ಯಮಯ ಕಥೆಗಳು

» ಡಾ. ರವಿಶಂಕರ ಜಿ. ಕೆ.

ಕಥೆ, ಕಾದಂಬರಿ, ವಿಮರ್ಶೆ, ಅನುವಾದ, ಗ್ರಂಥ ಸಂಪಾದನೆ ಮುಂತಾದ ಕ್ಷೇತ್ರಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಡಾ. ಬಿ. ಜನಾರ್ದನ ಭಟ್ಟರ 'ಕಪ್ಪೆ ಹಿಡಿಯುವವನು' ಕಥಾಸಂಕಲನದಲ್ಲಿ ಒಟ್ಟು ಹತ್ತು ಕಥೆಗಳಿವೆ. ಈ ಕಥೆಗಳು ಮನುಷ್ಯನ ಸ್ವಾರ್ಥ, ದುರಾಸೆ, ಕಪಟಬುದ್ಧಿ, ನಯವಂಚಕತನಗಳನ್ನು ಬಯಲು ಮಾಡುತ್ತವೆ. ಕರೋನಾ ಲಾಕ್‌ಡೌನ್ ಉಂಟುಮಾಡಿದ್ದ ಬದುಕಿನ ಬಿಕ್ಕಟ್ಟುಗಳನ್ನು, ತಂದೊಡ್ಡಿದ್ದ ಸವಾಲುಗಳನ್ನು ದಾಖಲಿಸುತ್ತದೆ. ಮನುಷ್ಯ ಸಂಬಂಧಗಳಲ್ಲಿನ ಜಟಿಲತೆ, ಜಮೀನ್ದಾರಿ ವ್ಯವಸ್ಥೆಯ ಕುತಂತ್ರಗಳು, ಬಂಡವಾಳಶಾಹಿ ವ್ಯವಸ್ಥೆಗಳ ಹುನ್ನಾರಗಳನ್ನು ತೆರೆದಿಡುತ್ತವೆ. ಬೇರೆ ಬೇರೆ ಸ್ವರೂಪದ ತುಳುನಾಡಿನ ಗ್ರಾಮೀಣ ಬದುಕನ್ನು ತೋರಿಸುತ್ತಲೇ ಜಾಗತೀಕರಣದಿಂದಾಗಿರುವ ಹಳ್ಳಿಗಳ ಸಾಂಸ್ಕೃತಿಕ ಪಲ್ಲಟಗಳನ್ನು ಕಟ್ಟಿಕೊಡುತ್ತವೆ. ಕರಾವಳಿಯ ದೈವಾರಾಧನೆಯ ಸ್ವರೂಪದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಮತ್ತು ಆ ನಂಬಿಕೆಗಳು ವಾಣಿಜ್ಯೀಕರಣಗೊಳ್ಳುತ್ತಿರುವ ದುರಂತದ ಸನ್ನಿವೇಶಗಳನ್ನು ಚಿತ್ರಿಸುತ್ತವೆ.

ಮೊದಲ ಕಥೆಯಾಗಿರುವ ಮಸ್ಕರೇನ್ಯಾಸ್ ಮತ್ತು ವಿಜಯಧ್ವಜ ಐತಿಹಾಸಿಕ ಕಥನವಾಗಿದ್ದು, ಹದಿನಾರನೇ ಶತಮಾನದಲ್ಲಿ ಪೋರ್ಚುಗೀಸರಿಂದ ನಡೆದಿರುವ ಮತಾಂತರಗಳನ್ನು ಕಟ್ಟಿಕೊಡುವ ಮೂಲಕ ಚರಿತ್ರೆಯ ಪುಟಗಳಲ್ಲಿ ದಾಖಲಾಗದಿರುವ ಸೂಕ್ಷ್ಮ ಸಂವೇದನೆಗಳ ಮೇಲೆ ಬೆಳಕು ಬೀರುತ್ತದೆ. ಭಾರತೀಯರ ನಂಬಿಕೆ, ಧರ್ಮಶ್ರದ್ಧೆಗಳ ಮೇಲಿನ ಧಾಳಿಯನ್ನು ಸಮರ್ಥವಾಗಿ ಎದುರಿಸುವ ಚಿತ್ರಣ ಈ ಕಥೆಯಲ್ಲಿದೆ.

ಒಂದು ಹಲ್ಲಿಯ ಕಥೆಯಲ್ಲಿ ಹಲ್ಲಿ ಮತ್ತು ಬೆಕ್ಕುಗಳು ಪ್ರತಿಮೆಗಳಾಗಿ ಬಳಕೆಯಾಗಿದ್ದು ಸಮಾಜದ ಕೆಳವರ್ಗದ ಸಣ್ಣ ಸಣ್ಣ ಅಗತ್ಯತೆಗಳನ್ನು ಪೂರೈಸಿ ಋಣದ ಪ್ರಜ್ಞೆಯನ್ನು ಸದಾ ಜೀವಂತವಾಗಿಡುತ್ತಾ, ತಮಗೆ ಬೇಕಾದಂತೆ ಬಳಸಿಕೊಳ್ಳುವ ಸ್ವಾರ್ಥ ರಾಜಕಾರಣ ಮತ್ತು ಭ್ರಷ್ಟ ವ್ಯವಸ್ಥೆಗಳ ಚಿತ್ರಣವಿದೆ. ಕರಾವಳಿಯ ಯಕ್ಷಗಾನದ ನೆರಳಿನಲ್ಲಿ ನಿರೂಪಿತವಾಗಿರುವ ಶಾಮರಾಯ ಗರ್ವಭಂಗ ವಿಡಂಬನಾ ಶೈಲಿಯಲ್ಲಿರುವ ಕಥೆಯಾಗಿದ್ದು, ದೇಹ ಮನಸ್ಸುಗಳೆರಡರಲ್ಲೂ ನಿಯಂತ್ರಣವಿಲ್ಲದೆ ಕುಡಿತಕ್ಕೆ ದಾಸನಾಗಿರುವ ವ್ಯಕ್ತಿಯನ್ನು ಸಮಾಜ ಹೇಗೆ ಸ್ವೀಕರಿಸುತ್ತದೆ ಎಂಬುದನ್ನು ನಿರೂಪಿಸುತ್ತದೆ.

ಜೀವದಲಿ ಜಾತ್ರೆ ಮುಗಿದಂತೆ ಕಥೆಯಲ್ಲಿ ಕೋವಿಡ್ ಸಾಂಕ್ರಾಮಿಕಕ್ಕೆ ನಲುಗಿ ಹೋದ ಬದುಕಿನ ಚಿತ್ರಣವಿದೆ. ಜನರಲ್ಲಿ ಹುಟ್ಟಿದ್ದ ಆತಂಕ, ಗೊಂದಲಗಳು, ಖಾಯಿಲೆ ಹರಡುವುದನ್ನು ತಡೆಯಲು ಹೇರಲಾಗಿದ್ದ ಲಾಕ್‌ಡೌನ್ ನಿರ್ಬಂಧ, ಐಸೋಲೇಶನ್ ವ್ಯವಸ್ಥೆ ಮುಂತಾದವುಗಳ ನಡುವೆ ಮನುಷ್ಯ ಸಂಬಂಧಗಳೇ ಅರ್ಥ ಕಳೆದುಕೊಂಡಿತ್ತು. ಕೋವಿಡ್‌ನಿಂದ ಮೃತಪಟ್ಟಿರುವ ವ್ಯಕ್ತಿಯ ಅಂತ್ಯಸಂಸ್ಕಾರ ಮಾಡುವ ಸಂದರ್ಭವನ್ನು ಕಟ್ಟಿಕೊಡುವ ಈ ಕಥೆ ಅಂತಹ ವಿಷಮ ಪರಿಸ್ಥಿತಿಯಲ್ಲೂ ಮನುಷ್ಯನ ಸ್ವಾರ್ಥವೇ ಮೆರೆದದ್ದನ್ನು ಮಾರ್ಮಿಕವಾಗಿ ಕಟ್ಟಿಕೊಡುತ್ತದೆ. ವಿದಾಯ ಕಥೆಯಲ್ಲಿ ಹಳ್ಳಿಯ ಹೋಟೇಲೊಂದು ಮುಚ್ಚುವ ಸಂದರ್ಭದ ಸೂಕ್ಷ್ಮವಾದ ಚಿತ್ರಣವಿದೆ.

'ಕಪ್ಪೆ ಹಿಡಿಯುವವನ ಹೆಂಡತಿ' ಕಥೆಯಲ್ಲಿ ಗಂಡ-ಹೆಂಡತಿ ಪರಸ್ಪರ ದೂರವಾಗಿದ್ದರೂ ಆ ಸಂಬಂಧದ ನಡುವೆ ಜೀವಂತವಾಗಿ ಉಳಿರುವ ಭಾವನಾತ್ಮಕ ಆಯಾಮ ಮತ್ತು ನಿರೀಕ್ಷೆಗಳ ಚಿತ್ರಣವಿದೆ. ಇತ್ತೀಚಿನ ದಿನಗಳಲ್ಲಿ ಶಿಥಿಲವಾಗುತ್ತಿರುವ ಕೌಟುಂಬಿಕ ಬಂಧ ಮತ್ತು ಗಂಡು-ಹೆಣ್ಣಿನ ಸ್ಥಾನಮಾನದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಈ ಕಥೆ ಪ್ರತಿಬಿಂಬಿಸುತ್ತದೆ. ಪೊಕ್ಕಡೆ ಕಥೆಯು ಮನುಷ್ಯನ ಒಣಪ್ರತಿಷ್ಠೆ, ಟೊಳ್ಳುತನ, ಚಾಲಾಕಿತನಗಳನ್ನು ಪ್ರತಿಬಿಂಬಿಸುತ್ತದೆ. ಈ ಕಥೆಯ ಶೀರ್ಷಿಕೆಯಿಂದ ಆರಂಭಿಸಿ ಕಥೆಯುದ್ದಕ್ಕೂ ವ್ಯಂಗ್ಯ, ವಿಡಂಬನೆ ಸಾಂಕೇತಿಕತೆಗಳಿವೆ. ಪಂಜುರ್ಲಿ ಬಡಾವಣೆ ಕಥೆಯು ಜಾಗತೀಕರಣದಿಂದಾಗಿ ಹಳ್ಳಿಗಳಲ್ಲಿ ಆಗುತ್ತಿರುವ ಪಲ್ಲಟಗಳು ಮತ್ತು ಬಂಡವಾಳಶಾಹಿ ವ್ಯವಸ್ಥೆ ಇಡೀ ಊರನ್ನೇ ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಸಂಚು ರೂಪಿಸುತ್ತಿರುವುದನ್ನು ಅನಾವರಣಗೊಳಿಸುತ್ತದೆ.

'ಎರಡು ತಾಗದು ಒಂದು ತಾಗಲೇ ಇಲ್ಲ' ಕಥೆಯು ಮನುಷ್ಯನ ದುರಾಸೆ, ಸ್ವಾರ್ಥಗಳನ್ನು ಚಿತ್ರಿಸುತ್ತದೆ. ಈ ಕಥೆಯಲ್ಲಿ ಗಂಡನನ್ನು ಸಣ್ಣ ವಯಸ್ಸಿನಲ್ಲೇ ಕಳೆದುಕೊಂಡಿರುವ ಅತ್ತಿಗೆಯನ್ನು ಮನೆಯ ಕೆಲಸ ದಾಳಿನಂತೆಯೇ ದುಡಿಸಿಕೊಂಡಿರುವ ಮೈದುನನ ಪಾತ್ರ ಇದೆ.

ಇಲ್ಲಿನ ಕಥೆಗಳ ಮೂಲಕ ಜನಾರ್ದನ ಭಟ್ಟರು ಕನ್ನಡದ ವಿಶಿಷ್ಟ ಕಥೆಗಾರರೆನಿಸಿಕೊಳ್ಳುತ್ತಾರೆ. ಕಥೆಗಳ ಶೀರ್ಷಿಕೆ, ಕಥಾಪಾತ್ರಗಳ ಹೆಸರು, ನಿರೂಪಣಾ ಶೈಲಿ, ಕಥೆಗಳಲ್ಲಿ ಬಳಸಿರುವ ವಿಡಂಬನೆ, ರೂಪಕ, ಸಂಕೇತಗಳು ಹೀಗೆ ಬೇರೆ ಬೇರೆ ನೆಲೆಗಳಲ್ಲಿ ಅವರು ಪ್ರಯೋಗಗಳನ್ನು ಮಾಡಿದ್ದಾರೆ. ಜನಾರ್ದನ ಭಟ್ಟರಿಗಿರುವ ಪಾಶ್ಚಾತ್ಯ ಸಾಹಿತ್ಯದ ವಿಸ್ತಾರವಾದ ಮತ್ತು ಆಳವಾದ ಓದು ಇದಕ್ಕೆ ಸಹಕರಿಸಿದೆ. ಇಲ್ಲಿನ ಕಥೆಗಳು ಒಂದಕ್ಕಿಂತ ಒಂದು ಭಿನ್ನವಾಗಿರುವ ಕಥಾವಸ್ತುಗಳನ್ನು ಹೊಂದಿದ್ದು, ಒಂದು ವೈವಿಧ್ಯಮಯವಾಗಿರುವ ಕಥಾಸಂಕಲನವನ್ನು ರೂಪಿಸಿವೆ.

ಕಪ್ಪೆ ಹಿಡಿಯುವವನು
ಲೇ: ಡಾ.ಬಿ.ಜನಾರ್ದನ ಭಟ್
ಪ್ರ: ಸ್ನೇಹಾ ಎಂಟರ್‌ಪ್ರೈಸಸ್, ಬೆಂಗಳೂರು
9481145775
ಬೆಲೆ ರು.170/-

ಬದುಕಿನ ವಿವಿಧ ಘಟ್ಟಗಳಲ್ಲಿ ಎದುರಾಗುವ ತಲ್ಲಣಗಳೇ ಇಲ್ಲಿನ ಕಥೆಗಳ ಮೂಲದ್ರವ್ಯ.

ಮಕ್ಕಳಿಗೆ ಪ್ರಕೃತಿಯ ಕಥೆಗಳು

» ಬೇದ್ರೆ ಮಂಜುನಾಥ, ಮೈಸೂರು

ಪರಿಸರ ಪ್ರೀತಿ ಬೆಳೆಸುವ ಕೆಲಸ ಎಳೆಯ ವಯಸ್ಸಿನಲ್ಲಿಯೇ ಆರಂಭಿಸಲು, ಪ್ರಕೃತಿಯಲ್ಲಿನ ವಿಶೇಷಗಳನ್ನು, ಮುಖ್ಯವಾಗಿ ಪಕ್ಷಿಗಳ ಜೀವನ ವಿಧಾನವನ್ನು ಅರಿತು ಅವುಗಳ ಬಗ್ಗೆ ಕಾಳಜಿವಹಿಸಲು ಪ್ರೋತ್ಸಾಹ ನೀಡುವ ಪುಟ್ಟ ಮಕ್ಕಳಿಗೆ ಪ್ರಕೃತಿಯ ಕಥೆಗಳು ಸರಣಿಯ ಹತ್ತು ಪುಸ್ತಕಗಳನ್ನು ದೆಹಲಿ ಮೂಲದ ವಿದ್ಯಾ ಆನ್‌ಲೈನ್ ಸಹಯೋಗದಲ್ಲಿ, ಈ ವರ್ಷದ ಮಕ್ಕಳ ದಿನಾಚರಣೆಯ ಕೊಡುಗೆಯಾಗಿ, ನವಕರ್ನಾಟಕ ಪ್ರಕಾಶನವು ಹೊರತಂದಿದೆ. ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ರಚಿಸಿರುವ ಈ ಸಚಿತ್ರ ಕೃತಿಗಳು ಎಲ್ಲ ವಯೋಮಾನದವರಿಗೂ ಸೂಕ್ತ ಎನಿಸಿವೆ. 32 ಪುಟಗಳ, 1/6 ಡೆಮಿ ಆಕಾರದಲ್ಲಿರುವ ಪುಸ್ತಕದ ಬಹುವರ್ಣದ ಮುದ್ರಣ, ನಿರೂಪಿಸಿರುವ ಶೈಲಿ, ಎಲ್ಲವೂ ಆಕರ್ಷಕ. ಪ್ರತಿ ಪುಸ್ತಕದ ಬೆಲೆ ರೂ.90/-.

ಪುಟ್ಟ ಮಕ್ಕಳಿಗೆ ಪ್ರಕೃತಿಯ ಕಥೆಗಳು: 10 ಸಚಿತ್ರ ಪುಸ್ತಿಕೆಗಳು
ಲೇ: ವಿದ್ಯಾ ಮತ್ತು ರಾಜಾರಾಮ್ ಶರ್ಮ
ಅನು: ಶಾಂತಾ ಸುಬ್ಬರಾವ್, ಎಚ್.ಎಲ್. ಸತೀಶ್ ಮತ್ತು ಅಂಬಿಕಾ ಆರ್.
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು.
ಪುಟಗಳು: 32 (ಪ್ರತಿ ಪುಸ್ತಕ)
ಬೆಲೆ ರು. 90=00 (ಪ್ರತಿ ಪುಸ್ತಕ)

ಹಕ್ಕಿಗಳು, ಪ್ರಕೃತಿ ಮತ್ತು ಸುತ್ತಲಿನ ಪರಿಸರದ ವ್ಯಾಪಾರಗಳನ್ನು ಸರಳ ಕನ್ನಡದಲ್ಲಿ ಹೇಳಿರುವ ಈ ಹತ್ತು ಪುಸ್ತಕಗಳು ಆಪ್ತ ಎನಿಸಿದ್ದು, ಮಕ್ಕಳಿಗೆ ಉಡುಗೊರೆ ನೀಡಲು ಬಹಳ ಸೂಕ್ತ ಎನಿಸಿವೆ.

ದೆಹಲಿಯ ವಿವಿಧ ಸ್ಥಳಗಳಲ್ಲಿರುವ ಉದ್ಯಾನವನ, ಅಪಾರ್ಟ್‌ಮೆಂಟ್, ಬೀದಿ ಬದಿಯ ಕಸದ ರಾಶಿ, ಕಲ್ಲಿನ ರಾಶಿ, ಗಿಡ ಮರ ಬಳ್ಳಿಗಳು, ಕೊಳ, ಕೊಳದ ಬದಿ, ಜೌಗು ಪ್ರದೇಶ, ಹೀಗೆ ವಿವಿಧ ಕಡೆಗಳಲ್ಲಿ ಹಕ್ಕಿ-ಪಕ್ಷಿಗಳು ಗೂಡು ಕಟ್ಟಿ, ಮೊಟ್ಟೆ ಇಟ್ಟು, ಮರಿ ಮಾಡಿ, ಸಾಕಿ ಸಲಹುವ ಘಟನೆಗಳನ್ನು ಕಥಾರೂಪದಲ್ಲಿ, ಸಂಭಾಷಣೆಯ ಮೂಲಕ, ಅಪರೂಪದ ಬಣ್ಣಬಣ್ಣದ ಛಾಯಾಚಿತ್ರಗಳ ಸಹಿತ ಹತ್ತು ಪುಸ್ತಕಗಳಲ್ಲಿ ವಿವರಿಸಲಾಗಿದೆ. ಈ ಘಟನೆಗಳು ನಡೆದ ಕಾಲ (2010 ರಿಂದ 2017ರವರೆಗಿನ ನಿರೀಕ್ಷಣೆಗಳು) ಮತ್ತು ಸ್ಥಳವನ್ನು ನಿಖರವಾಗಿ ಗುರುತಿಸಿರುವುದರಿಂದ ಪಕ್ಷಿಗಳ ಜೀವನ ಚಕ್ರದಲ್ಲಿ ಋತುಗಳು ಹೇಗೆ ಪ್ರಭಾವ ಬೀರುತ್ತವೆ, ಚಳಿ, ಮಳೆ, ಬಿಸಿಲು, ಆಕ್ರಮಣಕಾರಿ ಜೀವಿಗಳಿಂದ ಪಕ್ಷಿಗಳು ಹೇಗೆ ರಕ್ಷಿಸಿಕೊಳ್ಳುತ್ತವೆ, ಜನರ ಕಣ್ಣಿಗೆ ಕಾಣುವ ಸ್ಥಳದಲ್ಲಿದ್ದರೂ ಎದ್ದು ಕಾಣಿಸದಂತೆ ಗೂಡು ಕಟ್ಟುವ ಕೌಶಲ್ಯವನ್ನು, ಮರಿಗಳ ಲಾಲನೆ ಪಾಲನೆಯಲ್ಲಿ ಗಂಡು ಮತ್ತು ಹೆಣ್ಣು ಪಕ್ಷಿಗಳ ಸಹಭಾಗಿತ್ವವನ್ನು ಸೊಗಸಾಗಿ ಹಿಡಿದಿಡಲಾಗಿದೆ. ವಿದ್ಯಾ ಮತ್ತು ರಾಜಾರಾಮ್ ಇಂಗ್ಲಿಷ್‌ನಲ್ಲಿ ರಚಿಸಿದ 10 ಪುಸ್ತಕಗಳನ್ನು ಶಾಂತಾ ಸುಬ್ಬರಾವ್, ಎಚ್.ಎಲ್. ಸತೀಶ್ ಮತ್ತು ಅಂಬಿಕಾ ಆರ್. ಅವರು ಕನ್ನಡಕ್ಕೆ ತಂದಿದ್ದು ಮೂಲ ಕೃತಿಗಳ ವಿನ್ಯಾಸವನ್ನು ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. ಅನುಕೂಲದ ಆಶ್ರಯ, ಆ ನಿಗೂಢ ಮೊಟ್ಟೆಗಳು, ಯಾರು ಹೆಚ್ಚು ಅದೃಷ್ಟವಂತರು, ಮಾಲಿಕರು ಹಾಗೂ ಆಕ್ರಮಣಕಾರಿಗಳು, ಇಕ್ಕಟ್ಟಿಗೆ ಸಿಕ್ಕಿದ್ದ ಚಂದ್ರಮುಕುಟ, ಎಲ್ಲಿದ್ದೀಯಪ್ಪಾ ಕಾಪರ್‌ಸ್ಮಿತ್, ಒಳ್ಳೆಯ ಕೆಲಸ, ತೋರಿಸಿದ ದಾರಿ, ಮಣ್ಣಿನ ಅನುಬಂಧ, ವಿಚಿತ್ರ ಬೇಡಿಕೆ ಶೀರ್ಷಿಕೆಯ ಈ ಹತ್ತು ಪುಸ್ತಕಗಳಲ್ಲಿ ಹೊನ್ನಕ್ಕಿ (ಅರಿಶಿನ ಬುರುಡೆ), ಸೂರಕ್ಕಿ, ಮನಿಯಾಡಲು ಪಕ್ಷಿ, ಕೆಂಪು ಕಿಬ್ಬೊಟ್ಟೆ ಪಿಕಳಾರ, ಬೆಳ್ಗಣ್ಣ (ಮಲ್ಲಿಕಾಕ್ಷ), ಕಾಜಾಣ, ರಾಜಹಕ್ಕಿ (ಬಾಲದಂಡೆ ಹಕ್ಕಿ), ಬೂದುಕಾಗೆ, ಕೆಂಪು ಟಿಟ್ಟಿಭ, ಹಳದಿ ಟಿಟ್ಟಿಭ, ಗುಳುಮುಳುಕ, ಮರಕುಟಿಗ, ಗೊರವಂಕ, ಗಿಳಿ, ಕಂದು ತಲೆಯ ಕುಟ್ರ ಹಕ್ಕಿ, ಮಂಗಟ್ಟೆ, ಚಂದ್ರಮುಕುಟ, ಸಿಂಪಿಗ, ಕಳ್ಳಿಪೀರಾ, ಗುಬ್ಬಿ, ನೀರು ಹಕ್ಕಿ, ಮಡಿವಾಳ ಹಕ್ಕಿ, ಕಂಚುಕುಟಿಗ (ಕಾಪರ್‌ಸ್ಮಿತ್), ಸುವ್ವಿ ಪಕ್ಷಿ, ನವಿಲು, ಗುಲಾಬಿ ಕಬ್ಬಕ್ಕಿ, ಕೆಂಪು ಬಿಳಿ ಕಬ್ಬಕ್ಕಿ, ಕಂದು ಕಪ್ಪು ಕರಿತೋಕೆ, ಬಾನಾಡಿ, ಬೂದು ಬೆಳವ ಮೊದಲಾದ ಪಕ್ಷಿಗಳ ಜೀವನ ವಿಧಾನವನ್ನು, ಪಕ್ಷಿವೀಕ್ಷಣೆಯ ಲಾಭ-ನಷ್ಟಗಳನ್ನು, ಸರಳವಾದ ಭಾಷೆಯಲ್ಲಿ ವಿವರಿಸಲಾಗಿದೆ. ಕನ್ನಡದ ಹೆಸರುಗಳಿಗೆ ಕಂಸದಲ್ಲಿ ಇಂಗ್ಲಿಷ್ ಹೆಸರನ್ನು ಸೂಚಿಸಿದ್ದರೆ ಎರಡೂ ಭಾಷೆಯ ಪರಿಚಯ ಮಕ್ಕಳಿಗೆ ಆಗುತ್ತಿತ್ತು. ಕೆಲವು ಚಿತ್ರಗಳ ಕೆಳಗೆ ಈ ರೀತಿಯ ದ್ವಿಭಾಷಾ ಬಳಕೆ ಇದ್ದರೂ ಇದು ಇಂಥದ್ದೇ ಪಕ್ಷಿಯ ಹೆಸರು ಎಂದು ಥಟ್ಟನೇ ಹೊಳೆಯುವುದು ಕಷ್ಟ!

ಪುಟ್ಟ ಮಕ್ಕಳಿಗಾಗಿಯೇ ರಚಿತವಾಗಿರುವ ಪರಿಸರಕ್ಕೆ ಸಂಬಂಧಿಸಿದ ಈ ಹತ್ತು ಪುಸ್ತಕಗಳು, ಮಕ್ಕಳಿಗೆ, ಶಾಲೆಗಳಿಗೆ ಉಡುಗೊರೆಯಾಗಿ ನೀಡಲು ಬಹಳ ಸೂಕ್ತ ಎನಿಸಿವೆ.

ಬೆಚ್ಚಿಬೀಳಿಸುವ ಕಥೆಗಳು

» ಶ.ಹಾ.

ಕನ್ನಡ ಸಾರಸ್ವತ ಲೋಕವು ಹತ್ತು ವರ್ಷಗಳ ಹಿಂದೆ ಒಂದು ಬೆಚ್ಚಿ ಬೀಳಿಸುವ ಘಟನೆಗೆ ಸಾಕ್ಷಿಯಾಯಿತು; ಸಾಹಿತಿ, ಸಂಶೋಧಕರಾದ ಡಾ. ಕಲಬುರ್ಗಿಯವರನ್ನು ದುರುಳರು ಗುಂಡಿಟ್ಟು ಕೊಂದಂತಹ ಭೀಕರ ವಿದ್ಯಮಾನ ಅದು. ಆ ಕೊಲೆಯನ್ನು ಎಲ್ಲರೂ ಖಂಡಿಸಿದರು; ಬುದ್ಧ ಗಾಂಧಿ ಜನಿಸಿದ ನಾಡಿನಲ್ಲಿ ಹಿಂಸೆಗೆ ಸ್ಥಾನವಿಲ್ಲ ಎಂದು ಒಕ್ಕೊರಲಿನಿಂದ ಪ್ರತಿಭಟಿಸಿದರು. ಇಂತಹ ಭೀಕರ ವಿದ್ಯಮಾನಕ್ಕೆ, ನಮ್ಮ ನೆರೆಯ ರಾಜ್ಯದ ಲೇಖಕಿ ಕೆ.ಆರ್.ಮೀರಾ ಅವರು ಸ್ಪಂದಿಸಿದ್ದು ಒಂದು ಕಥೆ ಬರೆಯುವ ಮೂಲಕ : 'ಭಗವಾಂತೆ ಮರಣಂ' ಎಂಬ ಹೆಸರಿನ ಆ ಕಥೆಯಲ್ಲಿ ಡಾ. ಕಲಬುರ್ಗಿಯವರ ಕೊಲೆಯ ವಿದ್ಯಮಾನದ ಎಳೆಯಿದೆ. ಜತೆಗೆ, ಶಾಂತಿ ಸಮಾನತೆ ಸಾರಿದ ವಚನಗಳ ಬಳಕೆಯಿದೆ.

ಕೆ.ಆರ್.ಮೀರಾ ಅವರ ಈ ಕಥೆಯನ್ನು 'ಭಗವಂತನ ಸಾವು' ಎಂಬ ಹೆಸರಿನಲ್ಲಿ ವಿಕ್ರಂ ಕಾಂತಿಕೆರೆಯವರು ಅನುವಾದಿಸಿದ್ದಾರೆ; ಮಾತ್ರವಲ್ಲ, ಆ ಲೇಖಕಿಯ ಇನ್ನಷ್ಟು ಕಥೆಗಳನ್ನು ಅನುವಾದಿಸಿ, 'ಭಗವಂತನ ಸಾವು' ಎಂಬ ಕಥಾ ಸಂಕಲನದಲ್ಲಿ ಕಟ್ಟಿಕೊಟ್ಟಿದ್ದಾರೆ; ಅರ್ಥಪೂರ್ಣ ವಿನ್ಯಾಸದೊಂದಿಗೆ ಪುಸ್ತಕಗಳನ್ನು ಹೊರತರುವುದರಲ್ಲಿ ತೊಡಗಿಕೊಂಡಿರುವ ಬಹುರೂಪಿಯವರು ಈ ಕಥಾ ಸಂಕಲನವನ್ನು ಪ್ರಕಟಿಸಿದ್ದಾರೆ. ಈ ಸಂಕಲನದಲ್ಲಿ ಆರು ಕಥೆಗಳಿದ್ದು, ಎಲ್ಲವೂ ಕನ್ನಡದ ಓದುಗರಿಗೆ ತಾಜಾ ಓದಿನ ಅನುಭವ ನೀಡಬಲ್ಲವು; ಆ 'ತಾಜಾ' ಓದಿನ ನಡುವೆಯೇ, ಬೆಚ್ಚಿಬೀಳುವ ಅನುಭವ ಓದುಗನಿಗಾದರೆ, ಅದಕ್ಕೆ ಮೂಲ ಲೇಖಕಿಯೇ ಕಾರಣ!

ಭಗವಂತನ ಸಾವು
ಲೇ: ಕೆ.ಆರ್.ಮೀರಾ
ಅನು: ವಿಕ್ರಂ ಕಾಂತಿಕೆರೆ
ಪ್ರ: ಬಹುರೂಪಿ ಪ್ರಕಾಶನ
7019182729
ಬೆಲೆ ರು.150/-

ಅನುದಿನವೂ ಅಭಿಜ್ಞಾನ



ಅನುದಿನವೂ ಅಭಿಜ್ಞಾನ
ಲೇ: ಶುಭಶ್ರೀ ಪ್ರಸಾದ್
ಪ್ರ: ಐಡಿಯಲ್ ಪಬ್ಲಿಕೇಷನ್ಸ್ ಮಂಡ್ಯ
9448101147
ಬೆಲೆ ರು.150/-

ಶುಭಶ್ರೀ ಪ್ರಸಾದ್ ಅವರ ಹೊಸ ಕಥಾಸಂಕಲನ, 'ಅನುದಿನವೂ ಅಭಿಜ್ಞಾನ' ಹಲವು ಕಾರಣಗಳಿಂದಾಗಿ ಆಸಕ್ತಿ ಹುಟ್ಟಿಸುವ ಕೃತಿ. ವಿವಿಧ ಪ್ರಕಾರಗಳಲ್ಲಿ ನಿರಂತರವಾಗಿ ಸಾಹಿತ್ಯ ರಚಿಸುತ್ತಾ ಬಂದಿರುವ ಶುಭಶ್ರೀ ಪ್ರಸಾದ್ ಅವರು ತಮ್ಮ ವಿಭಿನ್ನ ಅನುಭವಗಳಿಗೆ ಕಥಾ ರೂಪವನ್ನು ನೀಡಿರುವ ಪರಿ ಗಮನ ಸೆಳೆಯುತ್ತದೆ. ಬ್ಯಾಂಕ್ ಒಂದರಲ್ಲಿ ವೃತ್ತಿ ನಿರ್ವಹಿಸುತ್ತಿರುವ ಲೇಖಕಿಗೆ, ಪ್ರತಿ ದಿನವೂ ಎದುರಾಗುವ ಗ್ರಾಹಕರ ಮುಖಾಮುಖಿಯೇ ಹೊಸ ಕಥೆಗಳಿಗೆ ಸ್ಫೂರ್ತಿ ನೀಡಿದರೆ ಅಚ್ಚರಿಯಿಲ್ಲ! ಈ ಕಥಾ ಸಂಕಲನದ ಬೆನ್ನುಡಿಯಲ್ಲಿ ಖ್ಯಾತ ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಇಲ್ಲಿನ ಕಥೆಗಳನ್ನು ಹೀಗೆ ಗುರುತಿಸಿದ್ದಾರೆ : ''ಕಥೆ, ಕವಿತೆ, ಪ್ರಬಂಧ, ಮುಕ್ತಕ, ಪ್ರವಾಸ ಕಥನ, ವಿಚಾರ ಸಾಹಿತ್ಯ ಹೀಗೆ ಅನೇಕ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಶುಭಶ್ರೀ ಪ್ರಸಾದ್ ಅವರದು ಬಹುಮುಖ ಆಸಕ್ತಿ. 'ಎಲ್ಲಿ ನನ್ನ ಕನಸಿಗೆ ಭೂಸ್ಪರ್ಶವಿಲ್ಲವೋ ಅಲ್ಲಿ ಮೊಳಕೆಯೊಡೆಯುವುದೇ ಬೀಜ' ಎಂಬ ತಾತ್ವಿಕ ಹಿನ್ನೆಲೆಯ ಶುಭಶ್ರೀಯವರಿಗೆ ವರ್ತಮಾನದ ಕಟುವಾಸ್ತವದ ಅರಿವಿರುವಂತೆಯೇ, ಭವಿಷ್ಯದ ಬಗ್ಗೆ ಭರವಸೆಯ ಕನಸಿದೆ. ಕಥೆ ಹೇಳುವುದು ಅವರಿಗೆ ಸಹಜವಾಗಿ ಸಿದ್ಧಿಸಿದೆ. ಅವರ ಮಾತಿನಲ್ಲೂ ಕಥೆ ಇರುತ್ತದೆ. ಈ ಸಂಕಲನದ ಅವರ ಕಥೆಗಳ ಜಗತ್ತು ಪ್ರಧಾನವಾಗಿ ಸ್ತ್ರೀಲೋಕ. ಬದುಕಿನ ಭಿನ್ನ ಸ್ತರಗಳ ಹೆಣ್ಣಿನ ಮನಸ್ಸಿನ ತಾಕಲಾಟಗಳನ್ನು ಅವರು ಇಲ್ಲಿ ಸೂಕ್ಷ್ಮವಾಗಿ ಅನಾವರಣಗೊಳಿಸಿದ್ದಾರೆ. ಪ್ರವೃತ್ತಿ ಮತ್ತು ಸಂಸ್ಕೃತಿ, ವ್ಯಕ್ತಿ ಮತ್ತು ಸಮಾಜ, ಅಧಿಕಾರ ಮತ್ತು ಸ್ವಾತಂತ್ರ್ಯಕ್ಕಾಗಿ ಹಂಬಲ – ಹೀಗೆ ಅನೇಕ ನೆಲೆಗಳ ಸಂಘರ್ಷ ಇಲ್ಲಿನ ಕಥೆಗಳ ರಚನಾ ವಿನ್ಯಾಸವನ್ನು ರೂಪಿಸಿದೆ. ದೈನಿಕ ವಿವರಗಳ ಮೂಲಕವೇ ಕಥೆಯನ್ನು ಕಟ್ಟುವ ಶುಭಶ್ರೀಯವರ ಕಥೆಗಳು ಸಹಜವಾಗಿ ನಮಗೆ ಆಪ್ತ ಓದಿನ ಅನುಭವ ನೀಡುತ್ತವೆ. ತನ್ನೊಳಗಿನ ಭಾವ ಜಗತ್ತು ಹಾಗೂ ಹೊರ ಜಗತ್ತಿನ ವಿಸ್ತಾರ ಜೀವನಾನುಭವ ಈ ಕಥೆಗಳ ಒಡಲಿನಲ್ಲಿದೆ.'' (ಬೆನ್ನುಡಿಯಲ್ಲಿ ನರಹಳ್ಳಿ ಬಾಲಸುಬ್ರಹ್ಮಣ್ಯ)

ಇಪ್ಪತ್ತನೆಯ ಶತಮಾನದ ತಲ್ಲಣಗಳು

» ಶಶಿ

ಹಿಂದಿಯ ಸಾಹಿತಿ ಮುನ್ಷಿ ಪ್ರೇಮ್‌ಚಂದ್ ಅವರು ರಚಿಸಿದ 43 ಹಿಂದಿ ಕಥೆಗಳ ಕನ್ನಡ ಅನುವಾದವನ್ನು ಹೊಂದಿರುವ 'ಮುನ್ಷಿ ಪ್ರೇಮ್ ಚಂದರ ಆಯ್ದ ಜನಪ್ರಿಯ ಕಥೆಗಳು' ತುಸು ದೊಡ್ಡ ಗಾತ್ರದ ಪುಸ್ತಕ. ಟಿ.ವಿ.ಅನ್ನಪೂರ್ಣಮ್ಮ ಅವರು ಇದನ್ನು ಅನುವಾದಿಸಿದ್ದಾರೆ. ಇಪ್ಪತ್ತನೆಯ ಶತಮಾನದಲ್ಲಿ ಪ್ರೇಮ್‌ಚಂದ್ ಅವರದ್ದು ಬಹು ದೊಡ್ಡ ಹೆಸರು; ಸಾಹಿತ್ಯ ಮತ್ತು ಚಲನಚಿತ್ರ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಪ್ರೇಮ್‌ಚಂದ್ ಅವರು, ತಮ್ಮ ಕಾದಂಬರಿ ಮತ್ತು ಕಥೆಗಳಲ್ಲಿ ಆಗಿನ ದಿನಗಳ ಸನ್ನಿವೇಶವನ್ನು, ವಾತಾವರಣವನ್ನು ಕಣ್ಣಿಗೆ ಕಟ್ಟುವಂತೆ ಅಳವಡಿಸಿದ್ದಾರೆ. ಅವರ 'ಗೋದಾನ್' ಕಾದಂಬರಿ ಸಾಕಷ್ಟು ಪ್ರಸಿದ್ಧ.

ಹಿಂದಿಯ ಖ್ಯಾತ ಸಾಹಿತಿ ಮತ್ತು ಇಪ್ಪತ್ತನೆಯ ಶತಮಾನದ ಉತ್ತರಭಾರತದ ಚಿತ್ರಣವನ್ನು ತಮ್ಮ ಸಾಹಿತ್ಯದಲ್ಲಿ ಕಟ್ಟಿಕೊಟ್ಟಿರುವ ಮುನ್ಷಿ ಪ್ರೇಮ್‌ಚಂದ್ ಅವರ ನಲವತ್ತಮೂರು ಕಥೆಗಳ ಕನ್ನಡ ಅನುವಾದ ಈಗ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ.

ಸುಮಾರು 600 ಪುಟಗಳ 'ಮುನ್ಷಿ ಪ್ರೇಮ್ ಚಂದ್'ರ ಆಯ್ದ ಜನಪ್ರಿಯ ಕಥೆಗಳು' ಈಗ ಪ್ರಕಟಗೊಂಡಿದ್ದು, ಇದು ಮುದ್ರಣ ರೂಪ ಪಡೆಯುವಲ್ಲಿ ಕುತೂಹಲಕಾರಿ ಕಥನವಿದೆ. ಈ ಕಥೆಗಳನ್ನು ಅಪಾರ ತಾಳ್ಮೆಯಿಂದ ಅನುವಾದಿಸಿದ ಹಿಂದಿ ಪ್ರಾಧ್ಯಾಪಕರಾದ ಟಿ.ವಿ.ಅನ್ನಪೂರ್ಣಮ್ಮ (1931–2005) ಅವರು ಈಗಿಲ್ಲ. ಅವರು ಸ್ವರ್ಗಸ್ಥರಾಗಿ 20 ವರ್ಷಗಳ ನಂತರ ಈ ಪುಸ್ತಕ ಬೆಳಕು ಕಾಣಲು, ಅವರ ಔರಸ ಪುತ್ರಿ ಟಿ.ವಿ.ಉಷಾರಾಣಿಯವರು ಕಾರಣ. ಸ್ವತಃ ಕಥೆಗಾರ್ತಿಯಾಗಿರುವ ಟಿ.ವಿ.ಉಷಾರಾಣಿಯವರು, ಈ ಅನುವಾದಿತ ಕಥೆಗಳ ಮೌಲ್ಯವನ್ನು ಗುರುತಿಸಿ, ಅನುವಾದಿತ ಹಸ್ತಪ್ರತಿಯನ್ನು ಸೂಕ್ತವಾಗಿ ಸಂಪಾದಿಸಿ, ಈ ಬೃಹತ್ ಗ್ರಂಥವನ್ನು ಪ್ರಕಟಿಸಿ, ಕನ್ನಡಿಗರಿಗೆ ನೀಡಿದ್ದಾರೆ.

ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಅಧ್ಯಾಪಕಿಯಾಗಿದ್ದ ಟಿ.ವಿ.ಅನ್ನಪೂರ್ಣಮ್ಮ ಅವರು, ಹಿಂದಿಯಿಂದ ಕನ್ನಡಕ್ಕೆ ಅನುವಾದ ಮಾಡುವ ಕಾರ್ಯದಲ್ಲಿ ಗಂಭೀರವಾಗಿ ತೊಡಗಿಕೊಂಡಿದ್ದರು. ಅವರ ಪತಿ, ಕೋಲಾರ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ರಾಮಕೃಷ್ಣ ಉಡುಪರ ಪ್ರೋತ್ಸಾಹದಿಂದ 'ಪುಸ್ತಕ ಪ್ರಪಂಚ'ಕ್ಕಾಗಿ ಲೇಖನಗಳನ್ನು ಬರೆಯುತ್ತಿದ್ದರು. ಉಡುಪರವರು ರಚಿಸಿದ 'ಯೋಗ ಮತ್ತು ದೀರ್ಘಾಯುಷ್ಯದ ರಹಸ್ಯ' ಪುಸ್ತಕವನ್ನು ಹಿಂದಿಗೆ ಅನುವಾದಿಸಿದ್ದರು. 'ಶಾಂಸುಂದರ್ ದಾಸ್' ಎಂಬ ಕೃತಿಯನ್ನು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿದ್ದು, ಇದನ್ನು ಕೇಂದ್ರ ಸಾಹಿತ್ಯ ಅಕಾಡಮಿ ಪ್ರಕಟಿಸಿದೆ.

ಟಿ.ವಿ.ಅನ್ನಪೂರ್ಣಮ್ಮ ಅವರಿಗೆ ಹಿಂದಿ ಮತ್ತು ಕನ್ನಡ ಎರಡರಲ್ಲೂ ಪ್ರಭುತ್ವವಿತ್ತು. ಈ ಸಂಕಲನದಲ್ಲಿ ಅವರು ಅನುವಾದಿಸಿರುವ ಕಥೆಗಳನ್ನು ಓದಿದಾಗ, ಸಹಜವಾದ ಮತ್ತು ಸುಲಲಿತವಾಗಿ ಓದಿಸಿಕೊಂಡುಹೋಗುವ ಅನುವಾದ ಶೈಲಿಯು ಗಮನ ಸೆಳೆಯುತ್ತದೆ. ಪ್ರೇಮ್‌ಚಂದ್ ಅವರು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿದ್ದ ಸಾಹಿತಿ; ಅವರ ಕೃತಿಗಳಲ್ಲಿ ಬ್ರಿಟಿಷರ ವಿರುದ್ಧ ನಡೆದ ಚಳವಳಿಯ ವಿವರಗಳು ಸಹ ಅಲ್ಲಲ್ಲಿ ಬರುತ್ತವೆ; ಅಂತಹ ವಿವರಗಳನ್ನು ಹೊಂದಿರುವ ಕೆಲವು ಕಥೆಗಳನ್ನು ಸಹ ಟಿ.ವಿ.ಅನ್ನಪೂರ್ಣಮ್ಮ ಅವರು ಅನುವಾದಿಸಿದ್ದು, ಅವು ಈ ಸಂಕಲನದಲ್ಲಿವೆ. ಇಪ್ಪತ್ತನೆಯ ಶತಮಾನದ ಉತ್ತರಭಾರತದ ಸಾಮಾಜಿಕ ಸನ್ನಿವೇಶ ಮತ್ತು ತಲ್ಲಣಗಳ ಒಂದು ನೋಟವನ್ನು ಪಡೆಯಲು ಇಲ್ಲಿನ 43 ಕಥೆಗಳನ್ನು ಓದಬಹುದು.



ಮುನ್ಷಿ ಪ್ರೇಮ್‌ಚಂದ್ರ ಆಯ್ದ ಜನಪ್ರಿಯ ಕಥೆಗಳು
ಮೂಲ: ಪ್ರೇಮ್‌ಚಂದ್
ಅನು: ಟಿ.ವಿ.ಅನ್ನಪೂರ್ಣಮ್ಮ
ಪ್ರ: ಟಿ.ಆರ್. ಉಷಾರಾಣಿ, ಬೆಂಗಳೂರು
ಮೊ: 9845261502
ಪುಟ 608
ಬೆಲೆ ರು.600/-

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಇಳಂಗೋವನ್
(ಆಧ್ಯಾತ್ಮಿಕ ಪಯಣ)
ಲೇ: ಜೋಗಿ
ಪ್ರ: ಸಾವಣ್ಣ ಪ್ರಕಾಶನ, ಬೆಂಗಳೂರು
ಬೆಲೆ : ರೂ 360/-



2
ದಕ್ಕಿದ್ದು- ಮಿಕ್ಕಿದ್ದು
(ಕಥೆಯೊಳಗಿನ ಗಾಥೆ)
ಲೇ: ಪಿ. ಶೇಷಾದ್ರಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 250/-



3
ಆನೆ ಡಾಕ್ಟರ್ ಮತ್ತು ಇತರ ಕಥೆಗಳು
(ತಮಿಳಿನ ಕಥೆಗಳು)
ಲೇ: ಜೆ.ಯು. ಮೋಹನ್
ಅನು : ಎಸ್. ನಾರಾಯಣನ್
ಪ್ರ: ಬಹುವಚನ, ಬೆಂಗಳೂರು
ಬೆಲೆ : ರೂ 180/-



4
ಹಮ್ಮಾ ಹೂ
(ಕಳಸದ ಅವರ ಮೊದಲ ಕಾದಂಬರಿ)
ಲೇ: ಶ್ರೀದೇವಿ ಕಳಸದ
ಪ್ರ: ವೀರಲೋಕ, ಬೆಂಗಳೂರು
ಬೆಲೆ : ರೂ 185/-



5
ಕನಸುಗಳೇ ಮರಳಿ ಬನ್ನಿ
(ಕಥೆಗಳು)
ಲೇ: ನರೇಂದ್ರ ಪೈ
ಪ್ರ: ಅನು ಪ್ರಕಾಶನ, ಬೆಳ್ಮಣ್ಣು
ಬೆಲೆ : ರೂ 130/-

6
ಪುಟಗಳ ನಡುವಣ ನವಿಲುಗರಿ
(ಅಭಿಜಾತ ಭಾರತೀಯ ಕಥಾಕಲಾಪ)
ಲೇ: ಶತಾವಧಾನಿ ಡಾ। ಆರ್, ಗಣೇಶ್
ಪ್ರ: ವಸಂತ ಪ್ರಕಾಶನ, ಬೆಂಗಳೂರು
ಬೆಲೆ : ರೂ 240/-



7
ಮುಚ್ಚಿಟ್ಟ ಕರ್ನಾಟಕ ಚರಿತ್ರೆ
(ಕನ್ನಡ ಅಸ್ಮಿತೆಯ ಪುನರುತ್ಥಾನದ ಇತಿಹಾಸ)
ಲೇ: ರಾಕೇಶ್ ಶೆಟ್ಟಿ
ಪ್ರ: ನಿಲುಮೆ ಪ್ರಕಾಶನ, ಬೆಂಗಳೂರು
ಬೆಲೆ : ರೂ 350/-



8
ಭಗವಂತನ ಸಾವು
(ಮಲಯಾಳಂ ಕಥೆಗಳ ಕನ್ನಡಾನುವಾದ)
ಲೇ: ಕೆ.ಆರ್. ಮೀರಾ
ಅನು : ವಿಕ್ರಂ ಕಾಂತಿಕೆರೆ
ಪ್ರ: ಬಹುರೂಪಿ, ಬೆಂಗಳೂರು
ಬೆಲೆ : ರೂ 150/-



9
ಮತ್ತೆ ಮೇಲೇಳುತ್ತೇನೆ
(ಬದುಕಿನ ಪುಟಗಳ ಸಂಚಯ)
ಲೇ: ವಂಗಾರಿ ಮಾಥಾಯ್
ಅನು : ಎಂ.ಆರ್. ಕಮಲ
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು
ಬೆಲೆ : ರೂ 325/-



10
ರೇಷ್ಮೆ ಬಟ್ಟೆ
(ಒನಪು ಬಟ್ಟೆ, ಒರಟು ದಾರಿ- ಕಾದಂಬರಿ)
ಲೇ: ವಸುಧೇಂದ್ರ
ಪ್ರ: ಛಂದ ಪುಸ್ತಕ, ಬೆಂಗಳೂರು
ಬೆಲೆ : ರೂ 450/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಭಾವದಲೆಗಳ ಮೇಲೆ ತೇಲಿ ಬಂದ ನೆನಪುಗಳು

ಒಡನಾಟ

» ಶ್ರೀಧರಮೂರ್ತಿ ಎನ್.ಎಸ್.

ಸದಾ ಉತ್ಸಾಹಿಯಾಗಿದ್ದ ಎಂ.ಎನ್.ವ್ಯಾಸರಾಯರು ಎದುರಿಗೆ ಸಿಕ್ಕಾಗ ಎಷ್ಟು ಉತ್ಸಾಹದಿಂದ ಮಾತನಾಡುತ್ತಿದ್ದರೂ ಅಷ್ಟೇ ಉತ್ಸಾಹದಿಂದ ವೇದಿಕೆ ಮೇಲೆ ಫೋನ್‌ನಲ್ಲಿ ಕೊನೆಗೆ ಆಕಾಶವಾಣಿ ಸಂದರ್ಶನಗಳಲ್ಲಿಯೂ ಮಾತನಾಡಬಲ್ಲವರಾಗಿದ್ದರು. ಒಂದು ರೀತಿಯಲ್ಲಿ ಅವರು ಅಪ್ಪಟ ಜೀವನ ಪ್ರೀತಿಯ ವ್ಯಕ್ತಿ. ಎದುರಿಗೆ ಸಿಕ್ಕಾಗಲಂತೂ ಎಷ್ಟು ಹೊತ್ತು ಕಳೆದರೂ ಇನ್ನೂ ಇರಬೇಕು ಎನ್ನುವ ತೀವ್ರತೆ ಹುಟ್ಟಿಸುವಂತಹ ಉತ್ಕಟ ಪ್ರೀತಿ ಅವರದು. ಬರಹಗಾರರಾಗಿ ಸದಾ ಡೆಡ್‌ಲೈನ್‌ಗಿಂತಲೂ ಮೊದಲೇ ಬರಹಗಳನ್ನು ತಲುಪಿಸಿ ಬಿಡುತ್ತಿದ್ದರು.

ನಾನು ಆರ್.ಎನ್.ಜಯಗೋಪಾಲ್ ಅವರ ಚಿತ್ರಗೀತೆಗಳ ಸಂಕಲನವನ್ನು ತಂದ ಮೇಲೆ ಅವರಿಗಿದ್ದ ಬಹಳ ದೊಡ್ಡ ಆಸೆ ನಾನು ಅವರ ಚಿತ್ರಗೀತೆಗಳ ಸಂಕಲನವನ್ನು ತರಬೇಕು ಎನ್ನುವುದು. ಇದಕ್ಕಾಗಿ ಸಾಕಷ್ಟು ಸಲ ಅವರ ಮನೆಯಲ್ಲಿಯೇ ಸೇರಿ ಪಟ್ಟಿ ಮಾಡಿ ಹಾಡುಗಳನ್ನು ಹುಡುಕಿ ಸಂಗ್ರಹ ಮಾಡಿದ್ದೂ ಆಗಿತ್ತು. ನನ್ನ ಸಮಗ್ರ ವಿಶ್ಲೇಷಣೆ ಕೂಡ ಬಹು ಮಟ್ಟಿಗೆ ಸಿದ್ಧವಾಗಿತ್ತು. ಇನ್ನೇನು ಸಂಕಲನ ಬರಬೇಕು ಎನ್ನುವಷ್ಟರಲ್ಲಿ ಅವರು ಇದ್ದಕ್ಕಿದ್ದ ಹಾಗೆ ಇಹಬದುಕಿಗೆ ವಿದಾಯ ಹೇಳಿಬಿಟ್ಟರು. ವರ್ಷಗಟ್ಟಲೆ ಶ್ರಮ ಪಟ್ಟು ಸಿದ್ಧಪಡಿಸಿದ್ದ ಹಾಡುಗಳ ಸಂಗ್ರಹ ಕೊನೆ ಮುಟ್ಟದೆ ಹೋಯಿತು ಎನ್ನುವ ಕೊರಗು ನನ್ನಲ್ಲಿ ಶಾಶ್ವತವಾಗಿ ಉಳಿದು ಕೊಂಡು ಬಿಟ್ಟಿತು.

ಎಂ.ಎನ್.ವ್ಯಾಸರಾಯರು ಹುಟ್ಟಿದ್ದು 1945ರ ಜನವರಿ 27ರಂದು. ತಂದೆ ನರಸಿಂಗ ರಾವ್ ಮತ್ತು ತಾಯಿ ಸುಶೀಲಮ್ಮ, ವ್ಯಾಸರಾಯರು ಬಾಲ್ಯದಲ್ಲಿ ಉತ್ತಮ ಕ್ರೀಡಾಪಟುವಾಗಿದ್ದರು. ಪ್ರೌಢಶಾಲೆಯಲ್ಲಿ ಓದುವಾಗಲೇ ಅಣಕುಗಾರ ಎಂದು ಹೆಸರು ಪಡೆದರು. ಶಾಲಾ ಕಾಲೇಜುಗಳು ಮಾತ್ರವಲ್ಲದೆ ಅನೇಕ ಸಂಘ-ಸಂಸ್ಥೆಗಳು ಕೂಡ ಅವರ ಮಿಮಿಕ್ರಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ಮಗು ಅಳುವುದು, ಬೆಕ್ಕು ಕೂಗುವುದು, ನಾಯಿ ಬೊಗಳುವುದು ಇವನ್ನೆಲ್ಲಾ ಎಷ್ಟು ಸಹಜವಾಗಿ ಮಿಮಿಕ್ರಿ ಮಾಡುತ್ತಿದ್ದರೆಂದರೆ ದೂರದಿಂದ ಕೇಳಿದರೆ ವ್ಯತ್ಯಾಸವೇ ಗೊತ್ತಾಗುತ್ತಿರಲಿಲ್ಲ. ಎರಡು ಗಂಟೆಯ ಹಿರಣ್ಣಯ್ಯನವರ 'ಲಂಚಾವತಾರ' ನಾಟಕವನ್ನು ಏಕಪಾತ್ರಾಭಿನಯ ಮಾಡುವಷ್ಟು ಪರಿಣತಿಯನ್ನು ಪಡೆದಿದ್ದರು. ಉತ್ತಮ ಸ್ಕೌಟ್ ಕೂಡ ಆಗಿದ್ದರು. ವಾರ್ಷಿಕ ಕ್ರೀಡಾಕೂಟದಲ್ಲಿ ನಾಲ್ಕೈದು ಬಹುಮಾನಗಳು ಅವರಿಗೆ ಕಟ್ಟಿಟ್ಟ ಬುತ್ತಿ.

ಇಷ್ಟೆಲ್ಲಾ ಬಹಿರಂಗ ಮುಖಗಳನ್ನು ಹೊಂದಿದ್ದರೂ ವ್ಯಾಸರಾಯರು ಅಂತರಂಗದಲ್ಲಿ ಅಪ್ಪಟ ಕವಿಯಾಗಿದ್ದರು. ಹೆತ್ತವರಿಗೆ ಮಗ ಕವಿಯಾಗುವುದು ಇಷ್ಟವಿರಲಿಲ್ಲ. ಹೀಗಾಗಿ ಬರಹ ಕದ್ದು ಮುಚ್ಚಿಯೇ ಸಾಗಬೇಕಾಯಿತು. ಪ್ರಜಾವಾಣಿ ಪತ್ರಿಕೆಯಲ್ಲಿ ಕವಿತೆ ಪ್ರಕಟವಾದಾಗ ಮನೆಯವರು ಹೆಮ್ಮೆಪಟ್ಟರು. ಮುಂದೆ ಬಹುಬೇಗ ಎಲ್ಲಾ ಪತ್ರಿಕೆಗಳಲ್ಲಿಯೂ ಅವರ ಕವಿತೆಗಳು ಅಚ್ಚಾಗಲಾರಂಭಿಸಿದವು.

ಐನೂರಕ್ಕೂ ಹೆಚ್ಚು ಕವಿತೆಗಳು

1984ರಲ್ಲಿ ಜಿ.ಎಸ್.ಶಿವರುದ್ರಪ್ಪನವರ ಮುನ್ನುಡಿ ಮತ್ತು ಗೋಪಾಲಕೃಷ್ಣ ಅಡಿಗರ ಬೆನ್ನುಡಿಯೊಂದಿಗೆ ಅವರ ಮೊದಲ ಕವನ ಸಂಕಲನ 'ಬೆಳ್ಳಿ ಮೂಡುವ ಮುನ್ನ' ಪ್ರಕಟವಾಯಿತು. ಅಲ್ಲಿಂದ ಅವರು ನಿರಂತರವಾಗಿ ಕವಿತೆಗಳನ್ನು ಬರೆಯುತ್ತಾ ಬಂದರೂ ಇನ್ನೊಂದು ಕವನ ಸಂಕಲನ ತರುವ ಕುರಿತು ಯೋಚಿಸಲೇ ಇಲ್ಲ. ಅವರೇ ನನ್ನ ಜೊತೆ ಒಮ್ಮೆ ಹೇಳಿದ ಹಾಗೆ 'ನಮ್ಮನ್ನು ಈ ಕಾವ್ಯಲೋಕದ ಮಡಿವಂತರು ಒಪ್ಪುವುದಿಲ್ಲ' ಅವರ ಕವಿತೆಗಳಲ್ಲಿ ನವ್ಯದ ರೂಪಕತೆಯಿಂದ ಹಿಡಿದು ದಲಿತ-ಬಂಡಾಯದ ಸಾಮಾಜಿಕತೆ, ನವ್ಯೋತ್ತರದ ಪ್ರಯೋಗಶೀಲತೆ ಎಲ್ಲವೂ ಇದೆ. ನನಗೆ ಗೊತ್ತಿದ್ದಂತೆ ಅವರು ಐದು ನೂರಕ್ಕೂ ಹೆಚ್ಚು ಕವಿತೆಗಳನ್ನು ಬರೆದಿದ್ದಾರೆ. ಇನ್ನೊಂದಿಷ್ಟು ತಿದ್ದೋಣ, ಪರಿಷ್ಕರಿಸೋಣ ಎಂದು ಮುಂದೂಡುತ್ತಲೇ ಬಂದರು. ಕೊನೆಗೆ ಕಗ್ಗರೆ ಪ್ರಕಾಶ್ ಮತ್ತು ಶ್ರೀಧರ ಬನವಾಸಿ ಸಂಪಾದಕತ್ವದಲ್ಲಿ ಅವರ ಸಮಗ್ರ ಕಾವ್ಯ 'ಅಗ್ನಿಶಿಖೆ' ಮರಣೋತ್ತರವಾಗಿ ಬಂದಿತು. ಇದರಲ್ಲಿ ಅನುವಾದಿತ ಕವಿತೆಗಳೂ ಕೂಡ ಇವೆ. ಅವರು ಒಟ್ಟು ಹನ್ನೆರಡು ಭಾಷೆಗಳಿಂದ ಕನ್ನಡಕ್ಕೆ ಕವಿತೆಗಳನ್ನು ಅನುವಾದಿಸಿದ್ದಾರೆ ಎನ್ನುವುದು ಇನ್ನೊಂದು ಅಚ್ಚರಿ.

ಎಂ.ಎನ್.ವ್ಯಾಸರಾಯರ ಸಣ್ಣಕಥೆಗಳ ವೈವಿಧ್ಯ ಗಮನಿಸಿದಾಗ, ಅವರಿಗೆ ಕನ್ನಡ ಸಾಹಿತ್ಯ ಲೋಕದಲ್ಲಿ ದೊರಕಬೇಕಾದ ಮಹತ್ವ ದೊರಕಲಿಲ್ಲವೆಂದೇ ಹೇಳಬೇಕು.

ಎಂ.ಎನ್.ವ್ಯಾಸರಾಯರು ಕತೆಗಳನ್ನು ಬರೆಯಲು ಆರಂಭಿಸಿದ್ದು 1970ರ ದಶಕದ ಕೊನೆಯಲ್ಲಿ. 'ಮಳೆಯಲ್ಲಿ ನೆನೆದ ಮರಗಳು' ಅವರ ಮೊದಲ ಸಂಕಲನ. ಇದಕ್ಕೆ ರಾಜ್ಯ ಸಾಹಿತ್ಯ ಅಕಾಡಮಿ ಪುರಸ್ಕಾರ ಲಭಿಸಿತು. ಮುಂದೆ ಅವರು ನವಿಲೆ ನವಿಲೆ ಮಳೆ ಬಂದಾಗೆಲ್ಲಿದ್ದೆ ನಿಂತ ನೀರುಗಳಲ್ಲಿ ಉತ್ತರ ಮುಖಿ ಹೀಗೆ ಮೂರು ಕಥಾಸಂಕಲನಗಳನ್ನು ತಂದಿದ್ದಾರೆ. ಅವರ ಕೊನೆಯ ಕತೆ ಟಿಕ್ ಟಿಕ್ ಟಿಕ್ ಕೈಕೊಟ್ಟ ಗಡಿಯಾರ ಸೇರಿದಂತೆ ಅವರು ಬರೆದಿದ್ದು ಒಟ್ಟು 33 ಕತೆಗಳನ್ನು. ಅವರು ಅನುಭವನ್ನು ಶೋಧಿಸುವ ವಿಧಾನವೇ ಕಥೆಯ ಸಂರಚನೆಯನ್ನು ನಿರ್ಧರಿಸುತ್ತದೆ. ಅವರ ಕಥೆಗಳ ಕೇಂದ್ರ, ಪಾತ್ರಗಳ ಆತ್ಮ ನಿರೀಕ್ಷಣೆಯೇ ಕಥನದ ಸ್ವರೂಪ. ಅವರ ಕಥನದ ವೈವಿಧ್ಯ ಗಮನಿಸಿದಾಗ ಎಸ್.ದಿವಾಕರ್ ಗುರುತಿಸಿದಂತೆ, ಅವರಿಗೆ ದೊರಕ ಬೇಕಾದ ಮಹತ್ವ ದೊರಕಲಿಲ್ಲವೆಂದೇ ಹೇಳಬೇಕು.ಅವರ ಸಮಗ್ರ ಕಥೆಗಳ ಸಂಕಲನ ಪುಷ್ಪಗಂಧಿ ಕೂಡ ಮರಣೋತ್ತರವಾಗಿಯೇ ಪ್ರಕಟವಾಯಿತು. ಇದಲ್ಲದೆ ಸ್ಕಾಟ್ ಡಬಲ ಎಕ್ಸ್, ಭುವನ ಗಿರಿ, ನಿರೋಶಾ-1, ನಿರೋಶಾ-2 ಮತ್ತು ನದಿಮೂಲ ಕಾದಂಬರಿಗಳನ್ನೂ ವ್ಯಾಸರಾಯರು ಬರೆದಿದ್ದಾರೆ. ನಾಲ್ಕು ನಾಟಕಗಳನ್ನೂ ಕೂಡ ಅವರು ರಚಿಸಿದ್ದಾರೆ.

ಬ್ಯಾಂಕ್ ಹಿನ್ನೆಲೆಯ ಸಾಹಿತಿ

ಎಂ.ಎನ್.ವ್ಯಾಸರಾಯರು ಕನ್ನಡ ಸ್ನಾತಕೋತ್ತರ ಪದವಿಗಾಗಿ ಸಂಜೆ ಕಾಲೇಜಿನಲ್ಲಿ ಓದುತ್ತಿದ್ದಾಗ ಅವರ ಸಹಪಾಠಿಯಾಗಿದ್ದವರು ಪತ್ರಕರ್ತೆ ಡಾ.ವಿಜಯಾ. ಈ ವೇಳೆಗಾಗಲೇ ವ್ಯಾಸರಾಯರು ಯುಕೋ ಬ್ಯಾಂಕ್ ಉದ್ಯೋಗಿಯಾಗಿದ್ದರು. 34 ವರ್ಷ ಅಲ್ಲಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದರು. ಪುಟ್ಟಣ್ಣ ಕಣಗಾಲ್ ಅವರಿಗೆ ಬ್ಯಾಂಕ್ ಹಿನ್ನೆಲೆಯ ಗೀತರಚನೆಕಾರರು ಬೇಕು ಎಂದಾಗ ವಿಜಯಾ, ವ್ಯಾಸರಾಯರ ಹೆಸರನ್ನು ಸೂಚಿಸಿದರು. 'ಶುಭಮಂಗಳ' ಚಿತ್ರಕ್ಕೆ ಬರೆದ 'ಸೂರ್ಯಂಗೂ ಚಂದ್ರಗೂ' ಮತ್ತು 'ನಾಲ್ಕೊಂದ್ಲೆ ನಾಕು' ಎರಡೂ ಗೀತೆಗಳು ಸೂಪರ ಹಿಟ್ ಆಗುವುದರೊಂದಿಗೆ ಗೀತರಚನೆಕಾರನ ಬದುಕು ಆರಂಭವಾಯಿತು. ನೀನೆ ನನ್ನ ಕಾವ್ಯ ಕನ್ನಿಕೆ(ದೀಪ), ನಗು ನಗುತಿರುವ ಮೊಗದಲಿ(ದೀಪ), ಯುಗ ಯುಗಗಳೇ ಸಾಗಲಿ(ಹೃದಯಗೀತೆ) ಚಂದ ಚಂದ (ಮಾನಸ ಸರೋವರ) ಮಧುರ ಈ ಕ್ಷಣ(ಒಡ ಹುಟ್ಟಿದವರು) ಬಾ ಬಾರೋ ರಸಿಕ(ರಕ್ತ ಕಣ್ಣೀರು) ಹೀಗೆ ಐದು ನೂರಕ್ಕೂ ಹೆಚ್ಚು ಚಿತ್ರಗೀತೆಗಳನ್ನು ಬರೆದರು. ಗೀತರಚನಾ ಪರಂಪರೆಗೆ ತಮ್ಮದೇ ಆದ ಅನನ್ಯತೆಯನ್ನು ನೀಡಿದರು.

ಇದರ ಜೊತೆಗೆ ಸುಗುಮ ಸಂಗೀತ ಕ್ಷೇತ್ರದಲ್ಲಿಯೂ ಮನ್ನಣೆ ಪಡೆದರು. ಹತ್ತು ಪ್ರಮುಖ ಧ್ವನಿಸುರುಳಿಗಳ ಜೊತೆಗೆ ಇಪ್ಪತಕ್ಕೂ ಹೆಚ್ಚು ಧ್ವನಿಸುರಳಿಗಳಲ್ಲಿ ಅವರ ಭಾವಗೀತೆಗಳು ಸೇರಿವೆ. ಅವರ ಭಾವಗೀತೆಗಳ ಲೆಕ್ಕವೂ ನಾಲ್ಕು ನೂರನ್ನು ದಾಟುತ್ತದೆ. ಆಸರೆಯಿಂದ ಆರಂಭಿಸಿ ಮುನ್ನೂರಕ್ಕೂ ಹೆಚ್ಚು ಮೆಗಾ ಸೀರಿಯಲ್‌ಗಳಿಗೆ ಅವರು ಶೀರ್ಷಿಕೆ ಗೀತೆಗಳನ್ನು ರಚಿಸಿದ್ದಾರೆ. ಅವರು ಉತ್ತಮ ಸಂಭಾಷಣೆಕಾರರೂ ಹೌದು. ಕೆ.ಎಸ್.ನರಸಿಂಹ ಸ್ವಾಮಿಯವರ ಕಾವ್ಯಲೋಕವನ್ನು ಟಿ.ಎಸ್.ನಾಗಾಭರಣ ಬೆಳ್ಳಿ ತೆರೆಗೆ ತಂದಾಗ ಅದಕ್ಕೆ ಸಂಭಾಷಣೆಯನ್ನು ಬರೆದವರು ಎಂ.ಎನ್.ವ್ಯಾಸರಾಯರೇ.

ಸದಾ ಚಟುವಟಿಕೆಯಿಂದಿದ್ದ ವ್ಯಾಸರಾಯರನ್ನು ಚಿತ್ರಗೀತೆಗಳ ಸಂಕಲನದ ಬಗ್ಗೆ ಮತ್ತು ಅವರ ನೆನಪುಗಳನ್ನು ದಾಖಲಿಸುವ ಬಗ್ಗೆ ಸದಾ ಪೀಡಿಸುತ್ತಿದ್ದೆ. ವಿವಿಧ ಭಾರತಿಗೆ ಮತ್ತು ಐಸಿರಿ ವಾಹಿನಿಗೆ ಮಾಡಿದ ಸಂದರ್ಶನಗಳು ಇದರ ಭಾಗವಾಗಿದ್ದವು. ಇದನ್ನು ಮುಗಿಸಿ ನಾನು ಕುಟುಂಬ ಪ್ರವಾಸ ಹೊರಟೆ. ಮರಳಿ ಬಂದ ನಂತರ ಮುಂದುವರೆಸುವ ಕುರಿತು ಮಾತನಾಡಿಕೊಂಡಿದ್ದವು. 2018ರ ಜುಲೈ 15 ನಾನು ಬಹುದೂರದ ತುಳಜಾಪುರದಲ್ಲಿದ್ದೆ. ಆಗ ವ್ಯಾಸರಾಯರು ನಮ್ಮನ್ನು ಬಿಟ್ಟು ಹೋದ ಸುದ್ದಿ ತಿಳಿಯಿತು. ಅವರ ಮಡದಿ ಸಾವಿತ್ರಿ ಮತ್ತು ಮಕ್ಕಳಾದ ಮನು, ಚೈತ್ರ ಅವರ ನೆನಪುಗಳನ್ನು ಉಳಿಸುವ ಕೆಲಸವನ್ನು ಮಾಡುತ್ತಿದ್ದಾರೆ.



» ಮಹಾಂತೇಶ ಮಾಗನೂರ

ಆಗ ಈಗ

ಅಂದಿನ ಮಕ್ಕಳು
ಬಯಲಿನಲ್ಲಿ ಆಡಿದರು
ಚಿನ್ನಿ ದಾಂಡು ಲಗೋರಿ
ಈಗ ಸುಮ್ಮನಿರಲು
ಎಲ್ಲದಕ್ಕೂ ಮೊಬೈಲ್ ತಗೋರಿ

ವಿಷ ಗಾಳಿ

ಉಸಿರಾಟಕ್ಕೂ
ಸಂಚಕಾರ
ತಪ್ಪುತ್ತಿದೆ
ಜೀವನದ ಹಳಿ
ಮಾನವಾಗತ್ಯ
ಆಮ್ಲಜನಕವೂ
ದೆಹಲಿಯಲ್ಲಿ ಹುಳಿ

ಕಹಿ ಸತ್ಯ

ಮಗ ಮಗಳು ಕೆಳಮನೆಗೆ
ತಂದೆ ತಾಯಿ ಮೇಲ್ಮನೆಗೆ
ಕುಟುಂಬದಲ್ಲಿ ಹತ್ತಾರು ಮಹಡಿ
ಮನೆ
ಮನೆಯೇ ಇಲ್ಲದ
ಜನ ಸಾಮಾನ್ಯ
ಮತಹಾಕಿ ನಿಲ್ಲಬೇಕು ಸುಮ್ಮನೆ



ಹೊಸ ಕಥೆ

» ಬಿ.ಕೆ.ಮೀನಾಕ್ಷಿ, ಮೈಸೂರು.

ಧಿಕ್ಕಾರ

ದುಡಿದು ದುಡಿದು ತನ್ನವರನ್ನು ಸಾಕಿ ಸಲಹಿದ ಸವಿ, ಕೊನೆಗೊಂದು ದಿನ ರಾಜೀನಾಮೆ ಕೊಡಲು ನಿರ್ಧರಿಸಿದಳು. ಆದರೆ, . .?

ಸವಿ ಲ್ಯಾಪ್‌ಟಾಪ್‌ನ್ನು ಶಟ್‌ಡೌನ್ ಮಾಡಿ ತೆಗೆದಿರಿಸಿದಳು. 'ತಲೆ ಸಿಡೀತಿದೆ. ಅಮ್ಮಾ, ಒಂದ್ಲೋಟ ಕಾಫಿ ಕೊಡ್ತೀಯೇನಮ್ಮಾ?' ದನಿಯಲ್ಲಿ ಅಸಮಾಧಾನ ಬೆರೆತಿದ್ದರೂ ತೋರಿಸಲಾಗದಷ್ಟು ಅಸಹಾಯಕಿ ಅಮ್ಮನ ಮುಂದೆ.

'ಅದಕ್ಕೇನಂತೆ ಕೊಡೋಣ ಇರು. ಮೊದಲು ಕೈಕಾಲು ಮುಖ ತೊಳೆದುಕೋ.' ಅಮ್ಮನ ಭಾಷಣವೇ ಇರಿಟೇಟಿಂಗ್. ತಲೆಚಿಟ್ಟು ಹಿಡಿದಾಗ ತಾನೇ ಕಾಫಿ ಬೇಕಾಗುವುದು?

'ಕೈಕಾಲು ಮುಖ ತೊಳ್ಕೊ ಹಾಗಿದ್ರೆ ನಿನ್ನನ್ಯಾಕಮ್ಮಾ ಕೇಳ್ತಿದ್ದೆ? ಬೇಡ ಬಿಡು ಪರವಾಗಿಲ್ಲ. ಸಂಜೆಯಾಗಿತ್ತು. ಮಲಕ್ಕೊಳ್ಳುವ ಹಾಗಿಲ್ಲ ಮನೆಯಲ್ಲಿ.' ಆದರೆ ಸವಿಗೆ ರಾತ್ರಿ ಹಗಲೆಲ್ಲ ಕುಳಿತು ಕೆಲಸ ಮಾಡಿ ಇನ್ನು ಕುಳಿತುಕೊಳ್ಳಲಾರೆ ಅನಿಸಿದೆ.

'ವರ್ಕ್ ಫ್ರಂ ಹೋಂ ಇಲ್ದಿದ್ರೆ ಒಳ್ಳೇದಿತ್ತೇನೋ. ಮನೇಲಿರ್ತೀನಿ ಅಂತಾನೇ ಒಂಥರಾ ತಿರಸ್ಕಾರ.. '

ಕಾಫಿ ಕೊಡುವುದಿಲ್ಲವೆಂದು ಗೊತ್ತಿದ್ದರೂ, ಕೊಡುತ್ತಾಳೆಂಬ ನಿರೀಕ್ಷೆಯಲ್ಲೇ ಸಮಾಧಾನ.

'ಯಾವಾಗ್ ನೋಡಿದ್ರೂ ಅದನ್ನು ಕುಟ್ಟಿಕೊಂಡು ಕೂತಿರ್ತಾಳೆ. ಅದು ಬಿಟ್ಟು ಬೇರಿನ್ನೇನು ಕೇಳ್ಬೇಡ.' ಮೊದಲು ಲ್ಯಾಪ್‌ಟಾಪ್ ಮನೆಗೆ ಬಂದಾಗ ಭಯಭಕ್ತಿಯಿಂದ ಅಮ್ಮನೇ ಪೂಜೆ ಮಾಡಿದ್ದಳು. ಈಗ ಹೀಗನ್ನುವುದೇ? 'ಹೌದು! ಇದನ್ನು ಕುಟ್ಟದಿದ್ದರೆ ಅನ್ನವಿಲ್ಲ!' ಏಕೆ ಹೀಗಾದಳು ಅಮ್ಮ? ತನ್ನ ಮೇಲೇಕೆ ಇಷ್ಟು ಅಸಮಧಾನ?

'ಇನ್ನೂ ಮುಗೀಲಿಲ್ವಾ ನಿನ್ ರಾಮಾಯ್ಣ?' ಎಂದು ಮೂದಲಿಸುವುದು. ಕಂಪನಿಯಿಂದ ಬಂದ ಮೇಲ್‌ಗಳನ್ನು ಉತ್ತರಿಸದಿರಲಾದೀತೇ? ಅಟೆಂಡ್ ಮಾಡದೆ ಕುಳಿತರೆ ತಕ್ಷಣ ಕೆಲಸ ಹೋದಂತೆಯೇ! ಇದೇಕೆ ಅರ್ಥವಾಗುವುದಿಲ್ಲ? ಇತ್ತೀಚೆಗಂತೂ ಅಮ್ಮ ನಕ್ಕಿದ್ದೇ ಕಾಣಲಿಲ್ಲ. ಯಾಕೋ ಹೇಳಿಕೊಳ್ಳಲಾಗದ ವೇದನೆ. ಕಣ್ಣಂಚಿನಲ್ಲಿ ಹನಿ ಮೂಡಿ ಹಾಗೇ ಇಂಗಿಹೋದವು.

ಅಪ್ಪನ ದುಡಿಮೆಯನ್ನು ನಂಬಿ ಕುಳಿತಿದ್ದರೆ ಇಂದು ಈ ಅನುಕೂಲ ತಮಗಿರುತ್ತಿತ್ತೇ? ಕುಳಿತುಕೊಳ್ಳಲು ಒಂದು ಕುರ್ಚಿಯೂ ಇರದ ಮನೆಯನ್ನು ಒಂದು ಮಟ್ಟಕ್ಕೆ ನಿಲ್ಲಿಸಿದ್ದೇನೆ. ಎಸ್.ಎಸ್. ಎಲ್.ಸಿ.ಗೇ ತನ್ನ ಓದಿಗೆ ಎಳ್ಳುನೀರು ಬಿಟ್ಟಾಗಿತ್ತು. ಆದರೆ ತನ್ನ ಗೆಳತಿಯರು ಪ್ರಪಾತದಲ್ಲಿದ್ದ ತನ್ನನ್ನು ಸಹಾಯಹಸ್ತ ಚಾಚಿ ಮೇಲೆತ್ತಿದ್ದರು. ಉಪಾಧ್ಯಾಯರು, ಅಧ್ಯಾಪಕರು, ಸ್ನೇಹಿತರ ಸಹಾಯದಿಂದ ಡಿಗ್ರಿ ಮುಗಿಸಿದ ಸವಿತ, ಹಲವು ಸಂಘಸಂಸ್ಥೆಗಳಿಗೆ ತನಗೊಂದು ಸಿಸ್ಟಮ್ ಬೇಕೆಂದು ಅರ್ಜಿ ಗುಜರಾಯಿಸಿದ್ದಳು. ಯಾರ ಪುಣ್ಯವೋ ಅವಳಿಗೆ ಸಂಸ್ಥೆಯೊಂದರಿಂದ ತಕ್ಷಣವೇ ಒಳ್ಳೆಯ ಲ್ಯಾಪ್‌ಟಾಪ್ ಕಳಿಸಿದ್ದರು. ಕಂಪ್ಯೂಟರ್ ಬಲ್ಲ ಗೆಳತಿಯರಿಂದ ಮೂರು ತಿಂಗಳಲ್ಲಿ ಕಲಿತದ್ದೂ ಆಯಿತು.

ಒಂದು ಒಳ್ಳೆಯದಿನ ಅವಳ ಅದೃಷ್ಟದ ಬಾಗಿಲು ತೆರೆಯಿತು. ಪ್ರಸಿದ್ಧ ಕಂಪನಿಯೊಂದರಿಂದ ಕೆಲಸಕ್ಕಾಗಿ ಆರ್ಡರ್ ಬಂದಿತ್ತು. ಸವಿತ ತಾನಂದುಕೊಂಡಂತೆ ಕೇವಲ ಮೂರು ವರ್ಷಗಳಲ್ಲಿ ಎಲ್ಲ ಸಮಸ್ಯೆಗಳನ್ನು ನೀಗಿಸಿಕೊಂಡು, ಮನೆಯ ನೆಮ್ಮದಿಗೆ ಅಡಿಪಾಯವಾಗಿದ್ದಳು. ಸಂತೋಷನಂತೂ, 'ಅಕ್ಕಾ ನೀನು ಕೆಲಸಕ್ಕೆ ಸೇರದಿದ್ದರೆ ನನ್ನ ಕತೆಯೇನಕ್ಕಾ?' ಅವಳನ್ನು ಎಷ್ಟು ಕೊಂಡಾಡಿದರೂ ಅವನಿಗೆ ಸಾಲದು. ಹೇಗಾದರೂ ಮಾಡಿ ಸ್ವಂತ ಮನೆ ಮಾಡಿಬಿಡಬೇಕೆನ್ನುವ ಛಲ ಹುಟ್ಟಿ, ಸಿಟಿಯಿಂದ ಸ್ವಲ್ಪ ದೂರಕ್ಕೆ ಕಡಿಮೆ ಬೆಲೆಯಲ್ಲಿ ಮನೆಯನ್ನೂ ಕೊಂಡುಕೊಂಡಳು.

'ನಮ್ಮ ಮನೆಯ ಭಾಗ್ಯದೇವತೆ ನೀನು' ಎನ್ನುತ್ತಿದ್ದ ಅಮ್ಮ ಇತ್ತೀಚೆಗೆ ವಿಚಿತ್ರವಾಗಿ ಆಡುತ್ತಾಳೆ.

'ಅಬ್ಬ! ತಾನು ಕಷ್ಟಪಟ್ಟಿದ್ದಕ್ಕೂ ಸಾರ್ಥಕವಾಯಿತು.' ಅಮ್ಮನ ಕಣ್ಣಲ್ಲಿ ಸಂತೋಷ ಕಂಡಿತಲ್ಲ ಸದ್ಯ

ಎಂದು ನೆಮ್ಮದಿಯ ನಿಟ್ಟುಸಿರು ಬಿಡುವಷ್ಟರಲ್ಲಿ ಇದೇನಾಯಿತು ಇವಳಿಗೆ? ಸಂತೋಷನನ್ನು ಎಷ್ಟು ಬೇಕಾದರೂ ಓದಿಸಬೇಕೆಂಬ ಆಸೆ ಸವಿತಳಿಗೆ. 'ನಾನು ಪಟ್ಟ ಕಷ್ಟ ನನ್ನ ಕಾಲಕ್ಕೇ ಮುಗಿಯಲಿ. ಇವನಿಗೆ ಹಾಗಾಗಬಾರದು'. ಸವಿತಳ ಬಾಯಿಂದ ಆಯಾಚಿತವಾಗಿ ಹೊರಬಂದ ಮಾತಿಗೆ ಅಮ್ಮ ರೇಗಿದ್ದಳು.

'ನೀನು ಓದಿಸೋದು ಅಷ್ಟರಲ್ಲೇ ಇದೆ. ಸುಮ್ಮನೆ ಅವನಿಗೇಕೆ ಆಸೆ ಹುಟ್ಟಿಸುತ್ತೀ?' ಇದೇಕೆ ಹೀಗಾಡುತ್ತಾಳೆ?

ಅವತ್ತೊಂದು ದಿನ ಸವಿ ಆಫೀಸಿನಿಂದ ಆಗ ತಾನೇ ಬಂದಳು. ಯಾರೋ ಬಂದಿದ್ದರು. ಅಮ್ಮ ಅಪ್ಪ ಖಂಡತುಂಡವಾಗಿ ಹೇಳುತ್ತಿದ್ದರು.. 'ಆಗಲ್ಲ ಆಗಲ್ಲ, ಸದ್ಯಕ್ಕೆ ನಮಗೆ ಆ ಯೋಚನೆಯಿಲ್ಲ, ಮುಂದೆ ತಿಳಿಸುತ್ತೇವೆ.' ಅವರು ಹೊರಟುಹೋದರು. ಇವಳು ಒಳಬಂದಳು. 'ಯಾರಮ್ಮಾ ಅವರು?' ಅಮ್ಮ ಯಾವ ಉತ್ತರವನ್ನೂ ನೀಡಲಿಲ್ಲ. ಆದರೆ ಸಂತೋಷ್, 'ನಿನ್ನನ್ನು ಮದುವೆ ಮಾಡಿಕೊಡಿ ಅಂತ ಕೇಳಲು ಬಂದಿದ್ದರಕ್ಕ' ಎಂದ. ಸವಿತಳಿಗೆ ಅನುಮಾನದ ಕಿಡಿಯೊಂದು ಹೊಗೆಯಾಡತೊಡಗಿತು!

ತನ್ನ ವಯಸ್ಸಿನವರೆಲ್ಲ ಹಕ್ಕಿಯಂತೆ ಹಾರಾಡುತ್ತಿದ್ದರೆ, ತಾನು ಆಮೆ ಹೆಜ್ಜೆ ಹಾಕುತ್ತಿದ್ದೇನೆ. ಸಾಕು ಇಷ್ಟು ವರ್ಷ ನರಳಿದ್ದು. ತಾನೂ ಒಂದು ಕಾರು ತಗೊಂಡು ಲೈಫ್‌ಸ್ಟೈಲ್ ಬದಲಿಸಿಕೊಳ್ಳೋಣ! ತಾನೇಕೆ ಹಳೇಕಾಲದ ಅಜ್ಜಿಯಂತೆ ಎಲ್ಲರ ಮುಂದೆ ನರಳಿಕೊಂಡು ಬಾಳುತ್ತಿದ್ದೇನೆ? ಬುದ್ಧನಿಗೆ ಜ್ಞಾನೋದಯವಾದಂತೆ, ಜೀವನ ಅರ್ಥವಾಗತೊಡಗಿತು. ಎಲ್ಲ ಇದ್ದೂ ಇದೇಕೆ ಹೀಗಿದ್ದೇನೆ. ತನ್ನದೂ ಒಂದು ಬದುಕೆಂಬುದಿದೆ. ಸವಿತ ನಿಸ್ಸಾರವಾದ ತನ್ನ ಭಾವನೆಗಳನ್ನು ಕಾಮನೆಗಳಾಗಿ ಬದಲಿಸಿಕೊಳ್ಳುತ್ತ, ತನ್ನನ್ನು ತಾನೇ ಅದಮ್ಯವಾಗಿ ಪ್ರೀತಿಸತೊಡಗಿದಳು. ಅಮ್ಮ, ಬಂದ ಗಂಡುಗಳನ್ನು ನಿರಾಕರಿಸುತ್ತಿರುವ ಕಾರಣವೂ ಸ್ಪಷ್ಟವಾಗತೊಡಗಿದಂತೆ ತಾನಿನ್ನು ಸುಮ್ಮನಿರಬಾರದು ಎಂಬ ನಿರ್ಧಾರಕ್ಕೆ ಬಂದಳು.

ಸವಿತಳ ಮುಖದಲ್ಲಿ ಈಗೀಗ ಸ್ನಿಗ್ಧ ನಗು ಮಿನುಗತೊಡಗಿ ಅವಳಿಗೆ ಸರಿಸಮಾನರಾದ ಸ್ನೇಹವಲಯವೂ ಸೃಷ್ಟಿಯಾದಂತೆ, ಮನೆಯಲ್ಲಿ ಮಾತು ಕಡಿಮೆಯಾಗಿ ಫೋನು ಕೈಯ್ಯಲ್ಲಿ ಆಟವಾಡತೊಡಗಿತು. ಮೊದಲಿನಂತೆ ಚಿಂತಾಕ್ರಾಂತ ಮುಖ ಮಾಯವಾಗಿ ಲವಲವಿಕೆ ತಂತಾನೆ ಲಾಸ್ಯವಾಡತೊಡಗಿತು.

'ಏನೇ ಸವಿತಾ ಇತ್ತೀಚೆಗೆ ಚೇಂಜ್ ಆದಹಾಗ್ ಕಾಣ್ತೆದೀಯಾ? ಏನ್ಸಮಾಚಾರ?' ದಿನದಿನಕ್ಕೆ ಬದಲಾಗುತ್ತಿರುವ ಮಗಳನ್ನು ಗಮನಿಸಿದ ತಾಯಿಗೆ ಇನ್ನು ಅದುಮಿಟ್ಟುಕೊಳ್ಳಲಾಗದೆ ನಂಜನ್ನು ಕಾರಿದರು.

'ಹೌದಮ್ಮಾ, ನಾನೂ ಸಂತೋಷವಾಗಿರಬಾರ್ದಾ?'

'ಸಂತೋಷವಾಗಿರೆ, ಬೇಡ ಅಂದವರಾರು? ಆದ್ರೆ ಈ ಅಲಂಕಾರ, ಮೂರು ಹೊತ್ತು ಫೋನು ಇದೆಲ್ಲಾ ಯಾಕೆ? ಫೋನ್ನಲ್ಲೇ ಇರೋರ್‍ಗೆ ಮನೆ ಕಡೆ ನಿಗಾ ಎಲ್ಲಿರುತ್ತೆ?'

ಗುಂಡು ಹೊಡೆದಂತೆ ಬಂದ ಅಮ್ಮನ ಆರೋಪದಿಂದ ಸವಿತಾ ಅಪ್ರತಿಭಳಾದಳು. ಅಮ್ಮನ ಮಾತಿನ ವರಸೆಗೆ ಸವಿತಳ ಬಳಿ ಉತ್ತರವಿರಲಿಲ್ಲ. ಆದರೆ ಅವಳ ಆತ್ಮಾಭಿಮಾನಕ್ಕೆ ಭಾರೀ ಪೆಟ್ಟು ಬಿದ್ದಿತ್ತು. ತೀಕ್ಷ್ಣವಾಗಿ ನೋಡಿದಳು. ರೆಪ್ಪೆ ಮಿಟುಕಿಸದೆ ಅಮ್ಮನೂ ಅವಳನ್ನೇ ದುರುದುರು ನೋಡಿದರು. 'ಅಮ್ಮಾ, ನಿನ್ನ ಬಳಿ ಸುಳ್ಳೇನು ಹೇಳಲಿ? ನನಗೆ ಮದುವೆಯಾಗಬೇಕಂತ ಮನಸಾಗಿದೆ. ಮದುವೆ ಮಾಡು.' ಈಗ ತಾಯಿ ತಬ್ಬಿಬ್ಬಾಗುವಂತಾಯಿತು. ಆದರೂ ಬಿಡದೆ, 'ಇದ್ದಕ್ಕಿದ್ದಂತೆ ಮದುವೆ ಮಾಡು ಎಂದರೆ ಮನೇನ ನೋಡಿಕೊಳ್ಳೋರು ಯಾರೇ? ಸಂತೂನ ಓದು ಮುಂದುವರೀಬೇಡ್ವೇ?'

'ಅದೆಲ್ಲ ಅಪ್ಪನ ಕರ್ತವ್ಯವಲ್ವೇನಮ್ಮಾ? ಅಥವಾ ನಿಂದಲ್ವಾ? ನನ್ನ ವಯಸ್ಸಿನವರಂತೆ ನಾನೂ ಇರಬೇಕು ತಾನೆ?' ಮುಂದಕ್ಕೆ ಇಬ್ಬರೂ ಮಾತಾಡಲಿಲ್ಲ. ಮಾತಾಡಬಾರದೆಂದು ತಾಯಿಗೆ ಅರ್ಥವಾಗಿಹೋಯಿತು.

ಸವಿತ ಕಂಗೆಟ್ಟಳು. 'ಇವರಿಗೇಕೆ ತಿಳಿಯುವುದಿಲ್ಲ? ತನಗೊಂದು ಮನಸ್ಸಿದೆಯೆಂದು? ಆಸೆಯಿದೆಯೆಂದು? ಹೇಳಿಕೊಳ್ಳಲಾಗದ ಭಾವಗಳಿವೆಯೆಂದು? ದುಡಿತವನ್ನು ಹೊರತು ಪಡಿಸಿ ತನ್ನದೊಂದು ಸ್ವಂತ ಬದುಕಿದೆಯೆಂದು? ನಾಲ್ವರಂತೆ ಸರಿಸಮನಾಗಿ ಬದುಕುತ್ತೇನೆಂದರೆ ಇವರಿಗೇಕೆ ಅರ್ಥವಾಗುತ್ತಿಲ್ಲ? ಬೆಳಗಿನಿಂದ ಸಂಜೆವರೆಗೆ ಲ್ಯಾಪ್‌ಟಾಪ್ ಮುಂದೆ ಕೂತು ಕೆಲಸ ಮಾಡಿ ಮಾಡಿ ಬುದ್ಧಿಗೆಟ್ಟು ಹೋಗಿರುವಾಗ ಒಂದು ಲೋಟ ಕಾಫಿ ಕೊಡದಿರುವಷ್ಟು ದರಿದ್ರತನ ಹಿಡಿದಿದೆಯೇ ಇವರ ಮನಸ್ಸಿಗೆ? ತಾನು ಮಾಡುತ್ತಿರುವುದು ಕೆಲಸವೆಂಬುವ ಪರಿಜ್ಞಾನವಾದರೂ ಇದೆಯೇ ಇವರಿಗೆ?

ವರ್ಕ್‌ಫ್ರಂಹೋಂ ಇದ್ದರೆ ಸಾಕು, ಅಲ್ಲಲ್ಲೇ ಮಿಸುಕಾಡುತ್ತಾಳೆ ಈ ನನ್ನಮ್ಮ! ನಾನು ಮನೆಯಲ್ಲಿಲ್ಲದಿದ್ದರೆ ಇವರಿಗೆ ನಿರಾಳವೇನೋ! ಎಷ್ಟೋ ದಿನ ಈ ಅಸಹಜತೆಯನ್ನು ಸಹಿಸಲಾರದೆ ಬೇರೆಯವರಿಗೆ ಮನೆಯಿಂದಲೇ ಕೆಲಸ ಮಾಡಲು ಸೂಚಿಸಿ, ತಾನು ಆಫೀಸಿಗೆ ಹೋಗಿದ್ದೇನೆ. ತಾನು ಮನೆಯಲ್ಲುಳಿದರೆ ಇವರಿಗಾಗುವ ನಷ್ಟವೇನು? ಮನೆಯ ಸ್ಥಿತಿಗತಿ ಸುಧಾರಿಸಲು ತಾನು ಒಂದು ಡ್ರೆಸ್ ಕೊಳ್ಳಲೂ ಹಿಂದುಮುಂದು ನೋಡುತ್ತಿದ್ದೆ. ಸಂತೋಷವಾಗಿರಲಿ ಅಂತ ಹಬ್ಬಗಳಿಗೆ ಬಟ್ಟೆಬರೆ ತಂದರೆ ಚೆನ್ನಾಗಿದೆ ಎಂದು ಹಾಕಿಕೊಳ್ಳುತ್ತಿದ್ದರೇ ವಿನಾ 'ನಿನಗೆಲ್ಲೇ?' ಎಂದು ಒಬ್ಬರಾದರೂ ಕೇಳಿದರಾ? ನಿನ್ನಾಸೆಯೇನು? ಅಡುಗೆಯೇನು ಮಾಡಲಿ? ನಿಂಗೇನಿಷ್ಟ ಅಂತ ಒಂದೇ ಒಂದು ದಿನ ಕೇಳಿದ್ದರೆ! ಅಯ್ಯೋ ತನಗೆ ಬುದ್ಧಿಯಿಲ್ಲ. ಜೀವ ತೇಯುವುದಷ್ಟೆ. ತೇಯ್ದುಕೊಳ್ಳಲಿ ಅವಳ ಕರ್ಮ ಎಂದುಕೊಂಡಿದ್ದಾರೆ. ಗಂಡುಗಳು ಬಂದ ಸುದ್ದಿಯನ್ನು ಬಿಟ್ಟುಕೊಡಲೇ ಇಲ್ಲ. ಇವರೆಂತ ತಂದೆ ತಾಯಿ? ಮನ ಮುದುಡಿಹೋಯಿತು.

ಸವಿತ ಇನ್ನೂ ಮನೆಗೆ ಬಂದಿರಲಿಲ್ಲ. ಆಗಲೇ ಗಂಟೆ ಎಂಟಾಗಿತ್ತು. 'ಇವಳಿನ್ನೂ ಬರಲಿಲ್ವಲ್ಲಾರೀ' ಎಂದು ಪೇಚಾಡಿಕೊಳ್ಳುತ್ತಿದ್ದರು. ಯಾವ ಫ್ರೆಂಡ್ ಜೊತೆ ಸುತ್ತಲು ಹೋಗಿದ್ದಾಳೋ ಎಂದು ಅಪ್ಪ ಬೈದುಕೊಂಡರು. ಸಂತೋಷ್ ಮಾತ್ರ, 'ಅಮ್ಮ, ಅಕ್ಕ ಅಂತವಳಲ್ಲ. ಏನು ಕೆಲಸವಿದೆಯೋ ಏನೋ? ಯಾಕಮ್ಮಾ ಹೀಗೆ ಅಸಹ್ಯವಾಗಿ ಮಾತಾಡ್ತೀರೀ? ಅವಳ ಕಿವಿಗೇನಾದರೂ ಬಿದ್ದರೆ ಅವಳಿಗೆ ಬೇಜಾರಾಗಲ್ವಾ?'

ಸವಿ ಬರಲಿಲ್ಲ! ಫೋನ್ ಸ್ವಿಚ್ ಆಫ್! ಇಡೀ ರಾತ್ರಿ ನಿದ್ದೆ ಮಾಡಲಿಲ್ಲ ಮೂವರೂ! ಅವಳ ಗೆಳತಿಯರಿಗೆ ಫೋನ್ ಮಾಡೋಣವೆಂದರೆ ಸಮಯಕ್ಕೆಂದು ಒಬ್ಬರದಾದರೂ ನಂಬರ್ ಇಟ್ಟುಕೊಂಡಿಲ್ಲವಲ್ಲ!

ಮೂರು ದಿನ ಮನೆಗೆ ಬರದೆ, ಅದರ ಮಾರನೇ ದಿನ ಬೆಳಗ್ಗೆ ಪ್ರತ್ಯಕ್ಷಳಾದಳು. ಕೊರಳಲ್ಲಿ ಮಾಂಗಲ್ಯ, ಒಪ್ಪವಾಗಿ ಉಟ್ಟಸೀರೆ, ನಗುವಿದ್ದರೂ ಆಯಾಸಗೊಂಡ ಮುಖ! ಮೂವರೂ ಸ್ತಂಭೀಭೂತರಾದರು. ಸಂತೋಷ್ 'ಕಂಗ್ರಾಜ್ಯುಲೇಷನ್ ಅಕ್ಕ' ಎಂದು ಕೈನೀಡಿದನು. ಸವಿ ಅವನನ್ನು ತಬ್ಬಿಕೊಂಡಳು. ಅವನ ಹೆಗಲ ಮೇಲೆ ಎರಡು ಹನಿ ಕಣ್ಣೀರು ಉರುಳಿ ಬಿದ್ದವು.

'ನೀನೊಬ್ಬನಾದರೂ ಈ ಮನೆಯಲ್ಲಿ ನನಗಾಗಿ ಇದ್ದೀಯಲ್ಲಾ ಸಂತೋಷ್.' ಇಬ್ಬರೂ ಸ್ವಲ್ಪ ಹೊತ್ತು ಅತ್ತು ಸಮಾಧಾನ ಮಾಡಿಕೊಂಡು, 'ಬಟ್ಟೆ ಜೋಡಿಸಿಕೊ. ಹೋಗೋಣ' ಎಂದಳು. ಅವನು ತಿರುಗಿಸಿ ಏನೊಂದೂ ಪ್ರಶ್ನಿಸದೆ, ಕಿಟ್ ರೆಡಿಮಾಡಿ ತಂದನು. ಅಪ್ಪ ಅಮ್ಮ ಇಬ್ಬರೂ ಮೂಕರಾಗಿ ನಿಂತಿದ್ದರು. ಸವಿ ಅವರ ಪಾಲಿನ ಕಪಿಯಾಗಿ ಪಾರ್ಪಟ್ಟಿದ್ದಳು. ಅವಳನ್ನು ಪ್ರಶ್ನಿಸುವ ಶಕ್ತಿಯನ್ನೇ ಕಳೆದುಕೊಂಡು ಸೋತು ನಿಂತಿದ್ದರು.

'ಬನ್ನಿ ಕುಳಿತುಕೊಳ್ಳಿ. ಈಗ ನಿಮಗೊಂದು ವಿಷಯ ಹೇಳ್ತೀನಿ. ನೀವು ಸಹಿಸಿಕೊಳ್ಳಬೇಕು. ನಮ್ಮ ಆಫೀಸಿನಲ್ಲಿ ಉನ್ನತ ಹುದ್ದೆಯಲ್ಲಿರೋ ಜಯಂತ್ ನನ್ನನ್ನು ಇಷ್ಟ ಪಟ್ಟಿದ್ದರಂತೆ. ಕೇಳಿದ್ದರು. ನಾನು ನಿಮ್ಮ ಜವಾಬ್ದಾರಿ ಇರೋದ್ರಿಂದ ಒಪ್ಪಿರಲಿಲ್ಲ.



ಆದರೆ ಮೊನ್ನೆ ನೀನು ಒಂದು ಲೋಟ ಕಾಫಿ ಕೊಡೋದಕ್ಕೆ ಹಿಂದೆ ಮುಂದೆ ನೋಡಿದ್ಯಲ್ಲ, ಬಂದ ಗಂಡುಗಳನ್ನೆಲ್ಲ ನನಗೆ ತಿಳಿಯದಂತೆ ವಾಪಸ್ಸು ಕಳಿಸಿದ್ಯಲ್ಲ, ಆಗ ನಿನ್ನ ಮನೋಗತವೇನೆಂದು ತಿಳಿಯಿತು. ನನ್ನ ಆಸೆ ಆಕಾಂಕ್ಷೆಗಳನ್ನು ಬದಿಗಿಟ್ಟು ನಿಮಗಾಗಿ ಬದುಕಿದರೂ ನೀನು ನನ್ನನ್ನು ಅನುಮನಿಸಿ ಮಾತಾಡಿದೆಯಲ್ಲ, ಅಂದೇ ನಿರ್ಧರಿಸಿದೆ. ನನಗಾಗಿಯೂ ನಾನು ಬದುಕಬೇಕು ಅಂತ. ಜಯಂತನಿಗೆ ನನ್ನ ಒಪ್ಪಿಗೆ ತಿಳಿಸಿ ರಿಜಿಸ್ಟರ್ ಮದುವೆಯಾದೆವು. ದೇವಸ್ಥಾನದಲ್ಲಿ ಮಾಂಗಲ್ಯಧಾರಣೆಯಾಯಿತು. ಎರಡು ದಿನ ಅವರ ಮನೆಯಲ್ಲಿದ್ದು ಬಂದೆ. ಈಗ ಸಂತೋಷ್ ನನ್ನ ಜೊತೆ ಬರುತ್ತಾನೆ. ಅವನೂ ನನ್ನ ಅತ್ತೆ ಮನೆಯಲ್ಲಿರುತ್ತಾನೆ. ಅವನ ಜವಾಬ್ದಾರಿ ಮುಗಿಯಲಿ, ಆಗ ನಿಮ್ಮ ಬಳಿಗೆ ನಾನೇ ತಂದು ಬಿಡುತ್ತೇನೆ. ಬರ್ತೀನಮ್ಮ. ನಿಮ್ಮ ಜೀವನಕ್ಕೆ ತೊಂದರೆಯಾಗದಂತೆ ನೋಡಿಕೊಳ್ತೇನೆ. ದಿನದ ಖರ್ಚುವೆಚ್ಚಕ್ಕೆ ನೀವು ಹೆದರಬೇಡಿ' ಯಾವುದೇ ಉದ್ವೇಗಕ್ಕೊಳಗಾಗದೆ, ನಿರ್ಲಿಪ್ತವಾಗಿ ಸವಿತಾ ತಂದೆ ತಾಯಿಗೆ ಎಲ್ಲ ವಿಷಯವನ್ನೂ ತಿಳಿಸಿ, ಸಂತೋಷನೊಂದಿಗೆ ಮನೆಯಿಂದ ಹೊರಬಿದ್ದಳು.

ಇಬ್ಬರೂ ಕುಸಿದು ಕುಳಿತರು. ಸವಿತಳ ಅಮ್ಮನಿಗೆ ತನ್ನ ವರ್ತನೆಗಳೆಲ್ಲ ಕಣ್ಣಮುಂದೆ ನಾಟ್ಯವಾಡತೊಡಗಿ ಕೀಳರಿಮೆಯ ಕೆಂಡದಲ್ಲಿ ಬೆಂದು ಹೋದಳು. ಸವಿತ ಮದುವೆಯಾದರೆ ಕಾಡುವ ಅಭದ್ರತೆಯಿಂದ ಹಾಗೆಲ್ಲ ನಡೆದುಕೊಂಡೆ ಎಂಬ ಸತ್ಯದರಿವು ಆಕೆಗೆ ಕಣ್ಣಮುಂದೆ ಗೋಚರಿಸತೊಡಗಿತು. ಅದೇಕೋ ಸವಿತ ಮನೆಯಲ್ಲಿದ್ದರೆ ತನಗೊಂದು ರೀತಿ ಅಸಮಧಾನ, ಅವಳ ಮುಖ ನೋಡಲೂ ಇಚ್ಛೆಯಾಗುತ್ತಿರಲಿಲ್ಲ, ಬೇಕೆಂದೇ ಅವಳು ಕೇಳಿದ್ದನ್ನು ತಪ್ಪಿಸುತ್ತಿದ್ದೆ. ಇಷ್ಟೆಲ್ಲ ಮಾಡಿದ ಅವಳಿಗೆ ಅಮ್ಮನಾಗಿ ತಾನೇನು ಒಳ್ಳೆಯದು ಮಾಡಿದೆನೆಂಬ ಪಶ್ಚಾತ್ತಾಪದ ಬೇಗೆ ಸುಡತೊಡಗಿದಂತೆ, ಆಕೆಯ ದುಃಖ ಮೇರೆ ಮೀರಿತು.

ಮನಸೆಲ್ಲ ಮಲಿನವಾಗಿ ಹೋಗಿದೆ. ಎಲ್ಲರದೂ. ಗುಡಿಸಿ ಸ್ವಚ್ಛಗೊಳಿಸಲು ತಿಳಿವಳಿಕೆ ಸಾಲದಾಗಿದೆ. ಸ್ವಾರ್ಥವು, ತಾಯಿಯೊಬ್ಬಳನ್ನು ಬಿಟ್ಟು ಮತ್ತೆಲ್ಲರಲ್ಲೂ ಮನೆ ಮಾಡಿರುತ್ತದೆಂಬುದನ್ನು ಆಕೆ ಕೇಳಿದ್ದರು. ಆದರೆ ದೇವರಂಥಾ ಮಗಳ ಬಗ್ಗೆಯೇ ತಾನು ಕಡು ಸ್ವಾರ್ಥಿಯಾದೆನಲ್ಲ, ತಾಯಿ ಮಮತೆಗೆ ಅಪವಾದವಾದೆನಲ್ಲ! ತನ್ನದೊಂದು ಜೀವವೇ? ತಮ್ಮ ಹೊಣೆಯನ್ನೆಲ್ಲ ಅವಳ ಮೇಲೆ ಹೊರಿಸಿಯೂ ಅವಳನ್ನು ಸುಖವಾಗಿ ನೋಡಿಕೊಳ್ಳಲಿಲ್ಲ! ಈಗ ಕೊರಗಿದರೇನು ಬಂತು?

ನಾಲ್ಕುವರ್ಷ ಕಳೆದು ಐದನೆಯ ವರ್ಷ ಕಾಲಿಟ್ಟಿತು. ಕಾಲ ಮುಂದೆಮುಂದೆ ಸರಿದಂತೆ ಸವಿತ ತಂದೆತಾಯಿಯಿಂದ ಸಂಪೂರ್ಣವಾಗಿ ಹಿಂದೆ ಸರಿದಳು. ಸಂತೋಷನಿಂದ ಸವಿತಳ ಅತ್ತೆ ಮನೆಯ ವಿಳಾಸ ತಿಳಿದುಕೊಂಡು ಸವಿತಳ ತಂದೆ ತಾಯಿ ಒಂದು ದಿನ ಮನೆಗೆ ಬಂದರು. ಸವಿತಳ ಅತ್ತೆ ಮಾವ ಇವರನ್ನು ತುಂಬು ಗೌರವದಿಂದ ಆದರಿಸಿ ಉಪಚರಿಸಿದರು. 'ಸದ್ಯ! ಈಗಾದರೂ ಬಂದಿರಲ್ಲ' ಎಂದು ಸಂತಸ ವ್ಯಕ್ತಪಡಿಸಿದರು. 'ನಿಮ್ಮಲ್ಲಿಗೆ ಬರೋಣವೆಂದರೆ ಸವಿತಳಿಗೋ ಸಮಯವೇ ಇಲ್ಲ, ಈಗಾದರೂ ನಿಮ್ಮನ್ನು ನೋಡಿ ಸಂತೋಷವಾಯಿತು.' ಇವರು ನಗುವಿನ ಮುಖವಾಡ ಧರಿಸಿದ್ದಷ್ಟೆ. ಗಂಟಲಿನಿಂದ ಶಬ್ದಗಳು ಆಚೆ ಹೊರಡಲಿಲ್ಲ. ತಿಂಡಿ ತೀರ್ಥಗಳೆಲ್ಲ ಮುಗಿದು ಮನೆಗೆ ಹೊರಟರು. ಮನೆಗೆ ಬನ್ನಿ ಎಂದು ಆಹ್ವಾನವಿತ್ತು ಮಗಳನ್ನೂ ದೀನರಾಗಿ ನೋಡುತ್ತಾ ನಡೆದರು. ಸವಿಗೆ ಮರುಕ ಹುಟ್ಟದೆ, ತುಟಿಯಂಚಿನಲ್ಲಿ ಒಂದು ವ್ಯಂಗ್ಯನಗು ಮೂಡಿತು.

ಅದೆಷ್ಟೋ ದಿನ ಕಳೆದ ಮೇಲೆ ಸಂತೋಷ್ ಜೊತೆಗೆ ಸವಿತಾ ಮನೆಗೆ ಬಂದಳು. ತಂದೆತಾಯಿಯರಿಗೆ ಸಂತೋಷ, ಸಂಭ್ರಮ, ವಿಸ್ಮಯ ಎಲ್ಲ ಒಟ್ಟೊಟ್ಟಿಗೆ ಮೂಡಿನಿಂತವು. ಎಲ್ಲರೂ ಸೋಫಾ ಮೇಲೆ ಕುಳಿತರು. ಅಮ್ಮ ಕಾಫಿ ತಂದರು. ನೆಂಟರಂತೆ ಕುಳಿತ ಮಗಳನ್ನು ನೋಡಿ ಮನಸಿಗೆ ಘಾಸಿಯಾಯಿತು. 'ಅಮ್ಮ ಸಂತುಗೆ ಕೆಲಸ ಸಿಕ್ಕಿದೆ. ಇನ್ನು ನಿಮಗೊಪ್ಪಿಸುತ್ತಿದ್ದೇನೆ. ಹಾಗೇ ಅವನಿಗೆ ಎಲ್ಲೂ ಹೆಣ್ಣು ಅದೂ ಇದೂ ಅಂತ ನೋಡಲು ಹೋಗಬೇಡ. ಜಯಂತನ ತಂಗಿ ಇಂಜಿನಿಯರಿಂಗ್ ಓದುತ್ತಿದ್ದಾಳೆ. ಅವರಿಬ್ಬರೂ ಇಷ್ಟ ಪಟ್ಟಿದ್ದಾರೆ. ನಮ್ಮನೆಯಲ್ಲಿ ಯಾರದೂ ಅಡ್ಡಿಯಿಲ್ಲ, ನೀವು ಯಾವಾಗ ಹೆಣ್ಣು ಕೇಳಲು ಬರುವಿರೋ ಆಗ ಲಗ್ನ ನಿಶ್ಚಯವಾಗುತ್ತದೆ.' ಹೇಳಿ ಕಾರು ಹತ್ತಿದಳು. ಅಬ್ಬಾ! 'ಹಠವಾದಿಯೇ!' ತಂದೆತಾಯಿಯರ ಬಾಯಿಂದ ಅವರಿಗರಿಯದಂತೆ ಹೊರಬಂದಿತು. ಅಡಿಯಿಂದ ಮುಡಿವರೆಗೆ ಅವಳನ್ನು ಕಣ್ತುಂಬಿಕೊಂಡ ತಾಯಿಗೆ ಮಗಳು ಗರ್ಭಿಣಿ ಎಂದು ತಿಳಿದು ಮನಸ್ಸು ತುಂಬಿಬಂತು.

ಕೆಲಸ ಕಾರ್ಯ ಮನೆಗಳ ನಡುವೆ ಮನಸನ್ನು ತಣಿಸುವುದು ಈ ಕರುಳ ಕುಡಿಗಳೇ ಎಂಬುದು ಸವಿತಳಿಗೆ ಯಾವತ್ತೋ ವೇದ್ಯವಾಗಿದೆ. ಸಂತೋಷನನ್ನು ಎತ್ತಾಡಿಸಿ, ಬೆಳೆಸಿದವಳಲ್ಲವೇ? ಅವನೊಂದಿಗಿನ ಅವಿನಾಭಾವ ಸಂಬಂಧ ಅವಳನ್ನು ಮಗುವಿಗಾಗಿ ಹಾತೊರೆಯುವಂತೆ ಮಾಡಿದೆ. ತನಗಿನ್ನು ಎಲ್ಲ ಜವಾಬ್ದಾರಿಗಳೂ ಮುಗಿದಿವೆ. ಅತ್ತೆ ಮಾವ ತಮಗೆ ಮೊಮ್ಮಗು ಬೇಕೆಂದು ಒತ್ತಾಯಿಸದಿದ್ದರೂ ಅವರ ಕಣ್ಣುಗಳಲ್ಲಿ ಕುಣಿಯುವ ಆಸೆಗಳು ಅರ್ಥವಾಗದಷ್ಟು ದಡ್ಡಿಯಲ್ಲ ಸವಿತ. ಇನ್ನೈದು ತಿಂಗಳು ಕಳೆದರೆ ಮನೆಯ ತುಂಬ ಮಗುವಿನ ಅಳು, ನಗು, ಕೇಕೆ ಕೇಳಿಸುವ ಕಲ್ಪನೆಗೇ ರೋಮಾಂಚನಗೊಂಡಳು. ಸಂತೋಷನ ಜವಾಬ್ದಾರಿಯಿಂದಾಗಿ ತನ್ನ ಕರುಳಕುಡಿಯ ಬರುವಿಕೆಯನ್ನು ಮುಂದೂಡಿದ್ದಳೇ ಹೊರತು ಅತ್ತೆ ಮಾವರಿಗೆ ಆದಷ್ಟು ಬೇಗ ಮಗುವನ್ನು ಹೆತ್ತು ಕೊಡಬೇಕೆಂಬ ಆಸೆ ಅವಳಲ್ಲಿ ಮನೆ ಮಾಡಿತ್ತು.

'ಸವಿತಾ, ಮೆಲ್ಲಗೆ ಓಡಾಡು. ಗಡಿಬಿಡಿ ಗಾಬರಿಗಳನೆಲ್ಲ ಪಕ್ಕಕ್ಕಿಡು. ಎಲ್ಲದಕ್ಕೂ ನಾವಿದ್ದೇವೆ.' ಜಯಂತನ ಅಮ್ಮ ತುಂಬು ಗರ್ಭಿಣಿ ಸವಿತಳನ್ನು ಆಗಾಗ ಎಚ್ಚರಿಸುತ್ತಿದ್ದರು. ಮದುವೆಯ ಸಡಗರ ಮುಗಿದು ಹೆಣ್ಣನ್ನು ಮನೆತುಂಬಿಸಿಕೊಂಡದ್ದಾಗಿತ್ತು. ಸವಿತಳ ನಾದಿನಿ ವೈಜಯಂತಿ, ತಮ್ಮನಿಗೆ ಮನದನ್ನೆಯಾಗಿ ತನ್ನ ತವರು ಸೇರಿದ್ದಳು. ಏನನ್ನೂ ಆಸೆ ಪಡದ ಸವಿತ, ಮಗುವಿನ ಕನಸಿನಲ್ಲಿ ಲೀನವಾಗಿದ್ದಳು. ಜಯಂತನ ಮನೆಯಲ್ಲಿ ಸೀಮಂತವಾಗಿದ್ದರೂ, ತವರಿಗೆ ಹೋದ ಶಾಸ್ತ್ರ ಮುಗಿಸಿ ಮತ್ತೆ ಗಂಡನ ಮನೆಗೇ ತಮ್ಮನ ಜೊತೆಗೆ ಓಡಿಬಂದಿದ್ದಳು. ಈಗಲಾದರೂ ತಮ್ಮ ಮನೆಯಲ್ಲಿರುತ್ತಾಳೆಂದು ಬಗೆದಿದ್ದ ಸವಿತಳ ತಂದೆ ತಾಯಿಯರಿಗೆ ತಣ್ಣೀರೆರಚಿದಂತಾಗಿತ್ತು.

ಒಂದುದಿನ ಹೀಗೇ ಆರಾಮವಾಗಿ ಮಾತಾಡುತ್ತಾ, ಮನೆಯಲ್ಲಿ ಎಲ್ಲರ ಮುಂದೆ ಒಂದು ವಿಷಯ ತೆಗೆದಳು ಸವಿತ. 'ಅತ್ತೆ, ನಾನು ಕೆಲಸಕ್ಕೆ ಹೋಗಬಹುದೇ?'

'ಅಲ್ಲಮ್ಮ, ಆಗಲೋ ಈಗಲೋ ಎನ್ನುವಂತಿದೆ. ಅದಕ್ಕೇ ಅಲ್ವೇ ರಜ ಹಾಕಿರೋದು?'

'ಸವಿ, ಯಾಕೆ ಪೀಠಿಕೆ? ಮನಸ್ಸಿನಲ್ಲಿರುವುದನ್ನು ನೇರವಾಗಿ ಹೇಳು.' ಜಯಂತ ಕಡ್ಡಿತುಂಡು ಮಾಡಿದ.

'ಜಯಂತ್, ನಾನು ಕೆಲಸಕ್ಕೆ ಹೋಗುವುದಿಲ್ಲ. ರಾಜೀನಾಮೆ ಕೊಡುತ್ತೇನೆ. ಅತ್ತೆ, ಮಾವ, ಮಗುವಿನೊಂದಿಗೆ ಹಾಯಾಗಿರಬೇಕೆಂದುಕೊಂಡಿದ್ದೇನೆ.'

ಅತ್ತೆ ಮಾವ ಜೋರಾಗಿ ನಕ್ಕರು. ಜಯಂತನೂ ಹುಸಿನಗೆ ನಕ್ಕ. 'ನೀನು ರಜೆ ಹಾಕಿದ ದಿನವೇ ನಿನ್ನ ರಾಜೀನಾಮೆ ಪತ್ರವನ್ನು ರೆಡಿ ಮಾಡಿದ್ದೇನೆ. ಅದಕ್ಕೆ ನಿನ್ನತ್ತೆ ಮಾವನವರದ್ದೇ ಒತ್ತಾಯ. ಡೇಟ್ ಹಾಕಿ ಮೇಲ್ ಮಾಡುವುದಷ್ಟೆ. ನೀನು ಸುಖವಾಗಿ ನೆಮ್ಮದಿಯಾಗಿ ಮನೆಯಲ್ಲಿರಲಿ ಅಂತಾನೇ ನಮ್ಮೆಲ್ಲರ ಆಸೆ.' ಸವಿತಾ ನಿಧಾನವಾಗಿ ಹೋಗಿ ಅತ್ತೆಯನ್ನು ತಬ್ಬಿಕೊಂಡು ಬಿಕ್ಕಿದಳು. ಇಷ್ಟುವರ್ಷ ತಾನು ಮನೆಗಾಗಿ ಪಟ್ಟ ಕಷ್ಟಗಳು ಕಣ್ಣ ಮುಂದೆ ಹಾದು ಹೋದವು. ಅವಳನ್ನು ಯಾರೂ ಸಮಾಧಾನ ಪಡಿಸಲಿಲ್ಲ. ಅತ್ತೆ ಬೆನ್ನು ಸವರುತ್ತಿದ್ದರು.

ಹದಿನೈದು ದಿನಗಳ ನಂತರ ಆಸ್ಪತ್ರೆಯಲ್ಲಿ,

'ಅತ್ತೇ......' ಅಮ್ಮ ಹತ್ತಿರದಲ್ಲೆ ನಿಂತಿದ್ದರೂ ಅತ್ತೆಯನ್ನು ದೀನಳಾಗಿ ನೋಡುತ್ತಾ ಹತ್ತಿರಕ್ಕೆ ಕರೆದಳು. ಜಯಂತನಿಗೆ ಸವಿತಳ ನಡೆ ಸರಿಯೆನಿಸುತ್ತಿಲ್ಲ, ತಾಯಿಯೇ ಹತ್ತಿರವಿದ್ದು, ಇವಳು ಮಾಡುತ್ತಿರುವುದು ಸರಿಯೇ ಅನಿಸಕತೊಡಗಿ, 'ಅಮ್ಮಾ, ಅತ್ತೆಯವರೇ ಇದ್ದಾರೆ. ನೀನು ಬಾ ಈ ಕಡೆಗೆ.' ಆದರೆ ಸವಿತ ಕೈಬೀಸಿ ಕರೆದಳು. ವಿಧಿಯಿಲ್ಲದೆ ಅತ್ತೆ ಹತ್ತಿರ ಹೋದರು.

ಸವಿತಳಿಗೆ ನೋವು ಶುರುವಾಗಿ ಒಂದೂವರೆ ದಿನ ಕಳೆದರೂ ಇನ್ನೂ ಪ್ರಸವವಾಗುತ್ತಿಲ್ಲ, ಡಾಕ್ಟರುಗಳೂ ಕಾಯುತ್ತಿದ್ದಾರೆ. ನಾರ್ಮಲ್ ಡೆಲಿವರಿ ಆಗುತ್ತದೆ ಹೆದರಬೇಡಿ ಎಂದಿದ್ದಾರೆ. ಆದರೆ ಎಲ್ಲರಲ್ಲೂ ಆತಂಕ ಮನೆ ಮಾಡಿದೆ. ರಾತ್ರಿ ಹನ್ನೆರಡು ಗಂಟೆಗೆ ಸಿಸೇರಿಯನ್ ಮಾಡಲೇಬೇಕೆಂದು ಜಯಂತನ ಹತ್ತಿರ ಸಹಿ ಹಾಕಿಸಿಕೊಂಡರು. ಸತತವಾಗಿ ನಲವತ್ತೈದು ನಿಮಿಷಗಳ ಕಾಲ ಶಸ್ತ್ರಚಿಕಿತ್ಸೆ ನಡೆದು, ಕಂದನ ಅಳುವಿನ ದನಿ ಕೇಳಿಸಿತು. ಆ ಧ್ವನಿಯ ಮಧುರತೆಗೆ ಮನಸೋತ ಮನೆಯವರೆಲ್ಲರೂ ಸಿಸ್ಟರ್‌ನ್ನು ಮಗು ತೋರಿಸೆಂದು ಕಾಡಿಸತೊಡಗಿದರು. ಎಂತಹ ಮಗು? ಎಷ್ಟು ಕೆಜಿ ಪ್ರಶ್ನೆಗಳ ಮಳೆ!

ಸುಮಾರು ಹೊತ್ತು ಕಳೆದು ಹೋಯಿತು. ಆಪರೇಷನ್ ಕೊಠಡಿಯಿಂದ ಡಾಕ್ಟರು ಹೊರಬಂದರು. 'ಒಬ್ಬರು ಹೋಗಿ. ವಾರ್ಡ್‌ಗೆ ಶಿಫ್ಟ್ ಮಾಡಿದ ಮೇಲೆ ಎಲ್ಲರೂ ನೋಡುವಿರಂತೆ.' ಎಂದು ಹೊರಟುಹೋದರು. ಜಯಂತ ತನ್ನಮ್ಮನನ್ನೇ ಕಳಿಸಿದನು. ಸವಿತ ಸೋತುಹೋಗಿದ್ದಳು. ಕಣ್ಣಲ್ಲಿ ಆಯಾಸ ಮಡುಗಟ್ಟಿತ್ತು. 'ಅತ್ತೇ' ಸ್ವರವೇ ಹೊರಡಲಿಲ್ಲ. ಆದರೆ ಮುಖದಲ್ಲಿ ನಗು ಹರಡಿತ್ತು. 'ಸವೀ, ಸವಿತಾ.....' ಮತ್ತೆ ಮತ್ತೆ ಕರೆದರೂ ಸವಿ ಅಲ್ಲಾಡಲಿಲ್ಲ. ಹೊರಗೆ ಓಡಿಬಂದು ಡಾಕ್ಟರನ್ನು ಕರೆದರು. ಯಾರೇ ಬಂದರೂ ಸವಿತಾ ಮರಳಿ ಬಾರದ ಲೋಕಕ್ಕೆ ಹೊರಟುಹೋಗಿದ್ದಳು. ಜಯಂತ, 'ಏನಾಯ್ತು ಡಾಕ್ಟರ್!' ಕಿರುಚಿದ.

ಡಾಕ್ಟರು 'ಸಾರಿ, ಹಾರ್ಟ್‌ಅಟ್ಯಾಕ್.'

ತನ್ನವರ ಜೊತೆ ಸಮಯ ಕಳೆಯಬೇಕೆಂದವಳನ್ನು ಕಾಲವೇ ಜೀವನಕ್ಕೇ ರಾಜೀನಾಮೆ ಕೊಡಿಸಿ ಕರೆದೊಯ್ದಿತ್ತು. ಸವಿಯ ಅಪ್ಪ ಅಮ್ಮ ಸಾವಿಗೆ ಬಂದ ನೆಂಟರಂತೆ ದೂರ ನಿಂತು ಸವಿತಳ ಮುಖವನ್ನೇ ನೋಡುತ್ತಿದ್ದರು.

ಸದ್ಗುರು ಗುರುಕುಲ ಸಾಧನಪಾದದ ಅನುಭವಕಥನದ ಏಳನೆಯ ಭಾಗ ಇಲ್ಲಿದೆ.

ಧ್ಯಾನದ ಅಪೂರ್ವ ಅನುಭವ

ಅನುಪಮಾ ಮಂಗಳವೇಢೆ, ಶಿಕಾಗೊ

ಎಂಟು ದಿನಗಳ ಕಾರ್ಯಕ್ರಮವಾದ ಲಿಂಗಸೇವೆಯಲ್ಲಿ ನಮ್ಮ ತಂಡವು ಐದು ದಿನಗಳನ್ನು ಆಗಲೇ ಕಳೆದಾಗಿತ್ತು. ಇಷ್ಟು ದಿನ ಧ್ಯಾನಲಿಂಗದಿಂದ ಬಲುದೂರದ ಸ್ಥಳಗಳಲ್ಲಿ ಸೇವೆಯಾದರೆ, ನಂತರದಲ್ಲಿ ಧ್ಯಾನಲಿಂಗದ ಹೊರ ಆವರಣದಲ್ಲಿ. ದಿನ ಕಳೆದಂತೆ ಧ್ಯಾನಲಿಂಗಕ್ಕೆ ಹತ್ತಿರವಾಗುತ್ತಿದ್ದೇವೆ ಎಂಬ ಸಮಾಧಾನವಿದ್ದರೂ ಯಾವಾಗ ಒಳಹೋಗುತ್ತೇವೋ ಎಂಬ ಕಾತರ.

ಭಕ್ತಾದಿಗಳನ್ನು ಧ್ಯಾನಲಿಂಗ ಆವರಣದ ಒಳಗೆ ಬಿಡುವುದು ಪ್ರತಿ 15 ನಿಮಿಷಕ್ಕೊಮ್ಮೆ. ಧ್ಯಾನಲಿಂಗಕ್ಕೆ ಅರ್ಪಿಸಲಿಕ್ಕೆ ತಾವರೆಹೂವು, ಧೂಪ, ವಸ್ತ್ರ ಹೂವಿನಮಾಲೆ, ಲಿಂಗಜ್ಯೋತಿ ಮುಂತಾದವು ಹೊರಗಿನ ಕೌಂಟರ್‌ನಲ್ಲಿ ಸಿಗುತ್ತವೆ. ಈ ಕೌಂಟರ್ ಬಳಿಯ ಸೇವೆಯೂ ನನಗಿಷ್ಟವಾಗಿತ್ತು. ಕಾರಣವೆಂದರೆ ತಾವರೆ ಹೂವುಗಳು. ಮೊಗ್ಗಿನಂತಿರುವ ತಾವರೆಹೂವನ್ನು ನಿಧಾನವಾಗಿ, ನಾಜೂಕಾಗಿ ಒಂದೊಂದೇ ಎಲೆಯನ್ನು ಬಿಡಿಸುತ್ತಾ ಅರಳಿಸಬೇಕು. ಅವಸರ ಮಾಡಿದರೆ ಎಲೆ ಹರಿದುಹೋಗುತ್ತದೆ. ಪೂರ್ಣ ಗಮನವಿಟ್ಟು, ತಾಳ್ಮೆಯಿಂದ ಮಾಡುವ ಈ ಪ್ರಕ್ರಿಯೆ ಧ್ಯಾನವೇ ಎನಿಸುತ್ತಿತ್ತು.

ಇನ್ನೊಂದು ಆಪ್ತವೆನಿಸಿದ್ದು, ಮೈಕ್‌ನಲ್ಲಿ ಎನೌನ್ಸ್ ಮಾಡುವ ಸೇವಾವಕಾಶ. ಧ್ಯಾನಲಿಂಗದ ಒಳ ಅವರಣದೊಳಗೆ ಭಕ್ತಾದಿಗಳನ್ನು ಕಳುಹಿಸುವ ಮುನ್ನ ಅವರಿಗೆ, ಒಳಹೋದಮೇಲೆ ಏನು ಮಾಡಬೇಕು, ಏನು ಮಾಡಬಾರದು ಎಂಬ ಮಾರ್ಗದರ್ಶನ ಮಾಡಬೇಕು. ಆದರೆ ಒಮ್ಮೆಲೇ ನಿರಾಸೆಯೆನಿಸಿದ್ದು ನನ್ನನ್ನು ಚಂದ್ರಕುಂಡದ ಬಳಿ ಕಾವಲು ಕಾಯುವ ಕೆಲಸಕ್ಕೆ ಹಾಕಿದಾಗ! ಅದಕ್ಕೆ ಕಾರಣವಿತ್ತು. ಲಿಂಗಭೈರವಿ ದೇವಸ್ಥಾನದಿಂದ ಧ್ಯಾನಲಿಂಗಕ್ಕೆ ಹೋಗುವ ಮಾರ್ಗದಲ್ಲಿರುವ ಚಂದ್ರಕುಂಡದ ಮುಂದೆ ಪ್ರತಿದಿನ ಎರಡುಮೂರು ಸಲವಾದರೂ ಓಡಾಡುತ್ತಿದ್ದೆ. ಚಂದ್ರಕುಂಡದ ಮುಂಭಾಗದಲ್ಲಿ ಸೈಲೆನ್ಸ್ ಪ್ಲೀಸ್ ಫಲಕ ಹಿಡಿದು ಕುಳಿತ ಸ್ವಯಂಸೇವಕರನ್ನು ನೋಡುತ್ತಿದ್ದೆ. ಹೆಂಗಸರಿಗಾಗಿ ಇರುವ ಚಂದ್ರಕುಂಡದೊಳಗೆ ಅನ್ಯರು ಹೋಗದಂತೆ, ಹಾದುಹೋಗುವ ಭಕ್ತಾದಿಗಳು ಗಲಾಟೆ ಮಾಡದೆ ಮೌನದಿಂದಿರುವಂತೆ ನೋಡಿಕೊಳ್ಳುವುದು ಅವರ ಜವಾಬ್ದಾರಿ. ಫಲಕ ಹಿಡಿದು ಸುಮ್ಮನೆ ಕುಳಿತರೆ ಕೆಲಸವಾದಂತೆ.ಯಾರಬಳಿಯೂ ಮಾತಿನ ಆವಶ್ಯಕತೆಯಿಲ್ಲ. ಆ ಸ್ವಯಂಸೇವಕರನ್ನು ನೋಡಿದಾಗೆಲ್ಲ ನನಗೆ ಅವರ ಬಗ್ಗೆ- ಅಯ್ಯೋ ಇದರಷ್ಟು ಬೋರಿಂಗ್ ಕೆಲಸ ಇನ್ನೊಂದಿಲ್ಲ ಎನಿಸುತ್ತಿತ್ತು. ಹಾಗಾಗಿ ಆ ಕೆಲಸಕ್ಕೆ ನೇಮಿಸಿದಾಗ ಒಲ್ಲದ ಮನಸ್ಸಿನಿಂದ ಹೋದೆ.

ಆ ಕೆಲಸವನ್ನು ಮಾಡುತ್ತಿದ್ದ ಸಾಧನಪಾದದ ಹುಡುಗಿಯ ಬಳಿ 'ಮುಂದಿನ ಶಿಫ್ಟ್ ನನಗೆ ಕೊಟ್ಟಿದ್ದಾರೆ' ಎಂದಾಗ ಆಕೆ ನನಗೆ ಸೂಕ್ತ ಮಾರ್ಗದರ್ಶನ ಮಾಡಿದಳು. ತಲೆಯಾಡಿಸಿ ಫಲಕ ತೆಗೆದುಕೊಂಡು ಚೇರ್ ಬಳಿ ಕಾವಲು ಕಾಯುತ್ತ ಕುಳಿತೆ. ಫಲಕವನ್ನು ಮುಖದ ಮುಂದೆ ಹಿಡಿದು ತಲೆತಗ್ಗಿಸಿ ಯಾರಿಗೂ ನನ್ನ ಮುಖ ಕಾಣದಂತೆ ಕುಳಿತೆ! ಸ್ವಲ್ಪ ಹೊತ್ತಿನ ಬಳಿಕ ನನಗೇ ಅಸಹ್ಯವೆನಿಸಿತು ನನ್ನ ಬಗ್ಗೆ, ನನ್ನ ಆಲೋಚನೆಗಳ ಬಗ್ಗೆ. ಇಲ್ಲಿಯವರೆಗೆ ಈ ಸೇವೆಯನ್ನು ಮಾಡುತ್ತಿದ್ದ ಸಾಧನಪಾದ ಹುಡುಗಿಯರನ್ನ ಕಂಡಾಗ, ನನ್ನ ಮನಸ್ಸಲ್ಲಿ ಬಹುಶಃ ಇವರಿಗೆ ಬೇರಾವ ಕುಶಲತೆ ಇಲ್ಲವಾದ್ದರಿಂದ ಈ ಕೆಲಸಕ್ಕೆ ಹಾಕಿದ್ದಾರೆ ಎಂಬ ಸಂಕುಚಿತ ಭಾವವಿತ್ತು. ಈಗ ಆ ಕೆಲಸ ನನ್ನ ಪಾಲಿಗೇ ಬಂದಾಗ ನನ್ನ ಪೂರ್ವಗ್ರಹದ ಬಗ್ಗೆ ಯೋಚಿಸುವಂತೆ ಮಾಡಿತ್ತು.

ಸ್ವಲ್ಪ ಹೊತ್ತಿನಲ್ಲಿಯೇ ಏನೋ ಗೋಚರವಾದಂತೆನಿಸಿತು. ಮನಸ್ಸು ತಿಳಿಯಾಯಿತು. ಚೇರ್ ಮೇಲಿಂದ ಎದ್ದೆ. ತಲೆಯೆತ್ತಿ ನಿಂತೆ. ಫಲಕವನ್ನು ಎದೆಯ ಮುಂಭಾಗದಲ್ಲಿ ಹಿಡಿದೆ. ಚೇರ್ ಬಿಟ್ಟು, ಚಂದ್ರಕುಂಡದ ಉದ್ದಗಲಕ್ಕೂ ನಡೆದಾಡಲು ಪ್ರಾರಂಭಿಸಿದೆ. ಮುಖದಲ್ಲಿ ಗೆಲುವು ಬಂದಿತು. ಗಾಂಧೀಜಯಂತಿ ಮತ್ತು ವಾರಾಂತ್ಯವಾಗಿದ್ದರಿಂದ, ಆಶ್ರಮ ಗಿಜಿಗಿಜಿಯೆನ್ನುತ್ತಿತ್ತು. ಹಾದು ಹೋಗುವವರಿಗೆಲ್ಲ ನಗುಮೊಗದಿಂದ ತಲೆಬಾಗಿ ನಮಸ್ಕರಿಸಿದೆ. ಮಾತನಾಡುತ್ತ ಹೋಗುವವರಿಗೆ, ನನ್ನ ಬಾಯಿಯ ಮೇಲೆ ಬೆರಳಿಟ್ಟು ಮಾತಾಡದಂತೆ ಸನ್ನೆ ಮಾಡಿದೆ. ಒಂದೊಂದು ಕ್ಷಣವೂ ಬಹಳ ಆಪ್ಯಾಯಮಾನವೆನಿಸಿತ್ತು. ಐದು ಘಂಟೆಗಳೇ ಸರಿದಿದ್ದರೂ ಸಮಯ ಹೋದದ್ದೇ ತಿಳಿದಿರಲಿಲ್ಲ. ಮಾರನೇ ದಿನವೂ ಅದೇ ಸೇವೆ ಎಂದಾಗ ಈಬಾರಿ ಇನ್ನಷ್ಟು ಉತ್ಸುಕತೆಯಿಂದ ಸೇವೆಗೆ ಸಮರ್ಪಿಸಿಕೊಂಡೆ. ಲಿಂಗಸೇವೆಯಲ್ಲಿ ನನಗೆ ಅತಿಹೆಚ್ಚು ಖುಷಿಕೊಟ್ಟದ್ದು ಈ ಸೇವೆಯೇ! ಸದ್ಗುರು ಹೇಳುವ ನೀವು ಏನು ಮಾಡುತ್ತೀರಿ ಎಂಬುದು ಮುಖ್ಯವಲ್ಲ, ಹೇಗೆ ಮಾಡುತ್ತೀರಿ ಎಂಬುದು ಮುಖ್ಯ ಮಾತಿನ ಸತ್ಯದ ಅರಿವಾಗಿತ್ತು.

ಅಮರಚಿತ್ರಕಥೆಯಲ್ಲಿ ನಾನು

ಕೊನೆಗೂ ನಮ್ಮ ತಂಡ ನಿರೀಕ್ಷಿಸುತ್ತಿದ್ದ ಧ್ಯಾನಲಿಂಗದ ಗರ್ಭಗುಡಿಯಲ್ಲಿಯ ಸೇವೆಯ ಸಮಯ ಬಂತು! ಬೆಳಿಗ್ಗೆ ನಾಲ್ಕೂವರೆಗೆ ಗರ್ಭಗುಡಿಗೆ ಹೋದರೆ, ನೆಲವನ್ನು ಶುಚಿಗೊಳಿಸುವುದರಿಂದ ದಿನ ಪ್ರಾರಂಭವಾಗುತ್ತದೆ. ಸಣ್ಣಗೆ ಉರಿಯುತ್ತಿರುವ ದೀಪದ ಬೆಳಕಿನಲ್ಲಿ, ಸ್ವಾಮಿ ಬ್ರಹ್ಮಚಾರಿಗಳೊಡನೆ ಧ್ಯಾನಲಿಂಗದ ಎದುರು ಕುಳಿತು 5:30ಕ್ಕೆ ಗುರುಪೂಜೆ ಮಾಡುತ್ತಿದ್ದದ್ದು ಮರೆಯಲಾಗದ ಅನುಭವ. ನಂತರ ಪೂಜೆ-ಅಲಂಕಾರಕ್ಕಾಗಿ ಹೂ ಕೊಯ್ಯುವ ಕೆಲಸ ಬಹಳ ಸಂತೋಷ ತಂದಿತ್ತು. ನಾಗಲಿಂಗ ಹೂವಿನಂಥ ಎಷ್ಟೋ ಹೂವುಗಳನ್ನು ಮೊದಲಬಾರಿಗೆ ಅಲ್ಲಿ ನೋಡಿದ್ದೆ. ಬೆಳಗಿನ ತಂಗಾಳಿ, ಸೂರ್ಯನ ಎಳೆಯ ಕಿರಣಗಳು, ಹಕ್ಕಿಗಳ ಕಲರವ, ಗಿಡಮರಗಳು, ಬೆಟ್ಟಗಳ ಸಾಲುಗಳ ನೋಟ, ಇದನ್ನೆಲ್ಲ ಅನುಭವಿಸುತ್ತ, ಬುಟ್ಟಿ ಹಿಡಿದು ಹೂವು ಕೊಯ್ಯುತ್ತಿದ್ದರೆ, ಚಿಕ್ಕವಳಿದ್ದಾಗ ಓದುತ್ತಿದ್ದ ಅಮರಚಿತ್ರಕಥೆಯ ಪುಟದೊಳಗೆ ಹೋಗಿದ್ದೇನೆ ಎಂಬ ಭಾವನೆಯಾಗಿತ್ತು.

ಹೂವುಗಳನ್ನು ತಂದು ಧ್ಯಾನಲಿಂಗದ ಮುಂದೆ ನೆಲದ ಮೇಲೆ ಆಲಂಕಾರಿಕ ರಂಗೋಲಿಯಂತೆ ಜೋಡಿಸುವುದೂ ನಮ್ಮ ಜವಾಬ್ದಾರಿಯಾಗಿತ್ತು. ಅದಲ್ಲದೆ, ಅಲ್ಲಿರುವ ಮಂಟಪದಲ್ಲಿ ಪತಂಜಲಿಯ ಮೂರ್ತಿ, ಅಕ್ಕ ಮಹಾದೇವಿ, ಬೇಡರ ಕಣ್ಣಪ್ಪ, ಮತ್ತಿತರ ಕೆತ್ತನೆಗಳಿಗೆ ಹೂವಿನ ಅಲಂಕಾರ ಮಾಡುವ ಹೊತ್ತಿಗೆ ಭಕ್ತಾದಿಗಳು ಒಳಬರಲು ಪ್ರಾರಂಭಿಸುತ್ತಿದ್ದರು. ಭಕ್ತಾದಿಗಳು ನಿಃಶಬ್ದರಾಗಿರುವಂತೆ ನೋಡಿಕೊಂಡು, ಘಂಟೆ ಹೊಡೆದಾಗ ಒಳಬಿಡುವುದು ನಮ್ಮ ಜವಾಬ್ದಾರಿ. ವೃದ್ಧರಿಗೆ, ಚಕ್ಕಮಕ್ಕ ಹಾಕಿ ಕುಳಿತುಕೊಳ್ಳಲು ಆಗದವರಿಗೆ ಸ್ಟೂಲುಗಳನ್ನು ಒದಗಿಸುವುದು, ಮಕ್ಕಳು ಗಲಾಟೆ ಮಾಡದಂತೆ ನಿಗಾ ವಹಿಸುವುದು, ಮತ್ತೆ ಘಂಟೆ ಹೊಡೆಯುವ ಮುನ್ನ ಯಾರೂ ಎದ್ದು ಓಡಾಡದಂತೆ ನೋಡಿಕೊಳ್ಳುವುದು ನಮ್ಮ ಕೆಲಸ.

ಧ್ಯಾನಲಿಂಗದ ಗರ್ಭಗುಡಿಯಲ್ಲಿ ನೂರಾರು ಜನ ಕುಳಿತು ಧ್ಯಾನ ಮಾಡಬಹುದು. ಪ್ರತಿ 15 ನಿಮಿಷಕ್ಕೊಮ್ಮೆ ಸಣ್ಣದಾಗಿ ಘಂಟೆ ಬಾರಿಸುತ್ತಾರೆ. ಧ್ಯಾನ ಸಾಕೆನಿಸುವವರು ಎದ್ದು ಹೋಗಬಹುದು, ಇಲ್ಲವಾದರೆ ಮುಂದುವರಿಸಬಹುದು. ಬೆಳಿಗ್ಗೆ 11:50ರಿಂದ 12:10ರವರೆಗೆ, ಸಂಜೆ 5:50ರಿಂದ 6:10ರವರೆಗೆ ಧ್ಯಾನಲಿಂಗಕ್ಕೆ ನಾದ ಆರಾಧನವಿರುತ್ತದೆ. ಹಾಡು, ಆಲಾಪನೆ, ವಾದ್ಯಶಬ್ದಗಳ ಮೂಲಕ ನಾದದ ಸಮರ್ಪಣೆ. ಜೊತೆಗೆ, ಲಿಂಗಸೇವಕರಿಗೆ ಸಿಂಗಿಂಗ್ ಬೌಲ್ ಬಳಸಿ ನಾದ ಸಮರ್ಪಿಸುವ ಸದವಕಾಶ. ನಾದ ಹೊರಹೊಮ್ಮಿಸುವುದು ಹೇಗೆಂದು ಹೇಳಿಹೊಡಲಿಕ್ಕೆ ಸ್ವಯಂಸೇವಕರೊಬ್ಬರು ಚಿಕ್ಕ ತರಬೇತಿ ಕೊಟ್ಟಿದ್ದು ಸಹಾಯವಾಗಿತ್ತು. ರಾತ್ರಿ ಎಂಟಕ್ಕೆ ಬಾಗಿಲು ಮುಚ್ಚಿ, ಧ್ಯಾನಲಿಂಗವನ್ನು ಶುಚಿಗೊಳಿಸಿ, ಲಿಂಗಜ್ಯೋತಿಗಳಲ್ಲಿರುವ ಬತ್ತಿಗಳನ್ನು ತೆಗೆದಿಟ್ಟು, ಕಸಗುಡಿಸಿ, ನೆಲ ಒರೆಸುವ ಹೊತ್ತಿಗೆ ಒಂಬತ್ತಾಗುತ್ತಿತ್ತು. ಆಮೇಲೂ ಒಂದು ಗಂಟೆ ಧ್ಯಾನಲಿಂಗವು ಆಶ್ರಮವಾಸಿಗಳಿಗಷ್ಟೇ ತೆರೆದಿರುತ್ತಿತ್ತು. 10ಕ್ಕೆ ಎಲ್ಲರನ್ನೂ ಹೊರಕಳುಹಿಸಿದರೆ ಆ ದಿನದ ಸೇವೆ ಮುಗಿದಂತೆ.

ಧ್ಯಾನಲಿಂಗದ ವ್ಯಾಪ್ತಿಯಲ್ಲಿ ಕೆಲವು ನಿಮಿಷಗಳ ಕಾಲ ಮೌನವಾಗಿ ಕುಳಿತರೆ ಸಾಕು, ಧ್ಯಾನದ ಬಗ್ಗೆ ಅರಿವಿಲ್ಲದವರೂ ಆಳವಾದ ಧ್ಯಾನಸ್ಥಿತಿಯನ್ನು ಅನುಭವಿಸುತ್ತಾರೆ ಎನ್ನುತ್ತಾರೆ ಸದ್ಗುರು. ಅದಕ್ಕಾಗಿ, ಕನಿಷ್ಠ 15ನಿಮಿಷಗಳನ್ನಾದರೂ ಕಳೆಯಲು ದೇಶದ ಮೂಲೆಮೂಲೆಗಳಿಂದ ಬರುತ್ತಾರೆ. ಅಂತಹದರಲ್ಲಿ, ಅತ್ಯಮೂಲ್ಯವಾದ, ಅನನ್ಯವಾದ, ಪ್ರಬಲವಾದ, ಪವಿತ್ರವಾದ, ಏಕೈಕ ಧ್ಯಾನಲಿಂಗದ ಸಮೀಪದಲ್ಲಿ ಇಡೀದಿನ ಕಳೆಯುವ ಅವಕಾಶ ಸಿಕ್ಕಿದ್ದು ಪೂರ್ವಜನ್ಮದ ಪುಣ್ಯವೇ ಎಂಬುದು ನನ್ನ ನಂಬಿಕೆ. (ಮುಂದುವರಿಯುವುದು) anu2nitin@gmail.com



ತನ್ನ ಮರಿಗೆ ಮೀನಿನ ತುತ್ತನ್ನು ನೀಡುವ ಈ ಹಕ್ಕಿಯ ಶೈಲಿಯನ್ನು 'ಕೈತುತ್ತು' ಎನ್ನಬೇಕೆ, 'ಬಾಯಿತುತ್ತು' ಎನ್ನಬಹುದೆ?

ಹಕ್ಕಿ ಮರಿಗೆ ಮೀನಿನ ಕೈತುತ್ತು!

» ಶಶಿಧರಸ್ವಾಮಿ ಆರ್. ಹಿರೇಮಠ

ನಮ್ಮ ಹಳ್ಳಿಯ ಹೊರ ವಲಯದಲ್ಲಿರುವ 'ದೊಡ್ಡ ಕಟ್ಟೆಕೆರೆ', ವಾಸ್ತವವಾಗಿ ಸಕಲೆಂಟು ಹಕ್ಕಿಗಳಿಗೆ 'ಹೋಂ ಸ್ಟೇ' ಇದ್ದಂತೆ! ಅಥವಾ, ಹಿಂದಿನ ಕಾಲದ ಪರಿಭಾಷೆಯಲ್ಲಿ ಕರೆಯುವುದಾದರೆ, ತವರು ಮನೆ! ಆ ಕೆರೆಗೆ ನೂರಾರು ಹಕ್ಕಿಗಳು ಕಾಲದಿಂದ ಕಾಲಕ್ಕೆ ಬಂದು, ಸಂತೋಷದಿಂದ ಈಜಾಡುತ್ತಾ ಇರುತ್ತವೆ. ಚಳಿಗಾಲ ಬಂತೆಂದರೆ, ಬೇರೆ ಬೇರೆ ಪ್ರದೇಶಗಳಿಂದ ಹೊಸ ಹೊಸ ಹಕ್ಕಿಗಳು ಆಗಮಿಸಿ, ಆ ನೀಲ ನೀರಿನ ಪ್ರಶಾಂತ ವಾತಾವರಣದಲ್ಲಿ ಅಕ್ಷರಶಃ ಹಬ್ಬದ ವಾತಾವರಣವನ್ನೇ ಸೃಷ್ಟಿಸುತ್ತವೆ. ದೊಡ್ಡ ಕಟ್ಟೆಕೆರೆಯ ನೀರಿನಲ್ಲಿ ಈಜಾಡುವ ಹಲವಾರು ಪ್ರಭೇದದ ಹಕ್ಕಿಗಳನ್ನು, ಅವುಗಳ ಮರಿಗಳನ್ನು ನೋಡುವುದೆಂದರೆ ಕಣ್ಣಿಗೆ ಹಬ್ಬ; ನನ್ನ ಬಳಿ ಇರುವ ಮಾರುದ್ದ ಲೆನ್ಸ್‌ನ ಕ್ಯಾಮೆರಾ ಕಣ್ಣಿಗಂತೂ, ಹಕ್ಕಿ ಮತ್ತು ಮರಿಗಳನ್ನು ಸೆರೆಹಿಡಿಯುವ, ಕಲಾತ್ಮಕ ಚೌಕಟ್ಟು ನೀಡುವ ಅಪರೂಪದ ತಾಣ, ನಮ್ಮೂರಿನ ಆ ಕೆರೆ.

ಆ ದಿನ ರವಿವಾರ ಕಚೇರಿ ರಜೆ ಇದ್ದುದ್ದರಿಂದ, ಫೋಟೋಗ್ರಫಿಗೆಂದು ಕೆರೆಯ ಬಳಿಗೆ ಹೋದೆ. ಅಲ್ಲಿ ಪುಟ್ಟ ಪಕ್ಷಿಗಳು ವಿಹಾರದಲ್ಲಿ ತೊಡಗಿದ್ದವು. ನೀರಿನಲ್ಲಿ ಗುಳುಕ್ ಎಂದು ಮುಳುಗುವುದು, ಮತ್ತೆ ಮೇಲೆಳುವುದು , ಪುನಃ ಮುಳುಗುವುದು ಏಳುವುದು, ಹಾಗೆ ಮೇಲೆದ್ದಾಗ ತಮ್ಮ ಬಾಯಿ ಚಪ್ಪರಿಸುವುದನ್ನು ಸೂಕ್ಷ್ಮವಾಗಿ ಗಮನಿಸಿದೆ. ಗಮನಿಸಿದಾಗ ಗೊತ್ತಾಯಿರು, ತಾಯಿ ಹಕ್ಕಿ ತನ್ನ ಮರಿಗಳಿಗೆ ಬೇಟೆಯಾಡುವದನ್ನು ಕಲಿಸುತ್ತಾ ಮೀನನ್ನು ಕಬಳಿಸುವುದರಲ್ಲಿ ಮಗ್ನವಾಗಿತ್ತು. ತಾಯಿ ಹಕ್ಕಿಯು ನೀರಿನಲ್ಲಿ ಮುಳುಗಿ, ಮೀನೊಂದನ್ನು ಕಚ್ಚಿ ತಂದಿತು; ಆ ದೃಶ್ಯವು ನನ್ನ ಕ್ಯಾಮೆರಾದಲ್ಲಿ ಸೆರೆಯಾಯಿತು. ಮೀನು ಇನ್ನೂ ಜೀವಂತವಿದ್ದು, ಅದರ ಬಾಯಿಯಿಂದ ಜಾರಿದಾಗ, ಹಕ್ಕಿ ಪುನಃ ಕೌಶಲದಿಂದ ಅದನ್ನು ಹಿಡಿದು, ತನ್ನ ಮರಿಯನ್ನು ಕರೆಯಿತು. ಮರಿಯು ಈಜುತ್ತಾ ಬಂದು, ತಾಯಿ ನೀಡಿದ ಮೀನಿನ ತುತ್ತನ್ನು ಗುಳುಂ ಸ್ವಾಹಾ ಮಾಡಿತು!

ಈ ಹಕ್ಕಿಯೇ 'ಗುಳುಮುಳುಕ.' ಜಲ ಚತುರೆ, ನೀರು ಕೋಗಿಲೆ, ಪ್ಲವ ಎಂತೆಲ್ಲ ನಾನಾ ಹೆಸರುಗಳಿಂದ ಕರೆಯುತ್ತಾರೆ. ಸಾಮಾನ್ಯವಾಗಿ ರಾಜ್ಯದೆಲ್ಲೆಡೆ ಕಾಣಸಿಗುವ ಈ ಹಕ್ಕಿ ಜಲ ಪಕ್ಷಿಗಳಲ್ಲಿಯೇ ಅತ್ಯಂತ ಪುಟ್ಟ ಹಕ್ಕಿ, ಮೊಂಡು ಬಾಲ, ತಿಳಿ ಕಂದು ಮೈ ಬಣ್ಣ ಹೊಂದಿ ಹೊಟ್ಟೆಯ ಪುಕ್ಕಗಳು ಬಿಳಿ ವರ್ಣದಿಂದ ಕೂಡಿದ್ದು ಮಕಮಲ್ ಬಟ್ಟೆಯಷ್ಟು ನುಣುಪಾಗಿವೆ. ಚೂಪಾದ ಸಣ್ಣ ಕೊಕ್ಕನ್ನು ಹೊಂದಿವೆ. ಇದು ಉತ್ತಮ ಮುಳುಗು ಹಕ್ಕಿ ಹಾಗೂ ಈಜುಗಾರ ಹಕ್ಕಿ. ಈಜುವಾಗ ಕಿಚ ಕಿಚ ಎಂದು ಕೂಗುತ್ತವೆ; ಆದರೆ, ಹಾರುವಾಗ ತ್ರೀ, ತ್ರೀ ಎಂದು ತೀಕ್ಷ್ಣವಾಗಿ ಕೂಗುತ್ತವೆ. ಕಸಕಡ್ಡಿಗಳು ಹಾಗೂ ಜೊಂಡು ಹುಲ್ಲನ್ನು ಸೇರಿಸಿ ತೇಲುವ ಗೂಡನ್ನು ಕಟ್ಟಿ 3–5 ಬಿಳಿ ಮೊಟ್ಟೆಗಳನ್ನಿಟ್ಟು ಸುಮಾರು 20–21 ದಿನಗಳವರೆಗೆ ಕಾವು ನೀಡಿ ಮರಿಮಾಡಿಸುತ್ತದೆ. ಮರಿಗಳು ತಾಯಿ ಹಕ್ಕಿಯ ಬೆನ್ನಿನ ಮೇಲೆ ಸವಾರಿ ಮಾಡುವುದನ್ನು ನೋಡುವುದೇ ಒಂದು ಮಜಾ!

(ಚಿತ್ರಗಳು ಲೇಖಕರವು)



ಧರಣಿ ಕೂರುತ್ತೇನೆ ಎಂದು ಸೊಸೆ ಹೆದರಿಸುತ್ತಿದ್ದಾಳೆ!

Ask the Editor

» ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಕಾವೇರಮ್ಮ ಎಂ.ಕೆ., ಬೆಂಗಳೂರು

- **ಭಟ್ರೇ, ಮಾತು ಮಾತಿಗೆ ನನ್ನ ಸೊಸೆ, 'ಮನೆ ಮುಂದೆ ಧರಣಿ ಕೂರುತ್ತೇನೆ' ಎಂದು ಹೆದರಿಸುತ್ತಾಳೆ. ಇದಕ್ಕೆ ಏನು ಮಾಡಬೇಕು ಅನ್ನೋದೇ ಅರ್ಥವಾಗುವುದಿಲ್ಲ. ಏನು ಮಾಡಲಿ?**

– ಧರಣಿ ಕುಳಿತುಕೊಳ್ಳುವುದಿರಲಿ, ಹಾಗಂತ ಹೇಳಿದರೆ ಸಾಕು, ನೀವು ಹೆದರುತ್ತೀರಿ ಅನ್ನೋದು ಗೊತ್ತಾಗಿರಬೇಕು. ಹೀಗಾಗಿ ಆಕೆ ಧರಣಿ ಬೆದರಿಕೆಯ ನಾಟಕವಾಡುತ್ತಿದ್ದಾಳೆ. ನನಗೆ ಒಂದು ಡೌಟು, ನಿಮ್ಮ ಸೊಸೆ ವಾಟಾಳ್ ನಾಗರಾಜ್ ಅವರ ದೂರದ ಸಂಬಂಧಿಯಾ ಅಥವಾ ಅವರ ಅಭಿಮಾನಿಯಾ ಅಂತ. ಹೀಗಾಗಿ ಮಾತು ಮಾತಿಗೆ ಧರಣಿಯ ಬೆದರಿಕೆ ಹಾಕುತ್ತಿದ್ದಿರಬಹುದು. ಇಂಥ ವಿಷಯದಲ್ಲಿ ನೀವು ಸರ್ಕಾರದಂತೆ ವರ್ತಿಸಬೇಕು. ಯಾರು ಎಷ್ಟೇ ಪ್ರತಿಭಟನೆ ಮಾಡಲಿ, ಧರಣಿ ಕುಳಿತುಕೊಳ್ಳಲಿ, ಸರಕಾರದಲ್ಲಿದ್ದವರು ತಲೆಕೆಡಿಸಿಕೊಳ್ಳುವುದಿಲ್ಲ. ಅಘೋಷಿತ ಪ್ರತಿಪಕ್ಷ ನಾಯಕನಂತೆ ವರ್ತಿಸುತ್ತಿರುವ ನಿಮ್ಮ ಸೊಸೆಯ ಗೊಡ್ಡು ಬೆದರಿಕೆಗೆ ಮಣಿಯಬೇಡಿ. ವಾಟಾಳ್ ಅವರಂತೆ ಆಕೆ ಆಗಾಗ ಪ್ರತಿಭಟನೆಯ ವರಸೆಗಳನ್ನು ಬದಲಿಸಬೇಕಾಗುವುದು. ಇಲ್ಲಿ ನಾನು ನಿಮ್ಮ ಸೊಸೆಯೊಬ್ಬಳನ್ನು ಮಾತ್ರ ಅಲ್ಲ, ನೀವು ಹೆತ್ತ ಆ 'ಮಾಣಿಕ್ಯ'ವನ್ನು ಪ್ರಶ್ನಿಸಲೇಬೇಕು. ಸೊಸೆ ಧರಣಿ ಕುಳಿತಾಗ ಆತ ಏನು ಮಾಡುತ್ತಾನೆ?

ಜಿ.ರಜನಿ, ಬೆಂಗಳೂರು

- **ಭಟ್ರೇ, ಎದುರಿಗೆ ಸಿಕ್ಕಾಗ How are you ಅಂತ ಹಲವಾರು ಕೇಳುತ್ತಾರೆ. ನಾನು Fine ಅಂತ ಹೇಳ್ತೇನೆ. ಇದು ಬಿಟ್ಟು ಬೇರೆ ಉತ್ತರಗಳಿವೆಯಾ?**

– ಕೆಲವರು ಅವಸರದಲ್ಲಿರುತ್ತಾರೆ, ಎದುರಿಗೆ ಸಿಕ್ಕಾಗ ಮಾತಾಡಿಸಬೇಕಲ್ಲ ಎಂದು How are you? ಎಂದು ಕೇಳುತ್ತಾರೆ. ಅವರಿಗೆ ನಿನ್ನ ಉತ್ತರದ ಬಗ್ಗೆ ಆಸಕ್ತಿಯಿರುವುದಿಲ್ಲ. ಅಂಥವರಿಗೆ fine ಎಂದು ಚುಟುಕಾಗಿ ಉತ್ತರಿಸುವುದು ಒಳ್ಳೆಯದು. ಕೆಲವರು ಆಸ್ಥೆಯಿಂದ How are you? ಎಂದು ಕೇಳಿದಾಗ, ನಿನ್ನ ಜತೆ ಮಾತುಕತೆ ಲಂಬಿಸಲು ಆಸಕ್ತಿ ಹೊಂದಿರಲೂಬಹುದು. ಅವರಿಗೆ ಬರೀ fine ಎಂದು ಹೇಳುವ ಬದಲು, Somewhere between better and best ಅಥವಾ Much better now that you are here ಎನ್ನಬಹುದು. ಮಾತುಕತೆಯನ್ನು ವಿಸ್ತರಿಸಬಯಸಿದರೆ I don't know, you tell me. How am I right now? ಅಥವಾ Better now that I'm talking to you ಅಥವಾ I think I'm doing OK. How do you think I'm doing? ಎಂದು ಹೇಳಬಹುದು. ಈ ಪ್ರಶ್ನೆಗೆ ಉತ್ತರಿಸುವಾಗ ಹಾಗೆ ಕೇಳಿದವರು ಯಾರು ಮತ್ತು ಸನ್ನಿವೇಶ ಏನು ಎಂಬುದನ್ನು ಆಧರಿಸಿ, ಅದಕ್ಕೆ ತಕ್ಕಂತೆ ಉತ್ತರಿಸಬಹುದು.

ಕೆ.ವಿ.ನವೀನ, ಸಾಗರ

- **ಭಟ್ರೇ, ಎಲ್ಲಾ ಮಾಹಿತಿಯೂ ಉಪಯುಕ್ತವಾ?**

– ಯಸ್ ಉಪಯುಕ್ತ. ಆದರೆ ಅದು ನಮ್ಮ ಆಸಕ್ತಿ, ಉಪಯೋಗ ಮತ್ತು ಪ್ರಸ್ತುತತೆಯನ್ನು ಅವಲಂಬಿಸಿರುತ್ತದೆ. ಹಂದಿಗಳು ಬೆವರುವುದಿಲ್ಲ, ಪಾಂಡಾಗಳು ತಿಂದಿದ್ದೆಲ್ಲವನ್ನೂ ಕಕ್ಕ ಮಾಡುತ್ತವೆ, ಡಾಲ್ಫಿನ್‌ಗಳು ಒಂದು ಕಣ್ಣನ್ನು ತೆರೆದು ನಿದ್ದೆ ಮಾಡುತ್ತವೆ, ಜೇಡರ ಹುಳು ಬಲೆ ನೇಯಲು ಹದಿನೆಂಟು ಸೆಕೆಂಡುಗಳು ಸಾಕು... ಈ ರೀತಿಯ ಮಾಹಿತಿ ತಿಳಿದುಕೊಂಡರೆ ಹೆಚ್ಚಿನ ಪ್ರಯೋಜನ ಆಗಲಿಕ್ಕಿಲ್ಲ. ಆದರೆ ಇಂಥ ಮಾಹಿತಿಯನ್ನು ಸರಿಯಾಗಿ, ಸಂದರ್ಭಕ್ಕೆ ತಕ್ಕಂತೆ ಬಳಸಿಕೊಳ್ಳುವ ಜಾಣ್ಮೆ ನಿಮಗಿದ್ದರೆ ಅದು ವ್ಯರ್ಥವಲ್ಲ.

ಸುಜಯ್ ಎಂ.ಎಸ್., (ಇಮೇಲ್ ಮೂಲಕ)

- **ಭಟ್ರೇ, ಬೆಳಗ್ಗೆ ಬೇಗ ಏಳಲು ಏನು ಮಾಡಬೇಕು?**

– ಮತ್ತೇನೂ ಇಲ್ಲ, ಏಳಬೇಕು. ಬೇಗ ಏಳುವುದು ಸುಲಭ. ಹಾಸಿಗೆಯಲ್ಲಿ ಹೊರಳಾಡುತ್ತಿದರೆ, ಏಳಲು ಮನಸ್ಸಾಗುವುದಿಲ್ಲ. ಎಚ್ಚರವಾಗುತ್ತಿದ್ದಂತೆ ತಟ್ಟನೆ ಎದ್ದರಾಯಿತು. ತಟ್ಟನೆ ಏಳಬೇಕು ಎಂಬುದೊಂದೇ ಕಾರಣ. ಹಾಸಿಗೆಯಲ್ಲಿ ಹೊರಳಾಡುತ್ತಾ ಏಳದೇ ಇರಲು ನೂರಾರು ಕಾರಣಗಳು. ಹಾಸಿಗೆಯಲ್ಲಿ ಮಲಗಿಯೇ ಯಾರೂ ಮಹಾನ್ ಸಾಧನೆ ಮಾಡಿಲ್ಲ. ಅಂಥ ಸಾಧನೆ ಸಾಧ್ಯವಾಗುತ್ತಿದ್ದರೆ, ಯಾರೂ ಬೆಡ್ ರೂಮಿನಿಂದ ಲಿವಿಂಗ್ ರೂಮಿಗೇ ಬರುತ್ತಿರಲಿಲ್ಲ. ಬೆಳಗ್ಗೆ ಬೇಗ ಏಳಲು ಏನಾದರೂ ಬಲವಾದ ಕಾರಣಗಳನ್ನು ರೂಪಿಸಿಕೊಳ್ಳಬೇಕು, ರೂಢಿಸಿಕೊಳ್ಳಬೇಕು. ಬೆಳಗ್ಗೆ ಎದ್ದು ಏನು ಮಾಡಬೇಕು ಎಂಬ ಪ್ರಶ್ನೆ ಕಾಡಬಾರದು. ಆಗ ಅಂಥ ಪ್ರಶ್ನೆಗಳಿಗೆ ಹಾಸಿಗೆಯಲ್ಲೇ ಉತ್ತರ ಕಂಡುಕೊಳ್ಳೋಣ ಎಂದು ಮನಸ್ಸು ಹೇಳುತ್ತದೆ. ಬೆಳಗ್ಗೆ ಏಳುತ್ತಿದ್ದಂತೆ ನಿಮ್ಮ ಮುಂದೆ ಅಜೆಂಡಾ ತೆರೆದುಕೊಂಡರೆ, ನೀವು ಬೇಗ ಏಳುತ್ತೀರಿ. ಪ್ರತಿದಿನವೂ ಬೇಗ ಏಳಲು ನಿಮ್ಮ ಮುಂದೆ ಬಲವಾದ ನೆಪ ಅಥವಾ ಕಾರಣವನ್ನು ಇಟ್ಟುಕೊಳ್ಳಬೇಕು. ರಜಾ ದಿನ ಅನೇಕರು ತಡವಾಗಿ ಏಳಲು ಇದೇ ಕಾರಣ. ಅವರ ಮುಂದೆ ಮಾಡಲು ಏನೂ ಕೆಲಸಗಳಿಲ್ಲದಿರುವುದರಿಂದ, ಅವರು ತಡವಾಗಿ ಏಳುತ್ತಾರೆ.

ವಿದ್ಯಾ ಶಿವರಾಂ, (ಇಮೇಲ್ ಮೂಲಕ)

- **ಸಂಪಾದಕರೇ, ನನಗೆ ಓದುವ, ತಕ್ಕಮಟ್ಟಿಗೆ ಬರೆಯುವ ಹವ್ಯಾಸವಿದೆ. ನನ್ನ ಆಪ್ತವಲಯದಲ್ಲಿ ಅನೇಕರು 'ನಿನ್ನ ಭಾಷೆ ಚೆನ್ನಾಗಿದೆ ಪತ್ರಿಕೆಗಳಿಗೆ ಏಕೆ ಬರೆಯಬಾರದು?' ಎಂದು ಆಗಾಗ ಹೇಳುತ್ತಾರೆ. ನನಗೂ ಪತ್ರಿಕೆಗಳಿಗೆ ಬರೆಯುವ ಆಸೆ. ಆದರೆ ನಾನು ಕಳುಹಿಸಿದ ಯಾವ ಲೇಖನಗಳೂ ಪ್ರಕಟವಾಗುವುದಿಲ್ಲ. ಪತ್ರಿಕೆಗಳಿಗೆ ಬರೆಯಲು ನಿಮ್ಮ ಸಲಹೆ ಏನು?**

– ವಿದ್ಯಾ ಅವರೇ, ಪತ್ರಿಕೆಗಳಿಗೆ ಬರೆಯುವುದು ಕಷ್ಟವೇನಲ್ಲ. ಎಲ್ಲರಿಗೂ ಅರ್ಥವಾಗುವ ಹಾಗೆ, ಸರಳ ಮತ್ತು ಸುಲಭ ಭಾಷೆಯಲ್ಲಿ ನೇರವಾಗಿ ಬರೆಯುವುದು. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳನ್ನು ಗಮನವಿಟ್ಟು ಓದಿದರೆ, ಯಾರಿಗಾದರೂ ಹೇಗೆ ಬರೆಯಬೇಕು ಎಂಬುದು ಗೊತ್ತಾಗುತ್ತದೆ. ಇದೇನು ಬ್ರಹ್ಮ ವಿದ್ಯೆಯೇನಲ್ಲ. ನಿಮಗೆ ಇಷ್ಟವಾಗುವ, ನೀವು ಉತ್ತಮವೆಂದು ತೀರ್ಮಾನಿಸಿದ ನಾಲ್ಕೈದು ಬರಹಗಾರರ ಲೇಖನಗಳನ್ನು ಗಮನವಿಟ್ಟು ಓದುವುದನ್ನು ಅಭ್ಯಾಸ ಮಾಡಿಕೊಳ್ಳಿ. ಅವರು ಲೇಖನವನ್ನು ಹೇಗೆ ಆರಂಭಿಸುತ್ತಾರೆ, ವಿಷಯವನ್ನು ಹೇಗೆ ಬೆಳೆಸುತ್ತಾರೆ, ಹೇಗೆ ಬಣ್ಣಿಸುತ್ತಾರೆ ಮತ್ತು ಲೇಖನವನ್ನು ಹೇಗೆ ಮುಗಿಸುತ್ತಾರೆ ಎಂಬುದನ್ನು ಆಸಕ್ತಿಯಿಂದ ಓದಿದರೆ, ನಿಮಗೇ ಗೊತ್ತಾಗುತ್ತದೆ. ಇದಕ್ಕಿಂತ ಸುಲಭವಾದ ವಿಧಾನ ಮತ್ಯಾವುದೂ ಇಲ್ಲ. ಈ ವಿಷಯದಲ್ಲಿ ಪತ್ರಿಕೆ ಮತ್ತು ನಿಯತಕಾಲಿಕಗಳಂಥ ಪತ್ಯ ಇನ್ನೊಂದಿಲ್ಲ. ಪತ್ರಿಕೆ ಓದಿಯೇ ನೀವು ಉತ್ತಮ ಲೇಖಕರಾಗಬಹುದು.

ನಾನು ಕಳುಹಿಸಿದ ಯಾವ ಲೇಖನಗಳೂ ಪತ್ರಿಕೆಗಳಲ್ಲಿ ಪ್ರಕಟವಾಗುವುದಿಲ್ಲ ಎಂದು ಹೇಳಿದ್ದೀರಿ. ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗಲು ಯಾರ ಪ್ರಭಾವ, ವಶೀಲಿಯೂ ಬೇಕಿಲ್ಲ. ನಿಮ್ಮ ಬರಹದಲ್ಲಿ ಸತ್ವ ಇದ್ದರೆ, ಅದು ಯಾರ ಮರ್ಜಿಯನ್ನೂ ಕಾಯದೇ ಪ್ರಕಟವಾಗುತ್ತದೆ. ಕೆಲವು ಸಲ ವಿಷಯ ಆಸಕ್ತಿದಾಯಕವಾಗಿದ್ದರೆ, ಸಕಾಲಿಕವಾಗಿದ್ದರೆ, ಬರಹ ಮತ್ತು ಶೈಲಿ ಸರಿ ಇಲ್ಲದಿದ್ದರೂ, ಸುದ್ದಿಮನೆಯಲ್ಲಿರುವವರೇ ರೀರೈಟ್ ಮಾಡಿ ಪ್ರಕಟಿಸುತ್ತಾರೆ. ಹೀಗಿರುವಾಗ ನಿಮ್ಮ ಲೇಖನಗಳು ಪ್ರಕಟವಾಗದಿರುವುದು ಆಶ್ಚರ್ಯವೇ ಸರಿ.

ಹಾಗಂತ ಬರೆಯುವುದನ್ನು, ಪತ್ರಿಕೆಗಳಿಗೆ ಕಳಿಸುವುದನ್ನು ಬಿಡಬೇಡಿ. ನಿಮಗೆ ಸತ್ಯನಾರಾಯಣ ಅಯ್ಯರ್ ಎಂಬುವವರ ಬಗ್ಗೆ ಹೇಳಬೇಕು. ಅವರು ಪತ್ರಿಕೆಗಳಿಗೆ ಸತತ 375 ಕ್ಕೂ ಹೆಚ್ಚು ಲೇಖನಗಳನ್ನು ಕಳಿಸಿದರೂ ಅವು ಪ್ರಕಟವಾಗಿರಲಿಲ್ಲ. ಪ್ರತಿ ಸಲ ಸಂಪಾದಕರಿಂದ ಅವರಿಗೆ 'ವಿಷಾದ ಪತ್ರ' (ರಿಗ್ರೆಟ್ ಲೆಟರ್) ಮಾತ್ರ ಬರುತ್ತಿತ್ತು. ಕೊನೆಗೆ ಅವರು ತಮ್ಮ ಹೆಸರನ್ನೇ 'ರಿಗ್ರೆಟ್ ಅಯ್ಯರ್' ಎಂದು ಬದಲಿಸಿಕೊಂಡರು. ಅನಂತರ ಅವರ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಲಾರಂಭಿಸಿದವು. (ತಮಗೆ ಸಂಪಾದಕರಿಂದ ಬಂದ 375 ಕ್ಕೂ ಹೆಚ್ಚು ವಿಷಾದ ಪತ್ರಗಳನ್ನು ರಿಗ್ರೆಟ್ ಅಯ್ಯರ್ ಸಂಗ್ರಹಿಸಿಟ್ಟುಕೊಂಡು, ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲೂ ದಾಖಲಾಗಿದ್ದು ಬೇರೆ ಮಾತು). ತಾಳ್ಮೆಯಿಂದ ಬರೆಯಿರಿ, ನಿಮ್ಮ ಲೇಖನಗಳೂ ಒಂದಲ್ಲಾ ಒಂದು ದಿನ ಪ್ರಕಟವಾಗುತ್ತವೆ.

ಹೇಮಂತ ಬಿ.ಕುಮಾರ, ಮೈಸೂರು

- **ಸಂಪಾದಕರೇ, ನಾನು ಎಂಜಿನಿಯರಿಂಗ್ ಪದವೀಧರ. ಉತ್ತಮವಾದ ಉದ್ಯೋಗದ ಹುಡುಕಾಟದಲ್ಲಿದ್ದೇನೆ. ನನ್ನ ಸಮಸ್ಯೆ ಅಂದ್ರೆ ನಾನು ಅಷ್ಟೇನೂ ಸೋಷಿಯಲ್ ಅಲ್ಲ. ನನ್ನ ಪಾಡಿಗೆ ನಾನಿರುತ್ತೇನೆ. ಅದು ನನಗೆ ಇಷ್ಟ. ನಾನಾಗಿಯೇ ಯಾರನ್ನೂ ಮಾತಾಡಿಸಲು, ಪರಿಚಯ ಮಾಡಿಕೊಳ್ಳಲು ಹೋಗುವುದಿಲ್ಲ. ಅಪರಿಚಿತರ ಜತೆ ಮಾತಾಡುವುದು ನನಗೆ ಆಗದು. ಮನೆಗೆ ಯಾರಾದರೂ ಬಂದರೂ ನಾನು ರೂಮಿನಲ್ಲಿರುವುದನ್ನೇ ಇಷ್ಟಪಡುತ್ತೇನೆ. ಸಂಬಂಧಪಡದ ವಿಷಯಗಳ ಬಗ್ಗೆ ಮಾತಾಡುವುದು ನನಗೆ ಇಷ್ಟವಿಲ್ಲ. ನನ್ನ ಈ ಸ್ವಭಾವ ನನ್ನ ತಂದೆ-ತಾಯಿಗೆ ಇಷ್ಟವಿಲ್ಲ. ಅವರು ಆಗಾಗ ನನ್ನ ಮೇಲೆ ರೇಗುತ್ತಾರೆ. 'ರೂಮು ಸೇರಿಕೊಂಡು ಏನು ಮಾಡುತ್ತೀಯಾ?' ಎಂದು ಗದರುತ್ತಾರೆ. ಈ ವಿಷಯದ ಬಗ್ಗೆ ಮನೆಯಲ್ಲಿ ರಣರಂಪವಾಗಿದ್ದುಂಟು. ನಾನು ನನ್ನ ನಡವಳಿಕೆಯನ್ನು ಬದಲಿಸಿಕೊಳ್ಳಬೇಕಾ?**

– ಹೇಮಂತ ಅವರೇ, ನಿಮಗೆ ನಿಮ್ಮ ಸಮಸ್ಯೆಯ ಅರಿವಾದಂತಿದೆ. ಆದರೆ ನಿಮ್ಮ ತಂದೆ-ತಾಯಿ ಹೇಳುವುದರಲ್ಲಿ ತಥ್ಯವಿದೆ ಎಂಬುದು ನಿಮಗೆ ಸ್ಪಷ್ಟವಾಗಿ ಮನವರಿಕೆ ಆದಂತಿಲ್ಲ. ನಾವು ನಮ್ಮ ಪಾಡಿಗೆ ಇರುವುದು ತಪ್ಪಲ್ಲ. ಆದರೆ ಅದು ನಿಮ್ಮನ್ನು ಎಲ್ಲಿಗೂ ಕರೆದುಕೊಂಡು ಹೋಗುವುದಿಲ್ಲ. ತಮ್ಮ ಪಾಡಿಗೆ ತಾವಿರುವವರು ಬೋನಿನಲ್ಲಿರುವ ಪ್ರಾಣಿಗಳು ಮತ್ತು ಜೈಲಿನಲ್ಲಿರುವ ಕೈದಿಗಳು. ನೀವು ಆ ಸಾಲಿಗೆ ಸೇರುವವರಾದರೆ ಅಭ್ಯಂತರವಿಲ್ಲ, ಮುಂದೆ ಚರ್ಚೆಯ ಅಗತ್ಯವೂ ಇಲ್ಲ. ಆದರೆ ನೀವು ಹಾಗಲ್ಲವಲ್ಲ. ವ್ಯಕ್ತಿಗಳನ್ನು ಭೇಟಿ ಮಾಡುವುದು ಮತ್ತು ಅವರೊಂದಿಗೆ ಹರಟೆ ಹೊಡೆಯುವುದು, ಚರ್ಚಿಸುವುದು, ಸಂವಾದ ಮಾಡುವುದು ಯಾವತ್ತೂ ಉತ್ತಮವಾದ ಹವ್ಯಾಸ ಮತ್ತು ಅಭ್ಯಾಸ.

ಬೇರೆಯವರ ಜತೆ ಮಾತಾಡುವುದರಿಂದ ಅನೇಕ ವಿಷಯಗಳು ಗೊತ್ತಾಗುತ್ತವೆ. ಯಾವುದೇ ವ್ಯಕ್ತಿಯ ಜತೆ ಮಾತಾಡುವುದು ನಿರರ್ಥಕವಲ್ಲ. ಪ್ರತಿಯೊಬ್ಬರಲ್ಲೂ ನಮಗೆ ಗೊತ್ತಿಲ್ಲದ ಕೆಲವು ವಿಚಾರಗಳಾದರೂ ಇದ್ದೇ ಇರುತ್ತವೆ. ಹೀಗಾಗಿ ಯಾರ ಜತೆಗಾದರೂ ಮಾತಾಡುವ, ಯಾರನ್ನಾದರೂ ಭೇಟಿ ಮಾಡುವ ಅವಕಾಶ ಬಂದರೆ ಅದನ್ನು ನಿರಾಕರಿಸಬಾರದು. ನಮ್ಮ ಪಾಡಿಗೆ ನಾವಿರುವುದರಿಂದ ಏನು ಪ್ರಯೋಜನ? ಹೀಗಾಗಿ ಬೇರೆಯವರೊಂದಿಗೆ ಬೆರೆಯಬೇಕು, ಒಡನಾಡಬೇಕು, ವ್ಯವಹರಿಸಬೇಕು.

ಆಗ ನಿಮಗೆ ಹೊಸ ಹೊಸ ವಿಷಯಗಳು ತಿಳಿಯುತ್ತವೆ. ನಿಮ್ಮಲ್ಲಿ ಹೊಸ ಹೊಸ ಆಲೋಚನೆಗಳು ಬರುತ್ತವೆ. ಒಬ್ಬ ವ್ಯಕ್ತಿ ಮತ್ತಷ್ಟು ಜನರನ್ನು ಪರಿಚಯ ಮಾಡಿಸುತ್ತಾನೆ. ಆಗ ನಿಮ್ಮ ಸುತ್ತ ಹಲವು ವ್ಯಕ್ತಿಗಳ ಪುಟ್ಟ ಪ್ರಪಂಚ ಸೃಷ್ಟಿಯಾಗುತ್ತದೆ. ಪರಿಚಯ ಆಗುವುದಕ್ಕಿಂತ ಮುನ್ನ ಎಲ್ಲರೂ ಅಪರಿಚಿತರೇ. ಹುಟ್ಟಿನಿಂದಲೇ ಯಾರಿಗೂ ಸ್ನೇಹಿತರಿರುವುದಿಲ್ಲ. ಬಳಿಕ, ಭೇಟಿಯಿಂದಲೇ ನಮ್ಮ ಸುತ್ತ ಸ್ನೇಹಿತರ ಪ್ರಭಾವಲಯ ಬೆಳೆಯುತ್ತದೆ. ಬೇರೆ ಬೇರೆ ಜನರನ್ನು ಭೇಟಿ ಮಾಡುವುದು ಸಹ ಒಂದು ಅಪರೂಪದ ಶಿಕ್ಷಣ. ಅದು ಯಾವ ಪತ್ಯ –ಪುಸ್ತಕದಲ್ಲೂ ಸಿಗುವುದಿಲ್ಲ. ಅವರ ಮಾತು, ಕತೆ, ವರ್ತನೆ, ಹಾವಭಾವ, ಭಾಷೆ, ವಿಚಾರಗಳೆಲ್ಲ ಗಮನಯೋಗ್ಯ.

ಹೀಗಾಗಿ ಯಾವ ಕಾರಣಕ್ಕೂ ಯಾರನ್ನೇ ಆಗಲಿ, ಭೇಟಿಯಾಗುವ ಅವಕಾಶ ಸಿಕ್ಕಾಗ ನಿರಾಕರಿಸಬಾರದು. ಈ ವಿಷಯದಲ್ಲಿ ರಾಜಕಾರಣಿಗಳನ್ನು ನೋಡಿ ಕಲಿಯಬೇಕು. ಅವರು ಸದಾ ಜನರ ಮಧ್ಯ ಇರುವುದನ್ನು ಇಷ್ಟಪಡುತ್ತಾರೆ. ಅವರು ಎಂದೂ ತಮ್ಮ ಪಾಡಿಗೆ ತಾವಿರುವುದಿಲ್ಲ.

ಈ ವಿಷಯದಲ್ಲಿ ನೀವು ನಿಮ್ಮ ನಡವಳಿಕೆಯನ್ನು ಆದಷ್ಟು ಬೇಗ ಬದಲಿಸಿಕೊಳ್ಳುವುದು ನಿಮ್ಮ ಒಳಿತಿನ ದೃಷ್ಟಿಯಿಂದ ಉತ್ತಮ.

ರಘುನಾಥ ಬಣವಿ, ದಾವಣಗೆರೆ

- **ಭಟ್ರೇ, ನಾನು ಒಬ್ಬ ವ್ಯಾಪಾರಸ್ಥ. ಕೈತುಂಬಾ ಸಂಪಾದನೆ ಇದೆ. ನನಗೆ ಪತ್ನಿ, ಇಬ್ಬರು ಮಕ್ಕಳಿದ್ದಾರೆ. ಸಂತೃಪ್ತ ಜೀವನವನ್ನು ನಡೆಸುತ್ತಿದ್ದೇನೆ. ನನ್ನ ಪತ್ನಿ ಸದಾ ನನಗೆ, 'ನಿಮಗೆ ಹಣ ಮಾಡುವುದು ಬಿಟ್ಟು ಬೇರೇನೂ ಗೊತ್ತಿಲ್ಲ. ನೀವು ಪುಸ್ತಕ ಓದುವುದಿಲ್ಲ, ಸಂಗೀತ ಕೇಳುವುದಿಲ್ಲ, ಕಲೆ-ಸಂಸ್ಕೃತಿ ಗಂಧ-ಗಾಳಿ ಇಲ್ಲ, ಬರೀ ಹಣ ಹಣ ಅಂತ ಸಾಯ್ತೀರಿ' ಅಂತ ಹೇಳುತ್ತಿರುತ್ತಾಳೆ. ಓದು, ಸಂಗೀತ, ಕಲೆ, ಸಂಸ್ಕೃತಿಯಿಂದ ನನ್ನ ವ್ಯಾಪಾರಕ್ಕೆ ಯಾವ ಪ್ರಯೋಜನವೂ ಇಲ್ಲ. ಹೀಗಿರುವಾಗ ನಾನು ಈ ಐವತ್ತರ ಹೊಸ್ತಿಲಲ್ಲಿ ಹೊಸ ಆಸಕ್ತಿ ಬೆಳೆಸಿಕೊಳ್ಳಬೇಕೇ?**

– ರಘುನಾಥ ಅವರೇ, ಜೀವನದಲ್ಲಿ ಹಣ ಗಳಿಸುವುದು ಮುಖ್ಯ. ಆದರೆ ಅದೊಂದನ್ನೇ ಗಳಿಸುವುದು ಮುಖ್ಯವಾಗಬಾರದು. ನೀವು ಗಳಿಸುವ ಹಣ ನಿಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಸಹಾಯಕವಾಗಬೇಕು. ಹೀಗಾಗಿ ಬೇರೆ ಬೇರೆ ಆಸಕ್ತಿಗಳನ್ನು ಬೆಳೆಸಿಕೊಳ್ಳುವುದು ಮುಖ್ಯ. ಓದು, ಸಂಗೀತ, ಕಲೆ, ಸಂಸ್ಕೃತಿ ನಿಮ್ಮ ಮನಸ್ಸನ್ನು ಅರಳಿಸಬಲ್ಲುದು. ನಿಮ್ಮ ವ್ಯಕ್ತಿತ್ವಕ್ಕೆ ಭಿನ್ನವಾದ ಆಯಾಮವನ್ನು ಕಟ್ಟಿಕೊಡಬಲ್ಲುದು.

ಒಂದು ಪುಸ್ತಕ ಓದುವುದರಿಂದ ಅದು ನಿಮ್ಮ ಬಿಜಿನೆಸ್‌ಗೆ ಯಾವ ರೀತಿಯಲ್ಲೂ ಸಹಾಯಕ ಅಥವಾ ಪೂರಕ ಆಗದಿರಬಹುದು. ಆದರೆ ನಿಮ್ಮ ಮನಸ್ಸನ್ನು ಅರಳಿಸಲು ಅದು ಖಂಡಿತವಾಗಿಯೂ ಸಹಾಯ ಮಾಡುತ್ತದೆ. ಹಣ ಗಳಿಸಲು ಆರಂಭಿಸಿದ ನಂತರ ಉಳಿದವುಗಳ ಅಗತ್ಯವಿಲ್ಲ ಎಂದು ಯೋಚಿಸುವುದೇ ಸರಿಯಲ್ಲ. ನೀವು ಗಳಿಸುವ ಹಣ ನಿಮ್ಮ ಮನಸ್ಸನ್ನು ಅರಳಿಸಲು ಪ್ರೋತ್ಸಾಹ ನೀಡಬೇಕು. ಜೀವನದಲ್ಲಿ ಹಣ ಗಳಿಸುವುದೊಂದೇ ಅಂತಿಮ ಉದ್ದೇಶವಲ್ಲ. ಉತ್ತಮ ಜನರ ಒಡನಾಟ, ಪ್ರವಾಸ, ಸಂವಾದ, ಉತ್ತಮ ಅಭಿರುಚಿ ಬೆಳೆಸಿಕೊಳ್ಳುವುದು ಸಹ ಅಷ್ಟೇ ಮುಖ್ಯ. ಅವು ನಿಮ್ಮ ಜೀವನದ ಉದ್ದೇಶಕ್ಕೆ ಮತ್ತಷ್ಟು ಮಹತ್ವ ಮತ್ತು ಮೆರುಗನ್ನು ನೀಡಬಹುದು.

ಈ ವಿಷಯ ನಿಮ್ಮ ಪತ್ನಿಗೂ ಅನಿಸಿದೆ. ಆಕೆಗೆ ತನ್ನ ಪತಿ ಬರೀ ಹಣ ಗಳಿಸುವ ಯಂತ್ರವಾಗದೇ ಉತ್ತಮ ಅಭಿರುಚಿ ಇರುವ ವ್ಯಕ್ತಿಯಾಗಲಿ ಎಂಬ ಹಂಬಲವಿದ್ದಂತಿದೆ. ಹೀಗಾಗಿ ನಿಮ್ಮ ಪತ್ನಿ ಹೇಳುವುದನ್ನು ಗಂಭೀರವಾಗಿ ತೆಗೆದುಕೊಳ್ಳಿ. ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬರಾಗಿರುವ ಬಿಲ್ ಗೇಟ್ಸ್ ವರ್ಷದಲ್ಲಿ ಕನಿಷ್ಠ ಇಪ್ಪತ್ತೈದು ಪುಸ್ತಕಗಳನ್ನು ಓದುತ್ತಾರೆ. ಅವರು ಓದುವ ಪುಸ್ತಕಗಳ ಪಟ್ಟಿಯನ್ನು ನೋಡಲು ಜಗತ್ತಿನಲ್ಲಿರುವ ಪುಸ್ತಕಪ್ರೇಮಿಗಳು ಕಾತರದಿಂದ ಕಾಯುತ್ತಿರುತ್ತಾರೆ. ಅವರ ಈ ಹವ್ಯಾಸ ಅವರಿಗೆ ಬೇರೆಯದೇ ಆದ ಭಿನ್ನ ಇಮೇಜನ್ನು ನೀಡಿದೆ.

ನಾವು ಗಳಿಸುವ ಹಣ ನಮ್ಮನ್ನು ಇನ್ನಷ್ಟು ಮಾನವಂತ ಮತ್ತು ಸಂಸ್ಕಾರವಂತರನ್ನಾಗಿ ಮಾಡಬೇಕು. ಆಗಲೇ ನಮ್ಮ ಹಣಕ್ಕೆ ಇನ್ನಷ್ಟು ಶೋಭೆ.